ಈ ಸಂಬಂಧದಲ್ಲಿ ವಿಚಾರಣಾಧಿಕಾರಿಯಾದ ಪೋಲೀಸ್ ಇನ್ಸ್‌ಪೆಕ್ಟರ್, ಲಷ್ಕರ್, ಇವರು ದಿನಾಂಕ ೧೯-೧೧-೧೯೯೦ ರಂದು ಈ ಮೇಲೆ ತಿಳಿಸಲಾದ, ಈ ಪ್ರಕರಣಕ್ಕೆ ಕಾರಣರಾದ ಆಸಿಯಾ ಸಯೀದ್‌ಳನ್ನು ಒಳಗೊಂಡು ಮೇಲ್ಕಂಡ ಎಲ್ಲ ಅಪರಾಧಿಗಳ ಮೇಲೆ ದೋಷಾರೋಪಣ ಪತ್ರವನ್ನು ಸಲ್ಲಿಸಲಾಗಿದೆ.

ನಿಯಮ ೬೯ರ ಮೇರೆಗೆ ಅಲ್ಪ ಕಾಲಾವಧಿ ಚರ್ಚೆ

ರಾಜ್ಯದಲ್ಲಿನ ಕೋಮು ಗಲಭೆಗಳ ಬಗ್ಗೆ ಚರ್ಚೆ

†ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ನಡೆದಿರತಕ್ಕ ಕೋಮು ಗಲಭೆ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲ ವಿರೋಧ ಪಕ್ಷದ ಮುಖಂಡರುಗಳನ್ನು ಕರೆದು ಕೆಲವು ವಿವರಗಳನ್ನು ನೀಡಿದ್ದಾರೆ. ಇನ್ನೂ ಅನೇಕ ವಿಚಾರಗಳನ್ನು ಶಾಸನ ಸಭೆಯಲ್ಲಿ ನಾನು ತಿಳಿಸುತ್ತೇನೆ ಎಂಬ ಮಾತನ್ನು ಅವರು ಹೇಳಿದ್ದಾರೆ: ಅಶಾಂತ ವಾತಾವರಣ ರಾಷ್ಟ್ರದಲ್ಲಿ, ರಾಜ್ಯದಲ್ಲಿ ಭೀಕರವಾಗಿ ತಲೆದೋರಿ ಗಂಭೀರವಾದ ಪರಿಸ್ಥಿತಿ ಉದ್ಭವವಾಯಿತು. ಕರ್ನಾಟಕ ರಾಜ್ಯದಲ್ಲಿ ೬೯ ಜನರ ಸಾವಿಗೂ ಕಾರಣವಾಯಿತು. ಈ ಎಲ್ಲ ಪರಿಸ್ಥಿತಿಗಳನ್ನು ಅವಲೋಕಿಸಿ ಸರ್ಕಾರ ಪರಿಣಾಮಕಾರಿಯಾದ ಕ್ರಮವನ್ನು ಕೈಗೊಳ್ಳಬೇಕಾದಂಥ ಪರಿಸ್ಥಿತಿ ಇವತ್ತು ಒದಗಿದೆ.

(ಶ್ರೀಮತಿ ದಮಯಂತಿ ಬೋರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಕೋಮು ಗಲಭೆಗಳ ಹಿನ್ನೆಲೆ ನೋಡಿದರೆ ಅದರಲ್ಲೂ ಕರ್ನಾಟಕ ರಾಜ್ಯ ಬಹಳ ಶಾಂತಿಗೆ ಅತ್ಯಂತ ಪ್ರಾಮಾಣಿಕವಾದ ರಾಜ್ಯ. ಈ ಒಂದು ಶಾಂತಿ ನೆಲೆಯನ್ನು ಕಾಪಾಡುವುದರಲ್ಲಿ ಕರ್ನಾಟಕ ರಾಜ್ಯ ಬಹಳ ಮೇಲ್ಮಟ್ಟದಲ್ಲಿರತಕ್ಕ ರಾಜ್ಯ. ನಾನು ತಮಗೆ ಕೆಲವು ಕವಿಗಳು ಹೇಳಿರತಕ್ಕ ವಿಚಾರಗಳನ್ನು ಹೇಳುತ್ತಿದ್ದೇನೆ. ಈ ರಾಜ್ಯ ಶರಣರು, ಸಂತರು ಬಾಳಿದಂಥ, ಹುಟ್ಟಿದಂಥ, ನಡೆದಂಥ ರಾಜ್ಯ. ಬಸವ, ಶಂಕರ, ರಾಮಾನುಜ, ವಿದ್ಯಾರಣ್ಯ, ರನ್ನ, ಪೊನ್ನ, ಜನ್ನ, ಪಂಪ, ಷಡಕ್ಷರಿ, ಲಕ್ಷ್ಮೀಶ, ಕುಮಾರವ್ಯಾಸ ಮುಂತಾದ ಮಹಾ ಕವಿಗಳು ಹುಟ್ಟಿದಂಥ ನಾಡು ಇದು. ಈ ನಾಡಿನಲ್ಲಿ ಶಾಂತಿ ನೆಲೆಸತಕ್ಕದ್ದು ಅತ್ಯಂತ ಅವಶ್ಯಕ. ದೇಶದಲ್ಲಿ ಎಲ್ಲೋ ಅಶಾಂತ ವಾತಾವರಣ ಇರಬಹುದು, ಆದರೆ ಕರ್ನಾಟಕ ರಾಜ್ಯದಲ್ಲಿ ಶಾಂತಿ ನೆಲೆಸಬೇಕಾದುದು ಕರ್ತವ್ಯ. ಇವತ್ತು ಮತ್ತೊಂದು ಕಡೆ ರಾಷ್ಟ್ರ ಕವಿ ಕುವೆಂಪು ಅವರು ತಮ್ಮ ಒಂದು ಕವಿತೆಯಲ್ಲಿ 'ಜೈ ಭಾರತ ಜನನಿಯ ತನುಜಾತೇ, ಜಯಹೇ ಕರ್ನಾಟಕ ಮಾತೆ. ಸುಂದರ ನದಿ ವನಗಳ ನಾಡೇ, ಜಯಹೇ ರಸ ಋಷಿಗಳ ಬೀಡೇ, ಸರ್ವ ಜನಾಂಗದ ಶಾಂತಿಯ ತೋಟ, ರಸಿಕರ ಕಣ್ಗಳ ಸೆಳೆಯುವ ನೋಟ. ಹಿಂದೂ ಕ್ರೈಸ್ತ ಮುಸಲ್ಮಾನ, ಜೈನ ಪಾರಸಿಕರ ಉದ್ಯಾನ'' ಎಂದು ಹೇಳಿದ್ದಾರೆ. ಅಂದರೆ ಎಲ್ಲಾ ಸಾಮರಸ್ಯ, ಸಮಾನತೆ ಈ ರಾಜ್ಯದಲ್ಲಿ ಇದೆ ಎಂಬುದನ್ನು ಅತ್ಯಂತ ಪವಿತ್ರವಾಗಿ ರಾಷ್ಟ್ರ ಕವಿ ಕುವೆಂಪು ಅವರು ತಮ್ಮ ಕವನದಲ್ಲಿ ಹೇಳಿದ್ದಾರೆ. ಆದರೆ ಎಲ್ಲರನ್ನೂ ದಂಗುಬಡಿಸತಕ್ಕ ಪರಿಸ್ಥಿತಿ ರಾಜ್ಯದಲ್ಲಿ ಉದ್ಭವವಾದದ್ದು ಅತ್ಯಂತ ಶೋಚನೀಯ. ಈ ಕೋಮು ಗಲಭೆ ಚನ್ನಪಟ್ಟಣ, ದಾವಣಗೆರೆ, ರಾಮನಗರದಿಂದ ಶುರುವಾಯಿತು. ನಾವು ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಸಿ ಎಂಬ ಒತ್ತಾಯವನ್ನು ಆಗಿಂದಾಗ್ಗ ಸರ್ಕಾರಕ್ಕೆ ಮಾಡಿದ್ದಾಯಿತು. ನ್ಯಾಯಾಂಗ ತನಿಖೆ ಮಾಡುವುದಾದರೆ ಈ ಕೋಮು ದ್ವೇಷದ, ಗಲಭೆಯ ಹಿಂದೆ ರಾಜಕೀಯದ ಮತ್ಸರವೂ ಸ್ವಾದ ದೊರಕುತ್ತದೆ, ಅದರ ಅಂಕಿ ಅಂಶವೂ ಬರುತ್ತದೆ. ಆದ್ದರಿಂದ ಈ ಬಗ್ಗೆ ಸರ್ಕಾರ ಪರಿಣಾಮಕಾರಿಯಾದ, ಪ್ರಾಮಾಣಿಕವಾದ ಒಂದು ತೀರ್ಮಾನಕ್ಕೆ ಬರಲಿ, ಈ ನ್ಯಾಯಾಂಗ ತನಿಖೆಗೆ ಒಂದು ಕಾಲ ಮಿತಿ ಕೊಟ್ಟು, ಇಷ್ಟು ದಿನಗಳೊಳಗಾಗಿ ಅದರ ವರದಿ ಸರ್ಕಾರಕ್ಕೆ ಒಪ್ಪಿಸಬೇಕು ಎಂಬ ಷರತ್ತನ್ನು ಹಾಕಿದರೆ ರಾಜಕೀಯದ ದ್ವೇಷ, ದಳ್ಳುರಿ, ಸರ್ಕಾರಗಳ ಪತನ, ಅದರ ಹಿಂದಿರತಕ್ಕ ವಿಷ ಜ್ವಾಲೆ ಎಲ್ಲವೂ ಹೊರಗಡೆ ಬರುತ್ತದೆ. ಇದನ್ನು ಬಹಳ ಪರಿಣಾಮಕಾರಿಯಾಗಿ ಸರ್ಕಾರ ಮಾಡಬೇಕಾದುದು ಕರ್ತವ್ಯ, ಆಗಲೇ ನನ್ನ ಸ್ನೇಹಿತರು ಸದನದ ಸಮಿತಿ ಮಾಡಿ ಎಂದು ಹೇಳಿದ್ದಾರೆ. ಅದನ್ನು ಮಾಡಿದರೆ ತಪ್ಪಿಲ್ಲ. ನ್ಯಾಯಾಂಗ ತನಿಖೆ ಒಂದು ಕಡೆ ಇರಲಿ, ತಕ್ಷಣಕ್ಕೆ ಸದನದ ಸಮಿತಿ ಎಲ್ಲಾ ಪ್ರದೇಶಕ್ಕೂ ಹೋಗಿ ಅದರಲ್ಲೂ ಹೆಚ್ಚು ಗಲಭೆಗೆ ತುತ್ತಾಗಿರತಕ್ಕ ಚನ್ನಪಟ್ಟಣ, ದಾವಣಗೆರೆ, ರಾಮನಗರಕ್ಕೆ ಹೋಗಿ ಅಲ್ಲಿಯ ಜನರನ್ನು ಕೇಳಿ ಅವರಿಂದ ಬರುವ ಅಭಿಪ್ರಾಯವನ್ನು ಪಡೆಯುವುದಕ್ಕೆ ಅವಕಾಶವಾಗುತ್ತದೆ. ಅಧ್ಯಕ್ಷರೇ, ಈ ಸಂದರ್ಭದಲ್ಲಿ ೬೯ ಜನರ ಸಾವಿಗೆ ಕಾರಣ ಏನು? ಸತ್ತಿರತಕ್ಕ ದುರ್ದೈವಿಗಳು ಯಾವುದೇ ಕೋಮಿನವರಿರಬಹುದು. ಅವರು ಸತ್ತಿದ್ದಾರೆ. ಈ ಸಂದರ್ಭದಲ್ಲಿ ಬಂಧನಗಳು ಆಗಿವೆ, ರಾಜ್ಯದ

ಅನೇಕ ಕಡೆ ಬಂಧನಗಳು ಆಗಿವೆ. ಈ ಬಂಧನಗಳು ಎಷ್ಟು ಸತ್ಯವಾಗಿ ನಡೆದಿದೆ ಎನ್ನುವ ಬಗ್ಗೆ ಒಂದು ತಕ್ಷಣ ಪೋಲೀಸ್ ಉನ್ನತ ಅಧಿಕಾರಿಗಳ ಮಟ್ಟದಲ್ಲಿ ಒಂದು ವಿಮರ್ಶೆ ಮಾಡುವುದಕ್ಕೆ ಒಂದು ಸಮಿತಿಯನ್ನು ಕೂಡಲೇ ರಚನೆ ಮಾಡಿ. ನ್ಯಾಯಾಲಯದಲ್ಲಿ ಅಪಾದನೆಗಳ ಪಟ್ಟಿಯನ್ನು ಸಲ್ಲಿಸುವುದಕ್ಕಿಂತಲೂ ಮುಂಚೆ ಇದು ಆಗಲಿ. ನಿರಪರಾಧಿಗಳು ಯಾರು, ಅಪರಾಧಿಗಳು ಯಾರು ಎಂದು ನೋಡಬೇಕಾದರೆ ತಕ್ಷಣ ಉನ್ನತ ಮಟ್ಟದ ಸಮಿತಿಯನ್ನು ರಚನೆ ಮಾಡಿ ಆ ಬಂಧನದಲ್ಲಿ ಅನೇಕ ಜನ ನಿರಪರಾಧಿಗಳು ಇದ್ದಾರೆ. ಅವರು ಯಾವ ಕೋಮಿನವರೇ ಆಗಿರಬಹುದು. ಅವರು ಹಿಂದೂಗಳಿರಬಹುದು, ಮುಸ್ಲಿಮರಿರಬಹುದು ಅಥವಾ ಬೇರೆ ಇನ್ಯಾವುದೇ ಕೋಮಿನವರಿರಬಹುದು. ಬಂಧನ ಎಂದರೆ ಮುನ್ನೆಚ್ಚರಿಕೆಯ ಕಾಯ್ದೆ. ಇದರಲ್ಲಿ ಯಾರನ್ನು ಬೇಕಾದರೂ ಹಿಡಿಯಬಹುದು. ಯಾರು ಯಾರು ಸಿಗುತ್ತಾರೋ ಅವರನ್ನು ಹಿಡಿಯುವುದು. ನ್ಯಾಯಾಲಯಕ್ಕೆ ಹೆಸರನ್ನು ಸಲ್ಲಿಸುವಾಗ ಒಬ್ಬರ ಹೆಸರು ಹಾಕಿ ಮತ್ತೆ ೨೫ ಜನ ಎಂದು ತಿಳಿಸುವುದು. ಆ ೨೫ ಜನರ ಹೆಸರು ಪಟ್ಟಿಯಲ್ಲಿ ಇರುವುದಿಲ್ಲ. ಇವರನ್ನು ಇನ್ನಿತರೇ ೨೫ ಮಂದಿ ಎಂದು ಹೆಸರಿಸುವುದು. ಇದರಲ್ಲಿ ಯಾರು ಯಾರನ್ನು ಬೇಕಾದರೂ ಸೇರಿಸಬಹುದು. ಆಗದವರು, ಆಗದೆ ಇದ್ದವರು, ಶಾಸಕರು ಹೇಳಿದವರು, ರಾಜಕಾರಣಿಗಳು ಹೇಳಿದವರು, ಯಾರನ್ನು ಬೇಕಾದರೂ ಸೇರಿಸಬಹುದು. ಇದು ೧೫೧ನೇ ಕಾಯ್ದೆಯಲ್ಲಿದೆ. ಮತ್ತೆ ೧೦೭ನೇ ಸೆಕ್ಷನ್ ಬಹಳ ಅಪಾಯವಾದುದು. ಆ ಕಡೆ ೨೫ ಜನ, ಈ ಕಡೆ ೨೫ ಜನ. ಇವರು ಆಮೇಲೆ ೨ ವರ್ಷ ಅಲೆದೂ ಅಲೆದೂ ಸುಸ್ತು. ಈ ೧೦೭ನೇ ಸೆಕ್ಷನ್ ಒಂದು ಪಾಪದ ಕಾಯ್ದೆ. ೧೦೭ನೇ ಸೆಕ್ಷನ್‌ನ ಪ್ರಯೋಗ ಎಲ್ಲರ ಮೇಲೂ ಆಗಿದೆ. ಈ ಕಾಯ್ದೆ ಬಗ್ಗೆ ಮತ್ತೊಂದು ಸಾರಿ ಚರ್ಚೆ ಮಾಡಬೇಕೆಂದು ನನಗನ್ನಿಸುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಮಹದೇವ್ ಅವರ ಜೊತೆ ೧೦೭ ಸಹಿಗಳು ಆಗಿದ್ದವಲ್ಲ ಆ ೧೦೭ರ ಬಗ್ಗೆ ಹೇಳುತ್ತಿದ್ದೀರೋ ಅಥವಾ ಕ್ರಿಮಿನಲ್ ಸೆಕ್ಷನ್ ೧೦೭ ಹೇಳುತ್ತಿದ್ದೀರೋ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ನಿಯಮ ೧೦೭ ನಮ್ಮ ಕಾಲದ್ದು ಅಲ್ಲ, ಅದು ನಿಮ್ಮ ಕಾಲದ್ದು.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಕಾಂಗ್ರೆಸ್ ಕಾಲದ್ದು ಈ ೧೦೭. ಈ ೧೦೭ ಎನ್ನುವ ಪದವನ್ನು ಹಿಡಿದು ಕೊಂಡಿರುವವರು ನೀವೆ. ಇದು ಬಹಳ ಅಪಾಯಕಾರಿಯಾದಂತಹ ಒಂದು ಕಾಯ್ದೆ. ಯಾರಿಗೇ ಬೇಕಾದರೂ ಇದನ್ನು ಹಾಕಬಹುದು. ಹಿಂದೆ ಮುಂದೆ ನೋಡುವ ಹಾಗಿಲ್ಲ. ಯಾರನ್ನೋ ಹಿಡಿಯುವುದು, ಒಬ್ಬರ ಹೆಸರು ಹಾಕಿ ಇವರ ಜೊತೆ ೨೦ ಜನ ಎಂದು ಹೇಳುವುದು. ಇದರಲ್ಲಿ ಅಪರಾಧಿಗಳೂ ಇರುತ್ತಾರೆ, ನಿರಪಪರಾಧಿಗಳೂ ಇರುತ್ತಾರೆ. ಇದರಲ್ಲಿ ನಿರಪರಾಧಿಗಳೇ ಹೆಚ್ಚು. ಅಪರಾಧಿಗಳು ಕೆಲವರು ಇರುತ್ತಾರೆ. ಈ ರೀತಿ ರಾಜ್ಯದಲ್ಲಿ ನಿರಪರಾಧಿಗಳು ಅನೇಕ ಕಡೆ ಇದ್ದಾರೆ. ನಮ್ಮ ರಾಜ್ಯದ ಗೃಹ ಸಚಿವರು ಇದ್ಯಾವುದಕ್ಕೂ ಸಂಬಂಧಪಟ್ಟವರಲ್ಲ. ಈ ಗಲಭೆಗಳ ಬಗ್ಗೆ ಆಗುತ್ತಿರುವ ಬಗ್ಗೆ ಚರ್ಚೆಯನ್ನು ಕೇಳತಕ್ಕ ವ್ಯಕ್ತಿಗಳು ಅವರಾಗಿದ್ದಾರೆ. ಅವರು ಇತ್ತೀಚೆಗೆ ಗೃಹ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರ ಪ್ರಾಮಾಣಿಕತೆ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯ ಇದೆ. ಅವರಿಗೆ ಕೇಳ್ತಮಾಡತಕ್ಕಂಥ ತಾಳ್ಮೆ ಇದೆಯೆಂದು ಕೊಂಡಿದ್ದೇನೆ. ಈ ವಿಚಾರಗಳನ್ನು ಕೇಳತಕ್ಕ ವಿಚಾರಕ್ಕೆ ಅವರು ಬಂದಿದ್ದಾರೆ. ಮುನ್ನೆಚ್ಚರಿಕೆಯ ಬಂಧನ ಸೆಕ್ಷನ್ ೧೫೧ ಹಾಗೂ ೧೦೭ನೇ ಸೆಕ್ಷನ್ ಬಗ್ಗೆ ಉನ್ನತ ವಲಯದಲ್ಲಿನ ಅಧಿಕಾರಿಗಳು ವಿಮರ್ಶೆ ಮಾಡಿ ಇದರಲ್ಲಿ ಆಗತಕ್ಕ ದುರಂತವನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗಾಗಲೇ ಬಂಧನದಲ್ಲಿರುವವರ ಜಿಲ್ಲಾವಾರು, ತಾಲ್ಲೂಕುವಾರು ಪಟ್ಟಿಯನ್ನು ತರಿಸಿ ಅವರ ಬಗ್ಗೆ ಒಂದು ಉನ್ನತಾಧಿಕಾರಿಗಳ ಸಮಿತಿ ಮಾಡಿ ನಿಜವಾದ ಅಪ್ರಮಾಣಿಕರು ಯಾರು ಇದ್ದಾರೆ ಅವರ ಪಟ್ಟಿ ಮಾಡಿ ಅವರನ್ನು ನ್ಯಾಯಾಲಯಕ್ಕೆ ಕಳುಹಿಸಬಹುದು. ಮತ್ತು ಅವರಲ್ಲಿ ಪ್ರಾಮಾಣಿಕರು ಯಾರು ಇದ್ದಾರೆ ಅವರನ್ನು ಬಿಡುಗಡೆ ಮಾಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ,

ಇವತ್ತು ನಿಷೇದಾಜ್ಞೆಗಳನ್ನು ಎಷ್ಟು ಲೀಲಾಜಾಲವಾಗಿ ಹಾಕುತ್ತಿದ್ದಾರೆಂದರೆ ಈ ರೀತಿಯ ನಿಷೇದಾಜ್ಞೆಯನ್ನು ನಾವು ಹಿಂದೆಂದೂ ನೋಡಿಲ್ಲ. ಬೆಂಗಳೂರಿನಲ್ಲಿ ಒಂದು ತಿಂಗಳಿಂದ ಇದೆ. ಕೋಲಾರದಲ್ಲಿ ಕರ್ಫ್ಯೂ ಒಂದು ತಿಂಗಳಿಂದ ಇದೆ. ಇದಕ್ಕೆಲ್ಲಾ ಲೆಕ್ಕವೇ ಇಲ್ಲದಂತಾಗಿದೆ ಈ ರಾಜ್ಯ ಪೋಲೀಸ್ ರಾಜ್ಯವಾಗಿದೆ. ಈ ರಾಜ್ಯವೇನಾದರೂ ಸರ್ವಾಧಿಕಾರಿ ರಾಜ್ಯವೇ ? ಇಲ್ಲಿ ತುರ್ತು ಪರಿಸ್ಥಿತಿ ಏನಾದರೂ ಘೋಷಣೆಯಾಗಿದೆಯೋ ? ನಾವು ಈ ಸಭೆಯ ಒಳಗೆ ಬರಬೇಕಾದರೆ ೪-೬ ಕಡೆ ಪೋಲೀಸ್ ವ್ಯಾನುಗಳು, ಉದ್ದಕ್ಕೂ ಪೋಲೀಸರು ನಿಂತಿರುತ್ತಾರೆ. ನಾವೇನಾದರೂ ಪೋಲೀಸರ ಮಿಲಿಟರಿ ಪ್ರಭುತ್ವದಲ್ಲಿ ಇದ್ದೇವೆಯೋ ಆ ಪ್ರಭುತ್ವದ ಸದಸ್ಯರಾಗಿ ಒಳಗಡೆ ಬರುತ್ತಿದ್ದೇವೆಯೋ ಎಂದು ಭಾಸವಾಗುತ್ತಿದೆ. ನವೆಂಬರ್ ೧ ರಿಂದ ಇಲ್ಲಿಯವರೆಗೆ ರಾಜ್ಯೋತ್ಸವ ಮಾಡುವುದಕ್ಕೆ ಆಗೇ ಇಲ್ಲ.

ಒಂದು ಒಳ್ಳೆಯ ಉತ್ಸವ ಮಾಡುವುದಕ್ಕೆ ಆಗಿಲ್ಲ, ಇದಕ್ಕೆಲ್ಲಾ ಅನುಮತಿ ಇಲ್ಲವೇ ಇಲ್ಲ. ಎಲ್ಲೆಲ್ಲೂ ಈ ನಿಷೇದಾಜ್ಞೆ ಇದೆ. ಮಾತೆತ್ತಿದರೆ ಸೆಕ್ಷನ್ ೩೫, ೧೪೪ ಎಂದು ಹೇಳುತ್ತಾರೆ ಮತ್ತು ಕಂಡಲ್ಲಿ ಗುಂಡು ಎಂದು ಹೇಳುತ್ತಾರೆ. ಕಂಡಲ್ಲಿ ಗುಂಡು ಎನ್ನುವುದಕ್ಕೆ ಕಣ್ಣು ಇಲ್ಲ, ಕಿವಿ ಇಲ್ಲ, ಹೃದಯ ವಂತೂ ಇಲ್ಲವೇ ಇಲ್ಲ. ಕಂಡಲ್ಲಿ ಗುಂಡು ಇದೆಯಲ್ಲ ಇದು ಯಾರನ್ನೂ ಬೇಕಾದರೂ ಹೊಡೆದು ಹಾಕುತ್ತಾರೆ, ಯಾರನ್ನು ಬೇಕಾದರೂ ಹೊಡೆದು ಓಡಿಸತಕ್ಕಂತಹ ಪರಿಸ್ಥಿತಿ ಇದೆ. ಇದರ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕು. ಮಾಡದಿದ್ದರೆ ಬಹಳ ತೊಂದರೆಯಾಗುತ್ತದೆ. ಇಂತಹ ಪರಿಸ್ಥಿತಿಯನ್ನು ನಾನು ತುರ್ತು ಪರಿಸ್ಥಿತಿ ಕಾಲದಲ್ಲೂ ಸಹ ನೋಡಿರಲಿಲ್ಲ. ಹಿಂದೆ ಇದೇ ಸದನದಲ್ಲಿ ಮುನಿಯಮ್ಮ ಅವರ ಪ್ರಕರಣದ ಬಗ್ಗೆ ಚರ್ಚೆ ನಡೆಯಿತು. ಒಂದು ದೊಡ್ಡ ದುರಂತ ಆಗ ನಡೆದು ಹೋಯಿತು. ಮಧುಗಿರಿ ಪ್ರಕರಣದಲ್ಲಿ ಆಗ ಇದ್ದಂತಹ ಗೃಹ ಸಚಿವರು ನಮ್ಮ ಸರಕಾರದಿಂದ ಅನ್ಯಾಯವಾಗಿದೆ ಎಂದು ಹೇಳಿ ರಾಜೀನಾಮೆ ಕೊಟ್ಟಂತಹ ನಿರ್ದೇಶನಗಳನ್ನು ಕೂಡ ನಾವು ನೋಡಿದ್ದೇವೆ. ಇವತ್ತು ಅಂತಹ ಸಾವಿರ ನಿದರ್ಶನವಾದರೂ ಕೂಡ ರಾಜೀನಾಮೆ ಕೊಡುವ ಮಟ್ಟಕ್ಕೆ ಯಾರೂ ಹೋಗುವುದಿಲ್ಲ, ಯಾವ ಗೃಹ ಸಚಿವರು ಕೂಡ ಹೋಗುವುದಿಲ್ಲ. ಅದನ್ನು ನಾವು ಅಂದುಕೊಂಡೂ ಇಲ್ಲ. ಈ ನಿಷೇದಾಜ್ಞೆಯನ್ನು ಕೊಡುವಾಗ ಕೆಲವೊಂದು ನಿಬಂಧನೆಗಳು ಇದೆ. ಆದರೆ ಇಂದು ಯಾರೂ ಕೂಡ ಅದನ್ನು ನೋಡುವುದಕ್ಕೆ ಹೋಗುವುದಿಲ್ಲ. ಜಿಲ್ಲಾಧಿಕಾರಿಗಳು ತಾಲ್ಲೂಕು ನ್ಯಾಯಾಧೀಶರು ಬರಬೇಕಾಗುತ್ತದೆ. ಅವನೆಲ್ಲ ನೋಡುವುದಕ್ಕೆ ಹೋಗುವುದಿಲ್ಲ. ತಕ್ಷಣ ನಿಷೇಧಾಜ್ಞೆ ತರುತ್ತಾರೆ. ಕೂಡಲೆ ಬಂದೂಕು ತೋರಿಸುವುದು, ಜನರು ಹೊರಗಡೆ ಯಾರು ಇರಕೂಡದೆಂದು ಎಲ್ಲರನ್ನೂ ಮನೆಗೆ ಕಳಿಸುವುದು—ಹೀಗೆ ಮಾಡುತ್ತಾರೆ. ಇದರಿಂದಾಗಿ ಅನೇಕ ಕಡೆಗಳಲ್ಲಿ ಎಷ್ಟು ಭಯ ಭೀತಿ ಉಂಟಾಗುತ್ತದೆಂಬುದನ್ನು ನಾವು ವಿಚಾರ ಮಾಡಬೇಕಾಗುತ್ತದೆ. ನಾನು ಕರ್ಫ್ಯೂ ಜಾರಿಯಲ್ಲಿರತಕ್ಕಂತಹ ಜಾಗಗಳನ್ನು ನೋಡಿದ್ದೇನೆ. ಕಂಡಲ್ಲಿ ಗುಂಡು ಎಂದು ಅಂದರೆ ಈ ಪದದ ಅರ್ಥವನ್ನು ತಾವು ಆಲೋಚನೆ ಮಾಡಬೇಕು. ಎಂತಹ ಭಯಂಕರವಾದ ಪದ ಇದು ಎಂಬುದನ್ನು ವಿಚಾರ ಮಾಡಬೇಕು. ನಿರಪರಾಧಿಗಳು ರಸ್ತೆಯಲ್ಲಿ ಬಂದರೆ ಅವರಿಗೂ ಕೂಡ ಕಂಡಲ್ಲಿ ಗುಂಡು ಎಂದು ಹೇಳುವಂಥ ಕಾಯಿದೆ ಏನಿದೆ ಇದು ಅತ್ಯಂತ ಘೋರವಾದ ಕಾಯಿದೆ. ಇದನ್ನು ಯಾರಿಗೆ ಉಪಯೋಗ ಮಾಡಬೇಕು ಯಾರಿಗೆ ಹಾಕಬೇಕೆಂಬುದನ್ನು ವಿಚಾರ ಮಾಡಬೇಕಾಗುತ್ತದೆ. ತಪ್ಪಿತಸ್ಥರಿಗೆ ಕಂಡಲ್ಲಿ ಗುಂಡು ಹಾಕಬೇಕೇ ಹೊರತು ನಿರಪರಾಧಿಗಳು ರಸ್ತೆಯಲ್ಲಿ ಬಂದರೆ ಅವರಿಗೆ ಕಂಡಲ್ಲಿ ಗುಂಡು ಹಾಕುತ್ತೇವೆಂದು ಹೇಳುವಂತಹ ಕಾಯಿದೆ ಏನು ಇದೆ ಇದು ಅತ್ಯಂತ ಘೋರವಾದಂತಹ, ಕರಾಳವಾದ ಕಾಯಿದೆ. ಈ ಕಂಡಲ್ಲಿ ಗುಂಡು ಎನ್ನುವ ಕರಾಳ ಕಾಯಿದೆಯನ್ನು ನಿರಪರಾಧಿಗಳ ಮೇಲೆ ಉಪಯೋಗಿಸ ಬಾರದು. ತಪ್ಪಿತಸ್ಥರಿಗೆ ಇದರಿಂದ ಶಿಕ್ಷೆಯಾಗುವಂತೆ ಆಲೋಚನೆ ಮಾಡಬೇಕು. ಕಂಡಲ್ಲಿ ಗುಂಡು ಎಂದು ಪತ್ರಿಕೆಯಲ್ಲಿ ಬರುತ್ತದೆ. ವಾಹನದಲ್ಲಿ ದೊಡ್ಡ ಧ್ವನಿವರ್ಧಕಗಳನ್ನು ಕಟ್ಟಿಕೊಂಡು ರಸ್ತೆಯಲ್ಲಿ ಗೊತ್ತಿಲ್ಲದೆ ಯಾರು ಬರುತ್ತಾರೋ ಅವರಿಗೆ ಗುಂಡು ಹಾಕುವುದು ಸರಿಯಲ್ಲ. ಸಮಗ್ರ ಪೋಲೀಸ್ ಕಾಯಿದೆಯನ್ನೇ ಬದಲಾವಣೆ ಮಾಡಬೇಕು. ಯಾವುದೋ ಓಬೀರಾಯನ ಕಾಲದ, ಬ್ರಿಟಿಷ್ ದರ್ಬಾರಿನ ಸರ್ವಾಧಿಕಾರ ಪ್ರಭುತ್ವ ಏನೂ ಅಲ್ಲ. ಪೋರ್ಚುಗೀಸ್ ಪ್ರಭುತ್ವದಲ್ಲಿ ನಾವೇನೂ ಇಲ್ಲ. ಈ ಹಳೆಯ ಪ್ರಭುತ್ವದಿಂದ ಹೊರಕ್ಕೆ ಬರಬೇಕು. ಈ ದೇಶಕ್ಕೆ ಸ್ವಾತಂತ್ರ್ಯ ಬಂದು ಬಹಳಷ್ಟು ವರ್ಷಗಳಾಗಿದ್ದರೂ ಕೂಡ ಈ ಕೆಟ್ಟ ಕಾಯಿದೆ ಬದಲಾವಣೆಯಾಗಿಲ್ಲ. ಇದರ ಬಗ್ಗೆ ಸಮಗ್ರವಾದ ಚಿಂತನೆ ಈ ರಾಜ್ಯದಲ್ಲಿ ಆಗಬೇಕು, ದೇಶದಲ್ಲಿ ಆಗಬೇಕು. ಇದನ್ನು ನಾವೇ ಮಾಡೋಣ, ನಮ್ಮ ರಾಜ್ಯವೇ ಮಾದರಿಯಾಗಲಿ. ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಕುಳಿತುಕೊಂಡು ಇಂತಹ ಕಾಯಿದೆಗಳು ಇರಬೇಕೇ ಬೇಡವೇ ಎಂದು ವಿಚಾರ ಮಾಡಲಿ. ೧೦೭ನೇ ಕಾಯಿದೆಯನ್ನು ಬೇರೆಯವರಿಗೆ ಉಪಯೋಗಿಸಬೇಕೆಂದು ಏನೂ ಇಲ್ಲ. ನಮ್ಮ ಮೇಲೆ ಉಪಯೋಗಿಸಬಹುದು. ನನ್ನ ಮೇಲೆ ಮತ್ತು ಶ್ರೀ ಸೂರ್ಯನಾರಾಯಣರಾವ್ ಅವರ ಮೇಲೆ ಶ್ರೀ ಎಂ. ಎಸ್. ಕೃಷ್ಣನ್‌ರವರ ಮೇಲೆ ಎಲ್ಲರ ಮೇಲೆ ಕೂಡ ಹಿಂದೆ ಉಪಯೋಗಿಸಿದ್ದರು ಕಾನೂನಿನ ದಂಡ ಇರುವುದು ಎಲ್ಲರ ಮೇಲೂ ಹೇರುವುದಕ್ಕಲ್ಲ. ಅಪರಾಧಿಗಳ ಮೇಲೆ ಮಾತ್ರ ಇದನ್ನು ಹೇರಬೇಕೇ ಹೊರತು, ನಿರಪರಾಧಿಗಳ ಮೇಲೆ ಮುಗ್ಧ ಜನರ ಮೇಲೆ ಹೇರುವುದಲ್ಲ. ಈ ಕಾನೂನಿನ ಬಗ್ಗೆ ಸಮಗ್ರವಾದ ಚರ್ಚೆ ಆಗಬೇಕಾಗಿದೆ. ನಮ್ಮಲ್ಲಿರುವ ಈ ಒಂದು ಪೋಲೀಸ್ ಕಾಯಿದೆಯಲ್ಲಿ ಪುಟ ಪುಟಗಟ್ಟಲೆ ನಿಯಂತ್ರಣ ಮಾಡುವುದಕ್ಕೆ ಬೇಕಾದಷ್ಟು ಅವಕಾಶಗಳು ಇವೆ. ಈ ಮಧ್ಯೆ ಟಾಡಾ ಕಾಯಿದೆಯನ್ನು ಹಿಂದಿನ ಸರಕಾರ ತಂದಿರಬಹುದು ಆದರೆ ಅದನ್ನು ಜಾರಿಗೆ ಕೊಟ್ಟಿರಲಿಲ್ಲ. ಆದರೆ ಟಾಡಾ ಕಾಯಿದೆಯನ್ನು ಜಾರಿ ಮಾಡುವುದಕ್ಕೆ ಇದ್ದಂತಹ ಸಂದರ್ಭಗಳು ಯಾವುವು ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ.

ಕರ್ನಾಟಕದಲ್ಲಿ ಟಾಡಾ ಕಾಯಿದೆಯನ್ನು ಜಾರಿಗೆ ತರುವುದಕ್ಕೆ ಇದ್ದಂತಹ ಪರಿಸ್ಥಿತಿ ಏನು ? ಕರ್ನಾಟಕದಲ್ಲಿ ಅಂತಹ ಪರಿಸ್ಥಿತಿ ಏನು ಉದ್ಭವವಾಗಿದೆ ? ಟಾಡಾ ಕಾಯಿದೆಯನ್ನು ಜಾರಿಮಾಡು

ವುದಕ್ಕೆ ಯಾವ ಪರಿಸ್ಥಿತಿ ಉದ್ಭವವಾಗಿದೆ? ನನಗನಿಸುತ್ತದೆ, ಮಾನ್ಯ ಮುಖ್ಯಮಂತ್ರಿಗಳು ಕರೆದ ವಿರೋಧಪಕ್ಷಗಳ ಮುಖಂಡರ ಸಭೆಯಲ್ಲೂ ನಾವು ಒತ್ತಾಯಮಾಡಿ ಹೇಳಿದ್ದೇವೆ. ಈ ಟಾಡಾ ಕಾಯಿದೆಯನ್ನು ಖಂಡಿತವಾಗಿಯೂ ತರಬೇಡಿಯೆಂದು ಹೇಳಿದ್ದೇವೆ. ಟಾಡಾ ಕಾಯಿದೆ ಎಲ್ಲಿಗೆ ಬರುತ್ತದೆಂದರೆ ಭಯೋತ್ಪಾದನೆಗೆ ಬರುತ್ತದೆ. ಇದು ಪಂಜಾಬಲ್ಲ, ಕಾಶ್ಮೀರ ಅಲ್ಲ. ಕರ್ನಾಟಕ ಶಾಂತಿಯ ಸಾಗರ; ಶಾಂತಿಯ ತೋಟ. ಈ ಕರ್ನಾಟಕ ರಾಜ್ಯದಲ್ಲಿ ಟಾಡಾ ಕಾಯಿದೆ ಬೇಕೆ? ಇನ್ನು ನೀವು ಜನರನ್ನು ಈ ಕಾಯಿದೆಯೊಳಗೆ ಸೇರಿಸಿ ಅವರನ್ನು ಹಿಂಡತಕ್ಕ ಪರಿಸ್ಥಿತಿ ಬೇಕೆ? ನನಗನಿಸುತ್ತದೆ, ಟಾಡಾ ಕಾಯಿದೆ ನಮಗೆ ಬೇಕಾಗಿಲ್ಲ. ನಿಮಗೆ ಇರತಕ್ಕ ಅನೇಕ ಕಾಯಿದೆಗಳೇ ನಿಮ್ಮನ್ನು ರಕ್ಷಣೆ ಮಾಡುವುದಕ್ಕೆ ನಿಲ್ಲುತ್ತವೆ, ಅವುಗಳು ಪರಿಣಾಮಕಾರಿಯಾಗಿ ಇವೆ. ಆದ್ದರಿಂದ ಟಾಡಾ ಕಾಯಿದೆಯನ್ನು ಪ್ರಜಾಪ್ರಭುತ್ವ ದೃಷ್ಟಿಯಿಂದ, ಪ್ರಜಾಪ್ರಭುತ್ವದ ಹಿತಚಿಂತನೆಯಿಂದ ತಾವು ಜಾರಿಗೆ ತರುವುದಕ್ಕೆ ಹೋಗಬೇಡಿ. ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು ಸಮಾಜವಾದಿ ಗುಂಪಿನಿಂದ ಬಂದವರು. ಸಮಾಜವಾದಿ ನಾಯಕ ದಿವಂಗತ ಶಾಂತವೇರಿ ಗೋಪಾಲಗೌಡರು ಇಂತಹ ಅನಿಷ್ಟ ಕಾಯಿದೆಗಳ ಬಗ್ಗೆ ನಿರಂತರವಾಗಿ ಈ ಸಭೆಯಲ್ಲಿ ಹೋರಾಟ ಮಾಡಿದ್ದಾರೆ. ನಾನು ಬಂಗಾರಪ್ಪನವರು ನಂಜೇಗೌಡರು ಮತ್ತು ಪುಟ್ಟದಾಸ್‌ರವರು ಈ ಕಡೆಯಲ್ಲಿ ಕುಳಿತುಕೊಂಡಿದ್ದಾಗ ವಿರೋಧ ಮಾಡಿದ್ದೇವೆ. ಈಗ ಅವರೇ ಇಂತಹ ಕಾಯಿದೆಯನ್ನು ರಾಜ್ಯದಲ್ಲಿ ಜಾರಿಗೆ ತರುವುದಕ್ಕೆ ಹೊರಟರೆ ಅದು ಗೊಂದಲ ಪರಿಸ್ಥಿತಿಗೆ ಹೋಗುತ್ತದೆ. ಅದು ಶೋಭೆ ತರುವುದಿಲ್ಲ. ಈ ನಾಡನ್ನು ಪೋಲೀಸ್ ರಾಜ್ಯಮಾಡಬೇಡಿ. ಈ ರಾಜ್ಯವನ್ನು ಮಿಲಿಟರಿ ಪ್ರಭುತ್ವಕ್ಕೆ ತಳ್ಳಬೇಡಿ. ಈ ರಾಜ್ಯವನ್ನು ಪೋಲೀಸ್ ಹಿಡಿತಕ್ಕೆ ಕೊಡುವ ಪರಿಸ್ಥಿತಿಗೆ ಹೋಗಬೇಡಿ. ಈ ಕಾಯಿದೆ ಅತ್ಯಂತ ಘೋರ ಅಪರಾಧ ಮತ್ತು ಅತ್ಯಂತ ಅನ್ಯಾಯಗಳಿಗೆ ಎಡೆಕೊಡುತ್ತದೆ. ಆದ್ದರಿಂದ ತಾವು ಮತ್ತು ಗೃಹಮಂತ್ರಿಗಳು ಚಿಂತನೆಮಾಡಿ. ನೀವು ಇವತ್ತು ಆ ಕಡೆ ಇರಬಹುದು, ಆಮೇಲೆ ಈ ಕಡೆಗೆ ಬರಬಹುದು. ಪರಿಸ್ಥಿತಿ ಬದಲಾವಣೆಯಾಗುತ್ತಿರುತ್ತದೆ. ಮುಂದಿನ ಪೀಳಿಗೆ ನಮ್ಮನ್ನು ಶಪಿಸಬಾರದು. ದಯಮಾಡಿ ಟಾಡಾ ಕಾಯಿದೆಯನ್ನು ತಾವು ವಾಪಸ್ಸು ತೆಗೆದುಕೊಳ್ಳಬೇಕು. ರಾಜ್ಯದ ಪೋಲೀಸ್‌ರಲ್ಲಿ ದಕ್ಷತೆಯನ್ನು ಹೆಚ್ಚಿಸಬೇಕು. ನಾವು ದಕ್ಷತೆ ಎನ್ನುವಾಗ ಅದರ ಜೊತೆಯಲ್ಲಿ ರಾಜಕಾರಣ ಮಾಡಬಾರದು ಸಂಪುಟ ಬದಲಾವಣೆಯಾದ ತಕ್ಷಣ ಉನ್ನತ ಅಧಿಕಾರಿಗಳನ್ನು ಬದಲಾವಣೆ ಮಾಡಲಾಯಿತು. ಐ.ಪಿ.ಎಸ್. ಉನ್ನತಾಧಿಕಾರಿಗಳು ಕೆಲಸಮಾಡುತ್ತಿದ್ದಾರೆ. ನಿಮ್ಮ ಸರ್ಕಾರ ಬದಲಾವಣೆಯಾಯಿತು ಹಾಗಾದರೆ ತಕ್ಷಣ ಅವರನ್ನು ಬದಲಾವಣೆ ಮಾಡಬೇಕು. ಇದು ಸರಿಯಲ್ಲ. ಪೋಲೀಸ್ ಅಧಿಕಾರಿ, ಯಾವುದೋ ಪೋಲೀಸ್ ಅಧಿಕಾರಿ ಅವರು ತಮ್ಮ ಕೆಲಸದಲ್ಲಿ ದಕ್ಷ, ಪ್ರಾಮಾಣಿಕ ಮತ್ತು ಯೋಗ್ಯತೆ ಇರತಕ್ಕ ಅಧಿಕಾರಿ ಇದ್ದರೆ ಅವರು ಯಾರೇ ಆಗಿರಲಿ ಉತ್ತಮರಿದ್ದರೆ ಅವರನ್ನು ಮಾತ್ರ ಬದಲಾವಣೆ ಮಾಡುವುದಕ್ಕೆ ಹೋಗಬಾರದು. ಪೋಲೀಸ್ ಶಕ್ತಿ ಬಹಳ ಹಳೆಯ ಕಾಲದ್ದು. ರಾಜ್ಯದಲ್ಲಿ ಪೋಲೀಸ್ ಕಾನ್‌ಸ್ಟೇಬಲ್‌ಗಳ ಸಂಖ್ಯೆ ೩೦ ಸಾವಿರ ಇರಬಹುದು. ೩೫ ಸಾವಿರ ಎಂದು ಹೇಳುತ್ತಿದ್ದಾರೆ. ಕರ್ನಾಟಕ ರಾಜ್ಯದ ನಾಲ್ಕುವರೆ ಕೋಟಿ ಜನಸಂಖ್ಯೆಗೆ ೩೫ ಸಾವಿರ ಪೋಲೀಸ್ ಕಾನ್‌ಸ್ಟೇಬಲ್‌ಗಳು ಸಾಕಾಗುತ್ತದೆಯೇ? ಪೋಲೀಸ್ ಇಲಾಖೆಯಲ್ಲಿ ಯಾವುದು ಜಾಸ್ತಿಯಾಗಿದೆ ಅಂದರೆ, ಐಜಿಗಳು ಜಾಸ್ತಿಯಾಗಿದ್ದಾರೆ, ಡಿಐಜಿಗಳು ಜಾಸ್ತಿಯಾಗಿದ್ದಾರೆ. ಎಸ್‌ಪಿಗಳು ಜಾಸ್ತಿಯಾಗಿದ್ದಾರೆ. ಪೋಲೀಸ್ ಕಾನ್‌ಸ್ಟೇಬಲ್‌ಗಳ ಸಂಖ್ಯೆ ಮಾತ್ರ ಜಾಸ್ತಿಯಾಗಿಲ್ಲ. ೩೫ ಸಾವಿರ ಜನ ಪೋಲೀಸ್ ಕಾನ್‌ಸ್ಟೇಬಲ್‌ಗಳು ರಾಜ್ಯದ ಜನತೆಗೆ ಸಾಕಾಗುವುದಿಲ್ಲ. ತಮಗೆ ಒಂದು ಮಾತು ಹೇಳುತ್ತೇನೆ, ಇದು ನಾಚಿಕೆಯಾಗುತ್ತದೆ ಬೆಂಗಳೂರು ನಗರದಲ್ಲಿ ಒಂದು ತಿಂಗಳ ಹಿಂದೆ ಪೋಲೀಸ್‌ನವರ ಹತ್ತಿರ ಜನ ಬಂದೂಕು ಕಿತ್ತುಕೊಂಡು ಹೋದರು.

ಜನ ಎಂದರೆ ಸೌಜನ್ಯವಾಗಿರತಕ್ಕಂಥ ಜನ ಅಲ್ಲ. ರೌಡಿಗಳ ಗುಂಪಿಗೆ ಸೇರಿದಂಥ ಜನ ಬಂದೂಕು ಕಿತ್ತುಕೊಂಡು ಹೋದರು. ಅಂದರೆ ಏನು ಗತಿ? ಹೀಗಾದರೆ ಈ ಪೋಲೀಸ್ ಕಾನ್‌ಸ್ಟೇಬಲ್‌ಗಳು ಯಾವ ಒಂದು ಆತ್ಮಸ್ಥೈರ್ಯ ಇಟ್ಟುಕೊಂಡು ಈ ರಾಜ್ಯದಲ್ಲಿ ಕೆಲಸ ಮಾಡಬೇಕು? ಅವರಿಗೆ ಭತ್ಯೆ ಎಷ್ಟು ಕೊಡುತ್ತೀರಿ ಅಂದರೆ ದಿನಕ್ಕೆ ಏಳು ರೂಪಾಯಿ ಕೊಡುತ್ತೀರಿ. ಅವನು ಯಾವುದೇ ಚಳುವಳಿಯನ್ನು ತಡೆಹಿಡಿಯುವುದಕ್ಕೆ ಹೋದರೆ, ಬೆಳಿಗ್ಗೆಯಿಂದ ಸಾಯಂಕಾಲದವರೆಗೆ, ಬೂಟುಗಳನ್ನು ಹಾಕಿಕೊಂಡು, ಆ ಬಟ್ಟೆಗಳನ್ನು ಹಾಕಿಕೊಂಡು ಲಾಠಿ ಹಿಡಿದುಕೊಂಡು ಕೆಲಸ ಮಾಡಿದರೆ ಅವರಿಗೆ ಕೊಡುವುದು ಏಳು ರೂಪಾಯಿ. ಏಳು ರೂಪಾಯಿಗೆ ಇದು ಸಾಧ್ಯವೇ? ಕನಿಷ್ಟ ಒಂದು ದಿನದ ವೇತನವನ್ನಾದರೂ ಅಂದರೆ ೩೦-೩೫ ರೂಪಾಯಿಗಳನ್ನಾದರೂ ಅವರಿಗೆ ಕೊಡಬೇಕು. ಅದನ್ನು ಕೊಡತಕ್ಕಂಥ ಕೆಲಸವನ್ನು ನಿಮ್ಮ ಕಾಲದಲ್ಲಾದರೂ ಮಾಡಿ. ನಾನು ನಂಜನಗೂಡು ರೈಲ್ವೆ ನಿಲ್ದಾಣಕ್ಕೆ ಹೋಗಿದ್ದೆ. ಅಲ್ಲಿ ನಿಮ್ಮ ಪೋಲೀಸ್ ಸ್ಟೇಷನ್‌ಗಳ ಗತಿಯನ್ನು ನೋಡಬೇಕು. ಪೋಲೀಸ್ ಸ್ಟೇಷನ್ ಎಂದರೆ ಎಲ್ಲವೂ ಅಲ್ಲೇ ಇರುತ್ತದೆ. ಹಳೇ ಸೈಕಲ್ಲುಗಳು, ಕಳ್ಳಬಟ್ಟಿ ತಪ್ಪಲೆಗಳು,

ಎಲ್ಲಾ ಅಲ್ಲೇ ಇರುತ್ತದೆ ; ಸಬ್‌ಇನ್‌ಸ್ಪೆಕ್ಟರ್ ಅಲ್ಲೇ ಸರ್ಕಲ್ ಇನ್‌ಸ್ಪೆಕ್ಟರ್ ಅಲ್ಲೇ ಇರುತ್ತಾರೆ. ಪ್ರತಿಯೊಂದೂ ಕೂಡ ಅಲ್ಲೇ ಇರುತ್ತದೆ. ನೀವು ಅದನ್ನು ನೋಡಿಬಿಟ್ಟರೆ ನರಕವೇ ಹೌದು. ಅಲ್ಲಿ ಸಾರಾಯಿ ಗಡಿಗೆಗಳು, ಒಂದು ಕಡೆ ಕಳ್ಳ, ಇನ್ನೊಂದು ಕಡೆ ಸುಳ್ಳ ಎಲ್ಲರೂ ಅಲ್ಲೇ. ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಗೃಹ ಸಚಿವರಿಗೆ ಹೇಳುತ್ತೇನೆ. ಸ್ವಲ್ಪ ಹಳ್ಳಿಗಾಡಿನ ಪೋಲೀಸ್ ಸ್ಟೇಷನ್‌ಗಳು ಬೇಡ, ನಗರ ಪೋಲೀಸ್ ಸ್ಟೇಷನ್‌ಗಳನ್ನು ತಾವು ನೋಡಬೇಕು. ನನ್ನ ಜೊತೆಯಲ್ಲಿ ಬಂದರೆ ನಾನು ಕರೆದುಕೊಂಡು ಹೋಗಿ ತೋರಿಸುತ್ತೇನೆ. ಪೋಲೀಸ್ ಸ್ಟೇಷನ್ ಹಿಂದೆ ಒಂದು ಸಾವಿರ ಮುರಿದ ಸೈಕಲ್ಲುಗಳು, ಇಪ್ಪತ್ತು ಹಳೆಯ ಲಾರಿಗಳು, ೩೦ ಕಳ್ಳಭಟ್ಟಿ ಹೊಡೆದಂಥ ಕಾರುಗಳು ಇರುತ್ತವೆ ; ಕುಳಿತುಕೊಳ್ಳುವುದಕ್ಕೆ ಸ್ಥಳ ಇಲ್ಲ. ಒಂದು ಖುರ್ಚಿ ಇಲ್ಲ, ಟೇಬಲ್ ಇಲ್ಲ, ಒಂದು ಪುಸ್ತಕ ಇಲ್ಲ ಯಾವ ವ್ಯವಸ್ಥೆಯೂ ಇಲ್ಲ. ಈ ಪರಿಸ್ಥಿತಿಯು ಉದ್ಭವವಂತೂ ಆಗಿದೆ. ನೀವು ಇನ್ನೇನು ತಾನೆ ಮಾಡಬಲ್ಲಿರಿ ? ಈ ಸಮಾಜವನ್ನು ಯಾವ ದಿಕ್ಕಿನತ್ತ ತೆಗೆದುಕೊಂಡು ಹೋಗಬಲ್ಲಿರಿ ?

ಶ್ರೀಮತಿ ಮೋಟಮ್ಮ.—ನೀವು ಏನೇನು ಇತ್ತು ಎಂದಿರಲ್ಲ : ಅಲ್ಲಿ ಬಾಟಲುಗಳು ಇರಲಿಲ್ಲವೇ ?

ಶ್ರೀ ವಾಟಾಳ್ ನಾಗರಾಜ್.—ಬಾಟಲುಗಳು ಇದ್ದವು......

ಚೇರ್ಮನ್.—ದಯವಿಟ್ಟು ನೀವು ಲಾ ಅಂಡ್ ಆರ್ಡರ್ ಬಗ್ಗೆ, ಕೋಮು ಗಲಭೆಗಳಿಗೆ ಸಂಬಂಧ ಪಟ್ಟಂತೆ ಮಾತನಾಡಿ. ಏಕೆಂದರೆ ತುಂಬಾ ಜನ ಇನ್ನೂ ಮಾತನಾಡುವವರಿದ್ದಾರೆ. ದಯವಿಟ್ಟು ಇನ್ನು ಐದು ನಿಮಿಷದಲ್ಲಿ ನೀವು ಮುಗಿಸಿಬಿಡಿ. ನೀವು ನಿನ್ನೆಯೇ ಶುರು ಮಾಡಿದ್ದೀರಲ್ಲ ?

ಶ್ರೀ ವಾಟಾಳ್ ನಾಗರಾಜ್.—ನಿನ್ನೆ ಶುರು ಮಾಡಿದವರು ಯಾರು ? ನಾನು ಯಾವುದೋ ಒಂದು ದಾರಿಯಲ್ಲಿ ಹೋಗುತ್ತಿದ್ದೆ. ದಯವಿಟ್ಟು ಅಡ್ಡ ಹಾಕಬೇಡಿ. ಒಂದೊಂದು ಪೋಲೀಸ್ ಸ್ಟೇಷನ್‌ನಲ್ಲಿ ಈಗಿನ ಸಂಖ್ಯೆ ಪ್ರಕಾರ ೨೦ ಅಥವಾ ೨೨ ಜನ ಕಾನ್‌ಸ್ಟೇಬಲ್‌ಗಳು ಇರಬಹುದು.

ಒಬ್ಬ ಮಾನ್ಯ ಸದಸ್ಯರು.—ಅಷ್ಟೂ ಇಲ್ಲ ಆರೇಳು ಜನ ಇರಬಹುದು.

ಶ್ರೀ ವಾಟಾಳ್ ನಾಗರಾಜ್.—ಹೌದು, ಆರೆಂಟು ಜನ ಇರಬಹುದು. ಏಕೆಂದರೆ, ಅವರು ಕೋಮು ಗಲಭೆಯನ್ನು ತಡೆಯಬೇಕಾದರೆ......

ಶ್ರೀ ಧರ್ಮಸಿಂಗ್ (ಗೃಹ ಸಚಿವರು).—ತಾವು ಹೇಳಿದ್ದು ನಿಜ. ಶ್ರೀ ಧರ್ಮವೀರ ಕಮಿಟಿಯ ಶಿಫಾರಸ್ಸುಗಳು ಸರ್ಕಾರದ ಮುಂದೆ ಇದೆ. ಈಗ ರೂರಲ್ ಪೋಲೀಸ್ ಸ್ಟೇಷನ್‌ನಲ್ಲಿ ೨೮ ಕಾನ್‌ಸ್ಟೇಬಲ್‌ಗಳು ಇರಬೇಕು, ಟೌನ್ ಪೋಲೀಸ್ ಸ್ಟೇಷನ್‌ನಲ್ಲಿ ೪೧ ಜನ ಇರಬೇಕು ಮತ್ತು ಸಿಟಿ ಲೆವೆಲ್‌ನಲ್ಲಿ ೭೧ ಜನ ಇರಬೇಕು ಎಂದು ನಿಗದಿ ಮಾಡಿದೆ. ಈಗಾಗಲೇ ನಾನು ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಮತ್ತು ಅದಕ್ಕೆ ಬೇಕಾಗಿರತಕ್ಕಂಥ ಬಜೆಟ್ ಪ್ರಾವಿಜನ್ ೧೬೦ ಕೋಟಿ ಇದೆ, ಆದರೆ ಈಗ ಇಯರ್‌ವೈಸ್ ೧೩೦ ಕೋಟಿಗೆ ಫೈನಾನ್ಸ್‌ನಲ್ಲಿ ಪ್ರಪೋಸಲ್ ಇದೆ. ಇವನ್ನು ಸರಿಪಡಿಸಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಂಡು ವಿಚಾರ ಮಾಡುತ್ತಿದೆ. ಈಗಾಗಲೇ ಎಲ್ಲಾ ಕಡೆ ಗಲಭೆಗಳು ಆಗುತ್ತಿದೆ ; ಅದನ್ನು ನಿಯಂತ್ರಣ ಮಾಡಬೇಕಾಗಿದೆ. ಇದು ಸರ್ಕಾರದ ಕರ್ತವ್ಯ. ಅದರ ಜೊತೆಗೆ ಸಿಬ್ಬಂದಿಯನ್ನು ಕೂಡ ಯಾವ ರೀತಿ ಹೆಚ್ಚು ಮಾಡಿಕೊಂಡು ಹೋಗಬೇಕು ಎಂದು ಪ್ರಸ್ತುತ ಸರ್ಕಾರ ಇದರ ಬಗ್ಗೆ ವಿಚಾರ ಮಾಡುತ್ತಿದೆ.

ಚೇರ್ಮನ್.—ತಮ್ಮ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವಾಗ ಅವರು ಮಾತನಾಡಲಿ. ಶ್ರೀ ನಾಗರಾಜ್‌ರವರೇ, ದಯವಿಟ್ಟು ಕೋಮು ಗಲಭೆಗೆ ಸಂಬಂಧಪಟ್ಟಂತೆ ಮಾತ್ರ ಮಾತನಾಡಿ. ಮೂರು ಗಂಟೆಗೆ ನೀವು ದಯವಿಟ್ಟು ಮುಗಿಸಬೇಕು

ಶ್ರೀ ವಾಟಾಳ್ ನಾಗರಾಜ್.—ನಾನೀಗ ಯಾವ ದೇವರಿಗೆ ಕೈ ಮುಗಿಯಬೇಕು ? ಶಿವನಿಗೆ ಕೈಮುಗಿಯಬೇಕೋ, ಇಲ್ಲ ರಾಮನಿಗೆ ಕೈಮುಗಿಯಬೇಕೋ ? ಅಥವಾ ಕೃಷ್ಣನಿಗೋ ? ತಮಗೆ ಕೈಮುಗಿಯುತ್ತೇನೆ. ಏಕೆಂದರೆ ಮೊದಲು ಸಿಗುವವರು ನೀವು. ಆಮೇಲೆ ರಾಮಕೃಷ್ಣರನ್ನು ನೋಡೋಣ. ದಯಮಾಡಿ ನನಗೆ ಮಧ್ಯದಲ್ಲಿ ತೊಂದರೆ ಕೊಡಬೇಡಿಯೆಂದು ತಮ್ಮನ್ನು ಪ್ರೀತಿ, ವಿಶ್ವಾಸ, ಗೌರವದಿಂದ ಕೇಳಿಕೊಳ್ಳುತ್ತೇನೆ. ಈ ಕಾನ್‌ಸ್ಟೇಬಲ್‌ಗಳ ಬಗ್ಗೆ ಮಾನ್ಯ ಮಂತ್ರಿಗಳು ಮಾತನಾಡಿದ್ದಾರೆ. ಈ ರಾಜ್ಯದಲ್ಲಿ ಕೋಮು ಗಲಭೆಗಳನ್ನು ಹತ್ತಿಕ್ಕಬೇಕಾದರೆ ನಿಮಗೆ ಶಕ್ತಿ ಬೇಕಲ್ಲ ? ಈ ಶಕ್ತಿ ನಿಮ್ಮಲ್ಲಿ ಇಲ್ಲವೆಂದರೆ ಕೋಮು ಗಲಭೆಯನ್ನು ಹತ್ತಿಕ್ಕುವಂಥ ಪರಿಸ್ಥಿತಿ ಬರುವುದಿಲ್ಲ.

೨-೫೫ ಪಿ.ಎಂ.

ಈ ಕೋಮು ಗಲಭೆಗಳ ಹಿಂದೆ ಏನಾದರೂ ಹೊರಗಡೆಯವರ ಕೈವಾಡ ಇದೆಯೇ? ಕರ್ನಾಟಕದಲ್ಲಿ ಸಾಮಾನ್ಯವಾಗಿ ಕೋಮು ಗಲಭೆಗಳು ಇಷ್ಟು ನಿರಂತರವಾಗಿ ನಡೆದಿರುವುದನ್ನು ನಾವು ಕಂಡಿಲ್ಲ. ಇದರ ಹಿಂದೆ ಏನಾದರೂ ಕೈವಾಡ ಇದೆಯೇ. ನಮ್ಮ ರಾಜ್ಯವನ್ನು ಬಿಟ್ಟು ಬೇರೆ ಕಡೆಯಿಂದ ಯಾರಾದರೂ ಪ್ರಚೋದನೆ ಮಾಡಿ, ಈ ರಾಜ್ಯದಲ್ಲಿ ಬಂದು, ಇದು ಹೊಸದಾಗಿ ನಡೆದಿದೆಯೇ, ಈ ಬಗ್ಗೆ ತಾವು ಪರಿಣಾಮಕಾರಿಯಾಗಿ ಚಿಂತಿಸಬೇಕಾದುದು ಕ್ರಮ, ಅತ್ಯಂತ ಮುಖ್ಯವಾದುದು. ಇಲ್ಲಿಯವರೆಗೆ ಅನೇಕ ಜನರು ಹೇಳಿದ್ದಾರೆ. ಮಾವಿನ ಮರಗಳನ್ನು ಕಡಿಯುತಕ್ಕ ಕೃತ್ಯಕ್ಕೆ ಕೈ ಹಾಕಿದ್ದಾರೆ ಎಂದು ಹೇಳಿದರೆ, ಅವರು ಯಾರು? ಒಳ್ಳೆಯವರೇ ಕಡಿದಿರಲಿ, ಕೆಟ್ಟವರೇ ಕಡಿದಿರಲಿ. ಒಂದು ಮಾವಿನ ಮರವನ್ನು ಕೆಳಗೆ ಉರುಳಿಸಬೇಕಾದರೆ, ಗರಗಸದಲ್ಲಿ ಕೊಯ್ದು ಕೆಳಗೆ ಉರುಳಿಸಬೇಕು. ಇಂತಹ ನೂರಾರು ಮರಗಳನ್ನು ಉರುಳಿಸಬೇಕಾದರೆ ಎಷ್ಟು ಸಮಯ ತೆಗೆದು ಕೊಳ್ಳುತ್ತದೆ. ಅಲ್ಲಿಯವರೆಗೆ ನಮ್ಮ ಪೋಲೀಸಿನವರು ಏನು ಮಾಡುತ್ತಿದ್ದರು? ನಮ್ಮ ಪೋಲೀಸಿವರಿಗೆ ಅದರ ಬಗ್ಗೆ ನಿಗಾ ಇಲ್ಲವೇ. ಪಕ್ಕದಲ್ಲಿ ಮಾವಿನ ಮರ ಕತ್ತರಿಸಿ ಉರುಳುವಾಗ ನಮ್ಮ ಗುಪ್ತದಳ ಏನು ಮಾಡುತ್ತಾ ಇತ್ತು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದರ ಬಗ್ಗೆ ಬಹಳ ಎಚ್ಚರಿಕೆಯಿಂದ ಗಮನ ಹರಿಸಿ ಸರ್ಕಾರ ನೋಡಬೇಕು, ಚಾಮರಾಜನಗರದಲ್ಲಿ ಭಾರಿ ದುರಂತವಾಗುತ್ತಿತ್ತು, ನಾನು ಗೆದ್ದಿರತಕ್ಕ ತಾಲ್ಲೂಕು ಬಹಳ ಸೂಕ್ಷ್ಮವಾದ ತಾಲ್ಲೂಕು. ಅಲ್ಲಿ ದುರಂತವಾಗಿದ್ದರೆ, ಬಹುಶಃ ಕರ್ನಾಟಕದಲ್ಲಿ ಎಲ್ಲಿಯೂ ಆಗುತ್ತಿರಲಿಲ್ಲ, ಅಂತಹ ದುರಂತ ಆಗುತ್ತಿತ್ತು. ಬಹಳ ಎಚ್ಚರಿಕೆಯಿಂದ ಇದ್ದು ಅಲ್ಲಿಯ ಜಿಲ್ಲಾ ಪೋಲೀಸ್ ಅಧಿಕಾರಿಗಳು. ಜಿಲ್ಲಾಧಿಕಾರಿಗಳು ಮತ್ತು ಅಲ್ಲಿಯ ಡಿ.ಐ.ಜಿ, ಈ ಮೂರು ಜನ ಸಾಮರಸ್ಯದಿಂದ ಅಲ್ಲಿ ಕೆಲಸ ಮಾಡಿದರು. ಅಲ್ಲಿ ಕರ್ಫ್ಯೂ ಇತ್ತು. ನಾನು ಕೂಡಲೇ ಅಲ್ಲಿಯ ಜನಗಳ ಹತ್ತಿರ ಮಾತನಾಡಿ, ಕರ್ಫ್ಯೂ ತೆಗೆಸಿ, ಕಂಡಲ್ಲಿ ಗುಂಡು – ಇದನ್ನೂ ಹಿಂತೆಗೆಸಿ, ಎಲ್ಲಾ ವ್ಯವಸ್ಥೆಯಾಯಿತು. ಇದಾದ ನಂತರ ಶಾಂತಿ ಸ್ಥಾಪನೆಯಾಯಿತು. ಶಾಂತಿ ಸ್ಥಾಪನೆಯಾಗಿ ಎರಡು ದಿವಸಕ್ಕೆ ಒಬ್ಬ ಅಶಾಂತಿ ಇಲಾಖೆಯ ಸಚಿವರು, ನಮ್ಮ ಊರಿಗೆ ಬಂದರು. ಅವರು ಬಂದಾಗ ನನಗೆ ಗೊತ್ತಿರಲಿಲ್ಲ. ನಮ್ಮ ಚಾಮರಾಜನಗರದಲ್ಲಿ ಸಚಿವರು ಬರುತ್ತಾರೆಂದು ನನಗೆ ಗೊತ್ತೇ ಇರಲಿಲ್ಲ, ಬರಬೇಕಾದರೆ, ನಾನು ಒಬ್ಬ ಚುನಾಯಿತ ಪ್ರತಿನಿಧಿ ಅಲ್ಲಿದ್ದೇನೆ, ಇಂತಹ ಸಂದರ್ಭದಲ್ಲಿ ಯಾವುದೂ ರಾಜಕೀಯ ಮಾಡುವುದಿಲ್ಲ, ನನ್ನನ್ನೂ ಆಹ್ವಾನಿಸುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಆದರೆ, ನನಗೆ ಒಬ್ಬರು ತಹಶೀಲ್ದಾರರು, ಒಬ್ಬರು ಪೋಲೀಸ್ ಕಾನ್‌ಸ್ಟೇಬಲ್ ಬಂದು ನಾಳೆ ಶಾಂತಿ ಸಮಿತಿ ಇದೆ, ತಾವು ಬರುತ್ತೀರಾ ಎಂದು ರಸ್ತೆಯಲ್ಲೇ ನಿಂತುಕೊಂಡು ಕೇಳಿದರು. ನನಗೆ ಗೊತ್ತಿಲ್ಲ, ಯಾರೂ ಕರೆದಿಲ್ಲ, ನೀವು ಪೋಲೀಸಿನವರು ಕರೆಯುತ್ತಿದ್ದೀರಿ ಎಂದು ಹೇಳಿದೆ. ಅವರು ಬರುತ್ತಾರೆ, ನೀವು ಬರುವುದಾದರೆ ಬನ್ನಿ ಎಂದರು. ನಾನು ಬರುವುದಾದರೆ ಬರುವ ಹಾಗಿಲ್ಲ, ನಾನು ಹೊರಟುಹೋಗುತ್ತೇನೆಂದು, ಮೈಸೂರಿಗೆ ಹೋದೆ. ಮೈಸೂರಿನಲ್ಲಿ ಸರ್ಕಾರಿ ಬಂಗಲೆಯಲ್ಲಿ ಇದ್ದೆ. ಸಚಿವರು ಬೇರೆ ಜಲದರ್ಶಿನಿಯಲ್ಲಿದ್ದರು. ನಾನೇ ಮೇಲೆ ಬಿದ್ದು, ನನ್ನ ತಾಲ್ಲೂಕಿಗೆ ಬರುತ್ತಿದ್ದಾರೆ, ಅಲ್ಲಿ ಏನಾದರೂ ಹೆಚ್ಚು ಕಡಿಮೆ ಆದೀತು ಎಂದು, ನಾನೇ ದೂರವಾಣಿ ಮೂಲಕ, ನಮ್ಮ ತಾಲ್ಲೂಕಿಗೆ ಹೋಗುತ್ತಿರೆಂದು ಗೊತ್ತಾಯಿತು, ಏಕೆ ಹೋಗುತ್ತೀರಿ, ಅಲ್ಲಿಗೆ ನನ್ನ ಅವಶ್ಯಕತೆ ಇದ್ದರೆ ನನ್ನನ್ನೂ ಕರೆಯಬಹುದಲ್ಲ ಎಂದೆ. ಅದಕ್ಕೆ ಅವರು ಇಲ್ಲ ತಮ್ಮ ಅವಶ್ಯಕತೆ ಇಲ್ಲ ಎಂದು ಹೇಳಿದರು. ಮತ್ತೆ ಏತಕ್ಕೆ ಹೋಗುತ್ತಿದ್ದೀರಿ ಎಂದೆ, ಅದೇನೋ ಹಿಂದೆ ಹೇಳುತ್ತಿದ್ದಿರಲ್ಲ, ಅದಕ್ಕೋಸ್ಕರ ಹೋಗುತ್ತೇನೆಂದು ಹೇಳಿದರು. ನಾನು ಹಿಂದೆ ಗ್ರಾನೈಟ್ ಕಲ್ಲು, ಗಲಾಟೆ ಬಗ್ಗೆ ಹೇಳುತ್ತಿದ್ದೆನು. ಅದಕ್ಕೆ ಹೋಗುತ್ತಿರಬಹುದೆಂದು ತಿಳಿದು, ಸರಿ ಹೋಗಿ ಸ್ವಾಮಿ, ನಾನು ಏನೋ ಕೆಲಸಕ್ಕೆ ಹೋಗಿದ್ದೆ, ನೀವು ಏನೋ ಕೆಲಸಕ್ಕೆ ಹೋಗುತ್ತೀರಿ. ನನಗೂ ಅದಕ್ಕೂ ಸಂಬಂಧ ಇಲ್ಲ. ಶಾಂತಿ ಸಮಿತಿ ಸಭೆ ಕರೆದಿದ್ದೀರೆಂದು ಕೇಳಿದಾಗ ಏನೂ ಇಲ್ಲ, ಹೋಗುತ್ತಿದ್ದೇನೆ, ರಸ್ತೆಯಲ್ಲೇ 8 ಜನ ಬರುತ್ತಾರೆ, ಅಲ್ಲಿಯೇ ಅವರ ಹತ್ತಿರ ಮಾತನಾಡಿ ಹೊರಟುಹೋಗುತ್ತೇನೆ ಎಂದರು. ನನ್ನನ್ನು ಕರೆಯಲಿಲ್ಲ. ಶಾಂತಿ ಸಮಿತಿ ಸಾಯಂಕಾಲದವರೆಗೆ ಇದೆ, ಏನಾದರೂ ಅಶಾಂತಿ ವಾತಾವರಣ ಎಂದರೆ ಮತ್ತೆ ನಮ್ಮ ತಾಲ್ಲೂಕಿಗೆ ಹೋಗಬೇಕಲ್ಲ. ಒಬ್ಬರು ಮಂತ್ರಿಗಳು ಏನಾದರೂ ಬಂದರು ಎಂದರೆ. ಶಾಂತಿ ಸಮಿತಿ ಇರಲೇಬೇಕು. ಯಾರು ಮಂತ್ರಿಮಹಾಶಯರು, ಮಹಾಪ್ರಭುಗಳು ಬಂದ ತಕ್ಷಣ ಅಲ್ಲಿ ಶಾಂತಿ ಸಮಿತಿ ರೆಡಿ ಇರಲೇಬೇಕು. ಮಂತ್ರಿಮಹಾಶಯರು, ಮಹಾಪ್ರಭುಗಳು ಬರುತ್ತಾರೆಂದ ತಕ್ಷಣ ಅಲ್ಲಿ ನಿಂತಿರಬೇಕು. ನಾವು ಊರ ಬಾಗಿಲಿನ, ತೋಟಿ ತಳವಾರರ ರೀತಿ ಕಾದುಕೊಂಡು, ಅವರು ಬರುತ್ತಾರೆಂದು ನಿಂತುಕೊಂಡು, ಮಡಿ ಪಂಚೆ ಹಾಸಿ ನಾವು ಕಾಯ್ದುಕೊಂಡಿರಬೇಕು. ಅವರು ಬಂದರೆ, ಅವರ ಮೇಜದಲ್ಲೇ ಮಾತುಗಳು, ನಿಮ್ಮ ಶುಭ ವಾಣಿಯಿಂದ......

ಒಬ್ಬ ಮಾನ್ಯ ಸದಸ್ಯರು.—ಯಾರ ಬಗ್ಗೆ ಹೇಳುತ್ತಿದ್ದೀರಿ ?

ಶ್ರೀ ವಾಟಾಳ್ ನಾಗರಾಜ್.—ನಾನು ನಿಮ್ಮ ಮೇಲೆ ಹೇಳುತ್ತಿಲ್ಲ. ಮಾನ್ಯ ಗೃಹ ಸಚಿವರ ಮೇಲೆ ಹೇಳುತ್ತಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ.—ನೀವು ಯಾರ ಮೇಲೆ ಹೇಳುತ್ತಿದ್ದೀರಿ ಎಂದು ಗೊತ್ತಾಯಿತು.

ಶ್ರೀ ವಾಟಾಳ್ ನಾಗರಾಜ್.—ಏನು ಎಂದು ನೀವು ಯೋಚನೆ ಮಾಡಿ. ನಾನು ಮುಂದೆ ಅದಕ್ಕೆ ಬರುತ್ತೇನೆ. ಅಧ್ಯಕ್ಷರೇ, ಮಾನ್ಯ ಸಚಿವರು ಅಲ್ಲಿಗೆ ದಯಮಾಡಿಸಿದರು. ಅವರನ್ನು ಕರೆದುಕೊಳ್ಳುವುದಕ್ಕೆ ಅವರ ಪಾರ್ಟಿಯ ರೆಡಿಮೇಡ್ ಜನರು ಇದ್ದಾರೆ. ಯಾರೇ ಮಂತ್ರಿಗಳು ಬರಲಿ ಎಂಟು ಹಾರ ತೆಗೆದುಕೊಳ್ಳುವುದು, ಗೇಟ್‌ನಲ್ಲಿ ಹೋಗಿ ನಿಂತುಕೊಳ್ಳುವುದು, ಅವರನ್ನು ಕರೆದುಕೊಂಡು ಬಂದು, ಈ ಶಾಸಕರು ನಮಗೆ ಅನ್ಯಾಯ ಮಾಡುತ್ತಿದ್ದಾರೆ, ಹಾಗೆ ಮಾಡುತ್ತಿದ್ದಾರೆ, ಹೀಗೆ ಮಾಡುತ್ತಿದ್ದಾರೆ ಎಂದು ಹೇಳುವುದು. ಕೆಲವು ಮಾಜಿ ಶಾಸಕರು ಇದ್ದಾರೆ. ಮಾಜಿ ಶಾಸಕರು, ಗೆದ್ದಿರುವ ಶಾಸಕರ ಮೇಲೆ ಅತ್ತೆ ಸೊಸೆ ಜಗಳ ನೋಡಿದ್ದೀರಲ್ಲ—ಮದುವೆ ಆದ ತಕ್ಷಣದಿಂದ ಸೊಸೆ ಅತ್ತೆ ಸಾಯುವವರೆಗೂ ಬಡಿಕೊಳ್ಳುತ್ತಾಳೆ—ಅದೇ ರೀತಿ ಅತ್ತೆ ಸೊಸೆ ಕಥೆ ಆಗಿದೆ. ಬಿಡುವ ಹಾಗೇ ಇಲ್ಲ. ಯಾರು ಬಂದರೂ ಇವರು ಹಾಗೆ ಮಾಡುತ್ತಾರೆ ಅವರು ಹೀಗೆ ಮಾಡುತ್ತಾರೆ, ಇವರು ಗೆದ್ದಿರುವುದೇ ಸರಿಯಲ್ಲ, ಇವರಿಂದ ನಮ್ಮ ಪಾರ್ಟಿ ಹಾಳಾಗಿ ಹೋಗುತ್ತದೆ ಎಂದು ಹೇಳುತ್ತಾರೆ. ಮುಂದಿನ ಚುನಾವಣೆಯಲ್ಲಿ ನಿಂತು ಸೋಲಿಸೋಣ ಅಲ್ಲಿಯವರೆಗೂ ಇರ್ರಿ ಎಂದರೂ ಕೇಳುವುದಿಲ್ಲ. ಬಿಡುವುದಿಲ್ಲ. ಸಚಿವರು ಅಲ್ಲಿ ಬಂದರು. ತಾಲ್ಲೂಕು ಕಾರ್ಯಾಲಯದಲ್ಲಿ ಶಾಂತಿ ಸಮಿತಿ ಸಭೆ ಸೇರಿತು. ಪಟ್ಟಿಯಲ್ಲಿ ೧೨೨ ಜನ ಇದ್ದರೂ, ೪೫ ಜನರನ್ನು ತರಾತುರಿಯಿಂದ ಕರೆದರು. ಅಲ್ಲಿ ನಾನು ಇರಲಿಲ್ಲ ಡಿ.ಐ.ಜಿ. ಇದ್ದರು, ಎಸ್.ಪಿ. ಇದ್ದರು, ಪುರಸಭಾಧ್ಯಕ್ಷರು ಇದ್ದರು, ಜಿಲ್ಲಾಧಿಕಾರಿಗಳು ಇದ್ದರು. ಇವರು ಕುಳಿತುಕೊಂಡರು. ಒಬ್ಬರು ಮಾಜಿ ಶಾಸಕರೂ ಇದ್ದರು. ಒಬ್ಬರು ಎದ್ದು ಇದೆಲ್ಲಾ ದುರಂತಕ್ಕೆ ಕಾರಣ ಅಯೋಧ್ಯೆ, ರಾಮ ಎಂದರು. ಅದಕ್ಕೆ ಸಚಿವರು ರೀ ಕುಳಿತುಕೊಳ್ಳಿರಿ. ಯಾವ ಅಯೋಧ್ಯೆ, ಯಾವ ರಾಮ ? ಇಲ್ಲಿ ಯಾವ ಅಯೋಧ್ಯೆ ಇದೆ ಯಾವರಾಮ ಇದ್ದಾನೆ ಎಂದು ಹೇಳಿರಿ ಎಂದರು, ಅವರು ಬಾಯಿ ಮುಚ್ಚಿಕೊಂಡು ಕುಳಿತುಕೊಂಡರು. ಇನ್ನೊಬ್ಬರು ಎದ್ದರು ಅವರನ್ನೂ ಸಹ ಏನು ಮಾತನಾಡುತ್ತಿದ್ದಿರಿ ಗಂಭೀರವಾಗಿ ಕುಳಿತುಕೊಳ್ಳಿರಿ ಎಂದರು. ಇನ್ನೊಬ್ಬ ಮುಸಲ್ಮಾನ್ ಎದ್ದ ಮುಸ್ಲಿಂ ಎಲ್ಲಾ ಗೊತ್ತು ನೀವು ಎಲ್ಲಾ ಏನು ಮಾಡುತ್ತಿದ್ದಿರಿ ಎಂದು ಗೊತ್ತು ನೀವು ಕುಳಿತುಕೊಳ್ಳಿರಿ ಎಂದರು, ಎಲ್ಲರನ್ನೂ ಕೂರಿಸಿದರು ಮತ್ತೆ ಇನ್ನು ಒಂದು ಹೆಜ್ಜೆ ಮುಂದೆ ಹೋದರು, ಇಲ್ಲಿ ಯಾರಾದರೂ ಬಿ.ಜೆ.ಪಿ.ಯವರು ಬಂದಿದ್ದಾರೋ, ವಿಶ್ವಹಿಂದೂ ಪರಿಷತ್‌ನವರು ಬಂದಿದ್ದಾರೋ ಅವರೆಲ್ಲರನ್ನೂ ಹೊರಗೆ ಹಾಕಿರಿ. ಒಬ್ಬರನ್ನೂ ಬಿಡಬೇಡಿ ಎಂದರು. ಇದು ಶಾಂತಿ ಸಮಿತಿ, ಬಿ.ಜೆ.ಪಿ. ತತ್ವಕ್ಕೂ ನಮಗೂ ಭೇಧಭಾವ ಇರಬಹುದು ಅದು ಬೇರೆ ವಿಚಾರ ಆದರೆ ಈ ಒಂದು ಶಾಂತಿ ಸಮಿತಿ ಸಭೆಯಲ್ಲಿ ಅಶಾಂತ ವಾತಾವರಣವನ್ನು ನಮ್ಮ ಗೊಂದಲ ಮಂತ್ರಿ ಬಸವಲಿಂಗಪ್ಪನವರು ಮಾಡಬಹುದೇ ಇದರಿಂದ ಏನು ಅನಾಹುತ ಆಗಬಹುದು ರಾಜ್ಯದಲ್ಲಿ ? ಮಾನ್ಯ ಮುಖ್ಯಮಂತ್ರಿಗಳು ಕೆಲವು ಸಚಿವರುಗಳ ನಾಲಿಗೆಗೆ ಕಡಿವಾಣ ಹಾಕುವುದು ಒಳ್ಳೆಯದು, ಸಾಧ್ಯ ಇದ್ದರೆ. ಇಲ್ಲಿ ಅನೇಕ ಜನರು ಇದ್ದೀರಿ. ನಾವು ಇವರ ಮೇಲೆಲ್ಲಾ ಯಾವ ಪಾಪದಲ್ಲಿ ಹೇಳೋಣ, ನಿಮಗೆ ಏನಾದರೂ ಹೇಳಿದರೆ ನಮಗೆ ಪಾಪ ಬರುತ್ತದೆ, ಬೇರೆ ವಿಚಾರದಲ್ಲಿ ಹೇಳೋಣ, ಆದರೆ ಈ ವಿಚಾರದಲ್ಲಿ, ಇದರ ಬಗ್ಗೆ ನಿಮ್ಮ ಮೇಲೆ ಹೇಳುವುದಕ್ಕೆ ಏನಿದೆ, ಏನು ಆರೋಪ ಮಾಡೋಣ. ನಮಗಂತೂ ಏನಾದರೂ ಬಂಗಾರಪ್ಪನವರ ಸರಕಾರ ಜಾರುವುದಾದರೆ ಅದಕ್ಕೆ ಮೊದಲನೆಯ ಅಂಕುರಾರ್ಪಣ ಮಾನ್ಯ ಬಸವಲಿಂಗಪ್ಪನವರಿಂದ ಪ್ರಾರಂಭವಾಗುತ್ತದೆ. ಆಗಲೇ ಅದು ಅವರಿಗೆ ಸೇರಿದ್ದು, ಅದನ್ನು ದೇವರು ನೋಡಿಕೊಳ್ಳಲಿ, ರಾಜ್ಯದ ದೇವರು ಜನರು ನೋಡಿಕೊಳ್ಳಲಿ. ನಮ್ಮ ಯಡಿಯೂರಪ್ಪನವರು ಹೇಳುತ್ತಾರೆ...

ಶ್ರೀ ಎಲ್.ಆರ್. ಶಿವರಾಮೇಗೌಡ.—ನೀವು ಯಾವ ಸರಕಾರ ಎಲ್ಲೆಲ್ಲಿ ಹೋಗುತ್ತದೆ ಎಂದು ಕಾಯುತ್ತಿದ್ದೀರಿ ಎಂದು ಆಯಿತು.

ಶ್ರೀ ವಾಟಾಳ್ ನಾಗರಾಜ್.—ನನಗೆ ಶಿವರಾಮೇಗೌಡರ ಬಗ್ಗೆ ಬಹಳ ವಿಶ್ವಾಸ ಇದೆ. ಅವರು ಪಕ್ಷೇತರ ಸದಸ್ಯರಾಗಿದ್ದಾಗಲೂ ವಿಶ್ವಾಸ ಇತ್ತು. ಅವರು ಕಾಂಗ್ರೆಸ್ ಜೊತೆ ಜಂಟಿ ಆದಾಗಲೂ ವಿಶ್ವಾಸ ಇದೆ. ಇವತ್ತೂ ವಿಶ್ವಾಸ ಇದೆ. ಆದರೆ ನಾನು ಹೇಳುತ್ತೇನೆ. ಸರಕಾರ ಉರುಳಿಸಿದವರು ಖಂಡಿತಾ ನಾವಲ್ಲ, ಸರಕಾರ ಉರುಳಿಸಿದವರು ಕಾಂಗ್ರೆಸ್‌ನವರು. ಅವರ ಗೊಂದಲದಿಂದಲೇ ಸರಕಾರ ಉರುಳಿಹೋಯಿತು. ವೀರೇಂದ್ರಪಾಟೀಲರು ಮನೆಗೆ ಹೋದರು, ಬಂಗಾರಪ್ಪನವರು ಬಂದರು. ಆದರೆ ಬಂಗಾರಪ್ಪನವರ ಮೇಲೆ

ಆಕ್ಷೇಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಸರಕಾರ ಉರುಳಿಸುವ ಪಿತೂರಿಯಲ್ಲಿ ಮಾನ್ಯ ಬಂಗಾರಪ್ಪನವರು ಇಲ್ಲ: ಆದರೆ ಪಿತೂರಿ ಮಾಡಿದವರು ಅಧಿಕಾರಕ್ಕೆ ಬರುವುದಕ್ಕೆ ಆಗಲಿಲ್ಲ. ಪಿತೂರಿ ಮಾಡಿದವರು ಬೇರೆ, ಅವರು ಅಧಿಕಾರಕ್ಕೆ ಬರುವುದಕ್ಕೆ ಆಗಲಿಲ್ಲ. ಇದು ಸ್ಪಷ್ಟವಾದ ಅಭಿಪ್ರಾಯ, ಇದರ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡಿ ಎಂದು ಏಕೆ ಹೇಳುತ್ತಿದ್ದೇನೆ ಎಂದರೆ, ಈ ಸರಕಾರ ಬದಲಾವಣೆ ಆಗದಿದ್ದರೆ ನಾವು ಸರಕಾರದಲ್ಲಿ ಎಂತೆಂತಹ ಹೊಸ ಮುಖಗಳನ್ನು ನೋಡುತ್ತಿದ್ದೇವೆ. ಅದು ಸಾಧ್ಯವಿತ್ತೋ ? ರಮೇಶ್‌ರವರು ಮಂತ್ರಿ ಆಗುವುದಕ್ಕೆ ಸಾಧ್ಯ ಇತ್ತೋ, ನಜೀರ್ ಮಂತ್ರಿಯಾಗುವುದಕ್ಕೆ ಸಾಧ್ಯ ಇತ್ತೋ, ಅವರನ್ನು ನೋಡತಕ್ಕಂಥ ಸೌಭಾಗ್ಯ ಎರಡು ಕಣ್ಣುಗಳನ್ನು ನಮಗೆ ಭಗವಂತ ಕೊಟ್ಟನಲ್ಲ. ಬದಲಾವಣೆ ಆಗದೇ ಇದ್ದರೆ ಅವರೆಲ್ಲಿ ಬರುತ್ತಿದ್ದರು. ಅದಕ್ಕೆ ಯಾವುದೋ ಗಲಭೆ, ಬದಲಾವಣೆ ಆಯಿತು. ಎಲ್ಲಾ ಆಯಿತು. ಅದು ಸಂತೋಷಪಡುವಂತಹದೇ ಇದು ವರ್ಷವರ್ಷಕ್ಕೂ ಬದಲಾವಣೆಯಾಗಲಿ, ಬದಲಾವಣೆಯಾದರೆ ಹೊಸ ಮುಖ ಬರುತ್ತದೆ. ನನಗೆ ರಾಮಪ್ಪನವರು ಸಿಕ್ಕಿದ್ದರು, ನಾನು ಅವರಿಗೆ ಹೇಳಿದೆ, ರಾಮಪ್ಪನವರೇ ತಾವು ನನ್ನ ಮೇಲೆ ಪ್ರತಿದಿನ ಜಗಳ ಆಡುತ್ತಿದ್ದಿರಿ. ನನ್ನ ಮೇಲೆ ಏತಕ್ಕೆ ಜಗಳ ಆಡುತ್ತೀರಿ, ಈಗ ಹೋಗಿ ಬಂಗಾರಪ್ಪನವರನ್ನು ಕೇಳಿರಿ, ನಾನು ಏನೋ ಕನ್ನಡ ಎಂದು ಕೇಳಿದರೆ ಜಗಳಕ್ಕೆ ಬೀಳುತ್ತೀರಿ. ಈಗ ನೀವು ಹೋಗಿ ಇವರನ್ನು ಭೇಟಿಯಾಗಿರಿ ಎಂದು ಹೇಳಿದೆ.

ಇನ್ನು ಅನೇಕ ಜನ ನಮ್ಮ ಸ್ನೇಹಿತರು ಮಂತ್ರಿಗಳಾಗಲಿಲ್ಲ. ಮಾನ್ಯ ಕಾನಡೆಯವರು ಆಗಲಿಲ್ಲ. ಅನೇಕ ಜನರು ಮಂತ್ರಿಗಳೂ ಆಗಬೇಕು. ಪಾಪ ಅವರೆಲ್ಲ ಆಗಬೇಕು. ಅವರೆಲ್ಲರೂ ಆದರೆ ನಮ್ಮ ಸೌಭಾಗ್ಯ. ಈ ನಾಡಿನ ಸೌಭಾಗ್ಯ, ನನಗೇನೂ ಚಿಂತೆ ಇಲ್ಲ. ಅವರೆಲ್ಲರೂ ಆಗಬೇಕು. ಅದರಲ್ಲೂ ನಮ್ಮ ರಮೇಶ್‌ರವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಕೊಟ್ಟಿದ್ದಾರೆ. ನನಗೆ ಬಹಳ ಸಂತೋಷ ಒಂದು ಹಂಡೆ ಹಾಲು ಕುಡಿದಂತೆ ಆಯಿತು. ಕನ್ನಡ ಸಂಸ್ಕೃತಿ ನಮ್ಮ ಸಂಸ್ಕೃತಿ. ನಮ್ಮ ಇತಿಹಾಸ ನಮ್ಮ ನಾಡಿನ ಕವಿಗಳು. ಶಾಂತಿ ಪುರುಷರು, ಸಂತರು ಇತ್ತೀಚಿನ ಕವಿಗಳು ರಾಷ್ಟ್ರಕವಿ ಕುವೆಂಪು. ನಮ್ಮ ಕಾರಂತರು ದಿವಂಗತ ಬೇಂದ್ರೆಯವರು ಇವರೆಲ್ಲರನ್ನೂ ನೆನಸಿಕೊಂಡರೆ ನಮ್ಮ ನಾಡಿನ ಕನ್ನಡ ಸಂಸ್ಕೃತಿ ಇವರ ಕೈಯಲ್ಲಿ ಬಂತಲ್ಲ ಎಂದು ಸಂತೋಷವಾಗುತ್ತದೆ. ಇದು ನಮ್ಮ ನಾಡಿನ ಸಂಸ್ಕೃತಿ. ಹಿಂದೆ ನಮ್ಮ ಕೆ. ಟಿ. ಬಾಷ್ಯಂನವರು ಇದ್ದರು. ಬ್ರಾಹ್ಮಣರ ಪೈಕಿ. ಕೆ. ಟಿ. ಬಾಷ್ಯಂರವರೇ ಕಟ್ಟಕಡೆಯವರು. ಅವರಾದ ಮೇಲೆ ಈಗ ನಮ್ಮ ರಮೇಶ್‌ರವರು ನಾಯಕತ್ವವನ್ನು ವಹಿಸತಕ್ಕಂಥ ಪರಿಸ್ಥಿತಿ ಬಂತಲ್ಲ ಎಂದು ನಾನು ಸಂತೋಷ ಪಡುತ್ತಿದ್ದೇನೆ. ನಮ್ಮ ಸಮಾಜದ ಬ್ರಾಹ್ಮಣರು ಅಲ್ಲಿಗೆ ಬಂದರು. ನಾನು ಅವರನ್ನು ಹೊಗಳುತ್ತಿದ್ದೇನೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದರಿಂದ ನನಗೇನೂ ಇಲ್ಲ ಮಾನ್ಯ ಅಧ್ಯಕ್ಷರೇ, ಲಿಂಗಾಯಿತರಲ್ಲಿ ಗಂಡಸು ಅಂದರೆ ನಮ್ಮ ನಾಗರತ್ನಮ್ಮನವರು. ಲಿಂಗಾಯಿತರಲ್ಲಿ ಅವರೊಬ್ಬರೆ ತಾನೇ ಮಂತ್ರಿ. ಆಮೇಲೆ ಒಕ್ಕಲಿಗರಲ್ಲಿ...

ಛೇರ್ಮನ್.—ನೀವು ೩-೧೦ಕ್ಕೆ ಮುಗಿಸಬೇಕು. ಮಂತ್ರಿಗಳು ಆಗುವುದು ಇರಲಿ. ತಾವು ಮುಗಿಸಿ ಬೇರೆಯವರಿಗೆ ಅವಕಾಶ ಮಾಡಿಕೊಡಿ.

ಶ್ರೀಮತಿ ರೇಣುಕಾರಾಜೇಂದ್ರನ್.—ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರನ್ನು ಪುರುಷರಿಗೆ ಹೋಲಿಸಿ ಅವರು ಮಾತನಾಡುತ್ತಾ ಇರುವುದನ್ನು ನೋಡಿದರೆ ಅವರಿಗೆ ಮಹಿಳೆಯರೆಲ್ಲಾ ಪುರುಷರಾಗಿ, ಪುರುಷರೆಲ್ಲಾ ಮಹಿಳೆಯರಾಗಿ ಕಾಣಿಸುತ್ತಿದ್ದಾರೆಯೋ ಹೇಗೆ ಎನ್ನುವುದೇ ನನ್ನ ಪಾಯಿಂಟ್ ಆಫ್ ಆರ್ಡರ್.

ಶ್ರೀ ವಾಟಾಳ್ ನಾಗರಾಜ್.—ತಾವೇ ದಯಮಾಡಿ ಹೇಳಿ. ತಾವು ಮಹಿಳೆಯರು, ಆ ಸ್ಥಾನದಲ್ಲಿ ಕುಳಿತಿದ್ದೀರಿ. ದಯಮಾಡಿ ಹೇಳಿ. ಈಗ ನಾನು ತಮಗೆ ಹೆಂಗಸಾಗಿ ಕಾಣಿಸುತ್ತಿದ್ದೇನೆಯೋ ?

ಛೇರ್ಮನ್.—ತಾವು ಮುಗಿಸಿ.

ಶ್ರೀ ವಾಟಾಳ್ ನಾಗರಾಜ್.—ನಾನು ತಮಗೆ ಹೇಳುತ್ತಿದ್ದೇನೆ. ನಾನು ಸಂತೋಷ ಪಡುತ್ತಿದ್ದೇನೆ, ಲಿಂಗಾಯಿತರನ್ನು ಕೂಡಲ ಸಂಗಮಕ್ಕೆ ಕಳುಹಿಸಿದರು. ಮತ್ತೆ ಒಕ್ಕಲಿಗರಾದ ಶ್ರೀ ಪುಟ್ಟಸ್ವಾಮಿಗೌಡರನ್ನು ಆದಿಚುಂಚನಗಿರಿಗೆ ಕಳುಹಿಸಿದರು. ನಾನು ಕ್ಷಮೆ ಕೇಳುತ್ತೇನೆ. ಅವರು ಕೂಡಲಸಂಗಮದಲ್ಲಿ ಐಕ್ಯವಾಗಲಿ. ಅದೇ ರೀತಿ ಶ್ರೀ ಪುಟ್ಟಸ್ವಾಮಿಗೌಡರು ಆದಿಚುಂಚನಗಿರಿಗೆ ಹೋಗಲಿ, ಉಳಿದಿರತಕ್ಕಂಥವರು ಇದ್ದಾರೆ. ನನಗೆ ಒಂದು ಆಸೆ ಇದೆ. ನನ್ನ ಕ್ಷೇತ್ರದಲ್ಲಿ ಎರಡು ಜನಾಂಗದವರು ಇದ್ದಾರೆ. ಅವರು ಯಾವ ಕಾಲದಲ್ಲಿಯೂ ಮಂತ್ರಿಗಳಾಗಲಿಲ್ಲ. ದಯಮಾಡಿ

ನಾನು ಈ ಸಭೆಯ ಮುಖಾಂತರ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಒಂದು ಮೇಲು ಸಕ್ಕರೆಶೆಟ್ಟಿ ಜನಾಂಗ ಎಂದು ಇದೆ. ಅವರು ಬಹಳ ಹಿಂದುಳಿದ ಜನಾಂಗದವರು, ದಯಮಾಡಿ ಅವರಲ್ಲಿ ಒಬ್ಬರನ್ನು ಮಂತ್ರಿಗಳನ್ನಾಗಿಯಾದರೂ ತೆಗೆದುಕೊಳ್ಳಿ ಅಥವಾ ಅವರಲ್ಲಿ ಒಬ್ಬರನ್ನು ಒಂದು ಮಂಡಲಿಗೆ ಅಧ್ಯಕ್ಷರನ್ನಾಗಿಯಾದರೂ ಮಾಡಿ. ಆಮೇಲೆ ನಾಯಕ ಜನಾಂಗದವರು ಇದ್ದಾರೆ. ನಮ್ಮ ಜಿಲ್ಲೆಯಲ್ಲಿ ೩ ತಾಲ್ಲೂಕುಗಳಲ್ಲಿ ಮಾತ್ರ ಈ ಜನಾಂಗದವರು ಇದ್ದಾರೆ. ಈಗ ಮಂತ್ರಿಯಾಗಿ ಯಾರನ್ನು ಮಾಡಿಕೊಳ್ಳಬೇಕು ಎನ್ನುವುದು ನಿಮಗೆ ಸೇರಿದ್ದು.

ಛೇರ್ಮನ್,—ಮಂತ್ರಿಯ ಗಲಭೆಗೂ ಇದಕ್ಕೂ ಏನು ಸಂಬಂಧ ?

ಶ್ರೀ ಬಿ. ಎಚ್, ಬನ್ನಿಕೋಡ್.—ಅವರು ಮುಖ್ಯಮಂತ್ರಿಗಳಿಗೆ ಸಲಹೆ ಕೊಡುತ್ತಿದ್ದಾರೆ.

ಛೇರ್ಮನ್.—ನಾನು ೩–೧೦ ಗಂಟೆಗೆ ಬೆಲ್ ಬಾರಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನನಗೆ ಶ್ರೀಮತಿ ನಾಗರತ್ನಮ್ಮನವರ ಮೇಲೆ ಅಪಾರ ಗೌರವ ಇದೆ, ಮತ್ತೆ ನಿಮ್ಮ ಮೇಲೂ ಇದೆ. ಮತ್ತೆ ಹಿಂದೆ ಕಳೆಸಿಕೊಂಡಿರತಕ್ಕಂಥ ನನ್ನ ಅಕ್ಕತಂಗಿಯರ ಮೇಲೂ ಇದೆ. ಅವರು ಮುನಿಸಿಕೊಂಡಿದ್ದಾರೆಂದು ನನಗೆ ಗೊತ್ತು. ನಿಮ್ಮ ಮುನಿಸು, ನಿಮ್ಮ ವೇದನೆ, ನಿಮ್ಮ ನೋವು ನನಗೆ ಅರ್ಥವಾಗುತ್ತಿದೆ. ನನ್ನ ಸಹಕಾರ ನಿಮಗೆ ಬೇಕಾದರೆ ನಾನು ಕೊಡುವುದಕ್ಕೆ ಸಿದ್ಧನಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ.—ನೀವು ಕಾಂಗ್ರೆಸ್ ಪಾರ್ಟಿಗೆ ಅಡ್ವೈಜರ್ ಆಗಿ ಬರಬೇಕೆಂದು ಮಾಡಿದ್ದೀರೊ ಹೇಗೆ ?

ಶ್ರೀ ವಾಟಾಳ್ ನಾಗರಾಜ್.—ನನ್ನನ್ನು ಉಪಯೋಗಿಸಿಕೊಳ್ಳತಕ್ಕದ್ದು ನಿಮಗೆ ಸೇರಿದ್ದು. ನೀವು ಕೇಳುವುದಾದರೆ ನಾನು ಯಾವ ಟೈಮ್‌ನಲ್ಲಿ ಸಹಕಾರ ಸಲಹೆ ಬೇಕಾದರೂ ನೀಡುತ್ತೇನೆ. ನೀವು ನನ್ನನ್ನು ಕೇಳುವುದಕ್ಕೆ ಸಿದ್ಧರಿದ್ದರೆ ನಾನು ಸಹಕಾರ ಕೊಡುವುದಕ್ಕೆ ಸಿದ್ಧ, ಆದರಲ್ಲಿ ಅಭ್ಯಂತರವೇನೂ ಇಲ್ಲ. ಈ ಒಂದು ಪರಿಸ್ಥಿತಿ ಏತಕ್ಕೆ ಉದ್ಭವವಾಯಿತು ಅಂದರೆ ಈ ರಾಜ್ಯದಲ್ಲಿ ಕಾನೂನು ಒಂದೆರಡು ತಿಂಗಳುಗಳಿಂದ ಕುಸಿದು ಬಿದ್ದಿತ್ತು. ಆಡಳಿತ ಸಮಗ್ರವಾಗಿ ಕುಸಿದಿದೆ ಎಲ್ಲಿದೆ ಆಡಳಿತ ? ಅದೆಲ್ಲದ್ದಕ್ಕೂ ನೀವು ಕಾರಣ. ಈ ರಾಜ್ಯದ ಆಡಳಿತ ಕುಸಿದು ಬೀಳುವುದಕ್ಕೆ, ಈ ರಾಜ್ಯದ ಆಡಳಿತ ಅತ್ಯಂತ ಕೆಳಮಟ್ಟಕ್ಕೆ ಹೋಗುವುದಕ್ಕೆ ತಾವು ಕಾಂಗ್ರೆಸ್‌ನವರೇ ಕಾರಣ. ೧೮೨ ಜನರು ಇದ್ದೂ ಕೂಡ ನಿಮ್ಮಲ್ಲಿ ಗೊಂದಲವಾಗಿ ಅಶಾಂತಿಯುಂಟಾಗಿ, ಮಂತ್ರಿಮಂಡಲದಲ್ಲಿ ಅಶಾಂತಿ ವಾತಾವರಣ, ಶಾಸಕಾಂಗ ಪಕ್ಷದಲ್ಲಿ ಅಶಾಂತಿ ವಾತಾವರಣ. ಈಗಾಗಲೇ ಮಂತ್ರಿಮಂಡಲದಲ್ಲಿ ಅಶಾಂತಿ ವಾತಾವರಣ ಇದೆ ಎಂದು ಗೊತ್ತಾಗಿದೆ. ೮೦ ಜನ ಸಹಿ ಹಾಕಿದ್ದಾರೆಂದು ಹೇಳುತ್ತಾರೆ. ಅದು ನಿಜವೋ ಏನೋ ಗೊತ್ತಿಲ್ಲ.

ಛೇರ್ಮನ್.—ನೀವು ಸಬ್ಜೆಕ್ಟ್ ಬಿಟ್ಟು ಬೇರೆ ಎಲ್ಲಾ ಮಾತನಾಡುತ್ತಿದ್ದೀರಿ. ದಯವಿಟ್ಟು ಸಬ್ಜೆಕ್ಟ್ ಮೇಲೆ ಮಾತನಾಡಿ. ನಿಮ್ಮ ಹಾಗೆ ಬೇರೆಯವರಿಗೂ ಅವಕಾಶ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್,—ನಾನು ಕೋಮು ಗಲಭೆ ವಿಷಯಕ್ಕೆ ಬರುತ್ತೇನೆ. ಮಾನ್ಯ ಅಧ್ಯಕ್ಷರೇ, ಯಾರು ಮಂತ್ರಿಗಳಾದರೂ ನಾವು ತಡೆಯುವುದಕ್ಕೆ ಹೋಗುವುದಿಲ್ಲ. ಇವತ್ತು ನಮಗೆ ಒಳ್ಳೆಯ ಗೃಹ ಸಚಿವರು ಇದ್ದಾರೆ. ಈ ಹಿಂದೆ ನಡೆದಿರತಕ್ಕಂಥ ಘಟನೆಗಳಿಗೆ ಇವರೇ ಕಾರಣವೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಒಂದು ವಾರದ ಕೆಳಗೆ ಅವರು ಬಂದು ಈ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಅವರನ್ನು ದೂಷಣೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇನ್ನು ಮುಂದಾದರೂ ಇಂಥಾ ಅನಾಹುತಗಳು ನಡೆಯದಿರುವುದಕ್ಕೆ ಒಂದು ಸಮಗ್ರವಾದ ಚಿಂತನೆಯಾಗಬೇಕು. ಇವತ್ತು ಮಾನ್ಯ ವೀರೇಂದ್ರಪಾಟೀಲರನ್ನು ಯಾವ ರೀತಿ ದೂಷಣೆ ಮಾಡಿದಿರಿ ಅಂದರೆ ಅವರ ಕಾಲ ಸರಿಯಿರಲಿಲ್ಲ, ಅವರ ಆಡಳಿತ ಸರಿಯಿರಲಿಲ್ಲವೆಂದು ದೂಷಣೆ ಮಾಡಿದಿರಿ. ನೀವು ಸರಿಯಿಲ್ಲವೆಂದು ಹೇಳಬಹುದು. ಆದರೆ ನಾನು ಹೇಳುವುದಕ್ಕೆ ತಯಾರಿಲ್ಲ. ಜನ ಹೇಳುವುದಕ್ಕೆ ತಯಾರಿಲ್ಲ. ಅವರು ಇದ್ದಾಗ ಕೋಮು ಗಲಭೆ ಶುರುವಾಯಿತೆಂದು ಹೇಳುತ್ತೀರಿ. ಅವರು ಹೋದ ಮೇಲೆ ಕೋಮು ಗಲಭೆ ನಿಂತಿದೆಯೇ ? ನಿರಂತರವಾಗಿ ಕೋಮು ಗಲಭೆ ನಡೆದುಕೊಂಡು ಬಂದಿದೆ. ಈ ಕೋಮುಗಲಭೆಗಳಿಗೆ ಅಶಾಂತ ವಾತಾವರಣಕ್ಕೆ ನಿಮ್ಮ ಸರ್ಕಾರವೂ ಜವಾಬ್ದಾರಿ ಅದರಲ್ಲಿ ಎರಡನೇ ಅಭಿಪ್ರಾಯ ಇಲ್ಲ. ಈ ಬಗ್ಗೆ ನಿಮಗೆ ಶಕ್ತಿ ಇದ್ದರೆ ಅಥವಾ ಪ್ರಾಮಾಣಿಕತೆ ಇದ್ದರೆ ಚನ್ನಪಟ್ಟಣ, ರಾಮನಗರ ಮತ್ತು ದಾವಣಗೆರೆಯಲ್ಲಿ ಕೋಮು ಗಲಭೆ ನಡೆದಿರುವ ಬಗ್ಗೆ ನ್ಯಾಯಾಂಗ ತನಿಖೆ ಮಾಡತಕ್ಕಂಥ ಒಂದು ದಾಷ್ಟಿಕತನವನ್ನು ತಾವು ತೋರಿಸುತ್ತೀರಾ ಎಂದು ನಾನು ತಮ್ಮನ್ನು

ಕೇಳುತ್ತೇನೆ. ಅದನ್ನು ತಾವು ಮಾಡಿ ತೋರಿಸಬೇಕು. ಆ ರೀತಿ ಮಾಡಿದರೆ ಹೊರಗಡೆ ಏನೇನು ಬರಬೇಕೋ ಅದೆಲ್ಲಾ ಹೊರಗಡೆ ಬರುತ್ತದೆ. ಅದರಲ್ಲಿ ಏನೂ ಅನುಮಾನ ಇಲ್ಲ, ಈ ರಾಜ್ಯದಲ್ಲಿ ನಡೆದಂಥ ದುರಂತ ಬದಲಾವಣೆ ಇದರ ಹಿಂದೆ ನಡೆದಂಥ ರಾಜಕೀಯ ಪಿತೂರಿ, ಯಾರು ಯಾರು ಈ ಪಿತೂರಿಯಲ್ಲಿ ಇದ್ದಾರೆ ಎನ್ನತಕ್ಕಂಥಾದ್ದು ಸಮಗ್ರವಾಗಿ ಹೊರಗೆ ಬರುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈಗ ತಂದಿರುವ ಈ ಟಾಡಾ ಕಾಯಿದೆಯನ್ನು ಈ ಕ್ಷಣದಿಂದಲೇ ವಿರೋಧಿಸಿ, ನನ್ನ ಪ್ರತಿಭಟನೆ ತೋರಿಸುವುದಕ್ಕೆ ಈ ಕಪ್ಪು ಬಟ್ಟೆಯನ್ನು ನಿಮ್ಮ ಸರ್ಕಾರಕ್ಕೆ ನಾನು ತೋರಿಸಿ ನನ್ನ ಮೇಲೆ ಈ ಬಟ್ಟೆಯನ್ನು ಇಟ್ಟುಕೊಂಡು ನಾನು ಈ ಸಭೆಯಲ್ಲಿ ಕುಳಿತುಕೊಳ್ಳುತ್ತೇನೆ, ನನ್ನ ಈ ಕಪ್ಪು ಬಟ್ಟೆಯನ್ನು ಈ ಸರ್ಕಾರಕ್ಕೆ ಬೀಸಿ ಈ ಸರ್ಕಾರ ಸರಿಯಿಲ್ಲವೆಂದು ಹೇಳುತ್ತೇನೆ ಇಂಥಾ ಪೋಲೀಸ್ ಕಾಯಿದೆ, ಇಂಥಾ ಕರಾಳ ಕಾಯಿದೆ ನಮ್ಮ ರಾಜ್ಯದಲ್ಲಿ ಎಂದೂ ಬರಬಾರದು. ನಿಮ್ಮ ಸರ್ಕಾರ ಪೋಲೀಸ್ ಸರ್ಕಾರ ಆಗಬಾರದೆಂದು ಹೇಳಿ ನಿಮ್ಮ ಸರ್ಕಾರದ ವಿರುದ್ಧ ಈ ಕಪ್ಪು ಧ್ವಜವನ್ನು ಬೀಸಿ ಕುಳಿತುಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್.—ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಹೇಳಬೇಕಾಗಿತ್ತೋ ಅದನ್ನು ಹೇಳಿದ್ದಾರೆ, ಈ ಸಭೆಯಲ್ಲಿ ಈ ರೀತಿ ಬಟ್ಟೆ ತೋರಿಸಿ ಹೋದರೆ ತಮ್ಮ ಕರ್ತವ್ಯ ಪೂರ್ಣವಾಗುವುದಿಲ್ಲ,

ಶ್ರೀ ವಾಟಾಳ್ ನಾಗರಾಜ್.—ಈ ಟಾಡಾ ಕಾಯಿದೆ ತರುತ್ತೀರೋ ? ಈ ಕಾಯಿದೆಯನ್ನು ತರುವುದಕ್ಕೆ ಸಚಿವ ಸಂಪುಟದಲ್ಲಿ ನೀವು ತೀರ್ಮಾನ ಮಾಡಿಕೊಂಡಿದ್ದೀರಿ.

ಶ್ರೀ ಧರ್ಮಸಿಂಗ್.—ಈ ಟಾಡಾ ಕಾಯಿದೆ ಯಾವಾಗ ಬಂತು ಎಂಬುದನ್ನು ತಾವು ಸ್ವಲ್ಪ ತಿಳಿದುಕೊಳ್ಳಬೇಕು. ಇದನ್ನು ನಾವು ತಂದದ್ದಲ್ಲ.

ಶ್ರೀ ವಾಟಾಳ್ ನಾಗರಾಜ್.—ಈ ಕಾಯಿದೆಯನ್ನು ಯಾರೇ ತಂದಿರಲಿ,...

ಶ್ರೀ ಧರ್ಮಸಿಂಗ್.—ಈ ಟಾಡಾ ಕಾಯಿದೆ ನಾವು ತಂದದ್ದಲ್ಲ. ಇದಕ್ಕೂ ಮುಂಚೆ ಕೂಡಾ ಇತ್ತು.

ಶ್ರೀ ವಾಟಾಳ್ ನಾಗರಾಜ್.—ಈ ಟಾಡಾ ಕಾಯಿದೆಯನ್ನು ಯಾರೇ ತಂದಿರಲಿ, ಹಿಂದಿನ ಸರ್ಕಾರವೇ ತಂದಿದ್ದರೂ ಸಹ ನಾನು ಅವರಿಗೆ ಶಹಭಾಸ್‌ಗಿರಿ ಕೊಡುವುದಿಲ್ಲ. ಅವರ ಸರ್ಕಾರ ತಂದಿದ್ದರೂ ಕೂಡ ಈ ರಾಜ್ಯಕ್ಕೆ ಒಂದು ಕಪ್ಪು ಛಾಯೆ, ಈ ರಾಜ್ಯಕ್ಕೆ ಒಂದು ಕರಾಳ ಛಾಯೆ, ಈ ರಾಜ್ಯ ಪೋಲೀಸ್ ರಾಜ್ಯವೆಂದು ಹೇಳುತ್ತಿದ್ದೇನೆ. ಪೋಲೀಸ್ ಗೂಂಡಾಗಿರಿಗೆ ನಾವು ಬೆಂಬಲ ಕೊಡುತ್ತಿದ್ದೇವೆಂದು ಅನಿಸುತ್ತದೆ, ಇದು ಸಾಧ್ಯವಿಲ್ಲ, ಈ ಕಾಯಿದೆಯನ್ನು ಯಾರೇ ತಂದಿರಲಿ ಅವರ ಬಗ್ಗೆ ಅಭಿನಂದನೆ ಇಲ್ಲ. ಅವರು ತಂದಿರತಕ್ಕ ಕೆಟ್ಟ ಕಾಯಿದೆಯನ್ನು ನಿವ್ಯಾಕೆ ಮುಂದುವರಿಸಬೇಕು ? ನೀವು ಮುಂದುವರಿಸಬೇಡಿ, ಅದನ್ನು ತೆಗೆಯಿರಿ. ಅದನ್ನು ಜಾರಿಗೆ ತರುವುದು ಬೇಡ.

ಶ್ರೀ ಡಿ. ಬಿ. ಚಂದ್ರೇಗೌಡ,—ಇದಕ್ಕೆ ಉತ್ತರವನ್ನು ಹೇಳುವ ಕಾಲಕ್ಕೆ ನೀವು ಹೇಳಿ, ಅಂದರೆ ಇದು Act of parliament ಎನ್ನುವುದನ್ನು ಮರೆಯಬೇಡಿ, This is not a state Act. It is a central Act, Act of Parliament ಜೊತೆಗೆ ಈ ಶಾಸನವನ್ನು ರಾಜ್ಯಕ್ಕೆ ಲಾಗು ಮಾಡಬೇಕೇ ? ಬೇಡವೆ ? ಎನ್ನತಕ್ಕಂಥಾದ್ದು ಇರತಕ್ಕಂಥ ಪ್ರಶ್ನೆ. ಈ ಶಾಸನವನ್ನು ಯಾರು ಇಲ್ಲಿ ತಂದರು ಎನ್ನುವುದು ಇಲ್ಲಿರತಕ್ಕಂಥ ಪ್ರಶ್ನೆ ಅಲ್ಲ ಇದನ್ನು ಲಾಗು ಮಾಡುವುದು ಸಾಧ್ಯವಿಲ್ಲ ಎಂದು ಏಕೆ ಹೇಳುತ್ತಿದ್ದೇನೆ ಅಂದರೆ, ಈ ವಿಚಾರ ಪಾರ್ಲಿಮೆಂಟ್‌ನಲ್ಲಿ ಬಂದಾಗ ಕೂಡ ಅಂದಿನ ಸರಕಾರದವರು ಆಶ್ವಾಸನೆ ಕೊಟ್ಟಿದ್ದಾರೆ.

(ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಈ ಆಕ್ಟ್ ಪಂಜಾಬ್ ಮತ್ತು ಕಾಶ್ಮೀರದಲ್ಲಿರತಕ್ಕಂಥ ಟೆರರಿಸಮ್ ಆಕ್ಟಿವಿಟೀಸ್‌ಗೆ ಸೀಮಿತವಾಗಿರತಕ್ಕಂಥಾದ್ದು. ಸಸೇಶನ್ ಮೂವ್‌ಮೆಂಟನ್ನು ಕರ್ಟೈಲ್ ಮಾಡುವುದಕ್ಕೆ ಇದನ್ನು ತಂದಿದ್ದೇವೆ, ಏಕೆ–೪೭ ಗನ್‌ಗಳು ಹೊರದೇಶಗಳಿಂದ ಬರುತ್ತಾ ಇವೆ, ಇದನ್ನೆಲ್ಲಾ ತಡೆಗಟ್ಟಲು ಈ ಆಕ್ಟ್ ಬೇಕು ಎಂದು ಹೇಳಿದ್ದಾರೆ. ಆದ್ದರಿಂದ ಅಂಥ ಒಂದು ಸ್ಥಿತಿ ನಮ್ಮ ರಾಜ್ಯದಲ್ಲಿಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಬಸವರಾಜ್ ರಾಯರೆಡ್ಡಿ.—ವಾಟಾಳ್ ನಾಗರಾಜ್‌ರವರು ಕಪ್ಪು ಬಾವುಟ ತೋರಿಸಿದ್ದು ಸರಕಾರದ ವಿರುದ್ಧವೇ ? ಅಥವಾ ಕಪ್ಪು ಬಟ್ಟೆ ಹಾಕಿಕೊಂಡು ಅಯ್ಯಪ್ಪ ಸ್ವಾಮಿಯ ವ್ರತವನ್ನು ಮಾಡುತ್ತಿದ್ದಾರೆಯೋ ? ಅದನ್ನು ಸ್ಪಷ್ಟೀಕರಿಸಲಿ............

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಅವರು ಜನರ ತೀರ್ಪಿನಂತೆ ಈಗ ಅಲ್ಲಿ ಕುಳಿತಿದ್ದಾರೆ...

ಶ್ರೀ ಆರ್. ವಿ. ದೇಶಪಾಂಡೆ.—ಹೌದು ನಾವು ತಪ್ಪು ಮಾಡಿದ್ದೇವೆ ಎಂದು ಇಲ್ಲಿ ಬಂದು ಕುಳಿತ್ತಿದ್ದೇವೆ ೧೯೮೮ರಲ್ಲಿ ನಾವು ತಪ್ಪು ಮಾಡಿದ್ದರೆ ಅದರ ಪರಿಣಾಮ ಇದು ಆಗಿರಬಹದು ಎಂದು ತಮ್ಮ ಅನಿಸಿಕೆ. ಇವೊತ್ತು ನಮ್ಮ ರಾಜ್ಯದಲ್ಲಿ ಪಂಜಾಬ್, ಕಾಶ್ಮೀರ, ಅಸ್ಸಾಂನಲ್ಲಿರತಕ್ಕಂಥ ಪರಿಸ್ಥಿತಿ ಇಲ್ಲ. ಇಂಥ ಒಂದು ಕಾಯಿದೆಯನ್ನು ಇಲ್ಲಿ ತಂದು ಕನ್ನಡ ನಾಡಿನ ಜನರ ಮನಸ್ಸಿನಲ್ಲಿ ಭಯದ ಒಂದು ವಾತಾವರಣವನ್ನು ನಿರ್ಮಾಣ ಮಾಡುತ್ತಾ ಇದ್ದಾರೆ, ಆದುದರಿಂದ ಈ ಕಾಯಿದೆಯನ್ನು ಜಾರಿಗೆ ತರುವುದು ಬೇಡ ಎಂದು ಹೇಳುತ್ತಾ ಇದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷಿಣೀಯವರೇ, ಕೊನೆಯದಾಗಿ ಎರಡು ವಿಚಾರಗಳನ್ನು ಹೇಳುತ್ತಾ ಇದ್ದೇನೆ. ಈಗ ಏಕತಾ ಸಮಿತಿ ಎಂದು ಮಾಡಿದ್ದಾರೆ. ಆ ಬಗ್ಗೆ ನಮ್ಮ ಸಂತೋಷವಿದೆ. ಅದು ಆಗಬೇಕಾದುದೇ ಆಗಿದೆ. ಆ ಬಗ್ಗೆ ವಿರೋಧಿಪಕ್ಷದ ನಾಯಕರುಗಳ ಸಭೆ ಕರೆದಾಗ ನಾವುಗಳೆಲ್ಲರೂ ಸಲಹೆಯನ್ನು ಕೊಟ್ಟಿದ್ದೇವೆ. ಆ ಪ್ರಕಾರ ಶಾಂತಿ ಸಮಿತಿಯನ್ನು ಮಾಡಿದ್ದಾರೆ. ರಾಜ್ಯದಲ್ಲಿ ಶಾಶ್ವತವಾದಂಥ ಒಂದು ಶಾಂತಿ ಸಮಿತಿ ಆಗಬೇಕೆಂದು ನಾವೆಲ್ಲರೂ ಹೇಳಿದ್ದೇವೆ ಈ ಶಾಂತಿ ಸಮಿತಿಯು ಕೇವಲ ರಾಜ್ಯದ ರಾಜಧಾನಿಗೆ ಮಾತ್ರ ಸೀಮಿತವಾಗಿರಬಾರದು. ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕೂಡ ಅದು ಇರಬೇಕು ಆ ಸಮಿತಿಯಲ್ಲಿ ಎಲ್ಲಾ ವರ್ಗದ ಪ್ರತಿನಿಧಿಗಳು ಇರಬೇಕು. ಆ ಸಮಿತಿಯು ವರ್ಷಕ್ಕೊಮ್ಮೆ ಸೇರಿ ಯಾವುದೋ ಒಂದು ವಿಷಯವನ್ನು ಚರ್ಚಿಸಿ ಕಾಫಿ ಕುಡಿದು ಹೋಗುವಂತೆ ಇರಬಾರದು. ಪ್ರತಿ ತಿಂಗಳೂ ಸೇರಿ ರಾಜ್ಯದ ಎಲ್ಲೆಡೆಗಳಲ್ಲಿ ಶಾಂತಿ ಮತ್ತು ಸಾಮರಸ್ಯ ಕಾಪಾಡುವಲ್ಲಿ ಶ್ರಮಿಸಬೇಕು, ಅಂಥ ಒಂದು ಶಕ್ತಿಯು ಆ ಸಮಿತಿಗೆ ಬರಬೇಕು. ಹಾಗೆ ಒಂದು ಕಾರ್ಯವನ್ನು ಮಾಡಿ ಎಂದು ಹೇಳ ಬಯಸುತ್ತೇನೆ ಅದರ ಮೂಲಕ ಈ ರಾಜ್ಯದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸುವಂತೆ ಆಗಬೇಕು, ಅದರಲ್ಲಿ ಎಲ್ಲಾ ಧರ್ಮಗಳ ಜನರನ್ನೂ ಕೂಡ ಸೇರಿಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಚಾಮರಾಜ ನಗರ ಗಡಿ ಪ್ರದೇಶ ಆ ಪ್ರದೇಶದಲ್ಲಿ ಪೋಲೀಸ್ ಸ್ಟೇಶನ್‌ಗಳು ಇನ್ನೂ ಹೆಚ್ಚು ಬೇಕು, ಕನಿಷ್ಟ ಅಂದರೆ ೨-೩ ಆದರೂ ಬೇಕು. ಗಡಿಪ್ರದೇಶ, ಸೂಕ್ಷ್ಮ ಪ್ರದೇಶ ಮತ್ತು ಅರಣ್ಯ ಪ್ರದೇಶವಾದ ಅಲ್ಲಿಗೆ ಪೋಲೀಸ್ ಸ್ಟೇಷನ್‌ಗಳ ಅಗತ್ಯತೆ ಹೆಚ್ಚಾಗಿದೆ. ಆ ಬಗ್ಗೆ ಕೂಡಲೆ ಚಿಂತಿಸಿ ಪೋಲೀಸ್ ಸ್ಟೇಶನ್‌ಗಳನ್ನು ಕೊಡಬೇಕೆಂದು ಕೇಳಿಕೊಳುತ್ತೇನೆ. ಕೋಮು ಗಲಭೆಯ ಬಗ್ಗೆ ರಾಜ್ಯ ಸರಕಾರದವರು ಹೆಚ್ಚು ಕಾಳಜಿಯಿಂದ ಕಾರ್ಯ ನಿರ್ವಹಿಸಬೇಕಾಗಿದೆ. ಈ ಕುರಿತು ನುಸುಳಿಕೊಳ್ಳುವಂತಿಲ್ಲ. ಜವಾಬ್ದಾರಿಯಿಂದ ಕಳಚಿಕೊಳ್ಳುವ ಹಾಗಿಲ್ಲ. ಮಾನ್ಯ ವೀರೇಂದ್ರ ಪಾಟೀಲರ ಅಧಿಕಾರ ಕಳೆದುಕೊಂಡಾಗಿನಿಂದ ಇಲ್ಲಿಯವರೆಗೆ ಏನು ನಡೆದಿದೆ ಅದನ್ನೂ ಸೇರಿಸಿ ಆ ಬಗ್ಗೆ ವಿಚಾರ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನ್ಯಾಯಾಂಗ ತನಿಖೆ ಆಗಲೇಬೇಕು. ಈ ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದವರು ಶ್ರೀಮಾನ್ ಡಿ. ದೇವರಾಜ್ ಅರಸರು, ಬಂಗಾರಪ್ಪನವರನ್ನು ಪ್ರಥಮವಾಗಿ ಮಂತ್ರಿ ಮಾಡಿದ್ದು ಅರಸರೇ. ಆ ಋಣಕ್ಕಾದರೂ ಶ್ರೀಮತಿ ಚಂದ್ರಪ್ರಭಾ ಅರಸು ಅವರನ್ನು ಮಂತ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಅಧ್ಯಕ್ಷಿಣಿಯವರೆ, ಈ ಕೋಮು ಗಲಭೆ ಬಗ್ಗೆ ಅಧಿವೇಶನ ಸೇರುವ ಮುನ್ನವೇ ವಿರೋಧಪಕ್ಷದ ನಾಯಕರು ನೋಟಿಸ್ ಕಳಿಸಿದ ನಂತರ ನಾನೇ ಕಳಿಸಿದ್ದು. ಈ ಭಾಷಣಕರ್ತರ ಪಟ್ಟಿಯಲ್ಲಿ ಮೂರು ದಿವಸದಿಂದಲೂ ನನ್ನ ಹೆಸರು ಇದೆ ಆದರೆ ಇದುವರೆಗೂ ನನಗೆ ಚಾನ್ಸ್ ಸಿಗಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಅವರು ಕಾಂಗ್ರೆಸ್‌ನವರು, ವಿರೋಧ ಪಕ್ಷದವರಲ್ಲ. ಕಾಂಗ್ರೆಸಿನವರ ಕೋಟಾದಲ್ಲಿ ಬೇಕಾದರ ತಾವು ಅವರಿಗೆ ಅವಕಾಶ ಕೊಡಿ. ನಮಗೂ ಅವರಿಗೂ ಅಂತರಂಗ ಬಾಂಧವ್ಯವೇ ಹೊರತು ಬಹಿರಂಗವಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಪಟ್ಟಿಯಲ್ಲಿ ನನ್ನ ಹೆಸರಿದೆ, ಯಾವಾಗ ತಾವು ಅವಕಾಶ ಕೊಡುತ್ತೀರೆಂದು ಹೇಳಿದರೆ ಆಗ ನಾನು ಮಾತಾಡುತ್ತೇನೆ ತಾವು ಆದೇಶ ಕೊಡಿ.

ಛೇರ್ಮನ್.—ನೀವು ನಿಮ್ಮ ಚಾನ್ಸ್ ಬಂದಾಗ ಮಾತನಾಡುವಿರಂತೆ.

†ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಅಧ್ಯಕ್ಷಿಣಿಯವರೆ, ಕಳೆದ ಎರಡು ದಿವಸದಿಂದಲೂ ಸದನದಲ್ಲಿ ಕಳೆದೆರಡು ತಿಂಗಳ ಕಾಲದಲ್ಲಿ ಇದ್ದ ಕಾನೂನು ಪರಿಸ್ಥಿತಿ ಮತ್ತು ಕೋಮು ಗಲಭೆಗಳ ಬಗ್ಗೆ ಚರ್ಚೆ ಮಾಡಿದ್ದೇವೆ. ನಮ್ಮ ರಾಜ್ಯದಲ್ಲಿ ಪರಿಸ್ಥಿತಿಯನ್ನು ಶಾಂತ ರೀತಿಯಲ್ಲಿ ತರಲಿಕ್ಕೆ ಎಷ್ಟು ಉಪಯೋಗವಾಗುತ್ತದೆ ಎನ್ನುವುದರ ಬಗ್ಗೆ ನನಗೆ ಸಂಶಯವಿದೆ. ಈ ವಿಷಯದ ಬಗ್ಗೆ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನು ಸ್ವಾತಂತ್ರ್ಯದ ನಂತರ ಹುಟ್ಟಿದವನು. ಸ್ವಾತಂತ್ರ್ಯ ವಿಚಾರಗಳನ್ನು ಚರಿತ್ರೆಯಲ್ಲಿ ತಿಳಿದುಕೊಂಡಿರುವವನಷ್ಟೆ. ಅನೇಕ ಜನ ಹಿರಿಯರು ಗಲಭೆಯ ಪರಿಸ್ಥಿತಿ ಏನಿತ್ತು ಅದು ಮತ್ತೆ ನಮ್ಮ ರಾಷ್ಟ್ರದಲ್ಲಿ ನಮ್ಮ ರಾಜ್ಯದಲ್ಲಿ ಉದ್ಭವವಾಗಿದೆ ಎಂದು ಹೇಳುತ್ತಿದ್ದರು. ವಾಸ್ತವಾಂಶದಲ್ಲಿ ಅದು ಹೌದು. ನನ್ನ ಮಟ್ಟಿಗೆ ಹೇಳುವುದಾದರೆ ನನ್ನ ಮಗ ೧೦ ವರ್ಷದ ಹುಡುಗ ಮೂರನೇ ಕ್ಲಾಸಿನಲ್ಲಿ ಓದುತ್ತಿದ್ದಾನೆ. ಅವನಿಗೆ ಇದುವರೆಗೂ ಜಾತಿಯಾಗಲಿ, ಧರ್ಮವಾಗಲಿ ಗೊತ್ತಿರಲಿಲ್ಲ. ನಾನು ಏಕಪ್ಪ ಇವತ್ತು ಶಾಲೆಗೆ ಹೋಗಲಿಲ್ಲ ಎಂದು ಕೇಳಿದರೆ. ಅದಕ್ಕೆ ಅವನು ನನಗೆ ಮುಸ್ಲಿಮರು ಹೊಡೆಯುತ್ತಾರಂತೆ, ಶಾಲೆ ಹತ್ತಿರ ಹಿಂದೂಮುಸ್ಲಿಂ ಗಲಾಟೆಯಾಗುತ್ತಿದೆಯಂತೆ ಅದಕ್ಕಾಗಿ ಸ್ಕೂಲಿಗೆ ರಜಾ ಕೊಟ್ಟಿದ್ದಾರಂತೆ ಎಂದು ಹೇಳುತ್ತಾನೆ, ಬೆಳೆಯುತ್ತಾ ಇರತಕ್ಕಂಥ ಈ ಬಾಲಕರ ಮನಸ್ಸಿನಲ್ಲಿ ಇಂಥ ವಿಷಯವನ್ನು ಹಾಕಿದ್ದೇವೆ ಎಂಬುದನ್ನು ಅರಿತುಕೊಳ್ಳಬೇಕಾಗಿದೆ. ಇದನ್ನು ತೆಗೆಯುವುದಕ್ಕೆ ಎಷ್ಟು ವರ್ಷಗಳು ಹಿಡಿಯುವುದೋ ಗೊತ್ತಿಲ್ಲ. ತಮಗೆಲ್ಲರಿಗೂ ಇದು ಅನುಭವ ಆಗಿರಬಹುದು. ಯಾವುದೇ ಒಂದು ಸಣ್ಣ ಹಳ್ಳಿಗೆ ಹೋಗಿ ನೋಡಿದರೆ ಎರಡು ಮೂರು ಜನ ಇರತಕ್ಕಂಥ ಅಲ್ಪಸಂಖ್ಯಾತರು ಇವತ್ತು ಮಾಡುವ ಮೊದಲ ಕೆಲಸ ತಮ್ಮ ಹೆಣ್ಣು ಮಕ್ಕಳನ್ನು ಪಟ್ಟಣಗಳಿಗೆ ಸಾಗಿಸುತ್ತಿದ್ದಾರೆ, ಭಯಭೀತರಾಗಿದ್ದಾರೆ, ಇಂದು ನಾವು ಬದುಕುವುದಕ್ಕೆ ಆಗುವುದಿಲ್ಲವೇನೋ ಎನ್ನುವ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿದೆ. ಇದಕ್ಕೆ ಕಾರಣ ಏನು ? ನಾವು ಕುಳಿತು ಇದರ ಬಗ್ಗೆ ಮೂಲಭೂತವಾಗಿ, ನಿಷ್ಪಕ್ಷಪಾತವಾಗಿ, ನಿರ್ವಂಚನೆಯಿಂದ ವಿಚಾರ ಮಾಡಬೇಕಾಗಿದೆ.

೩–೨೫ ಪಿ. ಎಂ.

ರಾಮನ ಬಗ್ಗೆ ರಾಮನ ವ್ಯಕ್ತಿತ್ವದ ಬಗ್ಗೆ, ರಾಮಾಯಣದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬಹುಶಃ ಹಿಂದುತ್ವದ ಬಗ್ಗೆ ಅಥವಾ ರಾಮನ ಬಗ್ಗೆ ನಾನು ಯಾರಿಂದಲೂ ಪಾಠ ಕಲಿಯತಕ್ಕಂಥ ಅಗತ್ಯವಿಲ್ಲ. ರಾಮನ ದೇವಸ್ಥಾನವನ್ನು ಕಟ್ಟಬೇಕು ಎಂದು ಹೇಳಿ ನಾವು ಯಾರೂ ಸಹಿತ ಹೇಳುವುದಿಲ್ಲ. ಆದರೆ ರಾಮಂದ ದೇವಸ್ಥಾನದ ಹೆಸರಿನಲ್ಲಿ ಇವತ್ತು ಓಟನ್ನು ಪಡೆದು ದೇಶವನ್ನು ವಿಭಜನೆ ಮಾಡತಕ್ಕಂಥ ಒಂದು ಪ್ರಯತ್ನ ನಡೆಯುತ್ತಿದೆ. ಈ ಪ್ರಯತ್ನವನ್ನು ಈ ಸದನ ಸಂಪೂರ್ಣವಾಗಿ ಖಂಡಿಸಬೇಕಾಗಿದೆ ಇವತ್ತು ಈ ದೇಶದಲ್ಲಿ ಇಟ್ಟಿಗೆಯ ಮೆರವಣಿಗೆ ರಾಮನ ಪಂಜಿನ ಮೆರವಣಿಗೆ, ರಾಮನ ರಥದ ಮೆರವಣಿಗೆ ಆಗದೇ ಇದ್ದಿದ್ದರೆ ಆ ಸ್ಥಳದಲ್ಲಿ ಶಿಲಾನ್ಯಾಸ ಆಗದೇ ಹೋಗಿದ್ದರೆ ಇವತ್ತು ಈ ಪರಿಸ್ಥಿತಿ ಅಲ್ಲಿ ಉದ್ಭವವಾಗುತ್ತಿರಲಿಲ್ಲ. ಇದರಲ್ಲಿ ಕಾಂಗ್ರೆಸ್, ಜನತಾ ಜನತಾದಳ ಎಂದು ಭೇದಭಾವವನ್ನು ಹುಡುಕಲಿಕ್ಕೆ ತಯಾರಿಲ್ಲ. ಇವತ್ತು ನಾವು ಎಲ್ಲಾ ಬಿಟ್ಟುಕೊಡುತ್ತೇವೆ ಎಂದರೆ ಆ ಪರಿಸ್ಥಿತಿಯಲ್ಲಿ ಗಲಭೆಯ ಇವಧಿಯಲ್ಲಿ ಇದ್ದಂಥ ಪರಿಸ್ಥಿತಿಯನ್ನು ತರಲಿಕ್ಕೆ ಆಗುವುದಿಲ್ಲ. ನಾಲ್ಕು ಜನ ಪೋಲೀಸರನ್ನೋ ಅಥವಾ ನಾಲ್ಕು ಜನ ಅಧಿಕಾರಿಗಳನ್ನೋ ನಿಂದನೆ ಮಾಡಿದರೆ ಇದರಿಂದ ಉಪಯೋಗ ಇಲ್ಲ. ಇದಕ್ಕೆ ಕಾರಣ ಏನು ಎನ್ನುವುದನ್ನು ಮೂಲಭೂತವಾಗಿ ಹುಡುಕಬೇಕಾಗಿದೆ ಅಥವಾ ನಮ್ಮ ಪಕ್ಷದ ಸರ್ಕಾರ ಹೋಯಿತು ಎಂಬ ನೋವೇನೂ ನಮಗೆ ಇಲ್ಲ. ಇವತ್ತು ದೇಶದಲ್ಲಿ ಏನಾಗಿದೆ ಎಂದರೆ ಕೋಮುಗಲಭೆಯ ದಳ್ಳುರಿ ಎಲ್ಲಾ ಕಡೆಗಳಲ್ಲಿಯೂ ಹತ್ತಿಕೊಂಡು ಉರಿಯುತ್ತಿದೆ. ಇದರ ಬಗ್ಗೆ ನಾವೆಲ್ಲರೂ ದೀರ್ಘವಾಗಿ ಯೋಚನೆ ಮಾಡಬೇಕಾಗಿದೆ. ರಥದ ಬಗ್ಗೆ ಮಾತನಾಡತಕ್ಕಂಥವರಿಗೆ, ರಾಮನ ಜ್ಯೋತಿಯ ಬಗ್ಗೆ ಮಾತನಾಡತಕ್ಕಂಥವರಿಗೆ ಈ ದೇಶದ ಬಡವನ ಬೆಂಕಿ ಉರಿಯನ್ನು ಅರ್ಥ ಮಾಡಿಕೊಳ್ಳಲಿಕ್ಕೆ ಆಗಿಲ್ಲ. ಬಹಳ ದೊಡ್ಡದಾದ ಮಾತನ್ನು ಹೇಳುತ್ತಾರೆ. ರಾಮನ ಜನ್ಮಭೂಮಿ. ಬಾಬ್ರಿ ಮಸೀದಿಯ ಬಗ್ಗೆ ಯಾವುದೇ ತಕರಾರು ಇಲ್ಲ. ತಕರಾರು ಹಿಂದು ಮುಸ್ಲಿಂಗಳಲ್ಲೂ ಇಲ್ಲ. ಓಟನ್ನು ಪಡೆಯಬೇಕು ಎಂದು ಹೊರಟಿರತಕ್ಕಂಥ ಮುಖಂಡರುಗಳಿಗೆ ಇದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ ರಾಮನ ದೇವಸ್ಥಾನ ಇಲ್ಲಿಯೇ ಆಗಬೇಕು ಅಥವಾ ಬಾಬ್ರಿ ಮಸೀದಿ ಅಲ್ಲಿಯೇ ಆಗಬೇಕು ಎಂದು ಹೇಳತಕ್ಕಂಥ ಮುಖಂಡರುಗಳನ್ನು

ನಾವು ಖಂಡಿಸಬೇಕಾಗಿದೆ. ಮಸೀದಿಯನ್ನು ಒಡೆಯುವುದಿಲ್ಲ, ಸ್ಥಳಾಂತರ ಮಾಡುತ್ತೇವೆ ಎಂದು ಹೇಳಿದರೆ ಏನು ಅದರ ಅರ್ಥ ? ಮಸೀದಿಯನ್ನು ಒಡೆಯದೇ ಹಾಗೆ ಸ್ಥಳಾಂತರ ಮಾಡುವುದಕ್ಕಾಗುತ್ತದೆಯೇ ? ಇದು ಈ ಪ್ರಪಂಚದಲ್ಲಿಯೇ ಸಾಧ್ಯವೇನಾದರೂ ಆಗುತ್ತದೆಯೇ ? ಅಥವಾ ಇದೇನೂ ಅಲ್ಲಾವುದ್ದೀನ ದೀಪವೇ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಇದೇನು ಲ್ಯಾಂಪೇ ? ತೆಗೆದುಕೊಂಡು ಹೋಗಿ ಟ್ರಾನ್ಸ್‌ಫರ್ ಮಾಡಿ ಇಡಲಿಕ್ಕೆ. ಇವತ್ತು ಇದನ್ನು ಪಕ್ಷಾತೀತವಾಗಿ ಯೋಚನೆ ಮಾಡಬೇಕಾಗಿದೆ. ಚನ್ನಪಟ್ಟಣದಲ್ಲಿ ಗಲಾಟೆ. ರಾಮನಗರದಲ್ಲಿ ಗಲಭೆ ಪ್ರಾರಂಭವಾಯಿತು. ಈ ಗಲಾಭೆಗಳ ಪಾರಂಭದ ಹಿಂದೆ ರಾಜಕೀಯದ ಪಿತೂರಿ ಇದೆ. ಇದನ್ನು ಕಾಂಗ್ರೆಸ್ ಅಧ್ಯಕ್ಷರೇ ಹೇಳಿದ್ದಾರೆ ಇದು ನಾನು ಹೇಳತಕ್ಕಂಥ ಮಾತೇನೂ ಅಲ್ಲ. ಇದರ ಹಿಂದೆ ಅನೇಕ ಜನ ಮುಖಂಡರುಗಳು ಇದ್ದಾರೆ. ಇದನ್ನು ರಾಜಕೀಯಕ್ಕೋಸ್ಕರವಾಗಿ ಕೆಲವರು ಉಪಯೋಗಿಸಿಕೊಂಡಿದ್ದಾರೆ. ಇದರಲ್ಲೇನೂ ಸಂಶಯ ಇಲ್ಲ. ಈ ರೀತಿಯ ಪರಿಸ್ಥಿತಿ ಉದ್ಭವವಾಗಿದೆ. ಇದನ್ನು ನಾನು ಹೇಳುವುದಿಲ್ಲ. ದೇಶದಲ್ಲಿ, ಹಳ್ಳಿಹಳ್ಳಿಗಳಲ್ಲಿ ಅಲ್ಪಸಂಖ್ಯಾತರು ನಾಲ್ಕು ಮನೆ, ಐದು ಮನೆ ಇರತಕ್ಕಂಥ ಬಡವರು ಇವತ್ತು ಇದನ್ನು ಎಲ್ಲಿ ಹೇಳಲಿಕ್ಕೆ ಸಾಧ್ಯ ಇದೆ ಎಂದು ನಾವೆಲ್ಲರೂ ಕೂಡಾ ವಿಚಾರ ಮಾಡಬೇಕಾಗಿದೆ. ಇಂಥ ಪರಿಸ್ಥಿತಿ ಯಾವತ್ತೂ ಕೂಡಾ ಉದ್ಭವವಾಗಿರಲಿಲ್ಲ. ೪೮ ಗಂಟೆಗಳ ಕಾಲ ಭಾಷಣ ಮಾಡುವುದರಿಂದ ಪರಿಸ್ಥಿತಿಯನ್ನು ನಾವು ಎತ್ತಿಕ್ಕಬಹುದೇ ವಿನಃ ಹತ್ತಿಕ್ಕಲಿಕ್ಕೆ ಆಗುವುದಿಲ್ಲ ಎನ್ನುವುದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ೪೦ ಸಾವಿರ ಜನ ಹಿಂದೂಗಳು, ೪೦ ಸಾವಿರ ಜನ ಮುಸ್ಲಿಂ ಬಂಧುಗಳಾಗಲೀ ಅವರು ಘರ್ಷಣೆಗೆ ನಿಂತಾಗ ನೂರು ಜನ ಧರ್ಮಸಿಂಗ್‌ರವರು, ನೂರು ಜನ ಬಂಗಾರಪ್ಪನವರು ನೂರು ಜನ ಸಿಂಧ್ಯಾರವರು ಹೇಳಿದರೂ ಕೂಡಾ ಅದನ್ನು ತಡೆಗಟ್ಟಲಿಕ್ಕೆ ಆಗುವುದಿಲ್ಲ. ನಾವು ಹೋಗಲಿಕ್ಕೆ ಸಾಧ್ಯವಿಲ್ಲ. ಇವತ್ತು ನಾವು ಜಾತ್ಯಾತೀತ ಶಕ್ತಿಗಳು ರಾಷ್ಟ್ರದಲ್ಲಿ ಒಂದಾಗತಕ್ಕಂಥ ಕಾಲ ಬಂದಿದೆ. ದೇಶವು ವಿಭಜನೆ ಆಗತಕ್ಕಂಥ ಕಾಲವೂ ಬಂದಿದೆ. ಅದುದರಿಂದ ಇದರ ಬಗ್ಗೆ ದೀರ್ಘವಾಗಿ ವಿಚಾರ ಮಾಡಬೇಕಾಗಿದೆ. ಈ ಒಂದು ಸಂದರ್ಭದಲ್ಲಿ ಅತ್ಯಂತ ವಿನಯದಿಂದ ನಮ್ಮ ಭಾರತೀಯ ಜನತಾಪಾರ್ಟಿಯ ಮುಖಂಡರು ಯಾರು ಇದ್ದಾರೆ, ಅವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅವರ ಪ್ರಾಮಾಣಿಕತೆಯ ಬಗ್ಗೆ ಅಥವಾ ಅವರ ಕಾರ್ಯನಿಷ್ಠೆಯ ಬಗ್ಗೆ ಅವರ ಸಂಘಟನೆಯ ಬಗ್ಗೆ ನಮಗೇನೂ ಭಿನ್ನಾಭಿಪ್ರಾಯ ಇಲ್ಲದೇ ಇರಬಹುದು. ಆದರೆ ಯಾವ ಜನರನ್ನು ಹೊತ್ತುಕೊಂಡು ಹೊರಟಿದ್ದೀರೋ, ಯಾವುದನ್ನು ಈ ದೇಶದ ಜನಗಳ ಮುಗ್ಧ ಮನಸ್ಸಿನಲ್ಲಿ ತುಂಬಲಿಕ್ಕೆ ಹೊರಟಿದ್ದೀರೋ ಅದರ ಬಗ್ಗೆ ಯೋಚನೆ ಮಾಡಿ. ನೀವು ಅವರಬಡತನದ ಬಗ್ಗೆ ಹೇಳಿ, ಅವರ ನಿರುದ್ಯೋಗದ ಬಗ್ಗೆ ಹೇಳಿ, ಅವರ ದುಡಿತದ ಬಗ್ಗೆ ಹೇಳಿ. ಅವರಿಗೆ ಸಮಾನವಾಗಿ ಬಾಳತಕ್ಕಂಥ ವಿಚಾರವನ್ನು ಹೇಳಿ. ಅದನ್ನು ಬಿಟ್ಟು ರಾಮನ ದೇವಸ್ಥಾನ ಇಲ್ಲಿಯೇ ಆಗಬೇಕು, ಸೀತೆಯ ದೇವಸ್ಥಾನ ಇಲ್ಲಿಯೇ ಆಗಬೇಕು, ಲಕ್ಷ್ಮಣನ ದೇವಸ್ಥಾನ ಇಲ್ಲಿಯೇ ಆಗಬೇಕು ಮೂರು ಸಾವಿರ ದೇವಸ್ಥಾನಗಳನ್ನು ಕಟ್ಟಿಯೇ ತೀರಬೇಕು ಎಂಬ ತೀರ್ಮಾನವನ್ನು ತೆಗೆದುಕೊಳ್ಳುವುದರಿಂದ ನಮ್ಮ ಹೊಟ್ಟೆಯ ಪಾಡೇನು ಎಂದು ಎಲ್ಲರೂ ಸಹಿತ ಈ ವಿಚಾರವನ್ನು ಮಾಡಬೇಕಾಗುತ್ತದೆ.

ಇದರ ಜೊತೆಗೆ ನಾನು ಮುಸ್ಲಿಂ ಲೀಗನ ಫಂಡಮೆಂಟಲಿಸ್ಟ್‌ಗಳು ಯಾರು ಹೇಳಿದ್ದಾರೆ, ಅವರು ಹೇಳಿರತಕ್ಕದ್ದನ್ನು ಕೂಡ ಈ ಸಂಗರ್ಭದಲ್ಲಿ ಖಂಡಿಸಲಿಕ್ಕೆ ಬಯಸುತ್ತೇನೆ. ಮಹಾತ್ಮಾ ಗಾಂಧಿಯವರು 'ಈಶ್ವರ ಅಲ್ಲಾ ತೇರೇ ನಾಮ್' ಎಂದು ಹೇಳಿದರು. ಈಶ್ವರನೂ ಹೌದು, ಅಲ್ಲಾನೂ ಹೌದು ಎನ್ನತಕ್ಕ ಮಾತನ್ನು ಅವರು ಹೇಳಿದರು, ಇವೊತ್ತು ನಾವು ಇಡೀ ವಿಶ್ವದಲ್ಲಿ ಒಂದು ರಾಷ್ಟ್ರವಾಗಿ ಉಳಿಯಬೇಕಾದರೆ ನಾವು ಬಹಳ ಮುಖ್ಯವಾಗಿ ಈ ಸೆಕ್ಯುಲರಿಸಂ ಪ್ರಿನ್ಸಿಪಲ್ ಏನು ಇದೆ, ಇದರ ಆಧಾರದ ಮೇಲೆ ನಾವು ಐಕ್ಯರಾಗಬೇಕಾಗಿದೆ. ಇವೊತ್ತು ಏನು ಆಗಿದೆ ? ಇವತ್ತು ನಾವು ಯಾರೂ ಹಳ್ಳಿಗಳಿಗೆ ಹೋಗಿ ನಮ್ಮ ನಮ್ಮ ಕ್ಷೇತ್ರಗಳಿಗೆ ಹೋಗಿ ರಾಮನ ದೇವಸ್ಥಾನವನ್ನು ಕಟ್ಟಲಿಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಆಗುವುದಿಲ್ಲ ಹೌದಪ್ಪಾ, ನಾವು ಸಹ ರಾಮನ ದೇವಸ್ಥಾನವನ್ನು ಕಟ್ಟಬೇಕು ಎಂದು ಹೇಳತಕ್ಕಂಥ ಸ್ಥಿತಿಯನ್ನೇ ತಂದೊಡ್ಡಿದ್ದೀರಿ. ಮುಗ್ಧ ಜನರಲ್ಲಿ ಇದು ಬಂದು ಬಿಟ್ಟಿದೆ. ಇದುವರೆಗೆ ಜನಗಳು ಕುಡಿಯುವುದಕ್ಕೆ ನೀರು ಕೇಳುತ್ತಿದ್ದರು, ರಸ್ತೆಗಳನ್ನು ಕೇಳುತ್ತಿದ್ದರು ಕೂಲಿಗೆ ಕೆಲಸವನ್ನು ಕೇಳುತ್ತಿದ್ದರು, ಶಾಲೆ ಇಲ್ಲ ಎಂದು ಶಾಲೆ ಕೊಡಿ ಎಂದು ಕೇಳುತ್ತಿದ್ದರು. ಆದರೆ ಇವೊತ್ತು ದೇವಸ್ಥಾನವನ್ನು ಕೇಳುತ್ತಿದ್ದಾರೆ. ಎಷ್ಟು ಸಹಸ್ರ-ಸಹಸ್ರ ದೇಗುಲಗಳು ನಮ್ಮ ರಾಷ್ಟ್ರದಲ್ಲಿ ಇವತ್ತು ಪೂಜೆ ಪುನಸ್ಕಾರಗಳು ಇಲ್ಲದೆ ಇದೆ, ಆ ಪೂಜಾರಿಗಳ ಪರಿಸ್ಥಿತಿ ಏನು ಎನ್ನುವುದನ್ನು ವಿಚಾರ ಮಾಡಿದ್ದೀರಾ ? ಇದರ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ ? ನಿಮಗೆ ಇರುವುದು ಏನು ಅಂದರೆ ಕಮಲದ ಮೇಲೆ ನಿಮ್ಮ ಮೆರವಣಿಗೆ ಆಗಬೇಕು, ಕಮಲಕ್ಕೇ ನೀವು ಓಟು ಪಡೆಯಬೇಕು. ಇದನ್ನು ಹೇಳಿಕೊಂಡು ಹೊರಟಿದ್ದೀರಿ. ಈ ಒಂದು ಪರಿಸ್ಥಿತಿಯಿಂದಾಗಿ ನಮ್ಮ ಇಡೀ ರಾಷ್ಟ್ರವುಲ್ಲಿ ವಿಭಜನೆ ಆಗತಕ್ಕ ಒಂದು ಕಾಲ ಬಂದಿದೆ. ಇದರ ವಿರುದ್ಧ ಸ್ವಾತಂತ್ರ

ಹೋರಾಟ ಸಂದರ್ಭದಲ್ಲಿ ಏನು ಹೋರಾಟ ಮಾಡಿದ್ದಾರೆ, ಆ ಹೋರಾಟವನ್ನು ನಾವೆಲ್ಲರೂ ಮಾಡಬೇಕಾಗುತ್ತದೆ. ನಾವು ಭಾಷಣಗಳನ್ನು ಮಾಡಬಹುದು, ಮೆರವಣಿಗೆಯನ್ನು ಮಾಡಬಹುದು, ಬೂದಿ ಮೆರವಣಿಗೆಯನ್ನು ಮಾಡಬಹುದು, ಅಸ್ಥಿಯ ಮೆರವಣಿಗೆ ಮಾಡಬಹುದು. ನೀವು ಏಕೆ ಗೋಲೀಬಾರ್ ಮಾಡಿದಿರಿ ಎಂದು ನಾವು ಪೋಲೀಸರನ್ನು ಟೀಕೆ ಮಾಡಬಹುದು. ಆದರೆ ಅದನ್ನು ತಡೆಗಟ್ಟುವಂತಹ ಸ್ಥಿತಿ ನಮ್ಮಲ್ಲೂ ಇಲ್ಲ, ನಿಮ್ಮಲ್ಲೂ ಇಲ್ಲ. ಅದನ್ನು ತಾವು ಅರ್ಥ ಮಾಡಿಕೊಂಡಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇವೊತ್ತು ಜಾತ್ಯಾತೀತ ಶಕ್ತಿ ಏನು ಇದೆ, ನಾವೆಲ್ಲಾ ಒಂದಾಗಬೇಕಾದ ಒಂದು ಪರಿಸ್ಥಿತಿ ಬಂದಿದೆ. ನಮ್ಮಲ್ಲಿರತಕ್ಕ ರಾಜಕೀಯ ಭಿನ್ನಾಭಿಪ್ರಾಯಗಳನ್ನು ಮರೆತು ಒಂದಾಗಬೇಕಾಗಿದೆ. ಈ ರಾಷ್ಟ್ರದ ಮುಂದಿನ ಪ್ರಜೆಗಳು ಯಾರು ಇದ್ದಾರೆ, ಅವರನ್ನು ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡು ಹೋಗತಕ್ಕಂಥ ಕೆಲಸವನ್ನು ಮಾಡಬೇಕಾಗಿದೆ. ಇದರಲ್ಲಿ ಕೆಲವರು ರಾಜಕೀಯ ಲಾಭವನ್ನು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ; ಮಾನ್ಯ ಬಸವಲಿಂಗಪ್ಪನವರು, ಮಾನ್ಯ ವಾಟಾಳ್‌ನಾಗರಾಜ್‌ರವರು ತಮ್ಮ ಒಂದು ಅನುಭವವನ್ನು ಬಹಳ ಚೆನ್ನಾಗಿ ಈ ಸದನದಲ್ಲಿ ವಿವರಿಸಿದ್ದಾರೆ. ಮಾನ್ಯ ಅಜೀಜ್ ಸೇಠ್‌ರವರ ಬಗ್ಗೆ ಹಾಗೂ ಮಾನ್ಯ ಬಸವಲಿಂಗಪ್ಪನವರ ಬಗ್ಗೆ ನನಗೆ ವೈಯಕ್ತಿಕವಾಗಿ ಗೌರವ ಇದೆ. ಆದರೆ ಇವರು ಯಾವ ಮಟ್ಟಕ್ಕೆ ಇಳಿದಿದ್ದಾರೆ ಅಂದರೆ ಒಂದು ವರ್ಗದ ಜನರ ಪರವಾಗಿ ಮಾತನಾಡಿ ಇಡೀ ರಾಜ್ಯದಲ್ಲಿ ಶಾಂತಿಯ ಭಂಗವನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದಾರೆ. ನಾನು ಮಾನ್ಯ ಗೃಹ ಸಚಿವರನ್ನು ಕೇಳುತ್ತಿದ್ದೇನೆ, ಈ ಟಾಡಾ ಕಾನೂನಿನನೊಳಗಡೆ ಇವರನ್ನು ನೀವು ಅರೆಸ್ಟ್ ಮಾಡುವುದಕ್ಕೆ ಸಾಧ್ಯ ಇದೆಯೇ? ಶಾಂತಿ ಸಮಿತಿ ಸಭೆಗೆ ಹೋದಾಗ ಬಿಜೆಪಿಯವರನ್ನು, ವಿಹೆಚ್‌ಪಿಯವರನ್ನು ಸಭೆಯಿಂದ ಹೊರಗೆ ಎತ್ತಿ ಹಾಕಿ ಎಂದು ಹೇಳಿದರೆ ಹೇಗೆ ನೀವು ಶಾಂತಿಯನ್ನು ತರಲಿಕ್ಕೆ ಆಗುತ್ತದೆ? ಶಾಂತಿಯನ್ನು ತರಲಿಕ್ಕೆ ಆಗುವುದಿಲ್ಲ. ದುರಹಂಕಾರದ ಮಾತುಗಳನ್ನು ಮಾನ್ಯ ಬಸವಲಿಂಗಪ್ಪನವರು ಹೇಳುತ್ತಿದ್ದಾರೆ. ಯಾರಾದರೂ ಶಾಸಕರು ಒಂದು ಪತ್ರವನ್ನು ಕಳಿಸಿದರೆ ಎತ್ತಿ ಎಸೆಯುತ್ತಾರೆ. ಸರ್ಕಾರ ಇವರ ಮನೆಯ ಆಸ್ತಿ, ಸರ್ಕಾರ ಇವರ ವಂಶದ್ದು ಎನ್ನುವ ರೀತಿಯಲ್ಲಿ ಇವರು ವರ್ತನೆಯನ್ನು ಮಾಡುತ್ತಿದ್ದಾರೆ. ಪ್ರತಿಯೊಬ್ಬ ಶಾಸಕರೂ ಸಹ ಇವರನ್ನು ಖಂಡಿಸತಕ್ಕ ಕಾಲ ಇವತ್ತು ಬಂದಿದೆ. ನಾನು ಬಹಳ ದುಃಖದಿಂದ ಪಕ್ಷಾತೀತವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಅಜೀಜ್ ಸೇಠ್‌ರವರೂ ಸಹ ಈ ಕೆಲಸವನ್ನು ಮಾಡುತ್ತಿದ್ದಾರೆ, ಬಹಳಷ್ಟು ಅಲ್ಪಸಂಖ್ಯಾತ ಜನಾಂಗದ ಮುಖಂಡರುಗಳು ಇದ್ದಾರೆ. ನಾನು ರಾಜಕೀಯವನ್ನು ಇದರಲ್ಲಿ ಬೆರೆಸಬೇಕು ಎನ್ನುವ ಪ್ರಯತ್ನ ಮಾಡುತ್ತಿಲ್ಲ. ಆದರೆ ಇವರು ರಾಜಕೀಯ ಲಾಭವನ್ನು ಪಡೆಯುವುದಕ್ಕೆ ನಾನು ಸೆಕ್ಯುಲರ್ ಲೀಡರ್, ನಾನು ಮೈನಾರಿಟಿ ಲೀಡರ್, ನಾನು ಷೆಡ್ಯೂಲ್ ಕಾಸ್ಟ್ ಲೀಡರ್ ಎಂದು ಹೇಳಿಕೊಂಡು ಈ ಸಮಾಜವನ್ನು, ದೇಶವನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು ಎನ್ನುವ ಪ್ರಯತ್ನ ಮಾಡುತ್ತಿದ್ದೀರಿ. ನಾನು ಬುದ್ಧ, ನಾನು ಪೈಗಂಬರ್ ಎಂದು ಹೇಳಿಕೊಂಡರು ಹೊರಟಿದ್ದೀರಲ್ಲ, ಎಲ್ಲಿಗೆ ಇದನ್ನು ಕೊನೆಗಾಣಿಸಬೇಕು ಎಂದು ಇದ್ದೀರಿ? ನಿಮ್ಮ ಉದ್ದೇಶ ಏನಿದೆ? ನಾನು ಗೃಹ ಸಚಿವರ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದು ಏನೆಂದರೆ ಮುಂಚೆ ಇವರಿಬ್ಬರನ್ನೂ ಮಂತ್ರಿಮಂಡಲದಿಂದ ತೆಗೆದು ಹಾಕಬೇಕು. ಇವರನ್ನು ಮಂತ್ರಿಮಂಡಲದಿಂದ ತೆಗೆದು ಹಾಕಬೇಕು, ತೆಗೆದು ಹಾಕಿದ ಮೇಲೆ ಈ ರಾಜ್ಯದಲ್ಲಿ ಶಾಂತಿ ಬರುತ್ತದೆ. ಚನ್ನಪಟ್ಟಣ ಹಾಗೂ ರಾಮನಗರಕ್ಕೆ ನಿಮ್ಮ ಪಕ್ಷದ ಮುಖಂಡರು ಹೋಗದೇ ಇದ್ದಿದ್ದರೆ ಪರಿಸ್ಥಿತಿ ಈ ಮಟ್ಟಕ್ಕೆ ಬರುತ್ತಾ ಇರಲಿಲ್ಲ. ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ. ನಿಮ್ಮ ಪಕ್ಷವನ್ನು ದೂಷಣೆ ಮಾಡಬೇಕು ಎಂದು ಹೇಳುತ್ತಿಲ್ಲ. ಇವೊತ್ತು ಏನು ಆಗಿರತಕ್ಕದ್ದು ಅಂದರೆ ನೀಚ ಕೆಲಸಕ್ಕೆ, ಸಣ್ಣ ರಾಜಕೀಯಕ್ಕೆ ದೇಶವನ್ನು ಸಮಾಜವನ್ನು ಹೊಡೆದು ೬೯ ಜನರನ್ನು ಕೊಂದಂತಹ ಪಾಪದ ಹೊರೆ ನಿಮ್ಮ ೪-೫ ಜನರ ಮೇಲೆ ಬಿದ್ದಿದೆ ಎನ್ನುವುದನ್ನು ತಿಳಿದುಕೊಳ್ಳಬೇಕು. ನಿಮ್ಮ ಮಕ್ಕಳು ಹೇಗೆ ಬದುಕಬೇಕು, ನಿಮ್ಮ ಕುಟುಂಬ ವರ್ಗದವರು ಹೇಗೆ ಬದುಕಬೇಕೆಂಬುದನ್ನು ನೀವು ಯೋಚನೆ ಮಾಡಿ. ನಿಮ್ಮ ತಾಯಿಯೋ ನಿಮ್ಮ ತಂಗಿಯೋ, ನಿಮ್ಮ ಮಗನೇ ಸತ್ತರೆ ನಿಮಗೆ ನೋವಾಗುವುದಿಲ್ಲವೇ ಅನ್ನುವುದನ್ನು ಇವತ್ತಿನ ದಿವಸ ನೀವು ಇಬ್ಬರು ಮಂತ್ರಿಗಳು ಯೋಚನೆ ಮಾಡಬೇಕು. ಆಸ್ತಿಪಾಸ್ತಿ ನಷ್ಟದ ಬಗ್ಗೆ ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ನನ್ನ ಪ್ರಶ್ನೆಗೆ ಉತ್ತರ ಕೊಡುವಾಗ ೪,೫ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಹೇಳಿದ್ದಾರೆ. ೧ ಕೋಟಿ ರೂಪಾಯಿ ಪರಿಹಾರ ಕೊಟ್ಟಿದ್ದೇವೆಂದು ಹೇಳಿದ್ದಾರೆ. ೬೯ ಜನ ಸತ್ತು ಹೋದ ಹುತಾತ್ಮರು ಯಾರಿದ್ದಾರೆ ಅವರೆಲ್ಲರೂ ಬಡವರೆ ಆಗಿದ್ದಾರೆ. ಶ್ರೀಮಂತರಿಗೆ ಯಾವ ವಿಧದಲ್ಲೂ ತೊಂದರೆಯಾಗುವುದಿಲ್ಲ. ಬಡವರ ಗುಡಿಸಲಿಗೆ ತೊಂದರೆಯಾಗುತ್ತದೆ. ಬಡವರು, ಕೂಲಿ ಮಾಡತಕ್ಕವರು, ಸೌದೆ ಸಿಗಿಯುವಂತಹವರು ಬಟ್ಟೆ ಒಗೆಯುವಂತವರು ಮಣ್ಣು ಹೊರತಕ್ಕವರು ರಿಕ್ಷಾ ಎಳೆಯುತಕ್ಕವರೇ ಫೈರಿಂಗ್‌ನಲ್ಲಿ ಸಾಯುತಕ್ಕವರು. ನನಗೇನೂ ತೊಂದರೆಯಾಗುವುದಿಲ್ಲ.

ನಾನು ಏಳು ಸುತ್ತಿನ ಕೋಟೆಯ ಗೋಡೆಯೊಳಗಡೆ ಹೋಗಿ ಸೇರಿಕೊಳ್ಳುತ್ತೇನೆ, ನಮ್ಮ ಸುತ್ತ ಮುತ್ತ ಪೋಲೀಸಿನವರು ಬರುತ್ತಾರೆ, ಅಕಸ್ಮಾತ್ ಸತ್ತರೆ ಪೋಲೀಸಿನವರು ಸಾಯುತ್ತಾರೆ, ನಾನು ಸಾಯುವುದಿಲ್ಲ, ನೀವು ಸಾಯುವುದಿಲ್ಲ. ನಿಮ್ಮ ಮುಂದುಗಡೆ ೮ ಕಾರು, ನಿಮ್ಮ ಹಿಂದುಗಡೆ ೮ ಕಾರು ಬರುತ್ತದೆ. ಪೋಲೀಸಿನವರ ರಕ್ಷಣೆ ಇರುತ್ತದೆ. ಡಿ.ಐ.ಜಿ ಯವರೇ ಬಂದು ಕುಳಿತುಕೊಳ್ಳುತ್ತಾರೆ. ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಆಸ್ತಿಪಾಸ್ತಿಗಳು ನಷ್ಟವಾಗಿದೆ. ಒಂದು ಕೋಟಿ ರೂಪಾಯಿ ಪರಿಹಾರ ಕೊಟ್ಟರೆ ಸಾಕಾಗುತ್ತದೆಯೋ ಎಂದು ದಯವಿಟ್ಟು ಯೋಚನೆ ಮಾಡಿ ಇವತ್ತು ಮಾಡಿರುವ ಅಸಸ್‌ಮೆಂಟ್ ಒಂದು ಚೂರು ಸರಿಯಾಗಿಲ್ಲ. ಏಕೆಂದರೆ, ಅಸಿಸ್ಟೆಂಟ್ ಕಮಿಷನರು ಮತ್ತು ತಹಶೀಲ್ದಾರ್‌ಗಳಿಗೆ ಸ್ಪೆಸಿಫಿಕ್ ಆಗಿ ಗೈಡ್ ಲೈನ್ಸ್ ಇಲ್ಲ. ಏನೋ ಹೋಗಿದ್ದಾರೆ, ಬರೆದುಕೊಂಡು ಬಂದಿದ್ದಾರೆ. ನನ್ನ ಅಂದಾಜಿನ ಪ್ರಕಾರ ಇವತ್ತು ೨೫ ರಿಂದ ೩೦ ಕೋಟಿ ರೂಪಾಯಿಯಷ್ಟು ನಷ್ಟವಾಗಿದೆ ಎಂದು ತಾವು ಯೋಚನೆ ಮಾಡಬೇಕು: ಮಾನ್ಯ ಮುಖ್ಯಮಂತ್ರಿಗಳು ಕೋಮುಗಲಭೆಯಾದಂತಹ ಎಲ್ಲಾ ಪ್ರದೇಶಗಳಿಗೆ ಹೋಗಿ ಬಂದಿದ್ದಾರೆ. ನಾನು ಅದನ್ನು ಸರಿಯೆಂದು ಹೇಳುತ್ತೇನೆ. ಆದರೆ ಮುಖ್ಯಮಂತ್ರಿಗಳು ಹೋಗಿ ಬಂದಿದ್ದರಿಂದ ಅಲ್ಲಿನ ಪರಿಸ್ಥಿತಿ ಏನಾದರೂ ಒಂದು ಕಿಂಚಿತ್ತಾದರೂ ಸುಧಾರಣೆಯಾಗಿದೆಯೊ ? ಒಂದು ಕಡೆ ನಿಮ್ಮ ಮಂತ್ರಿಗಳ ಮೂಲಕ ಹಿಂದುಗಳನ್ನು ಮುಸ್ಲಾನರನ್ನು ಪ್ರಚೋದನೆ ಮಾಡತಕ್ಕ ಮಾತನ್ನು ಹೇಳುತ್ತೀರಿ, ಸುದ್ದಿಗಳನ್ನು ಹಬ್ಬಿಸುತ್ತೀರಿ. ಈ ರೀತಿ ಪ್ರಚೋದನೆ ಮಾಡತಕ್ಕ ಜನಗಳು ಯಾರಿದ್ದಾರೆ ಅವರು ನಿಮ್ಮ ಮನೆಗಳಲ್ಲಿ ರಕ್ಷಣೆಯನ್ನು ಪಡೆಯುತ್ತಾರೆ, ಅದಕ್ಕೋಸ್ಕರ ನೀವು ನ್ಯಾಯಾಂಗ ತನಿಖೆಯನ್ನು ಮಾಡಿಸಿ ಎಂದು ಕೇಳಿಕೊಳ್ಳುತ್ತೇನೆ. ಏಕೆ ನ್ಯಾಯಾಂಗ ತನಿಖೆಯಾಗಬೇಕು ಅಂದರೆ, ನಿಮ್ಮ ಸರ್ಕಾರದ ಕೆಲವು ಮಂತ್ರಿಗಳು ಕೋಮುಗಲಭೆ ಪ್ರಚೋದನೆ ಕೊಟ್ಟಿರತಕ್ಕ ಜನಗಳಿಗೆ ರಕ್ಷಣೆಯನ್ನು ಕೊಟ್ಟಿದ್ದಾರೆ. ಆ ಪಿತೂರಿಯಲ್ಲಿ ಇವರೂ ಸಹಿತ ಸೇರಿದ್ದಾರೆ. ನಾನು ನೇರವಾಗಿ ಅಪಾದನೆಯನ್ನು ಮಾಡುತ್ತಿದ್ದೇನೆ, ಆದ್ದರಿಂದ ನೀವು ನ್ಯಾಯಾಂಗ ತನಿಖೆಯನ್ನು ಮಾಡಿಸಿ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಬಹಳ ಗಂಭೀರವಾಗಿ ಹೇಳುತ್ತಿದ್ದಾರೆ, ನಮ್ಮ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಅವರ ತಿಳುವಳಿಕೆಗೆ ಏನಾದರೂ ಬಂದಿದ್ದರೆ, ಹಾಗೆ ಮಾಡಿದಂತಹವರಿಗೆ ರಕ್ಷಣೆಕೊಟ್ಟಿರತಕ್ಕದ್ದು ತಮಗೆ ಬರೆದುಕೊಟ್ಟರೆ ಎಂದು, ಏನು. ಹೇಗೆ, ಯಾರು ಎಂದು ತಿಳುವಳಿಕೆಗೆ ಬಂದಿದ್ದರೆ ಅದರ ಕಾಪಿಯನ್ನು ಸದಸ್ಯರಿಗೆ ಕೊಟ್ಟು ಅದರಬಗ್ಗೆ ಚರ್ಚೆ ಆದರೆ ಬಹಳಒಳ್ಳೆಯದು. ಏಕೆಂದರೆ, ಕಾರಣಾಂತರದಿಂದ ಪಾರ್ಟಿ ಸಿಸ್ಟಂ ಆಫ್ ಗೌರ್ನ್‌ಮೆಂಟ್‌ನಲ್ಲಿ ಒಂದು ಪಕ್ಷ ರಾಜ್ಯಾಡಳಿತ ಮಾಡುತ್ತಿದೆ. ಇವತ್ತು ನಾವೆಲ್ಲ ಸದಸ್ಯರು ಗಂಭೀರವಾಗಿ ಬಹಳ ಜವಾಬ್ದಾರಿಯಿಂದ ಕೆಲಸಮಾಡಲೇಬೇಕಾಗುತ್ತದೆ. ಆದರಲ್ಲೂ ಮಂತ್ರಿ ಸ್ಥಾನದಲ್ಲಿರತಕ್ಕವರಿಗೆ ಹೆಚ್ಚು ಜವಾಬ್ದಾರಿ ಇರುತ್ತದೆ. ಆದ್ದರಿಂದ ಮಾನ್ಯ ಸದಸ್ಯರಿಗೆ ವಿಷಯ ಗೊತ್ತಿರಬಹುದು, ಹಾಗೆ ಮಾಡುವುದಾದರೆ, ನೇರವಾಗಿ ರೂಲ್ಸ್ ಆಫ್ ಪ್ರೊಸೀಜರ್ ಪ್ರಕಾರ ಅವರು ಬರೆದು ತಮಗೆ ಕೊಟ್ಟು, ಅದರ ಬಗ್ಗೆ ಅವರನ್ನು ಕೇಳಿ ಮಾಡಿದರೆ ಬಹಳ ಒಳ್ಳೆಯದು. ಇಲ್ಲದೆ ಹೋದರೆ making sweeping remarks like this is not proper.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅದಕ್ಕೋಸ್ಕರ ನಾನು ಮಾತನಾಡತಕ್ಕ ಮಾತುಗಳಿಂದ ರಾಜ್ಯದಲ್ಲಿ ಕೋಮುಗಲಭೆಯ ಪರಿಸ್ಥಿತಿ ಶಾಂತವಾಗಲಿಕ್ಕೆ ಎಷ್ಟು ಸಹಾಯವಾಗುತ್ತದೋ ನನಗೆ ಗೊತ್ತಿಲ್ಲ ಎನ್ನತಕ್ಕ ಮಾತನ್ನು ಕೂಡ ನಾನು ಹೇಳಿದ್ದೇನೆ. ನಾನು ಯಾರಿಗೋ ಪ್ರಚೋದನೆ ಮಾಡಿ, ಯಾವುದೋ ಒಂದು ರಾಜಕೀಯ ಲಾಭ ಪಡೆಯಲಿಕ್ಕೆ ಪ್ರಯತ್ನವನ್ನು ಮಾಡುತ್ತಿಲ್ಲ. All secular elements should come together. ಎಂದು ಹೇಳಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ.—ಕಾಯವಾಚಮನಸ ಸೆಕ್ಯೂಲರಿಸಮ್ ಅನ್ನು ಬರೀ ಹೇಳತಕ್ಕದ್ದು ಅಲ್ಲ, ನಾವು ಅದನ್ನು ನಂಬಿಕೊಂಡು ಆಚರಣೆ ಮಾಡತಕ್ಕ ಜನ ಯಾರಾದರೂ ಒಬ್ಬರೂ ಇಬ್ಬರೂ ಇರಬಹುದು. ಹಾಗೇನಾದರೂ ಅವರಲ್ಲಿ ಅಪಾದನೆ ಮಾಡಿದ್ದಕ್ಕೆ ಮಾಹಿತಿ ಇದ್ದರೆ ಅದನ್ನು ಬರೆದು ಕೊಟ್ಟು ತಮಗೆ ತಿಳಿಸಲಿ. sufficient notice should also be given to the hon'ble member against whom allegations are made. ಹಾಗೆ ಮಾಡಿದರೆ ಚರ್ಚೆಗೂ ಸಹಾಯಕವಾಗುತ್ತದೆ ಮತ್ತು ಎಲ್ಲರ ಮೇಲ ಆ ನ ದೋಷ ಕೂರುವುದಿಲ್ಲ ಇಲ್ಲದೇಹೋದರೆ ಎಲ್ಲರ ಮೇಲೂ ಆ ದೋಷ ಕೂರತಕ್ಕ ಪರಿಸ್ಥಿತ ಬರುತ್ತದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ, ಕೇವಲ ಮಂತ್ರಿಗಳು ಅಷ್ಟೇ ಅಲ್ಲ, ಕೆಲವು ಶಾಸಕರೂ ಇದ್ದಾರೆ. ಕೆಲವು ಮುಖಂಡರುಗಳು ಸಹಿತ ಇದ್ದಾರೆ ಇದನ್ನೆಲ್ಲಾ ಹೇಳಬೇಕಾಗುತ್ತದೆ.

ಛೇರ್ಮನ್.—ದಯಮಾಡಿ ನಿರ್ದಿಷ್ಟವಾಗಿ ನಿಯಮಾನುಸಾರ ಕೊಟ್ಟು ಚರ್ಚೆ ಮಾಡುವುದು ಒಳ್ಳೆಯದು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ನಿರ್ದಿಷ್ಟವಾಗಿ ನಿಯಮಾನುಸಾರವಾಗಿಯೇ ನಾನು ಹೇಳುತ್ತಿದ್ದೇನೆ. ನಿಯಮದಿಂದ ಒಂದು ಇಂಚು ಹಿಂದೆ ಹೋಗಿಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ಅಧ್ಯಕ್ಷರೆ, ಯಾರು ಯಾರು ಇಬ್ಬರು ಮಂತ್ರಿಗಳ ಹೆಸರುಗಳನ್ನು ಹೇಳಿದರಲ್ಲ ಅದರ ಬಗ್ಗೆ ಪುರಾವೆಗಳು ಬೇಡ. ಏಕೆಂದರೆ, ಅವರುಗಳೇ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅದು ಪತ್ರಿಕೆಗಳಲ್ಲಿ ಬಂದಿದೆ. ಅದು ಅವರಿಗೂ ಗೊತ್ತು, ನಮಗೂ ಗೊತ್ತು, ತಮಗೂ ಗೊತ್ತು.

ಛೇರ್ಮನ್.—ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ಆರ್. ವಿ. ದೇಶಪಾಂಡೆ.—ಈಗ ಮಾನ್ಯ ರಂಗನಾಥರವರು ಹೇಳಿದರು. ಅವರು ಸಬ್‌ಸ್ಟ್ಯಾನ್‌ಷಿಯೇಟ್ ಮಾಡಬೇಕು ನಿಜ. ಆದರೆ ಅವರು ಯಾವುದೂ ಹೊಸದನ್ನು ಹೇಳಲಿಕ್ಕೆ ಹೋಗಲಿಲ್ಲ. ಮಂತ್ರಿಗಳ ಸ್ಥಾನದಲ್ಲಿದ್ದ ಜನ ಅವರು ಜವಾಬ್ದಾರಿ ಸ್ಥಾನದಲ್ಲಿದ್ದಾರೆ. ಅದರಲ್ಲೂ ಅಧಿಕಾರದಲ್ಲಿದ್ದಾರೆ. ಅವರ ಸ್ಟೇಟ್‌ಮೆಂಟಿಗೆ ಹೆಚ್ಚಿನ ಮಹತ್ವ ಇದೆ. ಮಂತ್ರಿಗಳು ನಾಳೆ ಯಾವುದೋ ಕೆಲವು ವರ್ಗಗಳಿಗೆ ಇನ್ಸ್ಟಿಗೇಟ್ ಮಾಡಲಿಕ್ಕೆ ಶುರುಮಾಡಿದರೆ ಯಾವ ಪರಿಸ್ಥಿತಿ ಬರುತ್ತದೆ. ಎಂದು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಅದನು ಅವರು ಡಿಲೈ ಮಾಡಿಲ್ಲ. ಆದ್ದರಿಂದ, ಇವರು ಆ ಇಬ್ಬರು ಮಂತ್ರಿಗಳ ರಾಜೀನಾಮೆ ಕೇಳುತ್ತಿದ್ದಾರೆ.

ಛೇರ್ಮನ್.—ದಯಮಾಡಿ ತಾವು ಕುಳಿತುಕೊಳ್ಳಬೇಕು.

ಶ್ರೀ ಎಸ್. ಹೆಚ್. ಕೌಜಲಗಿ.—ಅದು ಸುಳ್ಳು ಎಂದು ಹೇಳಿಲ್ಲ, ಪೋಲೀಸ್ ಇಂಟೆಲಿಜೆನ್ಸ್ ರಿಪೋರ್ಟ್ ಇರುತ್ತದೆ.

ಶ್ರೀ ಕೆ. ಹೆಚ್. ರಂಗನಾಥ್.—ಪತ್ರಿಕೆಯಲ್ಲಿ ಬಂದಿದ್ದು ನಾನು ಓದಿದ್ದೇನೆ. ಆದರೆ ತಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದೀರಿ. ಅಂತಹ ಕೆಲಸವನ್ನು ಕೃತ್ಯವನ್ನು ಮಾಡಿದವರಿಗೆ ರಕ್ಷಣೆ ಕೊಟ್ಟಿದ್ದಾರೆ, ಅವರ ಮನೆಯಲ್ಲಿಟ್ಟುಕೊಂಡಿದ್ದಾರೆ, ಎನ್ನತಕ್ಕದ್ದು ತುಂಬಾ ದೊಡ್ಡ ಆಲಿಗೇಷನ್ ಅದು ಪತ್ರಿಕೆಯಲ್ಲಿ ಬಂದಿಲ್ಲ. ನಾನು ಅದಕ್ಕೆ ಹೇಳಿದ್ದು ಇಲ್ಲಿ ಚರ್ಚೆಗೆ ಸಹಾಯಕವಾಗುವಂಥಾದ್ದು ಇರಬೇಕು. ಈ ಸದನದ ಸದಸ್ಯ ಇಂಥಾದ್ದು ಕೆಲಸಮಾಡಿದ್ದರೆ ಸದಸ್ಯನಾಗಿ ಗೌರವಯುತನಾಗಿ ಇರಲಿಕ್ಕೆ ನಾಲಾಯಕ್ಕೆ ಆಗುತ್ತಾನೆ. ಅಂತಹವರಿಗೆ ಈ ಸದನ ಶಿಕ್ಷೆ ಕೊಡತಕ್ಕ ಅಧಿಕಾರ ಹೊಂದಿದೆ. ಆದ್ದರಿಂದ, ಮಾನ್ಯ ಸದಸ್ಯರು ಯಾರು ಮಾಡಿದ್ದರೆ ಅದನ್ನು ಮುಂಚೆ ನಿಯಮಾವಳಿ ಪ್ರಕಾರ ಹೇಳಿ ನಂತರ ಆಪಾದನೆ ಮಾಡಿದರೆ ಒಳ್ಳೆಯದಾಗುತ್ತದೆ.

ಛೇರ್ಮನ್.—ದಯಮಾಡಿ ಕೋಮುಗಲಭೆಗಳ ಬಗ್ಗೆ ಮಾತ್ರ ಮಾತನಾಡಿ ಆ ತರಹ ವಿಚಾರ ಇದ್ದರೆ ಬೇರೆ ನಿಯಮಗಳ ರೀತ್ಯಾ ತೆಗೆದುಕೊಂಡು ಬನ್ನಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕೋಮುಗಲಭೆ ಬಿಟ್ಟು ಬಾಕಿ ಯಾವ ವಿಚಾರವನ್ನು ನಾನು ಪ್ರಸ್ತಾಪ ಮಾಡಲಿಲ್ಲ. ನಾನು ಯಾವ ಗಲಭೆಗಳು ಅಥವಾ ಯಾವ ಭಯೋತ್ಪಾದನೆಯನ್ನೂ ಮಾಡು ವುದಕ್ಕೆ ಹೋಗಿಲ್ಲ.

ಛೇರ್ಮನ್.—ಎಲ್ಲಾ ಮಂತ್ರಿಗಳನ್ನು ಅದರಲ್ಲಿ ಇನ್‌ವಾಲ್ವ್ ಮಾಡುತ್ತಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಯಾರ ಹೆಸರು ಪತ್ರಿಕೆಗಳಲ್ಲಿ ಬಂದಿದೆ ಅದನ್ನು ಕ್ವೋಟ್ ಮಾಡಿದ್ದೇನೆ. ಮಾನ್ಯ ರಂಗನಾಥ್ ಅವರು ಹಿರಿಯ ಸಚಿವರು, ಅನುಭವಸ್ಥರು ಬಹಳಷ್ಟು ವರ್ಷಗಳ ಕಾಲ ಮಂತ್ರಿಗಳಾಗಿ ಕೆಲಸ ಮಾಡಿರತಕ್ಕಂಥವರು. ತಾವು ನನ್ನ ಹತ್ತಿರ ಕೇಳುತ್ತಿದ್ದೀರಿ. ನಾನು ಹೇಳುವಂಥಾದ್ದು ಇಷ್ಟೆ, ನ್ಯಾಯಾಂಗ ತನಿಖೆಯಾದರೆ ಅದಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲೆಗಳು ಪುರಾವೆಗಳು ಅವರಿಗೆ ಸಿಕ್ಕುತ್ತದೆ. ಆಗ ನಾನು ಕೊಡತಕ್ಕ ಅಗತ್ಯವಿಲ್ಲ. ನಮ್ಮ ರಾಜ್ಯದ ಪೋಲೀಸ್ ಇಲಾಖೆಯಲ್ಲಿ ಇವತ್ತಿಗೂ ಸಹಿತ ಎಫಿಷಿಯೆಂಟ್, ಹಾನೆಸ್ಟ್, ಪೇಟ್ರಿಯಾಟ್ಸ್ ಇದ್ದಾರೆ, ರಿಪೋರ್ಟ್ ಮಾಡಿ ಇಟ್ಟಿದ್ದಾರೆ ಆ ರಿಪೋರ್ಟ್‌ಗಳನ್ನು ತೆಗೆದರೆ, ಎಲ್ಲರ ಬಂಡವಾಳವು ಸಹಿತ ಆಚೆ ಬರುತ್ತದೆ. ಸಿಂಧ್ಯ ಅವರು ಕೊಟ್ಟು ಕ್ರೆಡಿಟ್ ತೆಗೆದುಕೊಳ್ಳತಕ್ಕ ಅವಶ್ಯಕತೆ ಇಲ್ಲ. ಆದ್ದರಿಂದ, ನಾನು ಏಕೆ ನ್ಯಾಯಾಂಗ ತನಿಖೆ ಯಾಗಬೇಕೆಂದು ಹೇಳುತ್ತೇನೆ. ಈ ಸರ್ಕಾರ ಕಳೆದ ಎರಡು ತಿಂಗಳುಗಳ ಕಾಲದಿಂದಲೂ ರಾಜ್ಯದಲ್ಲಿ ಒಂದು ಶಾಂತ ಪರಿಸ್ಥಿತಿಯನ್ನು ಹಿಂದೂಗಳು, ಮುಸ್ಲಿಮರು, ಸಿಕ್ಕರು ಕ್ರೈಸ್ತರು ಇವರುಗಳಲ್ಲಿ ತರಲಿಕ್ಕೆ ಆಗಲಿಲ್ಲ ಅದಕ್ಕೆ ಮೂಲಭೂತವಾದ ಕಾರಣ ಏನೆಂದು ಇದುವರೆಗೆ

ವಿಶ್ಲೇಷಣೆ ಮಾಡಿದ್ದೇನೆ. ಇದರ ಜವಾಬ್ದಾರಿಯನ್ನು ಯಾರು ತೆಗೆದುಕೊಳ್ಳಬೇಕು ಇದನ್ನು ಪತ್ತೆ ಮಾಡಿ ಮತ್ತೆ ಇದು ಮರುಕಳಿಸದಂತೆ ಮಾಡಬೇಕಾದರೆ ನಾನು ವಿರೋಧಪಕ್ಷದಲ್ಲಿದ್ದುಕೊಂಡು ಮಾಡಲಿಕ್ಕೆ ಆಗುತ್ತದೆಯೇ ? ಅದನು ಸರ್ಕಾರದವರು ನೀವು ಮಾಡಬೇಕು, ಮಂತ್ರಿಗಳು ಮಾಡಬೇಕು, ಮುಖ್ಯ ಮಂತ್ರಿಗಳು ಮಾಡಬೇಕು. ಅದನ್ನು ನಾವು ಮಾಡಲಿಕ್ಕೆ ಆಗುವುದಿಲ್ಲ. ಅದಕ್ಕೋಸ್ಕರ ನಾವೆಲ್ಲಾ ಒಂದೇ ಕೊರಳಿನಿಂದ ಕೇಳುತ್ತಿದ್ದೇವೆ. ನಮ್ಮ ಶಾಸಕ ಮಿತ್ರರಾದ ಮಾನ್ಯ ಯಡಿಯೂರಪ್ಪನವರು ಅದೇ ಮಾತನ್ನು ಹೇಳಿದ್ದಾರೆ. ಸದನದ ಸಮಿತಿಯನ್ನು ಮಾಡಿ ಎಂದು ಹೇಳಿದ್ದಾರೆ. ಬಹಳ ಸಂತೋಷ ಆದರೆ ಸದನದ ಸಮಿತಿಗೆ ಕೇಳಿದ್ದೆಲ್ಲ ರೆಕಾರ್ಡ್ ಸಿಕ್ಕುವುದಿಲ್ಲ ಆದ್ದರಿಂದ ಅದಕ್ಕಿಂತ ಹೆಚ್ಚಾಗಿ ನ್ಯಾಯಾಂಗ ತನಿಖೆ ಮಾಡಿಸಿ, ಸಾಧ್ಯವಾದರೆ ಸುಪ್ರೀಂ ಕೋರ್ಟ್ ನ್ಯಾಯಾಧೀಶರಿಂದ ಮಾಡಿಸಿ. ಯಾರು ಎಂಬುದು ಗೊತ್ತಾಗುತ್ತದೆ. ನಾನು ಒತ್ತಾಯದಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾವೆಲ್ಲರು ಈ ವಿಚಾರದ ಬಗ್ಗೆ ಇವತ್ತು ಬಹಳ ದೀರ್ಘವಾಗಿ ಯೋಚನೆ ಮಾಡುವುದರ ಜೊತೆಗೆ ಇದಕ್ಕೆ ಮೂಲಭೂತವಾದ ಕಾರಣ ಸಿಗಬೇಕಾದರೆ ಯಾರಪ್ರಚೋದನೆ ಇದೆ ಯಾವ ಶಕ್ತಿಗಳು ಎದ್ದು ನಿಂತಿವೆ ಇದನ್ನು ತಡೆಗಟ್ಟುವುದು ಹೇಗೆ, ಇದು ಬೆಳೆಯದೇ ಇರಬೇಕಾದರೆ ಏನು ಮಾಡಬೇಕು ಎಂದರೆ ಒಂದು ನ್ಯಾಯಾಂಗ ತನಿಖೆಯಾಗಬೇಕು. ಅದಕ್ಕೆ ಒಂದು ಸಮಯದ ನಿಗದಿ ಆಗಬೇಕು. ಅದನ್ನು ತಾವು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ ಮತ್ತು ನಮ್ಮ ದೇಶದಲ್ಲಿ ಹಿಂದೂ ರಾಷ್ಟ್ರವು ಸಾಧ್ಯವಿಲ್ಲ, ಸಿಖ್ ರಾಷ್ಟ್ರವು ಸಾಧ್ಯವಿಲ್ಲ, ಖಲಿಸ್ತಾನವು ಸಾಧ್ಯವಿಲ್ಲ. ತಮಿಳ್ನಾಡೂ ಸಾಧ್ಯವಿಲ್ಲ. ಇವತ್ತು ನಾವು ಹಿಂದೂ ರಾಷ್ಟ್ರ ಬೇಕೆಂದು ಕೇಳುತ್ತಿದ್ದೇವೆ. ನಾನು ತಮಗೆ ಹೇಳುತ್ತಿದ್ದೇನೆ, ಇವತ್ತು ಕಾಶ್ಮೀರ ಪಂಜಾಬ್‌ಗಳಲ್ಲಿ ಏನಾಗುತ್ತಿದೆ ನೊನ್ನೆ ದೆಹಲಿಯಲ್ಲಿ ಆಗಿರತಕ್ಕ ಮೆರವಣಿಗೆ ಏನಿದೆ ಅದೇ ನಮಗೆ ಮುಂದೆ ಈ ರಾಷ್ಟ್ರವನು ಒಡೆಯುವುದಕ್ಕೆ ಏನೇನು ಆಗಬಹುದೆಂಬುದಕ್ಕೆ ಗೋಡೆ ಬರಹಣೆಗೆ ರೈಟಿಂಗ್ ವಾಲ್ ಆಗಬೇಕಾಗಿದೆ. ಇದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕಾಗಿದೆ. ಈ ರಾಷ್ಟ್ರ ಹಿಂದೂ ರಾಷ್ಟ್ರವಾಗಿ ಉಳಿಯಬೇಕಾದರೆ ಯಾವುದೇ ಒಂದು ಧರ್ಮದ, ಜಾತಿಯ ರಾಷ್ಟ್ರವಾಗುವುದಕ್ಕೆ ಸಾಧ್ಯವಿಲ್ಲ. ನಾವೆಲ್ಲರೂ ಹಿಂದೂಗಳಾಗಿ ಹುಟ್ಟಿರುವವರು ಬದುಕಿರುವವರು, ಸಾಯುವವರು. ನಮಗೂ ಕೂಡ ನಮ್ಮ ಮುಂದಿನ ಪೀಳಿಗೆ ಇರಬೇಕೆಂದು ಆಸೆ ಇದೆ ಆದರೆ ಬೇರೆಯವರನ್ನು ಕೊಂದು ಅಲ್ಲ, ಬೇರೆಯವರ ಭಾವನೆಗಳಿಗೆ ಧಕ್ಕೆ ತಂದು ಅಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಈ ಸಂದರ್ಭದಲ್ಲಿ ಗೃಹಮಂತ್ರಿಗಳಿಂದ ತಾವು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಬೇಕು ಅವರು ಉತ್ತರವನ್ನು ಕೊಡುವಾಗ ಇದಕ್ಕೂ ಉತ್ತರವನ್ನು ಕೊಡುತ್ತಾರೆಂದು ನಾನು ಅಂದುಕೊಂಡಿದ್ದೇನೆ. ನೀವು ಮಂತ್ರಿಗಳೇನಿದ್ದೀರಿ, ನೀವು ವಿಲ್ಲ ಕೋಮಿನ ಶಾಂತಿ ಧೂತರಾಗಿ ಹೋಗಬೇಕೇ ಹೊರತು ನೀವೇ ಭಯೋತ್ಪಾದಕರಾಗಿ ಹೋಗಬಾರದು. ನಾನು ಮಂತ್ರಿಯಾಗಿದ್ದೇನೆ, ನನ್ನ ಕೈಗೆ ಅಧಿಕಾರ ಬಂದಿದೆ ಎಂಬ ಅಹಂಕಾರ, ದರ್ಪದ ಮನೋಭಾವನೆಯನ್ನು ಬಿಡಬೇಕು. ಆರೀತಿಯ ದರ್ಪದ ಮನೋಭಾವನೆ ಇರತಕ್ಕ ಮಂತ್ರಿಗಳನ್ನು ನೀವು ತೆಗೆದುಹಾಕಬೇಕು. ಕಾಲ ಬದಲಾವಣೆಯಾಗಿದೆ. ೧೪೦ ಜನ ಶಾಸಕರು ಗೆದ್ದುಬಂದು ಏನಾಯಿತೆಂಬುದು ತಮಗೆ ಗೊತ್ತಿದೆ. ದೆಹಲಿಯಲ್ಲಿ ಏನಾಗಿದೆ ಎಂಬುದೂ ನನಗೆ ಗೊತ್ತಿದೆ. ಜನರು ಯಾರನ್ನೂ ಕ್ಷಮಿಸುವುದಿಲ್ಲ. ಜನರು ನಮಗಿಂತ ಬುದ್ಧಿವಂತರಾಗಿದ್ದಾರೆ. ಅವರು ಸರಿಯಾದ ತೀರ್ಪನ್ನು ಚುನಾವಣೆಯಲ್ಲಿ ಕೊಡುತ್ತಾರೆ ಆದ್ದರಿಂದ ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಗೆ ಎಚ್ಚರಿಕೆಯನ್ನು ಕೊಡುವುದಕ್ಕೆ ಇಷ್ಟಪಡು ತ್ತೇನೆ. ಅವರು ಇದನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು.

ಇನ್ನು ಪೋಲೀಸರ ಅಂದರೆ ಪೋಲಿಸ್ ಇಲಾಖೆಯ ಬಗ್ಗೆ ಹೇಳುವುದಾದರೆ, ಘಟನೆಗಳ ಬಗ್ಗೆ ಎಲ್ಲರೂ ಹೇಳಿದ್ದಾರೆ. ಶ್ರೀನಿವಾಸಪುರದಲ್ಲಿ ಏನಾಯಿತು, ಚನ್ನಪಟ್ಟಣದಲ್ಲಿ ಏನಾಯಿತು ದಾವಣಗೆರೆಯಲ್ಲಿ ಏನಾಯಿತು, ಮಂಗಳೂರಿನಲ್ಲಿ ಏನಾಯಿತೆಂಬುದನ್ನು ಎಲ್ಲ ಮಾನ್ಯ ಸದಸ್ಯರೂ ಹೇಳಿದ್ದಾರೆ. ಆದ್ದರಿಂದ ತಾವು ಮೊದಲು ಮಾಡಬೇಕಾದ್ದು ಏನೆಂದರೆ, ನಮ್ಮ ಇಂಟೆಲಿಜೆನ್ಸ್ ವಿಂಗ್‌ನ್ನು ಸ್ಟ್ರೆಂತನ್ ಮಾಡಬೇಕು. ಇದನ್ನು ಯಾವರೀತಿ ಮಾಡಬೇಕೆಂದರೆ, ಯಾವುದೇ ಪೊಲಿಟಿಕಲ್ ಪ್ರೆಷರ್ ಇಲ್ಲದೇ ಇರತಕ್ಕ ಅಧಿಕಾರಿಗಳನ್ನು ನಾವು ಅಲ್ಲಿಗೆ ಪೋಸ್ಟ್ ಮಾಡುತ್ತೇವೆ. ದಡ್ಡರನ್ನು ಅಲ್ಲಿಗೆ ಪೋಸ್ಟ್ ಮಾಡುತ್ತೇವೆ. ಅವರು ಏನಂತಾನೆ ಇನ್‌ಫರ್ಮೇಷನ್‌ನ್ನು ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅವರ ಹತ್ತಿರ ಇರತಕ್ಕ ಇನ್‌ಫ್ರಾಸ್ಟ್ರಕ್ಚರ್ ಆದರೂ ಏನು? ೨–೩ ತಾಲೂಕಿಗೆ ಒಬ್ಬ ಸಬ್ ಇನ್ಸ್‌ಪೆಕ್ಟರ್ ಇರುತ್ತಾನೆ. ಅವನು ಏನು ಇನ್‌ಫರ್ಮೇಷನ್ ಕಳುಹಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ತಮಗೇ ಗೊತ್ತಿದೆ, ಕಮ್ಯುನಲ್ ಟೆನ್ಷನ್ ಕಳೆದ ೨ ತಿಂಗಳಲ್ಲಿ ಯಾವರೀತಿ ಇದೆ ಎಂದರೆ, ಸರ್ಕಾರೀ ಅಧಿಕಾರಿಗಳು ತಹಸಿಲ್ದಾರ್ ಆಗಲಿ, ಬಿ.ಡಿ.ಓ. ಆಗಲಿ, ಕೆ.ಇ.ಬಿ. ಯವರಾಗಲಿ ಯಾರೂ ಕೂಡ ಸರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಅಲ್ಲಿ ಗಲಾಟೆ ನಡೆಯುತ್ತಿದೆ ನಾವು ಬರುವುದಕ್ಕಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ೨–೩ ತಿಂಗಳು ರಜಾ ಹಾಕಿ ಕುಳಿತಿದ್ದಾರೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರಕ್ಕೆ ಹೇಳುವುದೇನೆಂದರೆ, ಸರ್ಕಾರಕ್ಕೆ ಸ್ವಲ್ಪ ಹಣದ ಖರ್ಚು

ಬಂದರೂ ಪರವಾಗಿಲ್ಲ ಮೊದಲು ಪೋಲೀಸ್ ಫೋರ್ಸ್‌ನ್ನು ಹೆಚ್ಚು ಮಾಡಲಿಕ್ಕೆ ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ಆದರೆ ಹಿಂದೆ ನೀವು ಮಾಡಿಲ್ಲ ಆದ್ದರಿಂದ ನಾವೂ ಮಾಡುವುದಿಲ್ಲವೆಂದು ಹೇಳುವುದು ಬೇಡ. ಮುಖ್ಯವಾಗಿ ಇಂಟೆಲಿಜೆನ್ಸ್ ವಿಂಗ್‌ನಲ್ಲಿ ಯಾರು ಬುದ್ಧಿವಂತರಿದ್ದಾರೆ, ಕಷ್ಟಪಟ್ಟು ದುಡಿಯುತಕ್ಕ ಆಫೀಸರ್ಸ್ ಯಾರಿದ್ದಾರೆ ಅವರಿಗೆ ವಿಷಯ ಚೆನ್ನಾಗಿ ಗೊತ್ತಿದೆ. ಅವರಿಗೆ ಫ್ರೀಡಂ ಕೊಟ್ಟರೆ ಅವರ ಕೆಲಸವನ್ನು ಅವರು ಮಾಡುತ್ತಾರೆ. ಎಂದು ತಿಳಿದುಕೊಂಡಿದ್ದೇನೆ. ಹಿಂದೆ ಯಾವುದೋ ಕಾಲದಲ್ಲಿ ಸೆನ್ಸಿಟಿವ್ ಏರಿಯಾಸ್ ಎಂದು ಏನು ಗುರುತುಮಾಡಲಾಗಿತ್ತು ಅದು ಈಗ ಬದಲಾವಣೆಯಾಗುತ್ತಿದೆ. ಎಲ್ಲಿ ಕಮ್ಯೂನಲ್ ರೈಡ್ಸ್ ಆಗುತ್ತದೆಂದು ನಿರೀಕ್ಷಣೆಯನ್ನೇ ಮಾಡಿಲ್ಲ ಅಂಥ ಕಡೆಗಳಲ್ಲಿ ಗಲಾಟೆಗಳಾಗುತ್ತಿವೆ. ಉದಾಹರಣೆಗೆ ಹೇಳುವುದಾದರೆ, ಮಂಗಳೂರಿನಲ್ಲಿ ಒಂದು ಸೆನ್ಸಿಟಿವ್ ಏರಿಯಾ ಇದೆ ಅಲ್ಲಿ ಕಮ್ಯೂನಲ್ ರೈಡ್ಸ್ ಆಗಬಹುದೆಂದು ಪೋಲಿಸ್ ವರದಿಯಲ್ಲಿದ್ದರೆ ನಿಜವಾಗಿಯೂ ಇವತ್ತು ಮಂಗಳೂರಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಲಾಟೆಗಳೇ ಆಗಿಲ್ಲ. ಏಕೆಂದರೆ ಆ ಕೋಮು ಗಲಭೆಯನ್ನು ಮಾಡತಕ್ಕ ಶಕ್ತಿಗಳಿಗೆ ಗೊತ್ತಿದೆ, ಬೇರೆಕಡೆ ಇದನ್ನು ಮಾಡಿಸಬೇಕೆಂದು. ಇದನ್ನೆಲ್ಲಾ ತಾವು ತಿಳಿದುಕೊಳ್ಳಬೇಕು. ಕಮ್ಯೂನಲ್ ರೈಡ್ಸ್ ಆದಾಗ ಯಾರು ದಕ್ಷತೆಯಿಂದ ಕೆಲಸ ಮಾಡುತ್ತಾರೆ ಅಂಥ ಪೋಲಿಸ್ ಅಧಿಕಾರಿಗಳಿಗೆ ವಿಶೇಷ ಭತ್ಯೆಯನ್ನು ಕೊಡಬೇಕು. ಏಕೆಂದರೆ ಅವರು ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲವೂ ಕೆಲಸ ಮಾಡುತ್ತಾರೆ. ಇನ್ನು ಎರಡನೆಯದಾಗಿ ಇಂಟೆಲಿಜೆನ್ಸ್ ವಿಂಗ್‌ನಲ್ಲಿ, ಸಿ.ಓ.ಡಿ.ಯಲ್ಲಿ ಯಾರು ಪೋಲಿಸ್ ಅಧಿಕಾರಿಗಳಾಗಿ ಕೆಲಸ ಮಾಡುತ್ತಾರೆ, ಅವರಿಗೆ ಸ್ಪೆಷಲ್ ಅಲೋಯನ್ಸ್ ಕೊಡತಕ್ಕ ಕೆಲಸ ತಮ್ಮ ಕಾಲದಲ್ಲಾದರೂ ಆಗಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮಾನ್ಯ ಜಾಲಪ್ಪನವರು ಗೃಹಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅದನ್ನು ಪ್ರಪೋಸ್ ಮಾಡಿರತಕ್ಕಂಥ ಫೈಲ್ ಪೆಂಡಿಂಗ್ ಇದೆ. ಈಗ ಹಣ ಬಂದಿದೆ ಎಂದು ಹೇಳುತ್ತಿದ್ದೀರಿ. ತಾವು ದಯವಿಟ್ಟು ಆದರ ಕಡೆ ಗಮನಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತೆ ಈಗ ಕಾಂಪನ್ಸೇಷನ್ ಅಸೆಸ್‌ಮೆಂಟ್ ಬಗ್ಗೆ ತಹಶೀಲ್ದಾರರಿಗಾಗಲಿ, ಅಸಿಸ್ಟೆಂಟ್ ಕಮೀಷನರ್‌ರವರಿಗಾಗಲಿ, ಡೆಪ್ಯುಟಿ ಕಮೀಷನರ್‌ರವರಿಗಾಗಲಿ ಸರಿಯಾದ ಗೈಡೆನ್ಸ್ ಇಲ್ಲ. ಏನೋ ಒಂದು ಗುಡಿಸಲು ಸುಟ್ಟು ಹೋದರೆ ತಕ್ಷಣ ಇನ್ನೂರು, ಮುನ್ನೂರು ರೂಪಾಯಿಗಳನ್ನು ಕೊಟ್ಟುಬಿಡುತ್ತಾರೆ. ಯಾರು ಸೇರಿಕೊಂಡು ಎರಡು ದಿನ ಅವರಿಗೆ ಊಟವನ್ನು ಹಾಕಿಬಿಟ್ಟು ಆಮೇಲೆ ಎಲ್ಲಾ ಹೋಗಿರಪ್ಪ ಎಂದು ಹೇಳಿಬಿಡುತ್ತಾರೆ. ಆದ್ದರಿಂದ ನೀವು ಯಾವರೀತಿ ಸತ್ತವರ ಕುಟುಂಬದವರಿಗೆ ೫೦ ಸಾವಿರ ರೂಪಾಯಿಗಳನ್ನು ಕೊಡತಕ್ಕಂಥಾದ್ದು ಮತ್ತು ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಏನು ಮಾಡಿದ್ದೀರಿ ಅದೇ ರೀತಿಯಲ್ಲಿ ನ್ಯಾಷನಲೈಸ್ಡ್ ಬ್ಯಾಂಕುಗಳ ಮೂಲಕವಾಗಲಿ ಕಡಿಮೆ ಬಡ್ಡಿ ದರದಲ್ಲಿ ಸಾಲ ಪಡೆದರೂ ಪರವಾಗಿಲ್ಲ, ಕೂಡಲೇ ಹಣದ ಸೌಲಭ್ಯವನ್ನು, ಸಹಾಯವನ್ನು ಮಾಡತಕ್ಕಂಥ ಕೆಲಸವನ್ನು ಮಾಡಬೇಕು. ಏತಕ್ಕೆಂದರೆ, ದುರ್ಬಲವರ್ಗದವರು ಹಿಂದುಳಿದವರು, ಬಡವರೇ ಇದರಲ್ಲಿ ಇರುತ್ತಾರೆ. ಕೋಮುಗಲಭೆಯಲ್ಲಿ ಮೇಲ್‌ವರ್ಗದವರು ತೊಂದರೆಗೆ ಒಳಗಾಗಿಲ್ಲ. ಇದರ ಬಗ್ಗೆ ತಾವು ವಿಚಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಮಗೆ ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಮತ್ತೆ ಶಾಂತಿ ಸಮಿತಿಗಳ ಬಗ್ಗೆ ಹೇಳುವುದಾದರೆ ನನಗೆ ಬಹಳ ಆಶ್ಚರ್ಯವಾಗುತ್ತದೆ. ಆ ಸಭೆಗೆ ನನ್ನನ್ನು ಕರೆದಿರಲಿಲ್ಲ. ಏತಕ್ಕೆಂದರೆ, ನಾನು ವಿರೋಧಪಕ್ಷದ ನಾಯಕನಲ್ಲ. ನಮ್ಮ ನಾಯಕರನ್ನು ಕರೆದಿದ್ದರು. ಅವರು ಸಲಹೆಯನ್ನು ಕೊಟ್ಟಿದ್ದಾರೆ. ಹಾಗೆಯೇ ನಮ್ಮ ಅನೇಕ ಮಿತ್ರರು ಸಲಹೆಯನ್ನು ಕೊಟ್ಟಿದ್ದಾರೆ. ಇಡೀ ರಾಜ್ಯಕ್ಕೆ ಸಿ.ಪಿ.ಐ., ಸಿ.ಪಿ.ಎಂ. ನವರು ಸೆಕ್ಯುಲರ್ ಎಲ್‌ಮೆಂಟ್ಸ್ ಎಂದು ಗೊತ್ತಿದೆ. ಅವರು ಹ್ಯೂಮನ್ ಚೈನ್ ಮಾಡಬೇಕೆಂದು ಹೊರಟಿದ್ದಾರೆ. ಹಳ್ಳಿ ಹಳ್ಳಿಗಳಲ್ಲಿ ಹೋಗಿ ಹಿಂದು ಮುಸಲ್ಮಾನರನ್ನು ಒಟ್ಟಿಗೆ ಬದುಕಬೇಕೆಂದು ಹೇಳಿದ್ದಾರೆ. ಅವರ ಒಂದು ರೆಪ್ರಸೆಂಟೇಷನ್‌ನನ್ನು ನಿಮ್ಮ ಕಮಿಟಿಗೆ ಹಾಕಿಲ್ಲವೆಂದರೆ ಇನ್ನು ನೀವು ಎಷ್ಟು ಯೋಚನೆ ಮಾಡಿದ್ದೀರಿ ಕಮಿಟಿಗಳನ್ನು ಮಾಡುವಾಗ ಎಂದು ದಯವಿಟ್ಟು ಯೋಚನೆ ಮಾಡಿ. ಅವರೇನು ನಿಮ್ಮ ಮನೆಯಬಾಗಿಲಿಗೆ ಬಂದು ಕೇಳಬೇಕೆ ? ಇವತ್ತು ಏನಾದರೂ ಫ್ರೀಡಮ್ ಕೆಲಸ ಮಾಡುತ್ತಿರುವವರೆಂದರೆ ಸಿ. ಪಿ. ಐ. ಮತ್ತು ಸಿ.ಪಿ ಎಂ. ನವರು ಮಾಡುತ್ತಿದ್ದಾರೆ. ಅವರಿಗೂ ನಮಗೂ ರಾಜಕೀಯವಾಗಿ ಭಿನ್ನಾಭಿಪ್ರಾಯವಿರಬಹುದು. ಅವರನ್ನು ನೀವು ಏತಕ್ಕೆ ಆ ಕಮಿಟಿಗಳಲ್ಲಿ ಹಾಕಿಲ್ಲ ಎನ್ನುವುದನ್ನು ಹೇಳಿ. ಈ ಶಾಂತಿ ಸಮಿತಿಗಳು ಒಂದು ಬೂಟಾಟಿಕೆಯಾಗಬಾರದು. ತಾಲ್ಲೂಕ್ ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಏನೋ ಒಂದು ಸಭೆ ಕರೆದಿದೆ, ಸಭೆ ನಡೆಸಿಕೊಂಡರು, ಮಂತ್ರಿಗಳಿಗೆ ಹಾರ ಹಾಕಿದರು ಎನ್ನುವಷ್ಟರಮಟ್ಟಿಗೆ ಇದು ಮುಗಿಯಬಾರದು. ಇದು ನಿಜವಾಗಿಯೂ ಶಾಂತಿಯನ್ನು ತರುವಂಥ ಸ್ಥಿತಿಯಾಗಬೇಕಾದರೆ, ಅದರ ಬಗ್ಗೆ ಸೆಕ್ಯುಲರ್ ಎಲ್‌ಮೆಂಟ್ಸ್ ಯಾರು ಇದ್ದಾರೆ ಅವರನ್ನು ಸೇರಿಸುವುದಕ್ಕೂ ಸಹಿತ ತಾವು ವಿಚಾರ ಮಾಡಬೇಕು. ಅವರನ್ನು ಹಾಕಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ನಾನು

ಇಷ್ಟು ಸಲಹೆಗಳನ್ನು ಸರ್ಕಾರದ ಮುಂದಿಟ್ಟು, ಬಹಳ ದುಃಖದಿಂದ ನಾನು ಹೇಳುತ್ತಿದ್ದೇನೆ. ಒಂದು ಕ್ಷೇತ್ರದಲ್ಲಿಯೂ ಯಾವ ಒಂದು ಅಭಿವೃದ್ಧಿ ಕೆಲಸವೂ ಆಗುತ್ತಿಲ್ಲ, ಅನೇಕ ಜನ ಆಡಳಿತ ಪಕ್ಷದ ಶಾಸಕರು ಈ ಭಾವನೆಗೆ ಬಂದಿದ್ದಾರೆ. ನನ್ನದು ಇರಲಿ. ನಾನು ವಿರೋಧಪಕ್ಷದಲ್ಲಿರುವವನು. ನನ್ನ ಕ್ಷೇತ್ರದ ಒಂದು ಕೆಲಸವಾಗುವುದಿಲ್ಲವೆಂದು ನನಗೆ ಗೊತ್ತು. ಕೊನೆಪಕ್ಷ ಹದಗೆಟ್ಟಿರತಕ್ಕ ಕಾನೂನಿನ ಪರಿಸ್ಥಿತಿಯನ್ನು ಸರಿಮಾಡಲಿಕ್ಕೆ ಆಗಿಲ್ಲ. ಹೋಗಲಿ, ಅದನ್ನು ಮಾಡುವುದುಬೇಡ. ಬಾಯಿಮುಚ್ಚಿಕೊಂಡಿದ್ದರೆ ಪರಿಸ್ಥಿತಿ ಚೆನ್ನಾಗಿರುತ್ತಿತ್ತು. ಬಾಯಿಮುಚ್ಚಿಕೊಂಡಿರುವ ಕೆಲಸವನ್ನೂ ಸಹ ನೀವು ಮಾಡಬೇಕು. ನ್ಯಾಯಾಂಗ ತನಿಖೆಯಾಗಬೇಕು. ಸುಪ್ರೀಮ್ ಕೋರ್ಟಿನ ನ್ಯಾಯಾಧೀಶರಿಂದ ತನಿಖೆಯಾಗಬೇಕೆಂದು ಹೇಳಿ, ಕೊನೆಯದಾಗಿ ಒಂದು ವಿಷಯವನ್ನು ಹೇಳಬೇಕಾಗಿದೆ. ಮತ್ತು ಟಾಡಾ ಕಾನೂನು. ಈ ಟಾಡಾ ಕಾನೂನಿನ ರುಚಿಯನ್ನು ನಾನು ಅನುಭವಿಸಿದ್ದೇನೆ. ಅವಾಗ ನನಗೆ ಗೊತ್ತಿರುವಹಾಗೆ, ೧೯೭೫-೭೭ರಲ್ಲಿ ಮಾನ್ಯ ಧರ್ಮಸಿಂಗ್‌ರವರು ಮಂತ್ರಿಗಳಾಗಿದ್ದರು. ನಿಮಗೆ ಅವರ ಕಷ್ಟ ಅರ್ಥವಾಗುವುದಕ್ಕೆ ಸಾಧ್ಯವಿಲ್ಲ. ಅದರ ಕಷ್ಟ ನಮಗೆ ಗೊತ್ತಿದೆ. ನಾವು ನೀವು ಸ್ನೇಹಿತರು ಆದರೆ ಈ ಜೈಲಿನ ಒಳಗೆ ಹೋಗತಕ್ಕಂಥ ರುಚಿ ನಿಮಗೆ ಆಗಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅದು ಮಂತ್ರಿಗಳಿಗೂ ಆಗಬೇಕೆಂದು ಹೇಳುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.—ಆದರ ೩ ಒಳ್ಳೆಯದೆ. ಹೋಂ ಮಿನಿಸ್ಟರಾಗಿ ಹೋಗಿ ರುಚಿ ನೋಡಿಬರುವುದು ಅದು ಬೇರೆ ವಿಚಾರ. ಈ ಟಾಡಾ ಕಾನೂನಿಂದ ಏನು ಮಾಡುತ್ತಾರೆ ಎಂದು ಹೇಳುತ್ತೇನೆ. ಈಗ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಇದೆ. ಈ ನ್ಯಾಷನಲ್ ಸೆಕ್ಯೂರಿಟಿ ಆಕ್ಟ್ ಎಂದರೆ ಡಿಟೆನ್‌ಷನ್ ಎಂದು ಹೇಳುತ್ತಾರೆ. ಅರೆಸ್ಟ್ ಎಂದು ಹೇಳುವುದಿಲ್ಲ. ಈ ಡಿಟೆನ್‌ಷನ್ ನ್ಯಾಷನಲ್ ಸೆಕ್ಯೂರಿಟಿಗೆ ಇವರ ಬಂಧನ ಸರಿಯೋ ತಪ್ಪೋ ಎನ್ನುವ ತೀರ್ಮಾನ ಮಾಡುವುದಕ್ಕೆ ಒಂದು ಸಮಿತಿ ಇದೆ. ಆ ಸಮಿತಿ ಏನು ಮಾಡುತ್ತದೆಂದರೆ ಆ ಊರಿನಲ್ಲಿರುವ ಹೆಡ್ ಕಾನ್‌ಸ್ಟೇಬಲ್ ಒಂದು ರಿಪೋರ್ಟ್ ಕಳುಹಿಸಿಕೊಡುತ್ತಾನೆ. ಆ ರಿಪೋರ್ಟಿನ ಆಧಾರದಮೇಲೆ ಕ್ರಮ ತೆಗೆದುಕೊಳ್ಳುತ್ತಾನೆ. ಏತಕ್ಕೆಂದರೆ, ಅಲ್ಲಿರತಕ್ಕಂಥ ಮೇಲ್‌ವರ್ಗದ ಅಧಿಕಾರಿಗಳಿಗೆ ಭಯ, ನಾಳೆ ದಿನ ಹೆಚ್ಚುಕಡಿಮೆಯಾದರೆ ನಾನು ಏತಕ್ಕೆ ಜವಾಬ್ದಾರಿ ತೆಗೆದುಕೊಳ್ಳಲಿ ಎಂದು ಭಯ.

೩–೫೫ ಪಿ. ಎಂ.

ನಾಲ್ಕು ತಿಂಗಳಿಗೆ ಒಂದು ಸಾರಿ ಕಾಗದ ಕಳುಹಿಸುತ್ತಿರುತ್ತಾರೆ. "your detention is necessary in the interest of maintaining National Security.. ..." ನಾವು ಅದನ್ನು ಅನುಭವಿಸಿದ್ದೇವೆ. ಒಂದೆರಡು ತಿಂಗಳು ಅಲ್ಲ, ೧೯ ತಿಂಗಳು ಅನುಭವಿಸಿದ್ದೇವೆ. ಪ್ರತಿ ೪ ತಿಂಗಳಿಗೆ ಕರ್ನಾಟಕ ಸರ್ಕಾರದಿಂದ ಒಂದು ಪೋಸ್ಟ್ ಕಾರ್ಡ್ ನಮಗೆ ಬರುತ್ತಿರುತ್ತದೆ ಈ ಟಾಡಾ ಕಾನೂನು ಏನಿದೆ ಇದರ ಉಪಯೋಗ ಪಡೆಯಬೇಕಾದುದು ಪಂಜಾಬಿನಲ್ಲಿ ಮತ್ತು ಕಾಶ್ಮೀರದಲ್ಲಿ, ಕರ್ನಾಟಕದಲ್ಲಿ ಅಲ್ಲ. ಕರ್ನಾಟಕದಲ್ಲಿರತಕ್ಕ ಕಾನೂನುಗಳನ್ನು ನಮ್ಮಲ್ಲಿರತಕ್ಕ ಮೇಲಾಧಿಕಾರಿಗಳಿಗೆ ಸ್ವತಂತ್ರ್ಯತೆಯನ್ನು ಕೊಟ್ಟರೆ ಅವರು ಚನ್ನಾಗಿ ನಿಭಾಯಿಸುತ್ತಾರೆ. ನಿಮ್ಮ ಆದೇಶ ಅವರಿಗೆ ಇಲ್ಲದೇಹೋದರೂ ಸಹಿತ ಸಮರ್ಪಕವಾಗಿ ಮಾಡತಕ್ಕ ಶಕ್ತಿ ಎಲ್ಲಾ ಅಧಿಕಾರಿಗಳಲ್ಲಿ ಇದೆ ಎಂದು ಹೇಳುವುದಿಲ್ಲ ಕೆಲವು ಅಧಿಕಾರಿಗಳಲ್ಲಿ ಇದೆ. ಆದುದರಿಂದ ದಯವಿಟ್ಟು, ಈ ಆ್ಯಂಟಿ ಡೆಮಾಕ್ರೆಟಿಕ್ ಟಾಡಾ ಕಾನೂನನ್ನು ಏನು ಅಳವಡಿಸಿಕೊಂಡು ಹೊರಟ್ಟಿದ್ದೀರಿ ಇದನ್ನು ಯಾರಿಗೆ ಉಪಯೋಗಿಸಬೇಕೆಂದ್ದೀರೋ ಎಂದು ನನಗೆ ಭಯವಾಗುತ್ತದೆ. ಏಕೆಂದರೆ ವಿರೋಧ ಪಕ್ಷದವರು ನಾವು ಸತ್ತು ಹೋಗಿದ್ದೇವೆ, ನಾವು ೩೦ ಜನ ಮಾತ್ರ ಇದ್ದೇವೆ. ಆಡಳಿತ ಪಕ್ಷದವರಿಗೆ ಆ ಅಸ್ತ್ರವನ್ನು ಉಪಯೋಗಿಸುತ್ತಾರೋ ಏನೋ ಗೊತ್ತಿಲ್ಲ. ನಿಮ್ಮ ದೈತ್ಯ ಶಕ್ತಿಯ ಮುಂದೆ ನಾವು ಸಣ್ಣವರು. ಇದು ನನ್ನ ಅಭಿಪ್ರಾಯ. ನಾವು ೩೦ ಜನ ಇರುವವರು, ನಿಮ್ಮ ಸರ್ಕಾರವನ್ನು ನಾವು ಏನೂ ಮಾಡುವುದಕ್ಕಾಗುವುದಿಲ್ಲ. ನನಗೆ ಏನು ಭಯ ಇದೆ ಎಂದರೆ, ಆ ಕಡೆ ಇರುವವರಿಗೆ ಎಲ್ಲಿ ಈ ಟಾಡಾವನ್ನು ಉಪಯೋಗಿಸುತ್ತಾರೋ ಎಂದು ಅನುಮಾನವಿರುವುದರಿಂದ ಕ್ಲಾರಿಫಿಕೇಷನ್ ಬೇಕಾಗಿದೆ. ಏಕೆಂದರೆ, ಸರ್ಕಾರವನ್ನು ಉರುಳಿಸುತ್ತೇವೆಂದರೆ ಟಾಡಾವನ್ನು ಹಾಕುತ್ತೇವೆಂದು ಹೇಳುವುದು. ನಾವಂತೂ ಉರುಳಿಸುವುದಕ್ಕಾಗುವುದಿಲ್ಲ. ಆ ಅರ್ಥದಲ್ಲಿ ಹೇಳಿದೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್.—ನಾವು ವಿರೋಧ ಪಕ್ಷದವರು ಶಕ್ತಿಯುತವಾಗಿದ್ದೇವೆ ನಾವೇನು ಶಕ್ತಿಹೀನರಾಗಿಲ್ಲ. ಏತಕ್ಕೆ ಶಕ್ತಿ ಇಲ್ಲವೆಂದು ಹೇಳಿಕೊಳ್ಳುತ್ತಾರೋ ನನಗಂತೂ ಗೊತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಸಂಖ್ಯಾ ಬಲದ ಮೇಲೆ ಕೇಳಿದೆ.

ಶ್ರೀ ಎಂ. ಮಹದೇವ್.—ಪಂಜಾಬಿನಿಂದ ಎಲ್ಲಿ ಬಂದುಬಿಡುತ್ತಾರೋ ಎಂದು ಅರ್ಲಿಯರ್‌ಆಗಿ ಮಾಡುತ್ತಿದ್ದೇವಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಮಹದೇವ್‌ರವರೆ ನಿಮಗೆ ಟಾಡಾ ಹಾಕಬಹುದು, ಅದಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ಮಹದೇವ್ ಮಂಜುನಾಥ್ ಅವರು ಎಚ್ಚರಿಕೆಯಿಂದ ಇರಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಟಾಡಾ ಕಾನೂನು ಹೆಚ್ಚಾಗಿ ದುರುಪಯೋಗವಾಗತಕ್ಕ ಸಂಭವ ಹೆಚ್ಚಿಗೆ ಇದೆ. ಆದರಿಂದ ಏನು ಉಪಯೋಗವಾಗುವುದಿಲ್ಲ. ಅನವಶ್ಯಕವಾಗಿ ಇಲ್ಲಿ ಒಂದು ಪಂಜಾಬ್‌ನ್ನು ಕ್ರಿಯೇಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಅದನ್ನೆಲ್ಲ ಮಾಡಬೇಡಿ. ನಮ್ಮ ರಾಜ್ಯದ ಜನ ಮತೀಯ ಮತ್ತು ಜಾತೀಯ ಶಕ್ತಿಗಳು ಎಷ್ಟೋ ಪ್ರಚೋದನೆ ಮಾಡಿದರೂ ಅವರು ಪೊಳ್ಳು ವಾದಕ್ಕೆ ಬೆಲೆ ಕೊಡುವುದಿಲ್ಲ, ರಿಯಲೈಸ್ ಮಾಡಿಕೊಳ್ಳುತ್ತಾರೆ. ನಾವು ಮಹಾರಾಜರ ಕಾಲದಿಂದ, ಟಿಪ್ಪುಸುಲ್ತಾನ್ ಕಾಲದಿಂದ ಒಟ್ಟಾಗಿ ಬದುಕಿದ್ದೇವೆ. ಹಳ್ಳಿಗಳಲ್ಲಿ ಬಾಬಯ್ಯನ ಹಬ್ಬ ಎಂದು ಹಿಂದೂ ಮುಸ್ಲಿಮರು ಕೂಡಿ ಮಾಡುತ್ತಾರೆ. ಆ ರೀತಿ ಬದುಕಿ ಬಂದವರು ನಾವು. ಆದ್ದರಿಂದ ದಯವಿಟ್ಟು ಟಾಡಾ ಕಾನೂನನ್ನು ಏನು ಮಾಡಬೇಕೆಂದು ಹೊರಟ್ಟಿದ್ದೀರಿ ಅದನ್ನು ಕಾರ್ಯಾಚರಣೆಗೆ ತರದೆ ಅದನ್ನು ನಿಲ್ಲಿಸಬೇಕೆಂದು ಒತ್ತಾಯಿಸಿ ಮಾನ್ಯ ಅಧ್ಯಕ್ಷಿಣಿಯವರು ಸಾಕಷ್ಟು ಮಾತನಾಡಲಿಕ್ಕೆ ಸಮಯ ಕೊಟ್ಟಿರುವುದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷಿಣಿಯವರೆ, ನಾನು ಹೆಚ್ಚು ಸಮಯ ಮಾತನಾಡುವುದಿಲ್ಲ. ಏಕೆಂದರೆ, ನನ್ನ ಮಿತ್ರರು ಸಾಕಷ್ಟು ವಿಚಾರಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ಕೋಮು ಗಲಭೆ ಯಾವಾಗಲೂ ಆಗಿಲ್ಲ. ಇಷ್ಟು ಕಮ್ಯುನಲ್ ಟೆನ್‌ಷನ್ಸ್ ಈ ರಾಜ್ಯದಲ್ಲಿ ಯಾವಾಗಲೂ ಆಗಿಲ್ಲ. ನಮ್ಮ ಕಾಂಗ್ರೆಸ್ ಪಕ್ಷದ ಕೆಲವು ಮುಖಂಡರು, ಮಂತ್ರಿಗಳು ಈ ಒಂದು ಕಮ್ಯುನಲ್ ಟೆನ್‌ಷನ್‌ಗಳಿಗೆ ಬಿಜೆಪಿ, ರೆಸ್ಪಾನ್ಸಿಬಲ್ ಎಂದು ಹೇಳುತ್ತಿದ್ದಾರೆ. ಆದರೆ ಆ ಪಕ್ಷಗಳವರು ಇದಕ್ಕೆ ಕಾಂಗ್ರೆಸ್ ಮುಖಂಡರು ಕಾರಣರು ಎಂದು ಹೇಳುತ್ತಿದ್ದಾರೆ. ಒಂದು ಸಂತೋಷ ಏನೆಂದರೆ, ಜನತಾ ದಳ ಇದರಲ್ಲಿ ಸೆಕ್ಯುಲರ್ ಇದೆ ಎಂದು ಒಂದಿಬ್ಬರು ಒಪ್ಪಿಕೊಂಡಿದ್ದಾರೆ. ಆದರೆ ಒಂದು ಮಾತು. ಇದಕ್ಕೆ ಕೇವಲ ಬಿ.ಜೆ.ಪಿ. ಮತ್ತು ವಿಹೆಚ್‌ಪಿಯವರು ಜವಾಬ್ದಾರರು ಎಂದರೆ ನಮ್ಮ ಕೆಲಸ ಮುಗಿಯುವುದಿಲ್ಲ.

ಕೇವಲ ಬಿ.ಜೆ.ಪಿ.ಯವರ ಮೇಲೆ ಆಪಾದನೆ ಮಾಡಿ ಉಳಿಯುವುದಕ್ಕಾಗುವುದಿಲ್ಲ. ಅದಕ್ಕೆ ಪುರಾವೆ ಮಾಡಬೇಕಾಗಿದೆ. ವಿ.ಎಚ್.ಪಿ.ಯವರು ಕಾರಣರಿದ್ದಾರೋ, ಬಿ.ಜೆ.ಪಿ.ಯವರು ಕಾರಣರಿದ್ದಾರೋ, ಕಾಂಗ್ರೆಸ್‌ನವರು ಕಾರಣರಿದ್ದಾರೋ ಎಂದು ನೋಡಬೇಕಾಗುತ್ತದೆ. ಏಕೆಂದರೆ, ಅವರು ಮುಸ್ಲಿಂ ಲೀಗ್ ಕಾರಣರಿದ್ದಾರೆ ಎಂದು ಹೇಳುತ್ತಾರೆ. ಆದಕ್ಕೋಸ್ಕರವಾಗಿ ಜ್ಯುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಕೇಳುತ್ತಿದ್ದೇವೆ. ಅದಕ್ಕೆ ಮಾನ್ಯತೆ ಕೊಟ್ಟರೆ ಮುಸ್ಲಿಂ ಲೀಗ್‌ನವರು ಜವಾಬ್ದಾರರೋ, ಬಿ. ಜೆ. ಪಿ.ಯವರು ಜವಾಬ್ದಾರರೋ, ವಿ. ಎಚ್. ಪಿ.ಯವರು ಜವಾಬ್ದಾರರೋ ಕಾಂಗ್ರೆಸ್‌ನವರು ಜವಾಬ್ದಾರರೋ ಎಂದು ಗೊತ್ತಾಗುತ್ತದೆ. ಸೆಕ್ಯುಲರ್ ಎಂದು ಎಲ್ಲರೂ ಹೇಳುತ್ತೇವೆ. ಮಾನ್ಯ ರಂಗನಾಥ ಅವರು ಬಹಳ ಚೆನ್ನಾಗಿ ಹೇಳಿದರು, ಸೆಕ್ಯೂಲರಿಸಂ ಬಗ್ಗೆ ಎಲ್ಲರೂ ಭಾಷಣ ಮಾಡುತ್ತಾರೆ. ಜನತಾ ದಳ, ಕಾಂಗ್ರೆಸ್ ಪಕ್ಷ ಬಿ.ಜೆ.ಪಿ. ಎಲ್ಲರೂ ತಮ್ಮ ಮ್ಯಾನಿಫೆಸ್ಟೋದಲ್ಲಿ ಸೆಕ್ಯುಲರಿಸಂ ಬಗ್ಗೆ ಚುನಾವಣೆ ಸಂದರ್ಭದಲ್ಲಿ ಹೇಳುತ್ತವೆ. ಆದರೆ ಡೀಡ್ಸ್ ಆಕ್ಟ್ಸ್ ಮತ್ತು ಆಕ್ಷನ್‌ನಲ್ಲಿ ಸೆಕ್ಯೂಲರಿಸಂ ಇರಬೇಕಾಗುತ್ತದೆ. ಕಾನ್‌ಸ್ಟಿಟ್ಯೂಷನ್‌ನಲ್ಲಿ ನಾವು ಸೆಕ್ಯೂಲರ್ ಎಂದು ಅಕ್ಸೆಪ್ಟ್ ಮಾಡಿದ್ದೇವೆ. ಇವತ್ತು ಸಂಪೂರ್ಣವಾಗಿ ಲಾ ಅಂಡ್ ಆರ್ಡರ್ ಮೆಷಿನರಿ ಫೈಲ್ಯೂರ್ ಆಗಿದೆ ಎಂದು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹೇಳಿದ್ದಾರೆ. ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿಯವರು ಅದೇ ಮಾತನ್ನು ಹೇಳಿದ್ದಾರೆ. ಅದಕ್ಕಾಗಿ ಒಬ್ಬ ಮುಖ್ಯಮಂತ್ರಿಗಳನ್ನು ಬಲಿ ಕೊಟ್ಟರು. ಮಾಜಿ ಮುಖ್ಯಮಂತ್ರಿಗಳು ಒಂದು ಮಾತು ಹೇಳಿದರು. ಸಮಯ ಬಂದಾಗ ಕಮ್ಯೂನಲ್ ಟೆನ್‌ಷನಗೆ ಯಾರು ಜವಾಬ್ದಾರಿ ಎಂದು ಹೇಳುತ್ತೇನೆ ಎಂದು ಮಾನ್ಯ ವೀರೇಂದ್ರ ಪಾಟೀಲ್ ಹೇಳಿದರು. ಇವತ್ತು ಸದನದಲ್ಲಿ ಅವರು ಇಲ್ಲ. ನಾನು ಮಾನ್ಯ ಸಭಾಧ್ಯಕ್ಷಿಣಿಯವರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಸತ್ಯ ಸಂಗತಿ ಅವರು ಹೇಳಬೇಕು. ಈ ಕಮ್ಯುನಲ್ ಟೆನ್‌ಷನ್‌ಗೆ ಜವಾಬ್ದಾರಿ ಯಾರು ಎಂದು ಅವರು ಹೇಳಲಿಲ್ಲ ಅಂದರೆ ದೇವರು ಕೂಡ ಅವರನ್ನು ಕ್ಷಮೆ ಮಾಡುವುದಿಲ್ಲ. ಏಕೆಂದರೆ, ಸತ್ಯ ಸಂಗತಿ ಅವರಿಗೆ ಗೊತ್ತಿದೆ. ಸಮಯ ಬಂದಾಗ ಹೇಳುತ್ತೇನೆ ಎಂದು ಅವರು ಹೇಳಿದ್ದಾರೆ. ಮಾನ್ಯ ಸದಸ್ಯರಾದ

ಸಿಂಧ್ಯಾ ಅವರು ಹೇಳಿದ ಹಾಗೆ ಎಲ್ಲಾ ಕಡೆ ಗಲಾಟೆ. ನಮ್ಮ ಊರಿನಲ್ಲೂ ಗಲಾಟೆಯಾಗುವ ಸಂಭವ ಇತ್ತು ನಮ್ಮ ಜಿಲ್ಲೆಯೂ ಸೌಹಾರ್ದಯುತವಾದ ವಾತಾವರಣ ಇತ್ತು. ಗಲಾಟೆಯಾಗುವ ಸಂದರ್ಭ ಬಂದಿದ್ದರೂ ಸಹ ಪೋಲೀಸರ ಸಕಾಲಿಕ ಕ್ರಮದಿಂದ ಅದು ತಪ್ಪಿದೆ. ಎಲ್ಲೆಲ್ಲಿ ಗಲಾಟೆಯಾಗಿದೆ ಅಲ್ಲಿ ಪೋಲೀಸ್ ಫೋರ್ಸ್ ಇಲ್ಲ. ಪೋಲೀಸ್ ಫೋರ್ಸ್ ಇದ್ದರೆ ಎಕ್ವಿಪ್‌ಮೆಂಟ್ಸ್ ಇಲ್ಲ. ಅದರ ಸಲುವಾಗಿ ಸರ್ಕಾರಕ್ಕೆ ಒಂದು ವಿಲ್ ಇರಬೇಕಾಗುತ್ತದೆ. Where there is a will there is a way. ಕೇವಲ ಭಾಷಣ ಮಾಡಿದರೆ ಆಗುವುದಿಲ್ಲ. ಮಾನ್ಯ ಗೃಹ ಸಚಿವರಿಗೆ ಹೇಳುತ್ತೇನೆ, ನಿಮ್ಮ ಕಡೆ ವಿಲ ಇರಬೇಕಾಗುತ್ತದೆ. ಕಾಂಗ್ರೆಸ್ ಪಕ್ಷ ಇರಬಹುದು, ಜನತಾ ದಳ ಇರಬಹುದು, ಕಮ್ಯೂನಿಸ್ಟ್ ಇರಬಹುದು, ಬಿ. ಜೆ. ಪಿ. ಇರಬಹುದು, ಅವರು ಕಮ್ಯುನಲ್ ಟೆನ್‌ಷನ್‌ಗೆ ಜವಾಬ್ದಾರರು ಎಂದರೆ ಅವರು ಯಾರೇ ಇರಲಿ. ಅವರನ್ನು ಒಳಗೆ ಹಾಕುವ ಧೈರ್ಯ ನಿಮಗಿರಬೇಕಾಗುತ್ತದೆ. ಅದಕ್ಕೆ ಟಾಡಾ ಕಾಯಿದೆ ಬೇಕಾಗಿಲ್ಲ. ನಿಮಗೆ ಸಿ.ಆರ್.ಪಿ.ಸಿ. ಇದೆ, ಐ.ಪಿ.ಸಿ ಇದೆ ಎನ್‌ಎಸ್‌ಎ ಇದೆ. ಅದನ್ನು ಉಪಯೋಗ ಮಾಡಬಹುದು ಅದಕ್ಕಾಗಿ ಟಾಡಾ ಕಾನೂನು ತರುವ ಅವಶ್ಯಕತೆ ಏನು? ೧೯೮೮ನೇ ಇಸವಿಯಲ್ಲಿ ನೀವು ತಂದಿದ್ದೀರಿ ಎಂದು ಯಾರೋ ಹೇಳಿದರು. ನನಗೆ ಅದು ನೆನಪಿಲ್ಲ. ಒಂದು ವೇಳೆ ತಂದಿದ್ದರೆ ಅದನ್ನು ನಾನು ತಪ್ಪು ಎಂದು ಹೇಳುತ್ತೇನೆ. ನಾವು ತಪ್ಪು ಮಾಡಿದ್ದರೆ ನೀವೂ ತಪ್ಪು ಮಾಡುತ್ತೀರಾ ? ಇವತ್ತು ಈ ರಾಜ್ಯದಲ್ಲಿ ಅಂತಹ ಪರಿಸ್ಥಿತಿ ನಿರ್ಮಾಣ ಆಗಿದೆಯೋ ಇದೇನು ಪಂಜಾಬಾ ? ಕಾಶ್ಮೀರಾನಾ ? ಇಂಥ ಮಸೂದೆಗಳನ್ನು ತಂದು ಜನರ ಮನಸ್ಸಿನಲ್ಲಿ ಭಯಂದ ವಾತಾವರಣ ನಿರ್ಮಾಣ ಮಾಡುತ್ತಿದ್ದೀರಿ. ಏನೋ ಟೆನ್‌ಷನ್ ಇದೆ, ಏನೋ ಪ್ರಾಬ್ಲಂ ಇದೆ ಎಂಬ ಭಯ ಜನರಲ್ಲಿ ಬರುತ್ತದೆ. ನಾನು, ಮಾನ್ಯ ರಾಮಕೃಷ್ಣ ಹೆಗಡೆಯವರು ಮಾನ್ಯ ಚಂದ್ರೇಗೌಡರು, ಕೋಲಾರ, ಶ್ರೀನಿವಾಸಪುರ, ಚನ್ನರಾಯಪಟ್ಟಣಕ್ಕೆ ಭೇಟಿ ಕೊಟ್ಟಿದ್ದೆವು. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಒಂದು ಸಮಾಜಕ್ಕೆ ಸೇರಿದ ೪೦೦–೫೦೦ ಮಾವಿನ ಗಿಡಗಳನ್ನು ಕಿತ್ತು ಹಾಕಿದ್ದಾರೆ. ಎಷ್ಟು ಜನರನ್ನು ಸರ್ಕಾರದವರು ಅರೆಸ್ಟ್ ಮಾಡಿದ್ದೀರಿ ? ಎಷ್ಟು ಜನರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ? ಎಷ್ಟು ಕಾಂಪೆನ್‌ಸೇಷನ್ ಕೊಟ್ಟಿದ್ದೀರಿ ? ಇದನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇದು ಆಗುವುದಕ್ಕೆ ಕಾರಣ ಪ್ರಾಮಾಣಿಕವಾಗಿ ಹೇಳಬೇಕಾದರೆ ನಾವೇ ಎಂದು ಹೇಳಬೇಕಾಗುತ್ತದೆ, ಏಕೆಂದರೆ, ನಮಗೆ ವೋಟ ಬೇಕು. ನಾವು ಚುನಾವಣೆಯಲ್ಲಿ ಆರಿಸಿ ಬರಬೇಕು. ಅದರ ಸಲುವಾಗಿ ಹೆಜ್ಜೆ ಹೆಜ್ಜೆಗೆ ನಾವು ಜಾತೀಯತೆಯನ್ನು ಬೆಳೆಸಿ ಈ ಸ್ಥಿತಿಗೆ ತಂದಿದ್ದೇವೆ. ಸೆಕ್ಯೂಲರ್ ಬಗ್ಗೆ ಮಾತನಾಡಿ ಚುನಾವಣೆಯಲ್ಲಿ ಕ್ಯಾಂಡಿಡೇಟ್ ಹಾಕುವಾಗ ಯಾವ ಜಾತಿಯ ಬಲ ಹೆಚ್ಚಿದೆ ಆ ಜಾತಿಯ ಕ್ಯಾಂಡಿಡೇಟ್ಸ್ ಹಾಕುತ್ತೇವೆ. ಇದನ್ನು ಅರಿಯಬೇಕು. ಮಾನ್ಯ ಅಧ್ಯಕ್ಷಿಣಿಯವರೆ, ಆ ಸಲುವಾಗಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ. ಇವತ್ತು ನ್ಯಾಯಾಂಗ ತನಿಖೆಗೆ ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕು. ಜ್ಯುಡಿಷಿಯಲ್ ಎನ್‌ಕ್ವಯರಿಗೆ ಅವರು ಒಪ್ಪಿಕೊಂಡರೆ ನಿಜವಾದ ಸತ್ಯ ಏನು ಎಂದು ಎಲ್ಲರಿಗೂ ಗೊತ್ತಾಗುತ್ತದೆ. ಇಡೀ ರಾಜ್ಯದಲ್ಲಿ ಒಂದು ಶಾಂತಿ ವಾತಾವರಣ ಈಗ ಬರುತ್ತಾ ಇದೆ. ಮಾನ್ಯ ಸಚಿವರಾದ ಬಸವಲಿಂಗಪ್ಪನವರಿಗೆ ಹಾಗೂ ಅಜೀಜ್ ಸೇಠ್‌ರವರಿಗೆ ನಾನು ವಿನಂತಿ ಮಾಡುತ್ತೇನೆ. ಅವರು ಜವಾಬ್ದಾರಿಯಿಂದ ಬಿಹೇವ್ ಮಾಡಬೇಕು. ಪ್ರವೋಕೇಷನ್ ಸ್ಟೇಟ್‌ಮೆಂಟ್ ಕೊಡುವುದು ಬಂದ್ ಮಾಡಲಿ, ಇದರಿಂದ ಅವರಿಗೆ ಒಂದು ವರ್ಗದ ಬೆಂಬಲ ಸಿಗಬಹುದು. ಆದರೆ ಅದರಿಂದ ರಾಜ್ಯಕ್ಕೆ ದೇಶಕ್ಕೆ ಒಳ್ಳೆಯದು ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಸರ್ಕಾರ ಪೋಲೀಸ್ ಫೋರ್ಸ್‌ನ್ನು ಕೂಡಾ, ಸರಿಯಾಗಿ ಎಕ್ವಿಪ್ ಮಾಡಬೇಕಾಗುತ್ತದೆ. ಇವತ್ತು ಕೇವಲ ಪೋಲೀಸರಿಗೆ ಜವಾಬ್ದಾರಿ ಕೊಟ್ಟರೆ ಆಗುವುದಿಲ್ಲ. ಪೋಲೀಸರಲ್ಲೂ ಪ್ರಾಮಾಣಿಕರು ಇದ್ದಾರೆಂದು ಹೇಳುತ್ತೇನೆ, ಬಹಳ ಕಡೆ ಪೋಲೀಸರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಇವತ್ತು ಪೋಲೀಸ್ ಇಲಾಖೆಯಲ್ಲಿ ಸಫಿಶಿಯೆಂಟ್ ಸ್ಟಾಫ್ ಇಲ್ಲ, ವೆಪನ್ಸ್ ಇಲ್ಲ. ಇರುವ ಸ್ಟಾಫ್, ವೆಪನ್ಸ್‌ನಲ್ಲೇ ಅವರು ಸಾಧ್ಯವಾದಷ್ಟು ಕಂಟ್ರೋಲ್ ಮಾಡಿದ್ದಾರೆ, ಆದ್ದರಿಂದ ಈ ಇಲಾಖೆಯಲ್ಲಿ ಇನ್ನೂ ಬಂದೋಬಸ್ತ್ ತರುವ ಸಲುವಾಗಿ, ಪೋಲೀಸ್ ಸಿಬ್ಬಂದಿ ಹೆಚ್ಚು ಮಾಡಿ ಅವರನ್ನು ಎಕ್ವಿಪ್ ಮಾಡುವ ಸಲುವಾಗಿ ಬಡ್ಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಈ ಇಲಾಖೆಗೆ ಕೊಟ್ಟು ಎಲ್ಲೆಲ್ಲಿ ಸೆನ್‌ಸಿಟೀವ್ ಏರಿಯಾ ಇದೆ ಅಲ್ಲಿಗೆ ಪೋಲೀಸ್ ಸ್ಟೇಷನ್ ಮತ್ತು ಸಾಕಷ್ಟು ಸಿಬ್ಬಂದಿ ವರ್ಗವನ್ನು ಹೆಚ್ಚು ಒದಗಿಸಿಕೊಡಬೇಕೆಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್. ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) .— ಮಾನ್ಯ ಅಧ್ಯಕ್ಷಿಣಿಯವರೇ ಈಗಾಗಲೇ ನನ್ನ ಪಕ್ಷದ ನಾಯಕರು ಹಾಗೂ ಉಪನಾಯಕರು ಇದರ ಬಗ್ಗೆ ಬೆಳಕು ಚೆಲ್ಲಿದ್ದಾರೆ. ನಮಗೆ ಸ್ವಾತಂತ್ರ್ಯ ಬಂದು ೪೩–೪೪ ವರ್ಷಗಳಾದರೂ ಕೂಡಾ ಇನ್ನೂ ಈ ರಾಷ್ಟ್ರದಲ್ಲಿ ಹಿಂದೂ ಮತ್ತು ಮುಸಲ್ಮಾನರು ಒಬ್ಬರನ್ನೊಬ್ಬರು ನಂಬುವ ಸ್ಥಿತಿಯಲ್ಲಿ ನಾವು ಇಲ್ಲ, ಇದು ಒಂದು

ದುರಾದೃಷ್ಟ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ, ಸಣ್ಣ ಸಣ್ಣ ಪಟ್ಟಣಗಳಲ್ಲೂ ಕೂಡಾ ಹಿಂದೆ ಮೊಹರಂ ಆಚರಣೆ ಮಾಡುವಾಗ ಹಿಂದೂಗಳು ಮತ್ತು ಮುಸಲ್ಮಾನರು ಒಟ್ಟಿಗೆ ಸೇರಿ ಆಚರಣೆ ಮಾಡುತ್ತಿದ್ದರು. ವೇಷಗಳನ್ನು ಹಾಕುತ್ತಿದ್ದರು. ಮತ್ತು ಸಕ್ಕರೆ ಒದಗಿಸುವುದು ಎಂದು ಪೂಜೆಯನ್ನು ಮಾಡುತ್ತಿದ್ದರು. ಆದರೆ ಈಗ ಅಂತಹ ಭಾವನೆಗಳು ಹೋಗಿದೆ. ಇದಕ್ಕೆ ಕಾರಣ ನಮ್ಮ ಒಂದು ಮೌಢ್ಯ. ಇನ್ನೂ ಒಂದು ಬಹಳ ಅಪಮಾನಕರವಾದ ವಿಷಯವೆಂದರೆ ಒಂದು ದೇವಸ್ಥಾನವನ್ನು ಕಟ್ಟುವುದಕ್ಕೆ ಅವಕಾಶ ಕೊಡಲಿಲ್ಲ ಎಂದು ಹೇಳಿ ಕೇಂದ್ರ ಸರ್ಕಾರ ಬಿದ್ದು ಹೋಯಿತು. ಇಂತಹದ್ದು ಪ್ರಪಂಚದ ಇತಿಹಾಸದಲ್ಲೇ ಎಲ್ಲೂ ಕೂಡಾ ಇಲ್ಲ. ಇದು ಒಂದು ಅಪಮಾನಕರವಾದ ಘಟನೆ ಎಂದು ನಾನು ತಿಳಿದುಕೊಂಡಿದ್ದೇನೆ. ನಾವು ಇನ್ನೂ ಬಹಳ ಪ್ರಿಮಿಟಿವ್ ಸ್ಟೇಜ್‌ನಲ್ಲಿ ಇದ್ದೇವೆ. ನಾವು ಇನ್ನೂ ೨೦ನೇ ಶತಮಾನಕ್ಕೆ ಬಂದಿಲ್ಲ ಎಂಬುದಕ್ಕೆ ಇದೇ ಸಾಕ್ಷಿ ಎಂದು ನಾನು ತಿಳಿದುಕೊಂಡಿದ್ದೇನೆ, ರಾಮದೇವರ ದೇವಸ್ಥಾನವನ್ನು ಕಟ್ಟಬೇಕು. ನಾವು ಹಿಂದೂಗಳು, ರಾಮನನ್ನು ನಾರಾಯಣನ ಅವತಾರವೆಂದು ತಿಳಿದು ನಾವು ಪೂಜೆ ಮಾಡುತ್ತೇವೆ. ಅದು ಅವರವರ ನಂಬಿಕೆಗೆ ಅವರವರು ಯಾವ ಯಾವ ದೇವರನ್ನು ಪೂಜೆ ಮಾಡುತ್ತಾರೋ ಅದು ಅವರಿಗೆ ಬಿಟ್ಟದ್ದು. ಹೀಗೆ ಬೇರೆ ಮತಸ್ಥರೂ ಕೂಡ ಅವರದು ನಂಬಿಕೊಂಡಿರತಕ್ಕ ದೇವರನ್ನು ಪೂಜೆ ಮಾಡುವುದಕ್ಕೆ ನಮ್ಮಲ್ಲಿ ಅವಕಾಶ ಇದೆ. ನಾವು ಇದನ್ನು ಹಿಂದೂ ರಾಜ್ಯ ಎಂದು ಮಾಡಿಲ್ಲ, ಸೆಕ್ಯುಲರ್ ಸ್ಟೇಟ್ ಎಂದೇ ಮಾಡಿದ್ದೇವೆ. ಬೇರೆಯವರ ದೇವಸ್ಥಾನ ಕೆಡವಿ ಆ ಜಾಗದಲ್ಲಿ ಶ್ರೀರಾಮರ ದೇವಸ್ಥಾನ ಕಟ್ಟಬೇಕೆಂದೇನೂ ಇಲ್ಲ. ಅಲ್ಲಿ ಬೇಕಾದರೆ ರಾವಣನ ದೇವಸ್ಥಾನವನ್ನು ಕಟ್ಟಬಹುದು. ಆ ಬ್ಲಡ್ ಶಡ್, ಹೇಟ್ರೆಡ್, ನ್ಯಾಷನಲ್ ಡಿಸ್ ಇಂಟಿಗ್ರೇಷನ್ ನೋಡಿದರೆ ಅಲ್ಲಿ ರಾವಣನ ಅಥವಾ ಕೀಚಕನ ದೇವಸ್ಥಾನವನ್ನು ಕಟ್ಟಬೇಕೇ ವಿನಃ ಅಲ್ಲಿ ಶ್ರೀರಾಮನ ದೇವಾಲಯವನ್ನು ಕಟ್ಟುವುದಕ್ಕೆ ಆಗುವುದಿಲ್ಲ. ಇವತ್ತು ರಾಷ್ಟ್ರದಲ್ಲಿ ಏನು ಪರಿಸ್ಥಿತಿ ಇದೆ ? ಸಹಸ್ರಾರು ದೇವಸ್ಥಾನಗಳಲ್ಲಿ ಇವತ್ತು ಪೂಜೆ ಮಾಡುವವರು ಗತಿ ಇಲ್ಲ. ದೀಪ ಹಚ್ಚುವವರು ಇಲ್ಲ ಕಸ ಗುಡಿಸುವವರು ಇಲ್ಲ, ಅಂತಹ ಕಡೆ ಕತ್ತೆಗಳು ವಾಸ ಮಾಡುತ್ತಿವೆ. ಇವತ್ತು ನಮ್ಮಲ್ಲಿ ಬಡವರಿಗೆ ದೇವರು ಇಲ್ಲ. ಸಾಹುಕಾರರಿಗೆ ದೇವರು ಇದ್ದಾನೆ. ಯಾರಲ್ಲಿ ಸಂಪತ್ತು ಇದೆ, ಹಣ ಇದೆ ಅವರು ಇವತ್ತು ದೇವರ ಮೆರವಣಿಗೆ ಮಾಡಿಸುತ್ತಾರೆ ದೇವರನ್ನು ಹೊತ್ತುಕೊಂಡು ಓಡಾಡಿ ಚರ್ಪನ್ನು ಹಂಚುತ್ತಾರೆ. ಅದೇ ಒಬ್ಬ ಬಡವ ದೇವರ ಮುಂದೆ ಕೈಮುಗಿದು ಸ್ವಾಮಿ ನಮ್ಮಪ್ಪ ನನ್ನನ್ನು ಕಾಪಾಡಪ್ಪಾ ಎಂದು ಹೇಳಿ ಮುಂದೆ ಹೋಗುತ್ತಾನೆ ದೇವರಿಂದ ಅನುಕೂಲವಾಗಿರುವ ಮೇಲ್ಜಾತಿಯವರಿಂದಲೇ. ಉಳ್ಳವರಿಂದಲೇ ಈ ಎಲ್ಲಾ ಕೀಟಲೆ. ಅವರಿಗೆ ಸ್ವಲ್ಪ ಸರಿಯಾಗಿ ಬುದ್ಧಿ ಹೇಳುವ ಪರಿಸ್ಥಿತಿ. ಬಂದರೆ ಎಲ್ಲಾ ಸರಿಹೋಗುತ್ತದೆ. ಇದು ಹಿಂದುತ್ವ ಹಿಂದೂ ರಾಜ್ಯ ಹಿಂದೂರಾಷ್ಟ್ರ.

ಈ ಹಿಂದುಳಿದ ವರ್ಗದವರು, ಬ್ಯಾಕ್‌ವರ್ಡ್ ಕ್ಲಾಸ್‌ನವರು ಹರಿಜನಗಿರಿಜನರು ಅವರ ಗುಲಾಮರಾಗಿಯೇ ಇರಬೇಕೆ? ಈ ಮಂಡಲ ಕಮಿಷನ್ ವರದಿ ಜಾರಿಗೆ ತಂದದ್ದೇ ಇದಕ್ಕೆ ಮುಖ್ಯ ಕಾರಣ. ಆಗ ಅವರು ಇದು ನಮ್ಮ ಇರುವಿಕೆಗೆ ಅಪಾಯವಾಗುತ್ತದೆಂದು ಎಂದು ಕಣ್ಣು ಬಿಟ್ಟರು. ಸುಮಾರು ೪೦ ಸಾವಿರ ಮೆಂಬರ್‌ಷಿಪ್ ಇರುವ ಕ್ಲಾಸ್-೧ ಅಧಿಕಾರಿಗಳು ಒಂದು ರೆಸಲ್ಯೂಷನ್ ಮಾಡಿ ಕೇಂದ್ರ ಸರಕಾರಕ್ಕೆ ಕಳಿಸಿದರು. ಬ್ಯಾಕ್‌ವರ್ಡ್ ಕ್ಲಾಸ್‌ಗೆ ರಿಸರ್ವೇಷನ್ ಇಡಬಾರದು, ಹರಿಜನಗಿರಿಜನರಿಗೆ ರಿಸರ್ವೇಷನ್ ಇರುವುದನ್ನೂ ಕೂಡ ತೆಗೆಯಬೇಕೆಂದು ಕಳಿಸಿದರು. ಆ ರೀತಿ ಆದಾಗ ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಇದನ್ನು ಬಿಡಬೇಕೆಂದು ಈ ಸಭೆಯಲ್ಲಿ ಒತ್ತಾಯ ಪೂರ್ವಕವಾಗಿ ನಾವು ಹೇಳಬೇಕು. ಇಷ್ಟು ದಿವಸ ನೀವು ನಮ್ಮ ಮೇಲೆ ಆಡಳಿತವನ್ನು ನಡೆಸಿದ್ದೀರಿ ಇನ್ನು ಮೇಲಾದರೂ ನಮಗೆ ಮನುಷ್ಯರಾಗಿ ಬಾಳುವುದಕ್ಕೆ ಅವಕಾಶ ಕೊಡಿ ಎಂದು ಹಿಂದುಳಿದ ವರ್ಗದವರು ಹರಿಜನಗಿರಿಜನರು, ಮೈನಾರಿಟೀಸ್ ಹೇಳಬೇಕಾಗುತ್ತದೆ, ಹೇಳದಿದ್ದರೆ ಇದೇರೀತಿ ಹುಚ್ಚಾಟ ಮಾಡಿ ಕಡೆಗೆ ಇನ್ನೂ ಏನೇನು ಅನಾಹುತ ಮಾಡುತ್ತಾರೊ ಎಂದು ಯೋಚಿಸುವುದಕ್ಕೂ ಕೂಡ ಆಗುವುದಿಲ್ಲ ಗಾಂಧೀಜಿ ಈಶ್ವರ ಅಲ್ಲ ತೇರೇನಾಮ್ ಎಂದು ಹೇಳಿದರು. ಇವತ್ತು ನಾವುಗಳೆಲ್ಲಾ ಮಾತೆತ್ತಿದರೆ ಗಾಂಧೀಜಿ ಪೂಜೆ ಮಾಡುತ್ತೇವೆ ಗಾಂಧಿ ಹೆಸರು ಹೇಳುತ್ತೇವೆ. ನಾವು ಎಲ್ಲೆಲ್ಲಿ ಅನಾಚಾರ ಮಾಡುತ್ತೇವೊ ಅಲ್ಲೆಲ್ಲ ಗಾಂಧಿ ಜಿ ಹೆಸರನ್ನು ಹೇಳುವುದಕ್ಕೆ ಶುರು ಮಾಡಿದ್ದೇವೆ. ಇವತ್ತು ಸಾಮಾನ್ಯವಾಗಿ ಪ್ರತಿಯೊಬ್ಬ ಮಂತ್ರಿಗಳೂ ಕೂಡ ಅವರು ಏನೇ ಡಿಫೆಕ್ಷನ್ ಮಾಡಿರಲಿ ಅಧಿಕಾರಕ್ಕೆ ಬಂದ ತಕ್ಷಣ ಗಾಂಧಿ ಸಮಾಧಿಗೆ ಹೋಗಿ ಪೂಜೆ ಮಾಡುವುದು ನಡೆದಿದೆ, ಎಷ್ಟರಮಟ್ಟಿಗೆ ನಾವು ಅನಾಚಾರ ಮಾಡುತ್ತೇವೋ ಅಷ್ಟರ ಮಟ್ಟಿಗೆ ದೇವರ ಪೂಜೆಯನ್ನು ಜಾಸ್ತಿ ಮಾಡುವುದು ನಡೆದುಕೊಂಡು ಬಂದಿದೆ. ಈ ಪರಿಸ್ಥಿತಿ ನಮ್ಮ ರಾಷ್ಟ್ರದಲ್ಲಿದೆ. ಈಗಿನ ನಮ್ಮ ಯುವ ಜನಾಂಗ ಇದನ್ನು ಎಷ್ಟು ಬೇಗ ಅರ್ಥ ಮಾಡಿಕೊಳ್ಳುತ್ತಾರೆಯೋ ಅಷ್ಟು ಬೇಗ ರಾಷ್ಟ್ರ ಉದ್ಧಾರವಾಗುತ್ತದೆ. ಇಲ್ಲದಿದ್ದರೆ ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ ಇನ್ನು ನೂರು ವರ್ಷ

ಗಳಾದರೂ ಕೂಡ ಹೀಗೆ ಇರುತ್ತೇವೆ. ಇದರ ಬಗ್ಗೆ ರಾಜ್ಯ ಸರಕಾರ ಇರಬಹುದು, ಕೇಂದ್ರ ಸರಕಾರ ಇರಬಹುದು ಯಾರೇ ಆಗಲೀ ಧೈರ್ಯ ಮಾಡಬೇಕಾಗುತ್ತದೆ, ಇನ್ನು ನಮ್ಮಲ್ಲಿ ಬಹಳಷ್ಟು ಗುರುಗಳಿದ್ದಾರೆ, ಈಗಾಗಲೆ ಬಹಳಷ್ಟು ಗುಂಪುಗಳು ಆಗಿ ಹೋಗಿದ್ದಾರೆ. ನಮ್ಮಲ್ಲಿ ಇನ್ನೂ ಮಠಾಧಿಪತಿಗಳು ಗುರುಗಳು ಬೇಕಾದಷ್ಟು ಜನರಿದ್ದಾರೆ ಅವರು ಮೊದಲು ನಾವು ಮನುಷ್ಯರು ಎನ್ನುವುದನ್ನು ನಮಗೆ ಕಲಿಸಬೇಕು. ನಾವು ಮೊದಲು ಮಾನವರು, ಆಮೇಲೆ ಭಾರತೀಯರು, ಆದಾದಮೇಲೆ ಹಿಂದೂ, ಕ್ರಿಶ್ಚಿಯನ್ ಮುಸಲ್ಮಾನ್ ಎನ್ನುವುದನ್ನು ನಾವು ಯೋಚನೆ ಮಾಡಬೇಕೇ ವಿನಃ ನಾವು ಹಿಂದೂ ಅವರು ಮುಸ್ಲಿಮರು ಎಂದು ನಾವು ನಾವು ಜಗಳವಾಡಿ ಒಬ್ಬರ ರಕ್ತವನ್ನು ಒಬ್ಬರು ಕುಡಿಯಬೇಕೆಂದು ಅಲ್ಲ. ಈಗ ಮಠಾಧಿಪತಿಗಳು ಕೂಡಾ ದೇವಾಲಯ ಕಟ್ಟಬೇಕೆಂದು ಹೊರಟಿದ್ದಾರೆ. ೪೦ ಕೋಟಿ ಜನರಿಗೆ ಹೊಟ್ಟೆಗೆ ಅನ್ನ ಇಲ್ಲ ಎರಡು ಹೊತ್ತು ಊಟ ಸಿಗುತ್ತಿಲ್ಲ, ಸಿಕ್ಕುವ ಊಟದಲ್ಲಿ ಕೂಡ ಸಾಕಷ್ಟು ಕ್ಯಾಲೋರೀಸ್ ಇಲ್ಲ. ದೇಶದಲ್ಲಿ ಬಡತನ ಹೆಚ್ಚುತ್ತಿದೆ. ವಾಸಕ್ಕೆ ಮನೆ ಗತಿ ಇಲ್ಲ, ಮಕ್ಕಳು ಸಿಂಬಳ ಸುರಿಸಿಕೊಂಡು ಹಾಕಿಕೊಳ್ಳುವುದಕ್ಕೆ ನಿಕ್ಕರ್ ಇಲ್ಲದೆ ರಸ್ತೆಯಲ್ಲಿ ಅಲೆಯುತ್ತಿವೆ. ಈ ಸಮಸ್ಯೆ ಬಗೆಹರಿಸುವುದನ್ನು ಬಿಟ್ಟು ೫೦೦ ಕೋಟಿ ರೂಪಾಯಿಗಳನ್ನು ವಸೂಲು ಮಾಡಿ ದೇವಸ್ಥಾನ ಕಟ್ಟುತ್ತೇವೆಂದು ಹೇಳಿದರೆ ಯಾವ ದೇವರು ಇದನ್ನು ಒಪ್ಪುತ್ತಾನೊ ನನಗಂತೂ ಅರ್ಥವಾಗುವುದಿಲ್ಲ. ರಾಮನಂತೂ ಇದನ್ನು ಮೆಚ್ಚುವುದಿಲ್ಲ, ನಮ್ಮ ಸುತ್ತಮುತ್ತ ಇರುವ ಪರಿಸರದಲ್ಲಿ ಬದುಕಿರುವ ಪ್ರಾಣಿಗಳು ಬಡತನದಿಂದ ಏನು ನರಳುತ್ತಿದ್ದಾರೆ ಅವರನ್ನು ನೋಡಿಕೊಂಡರೆ ಅದೇ ದೇವರ ಪೂಜೆಯಾಗುತ್ತದೆ ನಾವು ಬಡವನಲ್ಲೇ ದೇವರನ್ನು ನೋಡಬೇಕಾಗುತ್ತದೆ. ಅವನಲ್ಲೂ ಆತ್ಮ ಇದೆ, ಅವನೂ ಬಾಳಬೇಕು ಅವನೂ ಬದುಕಬೇಕು ಇದನ್ನು ನಾವು ಯೋಚನೆ ಮಾಡದೆ ಇವರನ್ನೆಲ್ಲಾ ತುಳಿದು ಏನೋ ಸ್ವಾರ್ಥಕ್ಕೋಸ್ಕರ ದೇವಸ್ಥಾನ ಕಟ್ಟುತ್ತೇವೆ ಮಸೀದಿ ಕಟ್ಟುತ್ತೇವೆಂದು ಹೊರಟರೆ ಇದು ಅವರಿಗೂ ಸರಿಯಲ್ಲ, ನಮಗೂ ಸರಿಯಲ್ಲ. ಕೆಲವು ವಿಷಯಗಳನ್ನು ನಾನು ಹೇಳಬೇಕಾಗುತ್ತದೆ. ಮೊನ್ನೆ ತಾನೆ ಪಾಕಿಸ್ತಾನಕ್ಕೂ ಇಂಡಿಯಾಗೂ ಕ್ರಿಕೆಟ್ ಮ್ಯಾಚ್ ಆಯಿತು. ಅದರಲ್ಲಿ ಪಾಕಿಸ್ತಾನದವರು ಗೆದ್ದರು ಸಂತೋಷ. ಆದರೆ ಕೆಲವು ಕಿಡಿಗೇಡಿ ಮುಸ್ಲಿಂ ಯುವಕರು ಪಟಾಕಿ ಹಾರಿಸಿದರು. ಈ ರೀತಿ ಪಟಾಕಿ ಹೊಡೆಯುತ್ತಾರೆ ಸಿಹಿ ಹಂಚುತ್ತಾರೆ. ಈ ರೀತಿ ಏಕೆ ಮಾಡಬೇಕು. ಇದರಿಂದ ಅವರ ಅಕ್ಕಪಕ್ಕದವರು ಇವರು ಪಾಕಿಸ್ತಾನದವರು ಎಂದು ಹೇಳುತ್ತಾರೆ. ಅದು ಹಾಗೇ ಆಯಿತು. ಇದನ್ನು ದಯಮಾಡಿ ನಿಲ್ಲಿಸಬೇಕು. ನಮ್ಮ ರಾಷ್ಟ್ರದಲ್ಲಿ ನಾವು ಭಾರತೀಯರಾಗಿ ಇರುತ್ತೇವೆಂದು ಹೇಳುವುದಾದರೆ ಅವರು ಇರಲಿ ಇಲ್ಲದಿದ್ದರೆ ಹೋಗಲಿ ಎಂದು ನಾವು ಕಟ್ಟುನಿಟ್ಟಾಗಿ ಹೇಳಬೇಕಾಗುತ್ತದೆ, ಮತ್ತು ಕಾನೂನು ಏನು ಇದೆ ಅದು ಭಾರತೀಯರೆಲ್ಲರಿಗೂ ಒಂದೇ ಕಾನೂನು ನನಗೆ ಒಂದು ಕಾನೂನು ಸಿಂಧ್ಯರವರಿಗೆ ಒಂದು ಕಾನೂನು ಚಂದ್ರೇಗೌಡರಿಗೆ ಒಂದು ಕಾನೂನು ಬೇಕಾಗಿಲ್ಲ. ಎಲ್ಲರಿಗೂ ಕೂಡ ಒಂದೇ ಕಾನೂನು. ಆ ಕಾನೂನನ್ನು ನಾವು ತರಬೇಕಾಗುತ್ತದೆ. ಇದರ ಕಡೆ ಗಮನ ಕೊಡಬೇಕು. ಕಡೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ನಮ್ಮ ಬಿ.ಜೆ.ಪಿ. ಸ್ನೇಹಿತರು ಒಬ್ಬರೇ ಒಬ್ಬರು ಇಲ್ಲಿ ಇದ್ದಾರೆ. ಮೊನ್ನೆ ಶಿಲಾನ್ಯಾಸ ಮಾಡಿದರು. ಶಿಲಾನ್ಯಾಸ ಮಾಡಿ ನಾಶವಾಯಿತು, ಇನ್ನು ಸರ್ವನಾಶವಾಗುವುದಕ್ಕೆ ಈಗ ತಯಾರಾಗಿದೆ. ಮತ್ತೆ ೬ನೇ ತಾರೀಖು ಶಿಲಾನ್ಯಾಸವೆಂದು ಹೇಳುತ್ತಿದ್ದಾರೆ. ದಯಮಾಡಿ ಶ್ರೀರಾಮ ಶಿಲಾನ್ಯಾಸ ಮಾಡುವವರಿಗೆ ಒಳ್ಳೆಯ ಬುದ್ಧಿ ಕೊಡಲಿ ಸರ್ವನಾಶ ಮಾಡುವುದಕ್ಕೆ ಹೋಗುವುದು ಬೇಡ. ಈಗಾಗಲೆ ಸಾಕಷ್ಟು ಆಗಿದೆ. ಇದರಿಂದ ಸರಕಾರ ಉರುಳಿ ಹೋಯಿತು. ಇಷ್ಟು ಮಾತನ್ನು ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಕೆ. ಅನಂತಕೃಷ್ಣ (ಶಿವಾಜಿನಗರ).—ಮಾನ್ಯ ಸಭಾಧ್ಯಕ್ಷಿಣಿಯವರೆ, ಬಹಳ ಕಾಲದ ಮೇಲೆ ನನಗೆ ಅವಕಾಶ ಸಿಕ್ಕಿದೆ ನಾನು ಬಹಳ ನಿಧಾನವಾಗಿ ಮಾತನಾಡುತ್ತೇನೆ ಅದಕ್ಕೆ ಅವಕಾಶ ಕೊಡಬೇಕೆಂದು ನಾನು ಮೊದಲನೆಯದಾಗಿ ಕೇಳಿಕೊಳ್ಳುತೇನೆ. ಸಾಕಷ್ಟು ಮಾನ್ಯ ಸದಸ್ಯರು ಈ ಕೋಮುಗಲಭೆಗೆ ಮೂಲ ಕಾರಣವೇನು ಎಂದು ಹೇಳಿ ಸಾಕಷ್ಟು ವಿಚಾರವನ್ನು ನಮ್ಮ ಮುಂದಿಟ್ಟಿದ್ದಾರೆ. ಬಹಳಷ್ಟು ನಾನು ಅದನ್ನು ಒಪ್ಪುತ್ತೇನೆ. ಈಗ ಮಾನ್ಯ ಸಿಂಧ್ಯಾರವರು ಮಾನ್ಯ ಜಾಲಪ್ಪನವರು ಕೆಲವು ವಿಷಯಗಳನ್ನು ಹೇಳಿದರು. ಸಿಂಧ್ಯಾರವರು ಬಹಳ ರೋಷದಲ್ಲಿ ಹೇಳಿದರು. ಮಾನ್ಯ ಜಾಲಪ್ಪನವರು ಸ್ವಲ್ಪ ಅರ್ಧರ್ಧ ನುಂಗಿಕೊಂಡು ಹೇಳಿದರು. ಅವರಲ್ಲಿ ಒಳಾಂತರದಲ್ಲಿ ಭಾವನೆ ಏನಿದೆ ಅದನ್ನು ನಾನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ. ಈ ವಿಷಯದ ಬಗ್ಗೆ ಚರ್ಚೆ ಮಾಡಬೇಕಾದರೆ ಮೂಲಭೂತವಾಗಿ ನಾವು ಯಾವ ರಾಷ್ಟ್ರದಲ್ಲಿದ್ದೇವೆ, ಈ ರಾಷ್ಟ್ರದ ಸಂವಿಧಾನ ಏನು ಹೇಳುತ್ತದೆ ಅದಕ್ಕೆ ಬದ್ಧರಾಗಿ ನಾವು ಈ ಸದನಕ್ಕೆ ಸದಸ್ಯರಾಗಿ ಬಂದಿದ್ದೇವೆ ಮತ್ತು ನಮ್ಮ ಜವಾಬ್ದಾರಿ ಏನು ಎನ್ನುವುದನ್ನು ಅರಿತು ಈ ವಿಷಯವಾಗಿ ನಾವು ಮಾತನಾಡಬೇಕಾಗಿರುವುದು ಮೂಲ ಕರ್ತವ್ಯವಾಗಿದೆ. ನಮ್ಮ ಸಂವಿಧಾನದಲ್ಲಿ ಸೆಕ್ಯುಲರ್ ಸೋಸಿಯಲಿಸ್ಟ್ ಡೆಮಾಕ್ರಟಿಕ್ ರಿಪಬ್ಲಿಕ್ ಎಂದು ಹೇಳುತ್ತೇವೆ. ಕೇವಲ ಸಂವಿಧಾನ ಸೆಕ್ಯುಲರ್ ಎಂದು ಹೇಳಿ, ಸೆಕ್ಯುಲರಿಸಂ ಬೇಕೆಂದರೆ

ಅದು ಬರುವುದಿಲ್ಲ. ಈಗಾಗಲೇ ನಮ್ಮ ಸ್ನೇಹಿತರು ಬೆಳಕನ್ನು ಚೆಲ್ಲುತ್ತಿದ್ದರು. ಸೆಕ್ಯುಲರಿಸಂ ಎನ್ನುವುದು ಆಗಿಂದಾಗ್ಗೆ ಭಾಷಣದಲ್ಲಿ ಬರುವುದಾಗಿದರೆ ನಮ್ಮ ರಾಷ್ಟ್ರದಲ್ಲಿ ಈ ಕೋಮುಗಲಭೆಗೆ ಕಾರಣವಿರುತ್ತಿರಲಿಲ್ಲ. ಸಮಾಜವಾದ ಮತ್ತು ಜಾತ್ಯಾತೀತತೆ ಮನುಷ್ಯನ ತನ್ನ ಜೀವನದ ಕಳೆ ಆಗಬೇಕು. ಜೀವನದಲ್ಲಿ ನಡೆದುಕೊಳ್ಳುವಂಥ ಒಂದು ರೀತಿ ನೀತಿಯಾಗಬೇಕು. ರಾಜಕೀಯವಾಗಿ ಕೆಲವರು ನಾನಾ ರೂಪರೇಷೆಗಳನ್ನು ಇಟ್ಟು ಅವರ ರಾಜಕೀಯವನ್ನು ಬೆಳಸಿಕೊಂಡು ಹೋಗುವುದಕ್ಕೆ ದುರುಪಯೋಗ ಮಾಡುವುದಕ್ಕೆ ಪ್ರಯತ್ನ ಮಾಡಬಹುದು. ಆದರೆ ವೈಯಕ್ತಿಕವಾಗಿ ನಮ್ಮ ರಾಜಕೀಯ ಜೀವನದಲ್ಲಿ ನಡೆದುಕೊಳ್ಳಬೇಕಾದರೆ it must become a way of life. ಅದನ್ನು ಮಾಡಿಕೊಳ್ಳದಿದ್ದರೆ ನಾವು ಮಾತನಾಡುವಾಗ ಸ್ವಲ್ಪ ಹಿಂದುಮುಂದು ಎರಡು ಆಗುತ್ತಾ ಹೋಗುತ್ತದೆ, ಕಾಂಟ್ರಡಿಕ್ಷನ್ ಅನ್ನು ನಾವು ಸಪರ್ ಮಾಡುತ್ತೇವೆ. ನಾನಾದರೂ ಇಷ್ಟು ಹೇಳುತ್ತೇನೆ socialist secular Democratic constitution ಏನು ಹೇಳುತ್ತದೆ ಅದು ನಮ್ಮ way of life ಆಗಿ ನಮ್ಮ ಭವಿಷ್ಯದಲ್ಲಿ ನಮ್ಮ ಮಕ್ಕಳು ಇದೇ ಒಂದು ಸಂವಿಧಾನದ ಅಂಗದಲ್ಲಿ ಬೆಳೆದುಕೊಂಡು ಬರಬೇಕಾದರೆ ನಮ್ಮ ಮನೆ ಮನೆಯಲ್ಲಿ ನಮ್ಮ ಮಕ್ಕಳಿಗೆ ಈ ಬೋಧನೆ ಮಾಡಬೇಕು. ಅವರ ಜೀವನ ಅದೇರೀತಿಯಲ್ಲಿ ಬೆಳೆದುಕೊಂಡು ಹೋಗುವಹಾಗೆ ಮಾಡಬೇಕು. ನಮ್ಮಲ್ಲಿ ಕೆಲವರು ಹೇಳುತ್ತಾರೆ, ಸಮಾಜಸೇವೆ ಮಾಡುವ ಕಾಲದಲ್ಲಿ ಸಾರ್ವತ್ರಿಕ ಜೀವನದಲ್ಲಿ ನಾವು ಜಾತ್ಯಾತೀತರಾಗಿರಬೇಕು ಮತಾತೀತರಾಗಿರಬೇಕು. ನಮ್ಮ ಜಾತೀಯತೆ ಮನೆಯುವರೆಗೆ ಇದ್ದರೆ ಸಾಕು ಅದನ್ನು ಅಲ್ಲೇ ಉಳಿಸಿಕೊಳ್ಳಿಯೆಂದು ಹೇಳುತ್ತಾರೆ. ಮನೆಯಲ್ಲಿ ಜಾತಿಯನ್ನು ಇಟ್ಟುಕೊಂಡು ಮಕ್ಕಳು ಹೊರಗೆ ಬಂದಮೇಲೆ ಜಾತ್ಯಾತೀತರಾಗಿರುತ್ತಾರೆಂದು ಹೇಳುವುದು ಕಪಟ ಸನ್ಯಾಸದ ಮಾತು ಆಗುತ್ತದೆ. ಆದ್ದರಿಂದ ನಮ್ಮ ಮನೆಯಲ್ಲಿಯೇ ಜಾತ್ಯಾತೀತತೆಯ ಬೆಳವಣಿಗೆಯನ್ನು ಮುಟ್ಟಿಹಾಕಿ ಆ ರೀತಿಯ ಒಂದು ಬೋಧನೆ ಮಾಡಬೇಕು. ಮಕ್ಕಳಿಗೆ ಹೆಸರು ಇಡುವಾಗ ಜಾತಿಯ ಹೆಸರು, ಮತದ ಹೆಸರು, ಪ್ರಾಂತ್ಯದ ಹೆಸರುಗಳನ್ನು ಇಡುವುದನ್ನು ಕೈಬಿಡುವಂತಹ ಕೆಲಸವನ್ನು ಮಾಡಬೇಕು. ಅದನು ಮಾಡಿದಾಗ ತಮಗೆ ಗೊತ್ತಾಗುತ್ತದೆ. ಈ ಸೆಕ್ಯುಲರಿಸಂ ಲೈಫ್‌ನಲ್ಲಿ ಎಂತಹ ಮಹತ್ವದ ಜೀವನ ಇದೆಯೆಂದು, ಮಹತ್ತರ ರಾಷ್ಟ್ರಸೇವೆಯನ್ನು ಸಮಾಜದ ಸೇವೆಯನ್ನು ಮಾಡುವುದಕ್ಕೆ ಸಾಧ್ಯತೆಯಿದೆ ಎನ್ನುವ ಸಂತೋಷ ಆಗ ಗೊತ್ತಾಗುತ್ತದೆ. ಹೀಗೆ ಹೇಳುವಾಗ ನಮ್ಮ ಕಮ್ಯುನಲ್ ಪೊಲಿಟಿಕಲ್ ಪಾರ್ಟಿಯೆಂದು ಫಂಡಮೆಂಟಲಿಸ್ಟ್ ಎಂದು ಏನು ಹೇಳುತ್ತೇವೆ ಅವರಿಗೊಂದು ಮಾತು ಹೇಳುವುದಕ್ಕೆ ಬಯಸುತ್ತೇನೆ. ನಾವು ರಾಷ್ಟ್ರೀಯತೆಯನ್ನು ಉಳಿಸಿಕೊಳ್ಳಬೇಕಾದರೆ, ರಾಷ್ಟ್ರಪ್ರೇಮ ನಮ್ಮಲ್ಲಿ ಬೆಳೆಯಬೇಕಾದರೆ.

ಈ ರಾಷ್ಟ್ರದ ೭೦-೮೦ ಕೋಟಿ ಜನ ನಾಗರೀಕರು ಏನಿದ್ದಾರೆ, ಆ ಜನಸಂಖ್ಯೆಗೆ ಅಂದರೆ ಸರ್ವರಿಗೂ ಸೇವೆ ಮಾಡುವಂಥ. ಸರ್ವರಲ್ಲೂ ಸರಿಸಮಾನತೆಯಂಥ, ಶೋಷಣೆ ರಹಿತವಾದಂಥ ಒಂದು ಸರ್ವರ ಸಹಕಾರವನ್ನು ಬೆಂಬಲವನ್ನು ಪಡೆದಂಥ, ಸೌಹಾರ್ದತೆಯನ್ನು ಪಡೆದಂಥ ಸಮಾಜವನ್ನು ಕಟ್ಟಿ ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವುದಕ್ಕೆ, ಪ್ರಗತಿಯನ್ನು ಸಾಧಿಸುವುದಕ್ಕೆ ಮಾತ್ರ ಉಂಟೋ ? ಇಲ್ಲವೇ ಕೊನೆಯ ಒಂದು ವರ್ಗ ನಾವೇ ರಾಷ್ಟ್ರೀಯರು ನಮ್ಮಲ್ಲೇ ರಾಷ್ಟ್ರಪ್ರೇಮ ಇದೆ. ಆ ರಾಷ್ಟ್ರ ಪ್ರೇಮ, ರಾಷ್ಟ್ರದ ಒಂದು ಪ್ರಗತಿಯನ್ನು ನಮ್ಮಲ್ಲೇ ಹಂಚಿಕೊಳ್ಳೋಣ ಎನ್ನುವಂಥ ಪ್ರಯತ್ನವನ್ನು ಮಾಡಿದರೆ ಈ ರಾಷ್ಟ್ರದಲ್ಲಿ ಏಕತೆ ಇರುತ್ತದೆಯೋ ? ರಾಷ್ಟ್ರದ ಭದ್ರತೆ ಇರುತ್ತದೆಯೆ ? ರಾಷ್ಟ್ರದಲ್ಲಿ ಐಕ್ಯತೆ ಇರುತ್ತದೆಯೆ ? ರಾಷ್ಟ್ರದ ಒಂದು ಸಮಗ್ರವಾದ ಸರ್ವದಿಕ್ಕಿನ ಸಾಮಾಜಿಕ, ಆರ್ಥಿಕ ಬೆಳವಣಿಗೆ ಪ್ರಗತಿಗೆ ಸಾಧ್ಯವಾಗುತ್ತದೆಯೋ ? ಎಂದು ಈ ರಾಷ್ಟ್ರದಲ್ಲಿ ಅಂತಹ ಒಂದು ಆರ್ಥಿಕ, ಸಾಮಾಜಿಕ ಬೆಳವಣಿಗೆ ಇರುವುದಿಲ್ಲ, ಅದರ ಸರಿಸಮಾನತೆ ಇರುವುದಿಲ್ಲ ಆಗ ಈ ರಾಷ್ಟ್ರದಲ್ಲಿ ಯಾವುದೇ ದಿಕ್ಕಿನಲ್ಲೂ ಕೂಡ ಶಾಂತಿವಾತಾವರಣ ಇರುವುದಕ್ಕೆ ಸಾಧ್ಯವಾಗುತ್ತದೆಯೆ ? ಎಂದು ಶಾಂತಿಯ ವಾತಾವರಣ ಇರುವುದಿಲ್ಲ, ಅಲ್ಲಿ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಾಗುತ್ತದೆಯೆ ? ಈ ವಿಷಯವನ್ನು ನಾವು ತಿಳಿದುಕೊಳ್ಳಬೇಕಾಗಿದೆ ಮತ್ತು ನಮ್ಮ ೮೦ ಕೋಟಿ ಜನಸಂಖ್ಯೆಯ ಒಂದು ಭಾಗದವರು ನಮ್ಮದೇ ಆದ ಒಂದು ರಾಷ್ಟ್ರ, ನಮ್ಮದೇ ಆದ ಒಂದು ಜೀವನ ಉಳಿದವರೆಲ್ಲ ನಾವು ಹೇಳಿದ ಹಾಗೆ ಇರಬೇಕು ಎಂದು ಹೇಳುವುದಾದರೆ, ಈ ಭಾರತದಲ್ಲಿರುವ ಒಂದು ಮತದವರು ವಿಶ್ವದಾದ್ಯಂತ ಆ ಬಹುಮತವನ್ನು ಸಾರುವಂಥ ಒಂದು ಶಕ್ತಿಯನ್ನು ಹೊಂದಲು ಸಾಧ್ಯವಾಗುತ್ತದೆಯೆ ? ಅವರು ಪ್ರಭಾವವನ್ನು ಬೀರುವಂಥಾದ್ದು ಇದೆಯೆ ? ಅವರಲ್ಲಿ ಒಂದು ಮೊರಲ್ ಕರೇಜ್ ಇರುವುದಕ್ಕೆ ಸಾಧ್ಯವಿದೆಯೆ ? ಬೇರೆ ರಾಷ್ಟ್ರಗಳಿಗೆ ಮಾರ್ಗದರ್ಶನ ಕೊಡುವುದಿರಲಿ. ಅವರಲ್ಲಿ ಸರಿಸಮಾನತೆಯ ಒಂದು ಜೀವನವನ್ನು ಅಂತರಾಷ್ಟ್ರ ಮಟ್ಟದಲ್ಲಿ ನಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೆ ? ನಾವು ಅಂತರಾಷ್ಟ್ರ ಮಟ್ಟದಲ್ಲಿ ನಾವೇ ಬೇರೆ ಒಂದು ಭಾಗದ ಜನ ಎಂದು ಹೇಳುವುದಾದರೆ ನಮ್ಮ ವ್ಯಕ್ತಿತ್ವಕ್ಕೆ ಯಾವ ಗೌರವ ದೊರೆತೀತು ? ಈ ವಿಶ್ವದಾದ್ಯಂತ ಏನೊಂದು

ಸಹಕಾರವನ್ನು ನಾವು ಪಡೆಯಬೇಕಾಗಿದೆ, ನಮ್ಮ ಪ್ರಗತಿಯನ್ನು ಸಾಧಿಸಬೇಕಾಗಿದೆ, ಅಂತಹ ಒಂದು ಸಾಧನೆಯನ್ನು ನಾವು ಮಾಡುವುದಕ್ಕೆ ಆಗುತ್ತದೆಯೆ ? ಆರ್ಥಿಕವಾಗಿ ಯಾವ ಬೆಳವಣಿಗೆ ಆಗುತ್ತದೆ. ಮತ್ತು ಭಾರತದಿಂದ ಹೊರರಾಷ್ಟ್ರಗಳಿಗೆ ಹೋಗಿ ಭಾರತೀಯರೇನು ನೆಲೆಸಿದ್ದಾರೆ ಅವರು ತಮ್ಮ ಜೀವನವನ್ನು ಶಾಂತಿಯುತವಾಗಿ ನಡೆಸಲು ಸಾಧ್ಯವಾಗುತ್ತದೆಯೆ ? ಅವರಿಂದ ನಾವು ನಮ್ಮ ರಾಷ್ಟ್ರಕ್ಕೆ ಪ್ರಗತಿಯನ್ನು ಸಾಧಿಸುವಂಥ ರೀತಿಯಲ್ಲಿ ಸಹಾಯವನ್ನು ಪಡೆಯುವುದಕ್ಕೆ ಆಗುತ್ತದೆಯೆ ? ಅವರ ಜೀವನದಲ್ಲಿ ಅಶಾಂತಿ ಉಂಟಾದರೆ, ಅವರ ಸಮಾಜದಲ್ಲಿ ಅಶಾಂತಿ ಉಂಟಾದರೆ ಅವರನ್ನು ಭಾರತಕ್ಕೆ ವಾಪಸ್ ಕರೆದುಕೊಂಡು ಬಂದು ಅವರಿಗೆ ಸರಿಯಾದ ಜೀವನವನ್ನು ಕೊಡುವಂಥ ಶಕ್ತಿ ನಮ್ಮ ರಾಷ್ಟ್ರಕ್ಕೆ ಇದೆಯೆ ? ಈ ಮೂಲಭೂತ ಪ್ರಶ್ನೆಗಳನ್ನು ನಾವು ಗಮನದಲ್ಲಿಟ್ಟುಕೊಂಡು ಆ ಮೇಲೆ ಕೋಮು ಗಲಭೆ ಏತಕ್ಕೆ, ಎಲ್ಲಿಂದ ಬಂತು, ಹೇಗೆ ಬಂತು, ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ ಅನ್ನುವ ಮಾತನ್ನು ಮೂಲಭೂತವಾಗಿ ತಿಳಿದುಕೊಳ್ಳಬೇಕಾಗಿ ಬರುತ್ತದೆ. ರಾಷ್ಟ್ರಪ್ರೇಮ ಎನ್ನುವುದನ್ನು ಹೇಳುವಾಗ ಯಾವರೀತಿ ಭಗವಂತನ ಹೆಸರನ್ನು ಹೇಳುವಾಗ ಒಂದು ಡೆಫಿನಿಷನ್ ಕೊಡಲಿಕ್ಕೆ ಸಾಧ್ಯವಿಲ್ಲವೋ, ಸತ್ಯವನ್ನು ಹೇಳುವಾಗ ಹೇಗೆ ಒಂದು ಡೆಫಿನಿಷನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೋ, ಅದೇರೀತಿ ಹಾನೆಸ್ಟಿ ಅನ್ನುವುದಕ್ಕೆ ಯಾವ ಒಂದು ಡೆಫಿನಿಷನ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೊ. ಹಾಗೆ ಅದಕ್ಕೆ ಒಂದು ಲಿಮಿಟೇಷನ್ಸ್ ಇಲ್ಲ. ಅದೇರೀತಿ ರಾಷ್ಟ್ರಪ್ರೇಮಕ್ಕೆ ಯಾವುದೇ ಒಂದು ಲಿಮಿಟೇಷನ್ಸ್ ಇಲ್ಲ. ಅದು ರಾಷ್ಟ್ರದ ಪ್ರತಿಯೊಂದು ಭಾಗಕ್ಕೆ, ಪ್ರತಿಯೊಬ್ಬ ನಾಗರೀಕನಿಗೆ ನಮ್ಮ ರಾಷ್ಟ್ರಪ್ರೇಮದಿಂದ ಮಾರ್ಗದರ್ಶಕವಾಗುವಂತೆ ಇರಬೇಕು. ಇದು ಇದ್ದಾಗ ಮಾತ್ರ ಅದು ರಾಷ್ಟ್ರಪ್ರೇಮವಾಗುತ್ತದೆ. ಜಾತಿಯ ಹೆಸರಿನಲ್ಲಾಗಲೀ, ಮತದ ಹೆಸರಿನಲ್ಲಾಗಲೀ, ಭಾಷೆಯ ಹೆಸರಿನಲ್ಲಾಗಲೀ, ತಮ್ಮದೇ ಆದ ದೊಡ್ಡಸ್ತಿಕೆಯನ್ನು ತೋರಿಸಿ, ಉಳಿದವರ ವಿಷಯದಲ್ಲಿ ವಿಷವನ್ನು ಕಾರುವುದಾದರೆ ಅದು ರಾಷ್ಟ್ರಪ್ರೇಮಕ್ಕೆ ಸಂಬಂಧವಿಲ್ಲ ರಾಷ್ಟ್ರದ ಬೆಳವಣಿಗೆಗೆ ಸಂಬಂಧವಿಲ್ಲ ಎನ್ನುವ ಮಾತನ್ನು ನಾವು ರಾಷ್ಟ್ರಪ್ರೇಮಿಗಳಾಗಿ ಮೂಲಭೂತವಾಗಿ ಅರ್ಥಮಾಡಿಕೊಳ್ಳಬೇಕಾದದ್ದು ಬಹಳ ಮುಖ್ಯವಾದ ವಿಷಯವೆಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಬೆಳಿಗ್ಗೆಯಿಂದ ರಾತ್ರಿವರೆಗೆ ರಾಷ್ಟ್ರದ ಹೆಸರನ್ನು ಹೇಳಿ, ಜಾತಿಯ, ಮತದ ಹೆಸರನ್ನು ಹೇಳಿ, ಲಂಚರುಷವತ್ತುಗಳಿಂದ ಅನಿಷ್ಟ ಜೀವನ ನಡೆಸಿ, ಅದಕ್ಷತೆಯ ಆಡಳಿತವನ್ನು ನಡೆಸಿಕೊಂಡು, ಅಮಾನುಷವಾಗಿ ಜೀವನ ನಡೆಸಿಕೊಂಡು ಬರತಕ್ಕವರು ರಾಷ್ಟ್ರಪ್ರೇಮ ಎಂದು ಹೇಳುವುದಿಲ್ಲ. ದೇವರ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ ಮತದ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಶೇಖರಣೆ ಮಾಡಿ, ಅವರದೇ ಆದ ಒಂದು ವರ್ಗ ಏನಿದೆ, ಅದನ್ನು ಬೆಳೆಸಿಕೊಂಡು ಹೋಗತಕ್ಕವರಿಗೆ ರಾಷ್ಟ್ರಪ್ರೇಮಕ್ಕೂ, ರಾಷ್ಟ್ರೀಯತೆಗೂ, ರಾಷ್ಟ್ರಕ್ಕೂ ಸಂಬಂಧ ಇಲ್ಲ. ಇವರು ರಾಷ್ಟ್ರದ್ರೋಹಿಗಳು, ಸಮಾಜದ್ರೋಹಿಗಳು ಎಂಬುದನ್ನು ನಾವು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕಾಗಿ ಬರುತ್ತದೆ.

೪–೨೫ ಪಿ.ಎಂ.

ಈಗ ಮುಖ್ಯವಾಗಿ ಒಂದು ವಿಷಯವನ್ನು ನಮ್ಮ ಸ್ನೇಹಿತರು ಹೇಳುತ್ತಿದ್ದರು. ಈ ಕೋಮು ಗಲಭೆಗೆ ಬಿ.ಜೆ.ಪಿ.ಯವರಾಗಿರಲೀ, ಅಥವಾ ವಿಶ್ವಹಿಂದೂಪರಿಷತ್‌ನವರಾಗಿರಲಿ ಜವಾಬ್ದಾರರು ಎಂದು ಆಕ್ಷೇಪಣೆ ಮಾಡುವುದು ಸರಿಯಲ್ಲವೆಂದು ಹೇಳಿದರು. ಏತಕ್ಕೆ ಇಲ್ಲ ಸ್ವಾಮಿ, ಶ್ರೀಮಾನ್ ಜಾಲಪ್ಪನವರು ಮಾತನಾಡುವಾಗ ಒಂದು ಮಾತು ಹೇಳಿದರು, ಸರಿಯಾಗಿ ಹೇಳಿದರು. ಅವರು ಯಾವ ಉತ್ಸಾಹದಿಂದ ಹೇಳಬೇಕಾಗಿತ್ತೋ ಧೈರ್ಯದಿಂದ ಹೇಳಬೇಕಾಗಿತ್ತೋ, ಆ ರೀತಿ ಹೇಳಲಿಲ್ಲವೆಂದು ನಾನು ಅವರ ಮೇಲೆ ಆಪಾದನೆ ಮಾಡುತ್ತೇನೆ. ವಿಶ್ವಹಿಂದೂಪರಿಷತ್ ಅಥವಾ ಬಿ.ಜೆ ಪಿ ಯವರ ಕೂಗು ಏನಿದೆ, ಇದು ಸಾಧಾರಣವಾದ ಕೂಗು ಅಲ್ಲ ಮುಸಲ್ಮಾನರ ವಿರುದ್ಧ ಕೂಗು ಅಲ್ಲ ಮುಸಲ್ಮಾನರ ಹೆಸರಿನಲ್ಲಿ ತನ್ನದೇ ಒಂದು ದೃಷ್ಟಿಕೋನ ಈ ಹರಿಜನ ಗಿರಿಜನ, ಹಿಂದುಳಿದವರ ಮೇಲೆ ಇದೆ. ಬರುಬರುತ್ತಾ ಅವರ ಮೇಲೆ ಒಂದು ಆಕ್ರೋಶವನ್ನು ತೋರಿಸುತ್ತಾರೆ. ನಮ್ಮ ರಾಷ್ಟ್ರವನ್ನು ಭಾಗ ಭಾಗವಾಗಿ ಮಾಡಿ, ನಮ್ಮ ಜನತೆಯನ್ನು ತುಂಡು ತುಂಡಾಗಿ ಮಾಡಿ, ಮೇಲ್ಜಾತಿಯವರ ಹೆಸರಿನಲ್ಲಿ, ಮೇಲ್ವರ್ಗದವರ ಹೆಸರಿನಲ್ಲಿ ಬೆಳೆದುಕೊಂಡು ಬಂದಿದ್ದಾರೆ, ಅವರದೇ ಒಂದು ಮನಾಪಲ್ಲಿ ಮಾಡಿಕೊಂಡು ಬಂದಿದ್ದಾರೆ ಬರುಬರುತ್ತಾ ಅಂದರೆ ಸ್ವಾತಂತ್ರ್ಯಕ್ಕೆ ಮೊದಲು. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ, ಸ್ವಾತಂತ್ರ್ಯ ಬಂದವೇಲೆ ಕೂಡ ಎಲ್ಲಿ ಕೈಬಿಟ್ಟು ಹೋಗುತ್ತಾರೋ ಎಂಬ ಭಯ ಬಂದಿದೆ. ಈ ರೀತಿಯ ಭಯವನ್ನು ತಂದು, ಮತ್ತೆ ವಾಪಸ್‌ತೆಗೆದುಕೊಳ್ಳತಕ್ಕ ಒಂದು ದೊಡ್ಡ ಪ್ರಯತ್ನವನ್ನು ಮಾಡುತ್ತಿದ್ದಾರೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕಾಗಿದೆ. ಹಿಂದುಳಿ

ದವರು ಯಾರೇ ಇರಲಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದವರು ಯಾರೇ ಆಗಲೀ, ಯಾವುದೇ ಮತಕ್ಕೆ ಸೇರಿರಲಿ, ಯಾವುದೇ ಜಾತಿಗೆ ಸೇರಿರಲಿ, ಭಾರತಾದ್ಯಂತ ಎಲ್ಲೇ ನೆರಸಿರಲಿ, ಅವರು ಕಣ್ಣು ತೆರದು ನೋಡಬೇಕಾಗಿದೆ. ವಿಶ್ವಹಿಂದೂಪರಿಷತ್, ಬಿ.ಜೆ.ಪಿ; ಜನಸಂಘ, ಆರ್.ಎಸ್.ಎಸ್.ಅಥವಾ ಶಿವಸೇನೆ ಯಾವ ಹೆಸರನ್ನೇ ಹೇಳಲಿ, ಡೈರೆಕ್ಟಾಗಿ ಶೋಷಿತ ವರ್ಗ ಏನಿದೆ, ಆರ್ಥಿಕವಾಗಿ, ಸಾಮಾಜಿಕವಾಗಿ, ಸಹಸ್ರಾರು ವರ್ಷಗಳಿಂದ ಧರ್ಮದ ಹೆಸರಿನಲ್ಲಿ, ಜಾತಿಯ ಹೆಸರಿನಲ್ಲಿ, ಅವರ ಮೇಲೆ ಟಾರ್ಗೆಟ್ ಇದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ನಮ್ಮ ರಾಷ್ಟ್ರದ ದುರಾದೃಷ್ಟ. ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಯಾವ ಹಿಂದುಳಿದ ವರ್ಗ ಇದ್ದಾರೆ, ಶೋಷಿತರಾಗಿದ್ದಾರೆ, ಆರ್ಥಿಕವಾಗಿ, ಸಾಮಾಜಿಕವಾಗಿ ಸಹಸ್ರಾರು ವರ್ಷಗಳಿಂದ ಅವರ ಕಣ್ಣಿಗೆ ಮಣ್ಣೆರಚಿ, ಅವರನ್ನು ತನ್ನವರೆಂದು ಸೇರಿಸಿಕೊಂಡು, ಅವರ ಮೇಲೆ ಮತ್ತೆ ಆಡಳಿತವನ್ನು ನಡೆಸುವಂಥ ಪ್ರಯತ್ನ ಮಾಡುತ್ತಿದ್ದಾರೆ ಇದನ್ನು ಹಿಂದುಳಿದವರು ಅರ್ಥಮಾಡಿಕೊಳ್ಳಬೇಕಾಗಿದೆ. ರಾಮನ ಹೆಸರಿನಲ್ಲಿ ಕಿಂದರಿಜೋಗಿ ಹಿಂದೆ ಜನ ಹೋದಹಾಗೆ, ಮಕ್ಕಳು ಹೋದಹಾಗೆ, ಇವತ್ತು ಜನ ಹೋಗುತ್ತಿದ್ದಾರೆ. ರಾಮಜ್ಯೋತಿ ಹಿಡಿದುಕೊಂಡು ಹೋಗುವಾಗ, ಯಾವ ಮೇಲ್ಜಾತಿಯವರಾಗಿರಲಿ ಆರ್ಥಿಕವಾಗಿ ಮುಂದುವರಿದವರಾಗಿರಲಿ ಸಾಮಾಜಿಕವಾಗಿ ಮುಂದುವರಿದವರಾಗಿರಲಿ ಏನೊಂದು ದೊಡ್ಡ ಕೂಗು ಕೂಗುತ್ತಿದ್ದಾರೆ, ಎಲ್ಲಿ ಮುಂದೆ ನಿಂತಿದ್ದಾರೆ, ಎಷ್ಟು ಜನರು ಹೋಗಿದ್ದಾರೆ. ಕರ್ನಾಟಕದಿಂದ ಕರಸೇವೆಗೆ ಹೋದವರಾಗಿರಲಿ, ಈ ರೀತಿ ಹೋದವರಲ್ಲಿ ಜಾತಿ, ಜಾತಿಯನ್ನು ವಿಂಗಡಿಸಿ ನೋಡುವುದಾದರೆ, ಯಾವ ಜಾತಿಯವರು ಹೆಚ್ಚು ಹೋಗಿದ್ದಾರೆ, ಯಾರು ಏಟು ತಿಂದಿದ್ದಾರೆ, ಯಾರು ನಷ್ಟ ಪಡೆದಿದ್ದಾರೆ ಎಂಬುದನ್ನು ನೋಡಬೇಕಾಗುತ್ತದೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನು ಅಲಂಕರಿಸಿದರು)

ನಾನಾದರೂ ಇಷ್ಟರಮಟ್ಟಿಗೆ ಹೇಳುತ್ತೇನೆ. ಯಾರು ಕಾರ್ಮಿಕರು, ಶ್ರಮಜೀವಿಗಳು ಇದ್ದಾರೆ, ಅವರು ಎಲ್ಲೇ ಇರಲಿ, ಯಾರು ಯಾರು ಬಹಳ ಕಾಲದಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ಶೋಷಣೆಗೆ ಗುರಿಪಟ್ಟಿದ್ದಾರೆ ಅವರು ಕಣ್ತೆರದು ನೋಡಬೇಕು. ರಾಮಜ್ಯೋತಿ ಹೆಸರಿನಲ್ಲಾಗಲಿ, ರಾಮನ ಹೆಸರಿನಲ್ಲಾಗಲಿ, ರಾಮ ಮಂದಿರದ ಹೆಸರಿನಲ್ಲಾಗಲೀ ಯಾವ ರೀತಿಯ ಅನುಕೂಲವೂ ಆಗುವುದಿಲ್ಲ. ಅನುಕೂಲ ಆಗುತ್ತೋ ಏನೋ ಎಂದು ಬಹಳ ಕಾಲದಿಂದ ದೇವರ ಹೆಸರಿನಲ್ಲಿ, ಪ್ರೀತಿ, ವಿಶ್ವಾಸವನ್ನು ಇಡುವುದು ಸಹಜ. ದೇವರ ಹೆಸರಿನಲ್ಲಿ ಭಯಪಟ್ಟು, ಭಯದಿಂದ ತಮ್ಮ ಜೀವನ ನಡೆಸಿಕೊಂಡು ಬರುತ್ತಿದ್ದರು. ನಮ್ಮ ಆತ್ಮ ಶೋಧನೆ ಮಾಡದೇ, ಇಂತಹ ಹಿಂದುಳಿದ, ಶೋಷಿತ ವರ್ಗವನ್ನು, ಬಿ.ಜೆ.ಪಿ. ಆಗಿರಲಿ, ವಿಶ್ವಹಿಂದೂಪರಿಷತ್ ಆಗಿರಲಿ, ಆರ್.ಎಸ್.ಎಸ್. ಆಗಿರಲಿ ಶಿವಸೇನೆ ಆಗಿರಲಿ, ಇದು ಯಾವುದೇ ಒಂದು ಕೋಮು ಇಡೀ ಭಾರತವನ್ನು ಎತ್ತಿ ಕಟ್ಟುವ ಪ್ರಯತ್ನವನ್ನು ಮಾಡುತ್ತಿದ್ದಾರೆ, ಇವನ್ನು ನುಚ್ಚುನೂರಾಗಿ ಚೂರು ಚೂರಾಗಿ ಮಾಡುವ ಪ್ರಯತ್ನ ಮಾಡುತ್ತಾರೆ, ಇದನ್ನು ನಾವು ದಿಟ್ಟತನದಿಂದ ಎದುರಿಸಬೇಕು. ಇದು ಪ್ರತಿಯೊಬ್ಬ ಶೋಷಿತವರ್ಗದವರ ಕರ್ತವ್ಯ ಎನ್ನುವುದನ್ನು ಈ ಸಂದರ್ಭದಲ್ಲಿ ಬಹಳ ಆತ್ಮೀಯತೆಯಿಂದ, ಬಹಳ ಕಳಕಳಿಯಿಂದ ಹೇಳಬಯಸುತ್ತೇನೆ ಇದನ್ನು ಅರ್ಥಮಾಡಿಕೊಳ್ಳದೇ ಹೋದರೆ, ಏನು ಬಹಳ ಕಾಲದಿಂದ ಶೋಷಣೆ ನಡೆಯುತ್ತಾ ಬಂದಿದೆ, ಆರ್ಥಿಕವಾಗಿ, ಸಾಮಾಜಿಕವಾಗಿ ಇವತ್ತು ಅದಕ್ಕೆ ಹೊಸ ರೂಪವನ್ನು ರಾಜಕೀಯ ಶಕ್ತಿಯನ್ನು ಪಡೆಯಬೇಕಾಗಿದೆ. ಈ ರೀತಿಯ ಶೋಷಣೆಯನ್ನು ಮುಂದುವರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರ ಬಗ್ಗೆ ನಾವು ಯೋಚನೆ ಮಾಡಬೇಕಾಗಿದೆ. ರಾಷ್ಟ್ರಾದ್ಯಂತ ಕೇಂದ್ರದಲ್ಲಿ ಅಧಿಕಾರವನ್ನು ಪಡೆಯಬೇಕೆಂಬ ಉದ್ದೇಶದಿಂದ ಈ ರೀತಿಯ ಚಟುವಟಿಕೆಗಳು ನಡೆಯುತ್ತಿವೆ. ಅವರಿಗೆ ರೈಟ್ಸ್ ಇದೆ, ಇಲ್ಲವೆಂದು ಹೇಳುವುದಿಲ್ಲ.

ನಮ್ಮ ಒಂದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಯಾರು ಬೇಕಾದರೂ ಅಧಿಕಾರಕ್ಕೆ ಬರಬಹುದು, ಬರುವುದಕ್ಕೆ ಸಾಧ್ಯ ಇದೆ, ಅನುಕೂಲ ಇದೆ. ಆದರೆ ಯಾವ ಆಧಾರದ ಮೇಲೆ ಬರಬೇಕು ? ಸೆಕ್ಯುಲರ್, ಡೆಮಾಕ್ರೆಟಿಕ್, ಸೋಷಿಯಲಿಸ್ಟಿಕ್ ಸಿಸ್ಟಮ್ ಪ್ರಕಾರ ಬರಬೇಕೋ, ಹಿಂದೂ ಮತದ ಹೆಸರಿನಲ್ಲಿ, ಮುಸಲ್ಮಾನ್ ಮತದ ಹೆಸರಿನಲ್ಲಿ ಬರುವುದಕ್ಕೆ ಸಾಧ್ಯ ಉಂಟೋ ಎಂದು ಯೋಚನೆ ಮಾಡಬೇಕಾಗಿದೆ. ಆದುದರಿಂದ ಹಿಂದುಳಿದ ವರ್ಗದವರು, ಆರ್ಥಿಕ ಮತ್ತು ಸಾಮಾಜಿಕವಾಗಿ ಶೋಷಣೆಗೆ ಒಳಗಾಗಿರುವವರು ಯಾರಿದ್ದಾರೆ ಅವರು ಇದನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಯಾವುದೇ ಒಂದು ಧರ್ಮ ಏನು ಹೇಳುತ್ತದೆ ? ಏನು ಬೋಧನೆ ಮಾಡುತ್ತದೆ ? ಯಾವುದೇ ಒಂದು ಧರ್ಮ ಮಾನವತೆಯ ಒಂದು ಧರ್ಮವನ್ನು ಮಾತ್ರ ಹೇಳುತ್ತದೆ. ಯಾರು ಮಾನವತೆಯನ್ನು ಉಳಿಸಿಕೊಂಡು ಬರುತ್ತಾರೆ, ಮಾನವೀಯತೆಯಿಂದ, ಪ್ರತಿಯೊಂದು ಗುಂಪು, ಜಾತಿಯವರು ಯಾರೇ ಇರಲಿ, ಯಾರು ಆರ್ಥಿಕ ಮತ್ತು ಸಾಮಾಜಿಕವಾಗಿ ಶೋಷಣೆಗೆ ಒಳಪಟ್ಟಿದ್ದಾರೆ, ಅವರನ್ನು

ಶೋಷಣೆಯಿಂದ ಬಿಡುಗಡೆ ಮಾಡುವಂತಹ ಮನೋಭಾವನೆ ಯಾವುದು ಇದೆ, ಅದೇ ಮಾನವೀಯತೆ. ಅದನ್ನು ಬಿಟ್ಟು ಗುಂಪು, ಗುಂಪು ಜಾತಿ ಜಾತಿ ಹೆಸರಿನಲ್ಲಿ ವರ್ಗ ಘರ್ಷಣೆಯನ್ನು ತಂದು, ಮೇಲ್ವರ್ಗದ ಸ್ವಾರ್ಥಕ್ಕಾಗಿ ಇದನ್ನು ನಡೆಸಿಕೊಂಡು ಬರತಕ್ಕಂಥ ಕೆಲಸ ಏನಿದೆ ಇದು ಸರಿಯಲ್ಲ. ರಕ್ತಪಾತವಾದರೂ ಚಿಂತೆ ಇಲ್ಲ ನಾವು ಮುಸಲ್ಮಾನರ ವಿರುದ್ಧ ಹೋರಾಟ ಮಾಡುತ್ತೇವೆಂದು ಹೇಳುತ್ತಾ, ನಾವು ಮುಸಲ್ಮಾನರ ವಿರುದ್ಧ ಇಲ್ಲ, ಮುಸಲ್ಮಾನರೂ ಕೂಡಾ ಪೂಜೆಯಲ್ಲಿ ಬಂದಿದ್ದರು. ರಥಯಾತ್ರೆಯಲ್ಲಿ ಬಂದು ಹೂವಿನಹಾರ ಹಾಕಿದ್ದಾರೆ, ಪೂಜೆಯಲ್ಲಿ ಭಾಗವಹಿಸಿ, ಮಂಗಳಾರತಿ ಮಾಡಿ, ಮಂಗಳಾರತಿ ತೆಗೆದುಕೊಂಡು ಹೋಗಿದ್ದಾರೆ ಎಂದು ಹೇಳುವ ಮಾತು ಏನಿದೆ ಅದು ಅರ್ಥಹೀನ ಮಾತು ಎಂದು ಹೇಳಬೇಕಾಗಿದೆ. ಇವತ್ತು ನಾವು ಹೇಳಿಕೊಳ್ಳಬಹುದು, ಆಡಳಿತ ಪಕ್ಷದಿಂದ ಹೇಳಬಹುದು, ಮಂತ್ರಿಗಳು ಹೇಳಬಹುದು, ಮುಖ್ಯಮಂತ್ರಿಗಳು ಹೇಳಬಹುದು. ಇವತ್ತು ನಮ್ಮ ರಾಜ್ಯದಲ್ಲಿ ಒಂದು ಶಾಂತಿಯುತ ವಾತಾವರಣ ಉಂಟಾಗಿದೆ, ಬಹಳ ಪ್ರಗತಿ ಸಾಧನೆಯಾಗಿದೆ ಎಂದು ಹೇಳಬಹುದು, ಕಳೆದ ಎರಡು ತಿಂಗಳುಗಳ ಕಾಲ ಯಾವ ಪರಿಸ್ಥಿತಿ ಇತ್ತು ಅದು ಇವತ್ತು ಕಡಿಮೆಯಾಗಿದೆ, ಶಾಂತವಾತಾವರಣ ಉಂಟಾಗಿದೆ. ಅದು ಪೋಲೀಸರ ಶಕ್ತಿಯಿಂದ ಆಗಿದೆ, ಪೋಲೀಸರ ದಕ್ಷತೆಯಿಂದ ಆಗಿದೆ, ಪೋಲೀಸರ ನಿಷ್ಠೆಯಿಂದ ಆಗಿದೆ ಎಂದು ಹೇಳಬಹುದು. ಅದನ್ನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಕಣ್ಣು ಬಿಟ್ಟು ನೋಡಿ ಅರ್ಥ ಮಾಡಿಕೊಳ್ಳಬೇಕು ಇವತ್ತು ರಾಜ್ಯದಲ್ಲಿ ಶಾಂತ ವಾತಾವರಣ ಇರುವುದಕ್ಕೆ ಅವಕಾಶ ಇದೆ ಎಂದು ಹೇಳಿದರೂ ಸಹ ಅದು ಸೈಲೆನ್ಸ್ ಆಫ್ ಗ್ರೇವ್ ಯಾರ್ಡ್ ಆಗಿದೆ ಎಂಬ ಮಾತನ್ನು ಹೇಳುತ್ತೇನೆ. ಯಾವ ಒಂದು ಅಲ್ಪಸಂಖ್ಯಾತ ಜನ ಎಷ್ಟು ರೋಷದಿಂದ ಹೊರಕ್ಕೆ ಬರಬೇಕಾಗಿತ್ತೋ ಆ ಸಂದರ್ಭದಲ್ಲಿ ಅಷ್ಟು ರೋಷದಿಂದ ಹೊರ ಬರಲಿಲ್ಲ. ಅವರು ಪೆಟ್ಟು ತಿಂದು, ಏಟು ತಿಂದು ಮೂಲೆಯಲ್ಲಿ ಕುಳಿತಿದ್ದಾರೆ. ತಲೆತಗ್ಗಿಸಿಕೊಂಡು ಕುಳಿತಿದ್ದಾರೆ. ಆಸ್ತಿಪಾಸ್ತಿಗಳಿಗೆ ಧಕ್ಕೆ ಮಾಡಿಕೊಂಡು ಮೂಲೆಯಲ್ಲಿ ಕುಳಿತಿದ್ದಾರೆ, ತಲೆ ತಗ್ಗಿಸಿ ಕುಳಿತಿದ್ದಾರೆ, ಅವರ ತೋಟಗಳು ಭಸ್ಮವಾಗಿವೆ. ಮಾನ್ಯ ಸಿಂಧ್ಯಾರವರು ಹೇಳಿದಹಾಗೆ ಪ್ರತಿ ಹಳ್ಳಿ ಹಳ್ಳಿಯಲ್ಲೂ ಭಯದಿಂದ ಜೀವನ ನಡೆಸುತ್ತಿದ್ದಾರೆ. ಅವರಿಗೆ ಜೀವವನ್ನು ಕೈಯಲ್ಲಿಟ್ಟುಕೊಂಡು ಎಲ್ಲಿ ಹೋಗೋಣ ಎಂಬ ಭಯ ಇದೆ. ಘರ್ಷಣೆಗೆ ಎರಡು ಕೈ ಬೇಕಾಗುತ್ತದೆ. ಒಂದು ಕೈ ಮಾತ್ರ ಘರ್ಷಣೆ ಮಾಡುವುದಕ್ಕೆ ಹೊರಟಿದೆ. ಎರಡನೇ ಕೈ ಮುಂದೆ ಬಾರದಿರುವುದರಿಂದ ಪೂರ್ತಿ ಘರ್ಷಣೆ ಆಗುವುದಕ್ಕೆ ಸಾಧ್ಯವಾಗಿಲ್ಲ. ಯಾರು ಇವತ್ತು ಭಯಬಿದ್ದು, ಭೀತಿಯಿಂದ ಏನೂ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಮುಂದೆ ಬಂದಿಲ್ಲ, ರಿಯಾಕ್ಟ್ ಆಗುವುದಕ್ಕೆ ಮುಂದೆ ಬರುತ್ತಿಲ್ಲ ಅವರನ್ನು ನಾವು ಕನ್‌ಗ್ರಾಜುಲೇಟ್ ಮಾಡಬೇಕಾಗಿದೆ. ಅವರ ಭಯವನ್ನು ಹೋಗಲಾಡಿಸಬೇಕಾದುದು ಮೆಜಾರಿಟಿ ಕಮ್ಯುನಿಟಿಯ ಮತ್ತು ರಾಜ್ಯ ಸರಕಾರದ ಮೂಲಭೂತ ಕರ್ತವ್ಯ, ಜವಾಬ್ದಾರಿ ಎಂಬ ಮಾತನ್ನು ಹೇಳುತ್ತೇನೆ. ಅವರು ಇವತ್ತು ಜೀವನ ನಡೆಸಬೇಕಾಗಿದ್ದರೆ, ಯಾವುದೇ ಕಾರಣದಿಂದ ಭಯಭೀತಿ ಅವರ ಆತ್ಮದಲ್ಲಿ ಇರಬಾರದು. ಧೈರ್ಯದಿಂದ, ಶೂರರಾಗಿ, ಜಾಗೃತರಾಗಿ, ಜೀವನ ನಡೆಸಿದರೆ ಮಾತ್ರ ನಮ್ಮ ರಾಜ್ಯದಲ್ಲಿ, ಸಮಾಜದಲ್ಲಿ ಶಾಂತಿಯುತ ವಾತಾವರಣ ಮೂಡಬಹುದು, ಪರಸ್ಪರ ಶಾಂತಿ, ಸೌಹಾರ್ದತೆ ಮತ್ತು, ನಂಬಿಕೆ ಮೂಡಲು ಅವಕಾಶವಾದೀತು ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. Nobody can Sub-due another community and say there is peace in society. ಇದು ಸಾಧ್ಯವಿಲ್ಲದ ಮಾತು Mere submission is not the answer for peaceful atmosphere. ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈಗ ನಮ್ಮ ಸ್ನೇಹಿತರು ಕೆಲವರು ಹೇಳಿದರು. ೧೯೪೭ನೇ ಇಸವಿಯಲ್ಲಿ ರಾಷ್ಟ್ರ ವಿಭಜನೆ ಆಗುವುದಕ್ಕಿಂತ ಮುಂಚಿತವಾಗಿ ಹಾಗೂ ವಿಭಜನೆ ಆದಂಥ ಸಂದರ್ಭದಲ್ಲಿ ಯಾವ ಒಂದು ಉತ್ಕಟವಾದ ವಾತಾವರಣ ಇತ್ತು, ಭಯೋತ್ಪಾದಕ ವಾತಾವರಣ ಇತ್ತು ಆ ವಾತಾವರಣ ಇವತ್ತು ಇದೆ. ಆಗ ರಾಷ್ಟ್ರ ವಿಭಜನೆ ಆಗುತ್ತದೆ, ಈ ಸಮಾಜ ನುಚ್ಚುನೂರಾಗುತ್ತದೆ, ಸಮಾಜದಲ್ಲಿ ಐಕ್ಯತೆ ಹೋಗುತ್ತದೆ ಎಂಬ ಭಯ ಇತ್ತು, ಆ ಭಯದ ವಾತಾವರಣ ಈಗ ಕಣ್ಣಿಗೆ ಕಾಣುತ್ತಿದೆ. I am also a product of the freedom movement. ನಾನು ೪೨ನೇ ಇಸವಿಯ ಸ್ವಾತಂತ್ರ್ಯ ಹೋರಾಟದಲ್ಲೂ ಭಾಗವಹಿಸಿದ್ದೆ, ೧೯೪೭ರಲ್ಲೂ ಭಾಗವಹಿಸಿದ್ದೆ. ಆ ಸಂದರ್ಭದಲ್ಲಿ ಏನಾಯಿತು ಎಂದು ನನಗೆ ಗೊತ್ತಿದೆ. ಅವತ್ತು ಏನು ಕಾರಣ ಆಗಿತ್ತು ಎಂದು ಯೋಚನೆ ಮಾಡಬೇಕು, ಕೇವಲ ಮುಸ್ಲಿಂ ಲೀಗ್ ಹಾಗೂ ಮುಸಲ್ಮಾನರು ಪಾಕೀಸ್ಥಾನವನ್ನು ಕೇಳಿದ್ದು ಮಾತ್ರ ರಾಷ್ಟ್ರ ವಿಭಜನೆಗೆ ಕಾರಣವಲ್ಲ. ಅಂದಿನ ಮೆಜಾರಿಟಿ ಕಮ್ಯುನಿಟಿ ಏನಿತ್ತು, ಸಿಂಧ್, ಪಂಜಾಬ್ ಬಂಗಾಳ, ನಾರ್ಥ್ ಈಸ್ಟ್, ಫ್ರಾಂಟೀಯರ್‌ನಲ್ಲಿ ಇದ್ದಂಥ ಹಿಂದೂ ಮೆಜಾರಿಟಿ ಕಮ್ಯುನಿಟಿ ಜಮೀನುದಾರಿ ಪದ್ಧತಿ, ರಾಜಮಹಾರಾಜರ ಪದ್ಧತಿ ಆರ್ಥಿಕವಾಗಿ ಶೋಷಣೆ ಮಾಡತಕ್ಕ ಪದ್ಧತಿ, ಮನಾಪಲಿ ಪದ್ಧತಿ ಏನಿತ್ತು, ಅದೆಲ್ಲಾ ಕಾರಣವಾಗಿ, ಅಲ್ಪಸಂಖ್ಯಾತರ ಮೇಲೆ ಸಾಮಾಜಿಕವಾಗಿ ಆರ್ಥಿಕವಾಗಿ ಶೋಷಣೆ ಮಾಡಿದಾಗ,

ಆ ಶೋಷಣೆಗೆ ಬೇಜಾರಾಗಿ, ಅವರ ವಿರುದ್ಧ ಹೋರಾಟ ಮಾಡಿ, ನಮ್ಮದೇ ಆದಂಥ ಪ್ರತ್ಯೇಕ ರಾಷ್ಟ್ರ ಬೇಕೆಂದು ಹೋರಾಟ ಮಾಡಿದರು. ಅದೇ ರಾಷ್ಟ್ರ ವಿಭಜನೆಗೆ ಕಾರಣ.

ಅದಕ್ಕೆ ಕಾರಣರಾದ ಮೆಜಾರಿಟಿ ಕಮ್ಯೂನಿಟಿ ಏನು ಇತ್ತು ಆ ಮೆಜಾರಿಟಿ ಕಮ್ಯೂನಿಟಿಯಲ್ಲಿ ಬಹುತೇಕ ಶೋಷಿತ ಹಿಂದುಳಿದ ವರ್ಗದವರು ಕಾರಣರಲ್ಲ. ಆ ಕಾಲದಲ್ಲಿ ಆರ್ಥಿಕವಾಗಿ ಸಾಮಾಜಿಕವಾಗಿ ಮುಂದುವರಿದ ವರ್ಗ ಏನು ಇತ್ತು ಅದು ಈ ರಾಷ್ಟ್ರವನ್ನು ವಿಭಾಗ ಮಾಡಲು ಕಾರಣವಾಯಿತು ಹಿಂದೆ ಮುಸ್ಲಿಂ ಜನಾಂಗದವರ ಕೂಗು ಪಾಕಿಸ್ಥಾನವಾಗಬೇಕೆಂದು ಹೇಳುವುದು ಇತ್ತು. ಈಗ ಮೆಜಾರಿಟಿ ಕಮ್ಯೂನಿಟಿ ಹೆಸರಿನಲ್ಲಿ ಕೆಲವೇ ಕೆಲವು ಜನರು ತಮ್ಮದೇ ಆದ ಒಂದು ನಾಯಕತ್ವ ಇದೆ, ರಾಷ್ಟ್ರದಾದ್ಯಂತ ನಾಯಕತ್ವ ಇದೆ, ರಾಮನ ಹೆಸರಿನಲ್ಲಿ ನಾವೆಲ್ಲ ಒಂದಾಗಿದ್ದೇವೆ, ನಮ್ಮದೇ ಆದ ಒಂದು ರಾಷ್ಟ್ರವಾಗಬೇಕು, ಹಿಂದೂ ರಾಷ್ಟ್ರವಾಗಬೇಕೆಂದು ಹೇಳಿ ಮತ್ತೊಮ್ಮೆ ಈ ಭಾರತ ದೇಶವನ್ನು ಇದೇ ಜನರು ಬೇರೆ ರೂಪದಲ್ಲಿ ಒಡೆಯತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ರಾಷ್ಟ್ರಪ್ರೇಮ ಈ ರಾಷ್ಟ್ರದಲ್ಲಿ ನಂಬಿಕೆ ಇಟ್ಟಿರತಕ್ಕಂಥವರು ಜಾತ್ಯಾತೀತದಲ್ಲಿ ನಂಬಿಕೆಯುಳ್ಳವರು ಆರ್ಥಿಕ ಸಾಮಾಜಿಕ ಶೋಷಣೆಯ ವಿರುದ್ಧ ಹೋರಾಟ ಮಾಡತಕ್ಕಂಥ ಸೆಕ್ಯುಲರ್ ಫೋರ್ಸಸ್ ಏನಿದೆ ಅವರೆಲ್ಲರೂ ಒಂದಾಗಿ ಇವತ್ತು ಏನು ಮಾಡುತ್ತಿದ್ದಾರೆ ಅದರ ವಿರುದ್ಧ ಹೋರಾಟ ಮಾಡ ಬೇಕಾಗುತ್ತದೆ. ಆ ಒಂದು ಕರ್ತವ್ಯ ನಮ್ಮ ದೇಶದಲ್ಲಿ ಇವತ್ತು ಬಂದಿದೆ. ಆದಕ್ಕೋಸ್ಕರ ನಾವೆಲ್ಲ ಹೋರಾಟ ಮಾಡಬೇಕು ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇಷ್ಟು ಹೇಳಿ, ನನಗೆ ಸಮಯದ ಅಭಾವ ಇರುವುದರಿಂದ ನಾನು ಹೇಳಬೇಕಾದ್ದು ಇನ್ನೂ ಇರುವುದರಿಂದ ಸಾಧ್ಯವಾಗದೆ ಇಷ್ಟರಲ್ಲಿಯೇ ಮುಗಿಸುವವನಿದ್ದೇನೆ. ಈ ನಮ್ಮ ಬಿ.ಜೆ.ಪಿ. ಮತ್ತು ಆರ್.ಎಸ್.ಎಸ್. ನವರು ಮಹಾತ್ಮಾ ಗಾಂಧಿಯವರ ಹೆಸರನ್ನು ಬಹಳ ಚೆನ್ನಾಗಿ ಹೇಳುತ್ತಿದ್ದರು ಈ ಆರ್.ಎಸ್.ಎಸ್.ನಲ್ಲಿ ಅಗ್ರಗಣ್ಯರಾದ ನಾಥೂರಾಮ್ ಗಾಡ್ಸೆ ಯಾರು ಇದ್ದ ಆತನ ಹೆಸರು ರಾಮ್ ಎಂದು ಇದೆ, ಹೇ ರಾಮ್ ಹೇ ರಾಮ್ ಎಂದು ಗಾಂಧೀಜಿಯವರು ಜೀವಬಿಟ್ಟರು. ಅಂತಹ ಒಬ್ಬ ವ್ಯಕ್ತಿ ಈ ನಾಥೂರಾಮ್ ಗಾಡ್ಸೆ. ಆತ ತನ್ನ ಕೈಯಲ್ಲಿದ್ದ ರಿವಾಲ್ವರ್‌ನಿಂದ ಗುಂಡಿಟ್ಟು ಕೊಂದ. ಮಹಾತ್ಮಾಗಾಂಧಿ ಯಾವಾಗಲೂ ರಾಮ್ ಎಂದು ಹೇಳುತ್ತಿದ್ದರು. ಮಹಾತ್ಮಾಗಾಂಧಿ ಪ್ರೇಯರ್. ಮೀಟಿಂಗ್‌ನಲ್ಲೂ ಸಹ ರಾಮನ ಹೆಸರನ್ನು ಹೇಳುತ್ತಿದ್ದರು. ರಾಮ್ ಎಂದು ಹೇಳತಕ್ಕಂಥ ಮಹಾತ್ಮಾಗಾಂಧೀಜಿಯನ್ನು ಈ ನಾಥೂರಾಮ್ ಗಾಡ್ಸೆ ಗುಂಡಿಟ್ಟು ಹೊಡೆದ ಎಂದು ಹೇಳಬೇಕಾದರೆ, ಅಂತಹ ಒಂದು ಸಂಪ್ರದಾಯಕ್ಕೆ ಸೇರಿದಂತಹ ರಾಜಕಾರಣಿಗಳು ಇವತ್ತು ಗಾಂಧೀ ಹೆಸರನ್ನು ಹೇಳು ವುದಕ್ಕೆ ಫ್ರೀಡಂ ಮೂವ್‌ಮೆಂಟ್ ಹೆಸರು ಹೇಳುವುದಕ್ಕೆ ಯಾವ ಮೂಲ ಆಧಾರ ಇದೆ, ಯಾವ ನೈತಿಕತೆ ಇದೆ ಎನ್ನುವುದನ್ನು ಅವರು ತಮ್ಮ ಎದೆ ಮುಟ್ಟಿ ಹೇಳಬೇಕು. ಯಾವ ರಾಷ್ಟ್ರಪ್ರೇಮ ಇದೆ ಎಂದು ಹೇಳಬೇಕು. ಮಹಾತ್ಮಾಗಾಂಧಿಯಂತಹ ಒಬ್ಬ ರಾಷ್ಟ್ರಪ್ರೇಮಿಯನ್ನು ಕೊಂದಂತಹವರು ಇವತ್ತು ನಾವು ರಾಷ್ಟ್ರೀಯರು, ರಾಷ್ಟ್ರೀಯತೆ ಹೊಂದಿದವರು, ರಾಷ್ಟ್ರಪ್ರೇಮಿಗಳು ನಮ್ಮ ರಾಷ್ಟ್ರವನ್ನು ಹಿಂದೂ ರಾಷ್ಟ್ರವನ್ನಾಗಿ ನಿರ್ಮಾಣ ಮಾಡುತ್ತೇವೆಂದು ಹಿಂದೂಗಳ ಐಕ್ಯತೆಯನ್ನು ಮಾಡುತ್ತೇವೆ ಇದು ಯಾವ ರಾಷ್ಟ್ರಪ್ರೇಮ. ಯಾವ ಹಿಂದೂ ರಾಷ್ಟ್ರವನ್ನು ತಾವು ನಿರ್ಮಾಣ ಮಾಡುತ್ತೀರಿ ? ಯಾವ ಹಿಂದೂ ಐಕ್ಯತೆಯನ್ನು ಮಾಡುತ್ತೀರಿ ?......

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ......

ಶ್ರೀ ಎ. ಕೆ. ಅನಂತಕೃಷ್ಣ.—ಇಲ್ಲ, ನಾನು ಈಲ್ಡ್ ಆಗಿಲ್ಲ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ನಾನು ಸದನದಲ್ಲಿ ನಿನ್ನೆ ದಿವಸ ನಾನು ಮಾತನಾಡುವಾಗ ಇದ್ದಂತಹ ಹಿರಿಯ ಸಚಿವರಾದ ಶ್ರೀಮಾನ್ ವೀರಪ್ಪಮೊಯಿಲಿಯವರು ಕೆಲವು ಸಲಹೆಗಳನ್ನು ಕೊಟ್ಟರು. ಅವರು ಆ ಸಲಹೆಗಳನ್ನು ಕೊಟ್ಟ ನಂತರ ನಾನು ಅವರಿಗೆ ಗೌರವ ಕೊಟ್ಟು ನಾನು ಏನು ಮಾತನಾಡಬೇಕೋ ಆ ಬಗ್ಗೆ ಬಹಳ ಎಚ್ಚರಿಕೆಯಿಂದ ಮಾತನಾಡಿದ್ದೇನೆ. ಆದರೆ ಇವತ್ತು ಮಾನ್ಯ ಸದಸ್ಯರು ಅದೂ ಜವಾಬ್ದಾರಿಯುತ ಸದಸ್ಯರು ಮಹಾತ್ಮಾಗಾಂಧೀಜಿಯವರನ್ನು ಕೊಂದವರು ಎಂದು ಹೇಳಿ ಪ್ರಚೋದನೆ ಮಾಡಿದರೆ......

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಸದಸ್ಯರು ಮಾತನಾಡುವಾಗ ಸ್ವಲ್ಪ ಇತಿ ಮಿತಿ ಇಟ್ಟುಕೊಂಡು ಮಾತನಾಡಿದರೆ ಒಳ್ಳೆಯದು. ಬೇಜವಾಬ್ದಾರಿಯಾಗಿ ಮಾತನಾಡುವುದಕ್ಕೆ ಆಗುವುದಕ್ಕೆ

ಆಗುವುದಿಲ್ಲ. ತಮ್ಮ ಬಳಿ ಯಾವ ದಾಖಲೆಗಳು ಇವೆ, ಹೇಳುತ್ತೀರಾ ? ಈ ರಾಜ್ಯದಲ್ಲಿ ಶಾಂತಿ ಕಾಪಾಡಬೇಕೆನ್ನುವ ಇಚ್ಛೆ ಇದ್ದರೆ ರೂಲಿಂಗ್ ಪಾರ್ಟಿಯ ಒಬ್ಬ ಜವಾಬ್ದಾರಿಯುತ ಸದಸ್ಯರು ಮಾತ ನಾಡುವ ಧಾಟಿ ಇದೇನು ? ತಾವು ಹಿರಿಯ ಸದಸ್ಯರಿದ್ದೀರಿ. ಬಹಳ ಜವಾಬ್ದಾರಿಯಿಂದ ಮಾತನಾಡಬೇಕು. ಏನು ಮಾತನಾಡಬೇಕಾದರೂ ಇತಿಮಿತಿಯಲ್ಲಿ ಮಾತನಾಡಬೇಕು. ಅದು ಬಿಟ್ಟು ಮಹಾತ್ಮಾಗಾಂಧಿಯವರನ್ನು ಕೊಂದವರು ಎಂದು ಹೇಳಿದರೆ ಹೇಗೆ. ಮಹಾತ್ಮಾಗಾಂಧಿಯವರನ್ನು ಕೊಂದವರು ಯಾರು ಈ ದೇಶವನ್ನು ದುಸ್ಥಿತಿಗೆ ತಂದವರು ಯಾರು ಎನ್ನುವುದು ಎಲ್ಲರಿಗೂ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಮಾತ್ರ ಕಾಂಗ್ರೆಸ್ ಪಕ್ಷ ಉಳಿದುಕೊಂಡಿದೆ. ಈ ರಾಜ್ಯದಲ್ಲಿ ಸಹ ಕಾಂಗ್ರೆಸ್ ಹೋಗಬೇಕೇನು ? ಮನಬಂದಂತೆ ಮಾತನಾಡಿದರೆ, ಉತ್ತರ ಭಾರತದಲ್ಲಿ ನಿಮ್ಮ ಪಕ್ಷದ ಪರಿಸ್ಥಿತಿ ಏನಾಗಿದೆ ಅದು ಇಲ್ಲಿ ಆಗಬೇಕೇನು ? ಉತ್ತರ ಭಾರತದಲ್ಲಿ ಯಾವ ರಾಜ್ಯದಲ್ಲೂ ನಿಮ್ಮ ಪಕ್ಷ ಅಧಿಕಾರದಲ್ಲಿ ಇಲ್ಲ, ಅಂತಹ ಒಂದು ದುಸ್ಥಿತಿಗೆ ಕಾಂಗ್ರೆಸ್ ಪಕ್ಷ ಬಂದಿದೆ ಏನೋ ಈ ರಾಜ್ಯದಲ್ಲಿ ಮಾತ್ರ ನಿಮ್ಮ ಪಕ್ಷ ಅಧಿಕಾರದಲ್ಲಿ ಇದೆ. ಅದೂ ಹೋಗಬೇಕೇನು ? ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಜವಾಬ್ದಾರಿಯಿಂದ ಮಾತನಾಡಿ......

ಅಧ್ಯಕ್ಷರು.—ಜವಾಬ್ದಾರಿಯಿಂದ ಮಾತನಾಡಿ.

ಶ್ರೀ ಎ. ಕೆ. ಅನಂತಕೃಷ್ಣ.—ನಾನು ನಿಮ್ಮಿಂದ ಜವಾಬ್ದಾರಿ ಕಲಿಯಬೇಕಾಗಿಲ್ಲ. ನಾನು ನನ್ನ ಜೀವನದಲ್ಲಿ ಯಾವತ್ತೂ ಬೇಜವಾಬ್ದಾರಿಯಿಂದ ಮಾತನಾಡಿಲ್ಲ. ಮೂಲಭೂತವಾಗಿ ನಾನು ಇಷ್ಟೇ ಹೇಳಬಯಸುತ್ತೇನೆ. ಯಾವ ಅಂದಿನ ಆರ್.ಎಸ್.ಎಸ್. ಜನಸಂಘದವರು ಜಯಪ್ರಕಾಶ್ ನಾರಾಯಣ್‌ರವರ ವ್ಯಕ್ತಿತ್ವವನ್ನು ದುರುಪಯೋಗ ಮಾಡಿಕೊಂಡಂತಹವರು......

ಶ್ರೀ ಬಿ. ಎಸ್. ಯಡಿಯೂರಪ್ಪ.—ಜಯಪ್ರಕಾಶ್ ನಾರಾಯಣರು ಜೈಲಿಗೆ ಹೋದಂಥ ಸಂದರ್ಭದಲ್ಲಿ ಅಧಿಕಾರಕ್ಕೋಸ್ಕರ ಮನೆಯಲ್ಲಿ ಕುಳಿತುಕೊಂಡಿದ್ದವರು ಯಾರು ? ಹೋರಾಟ ಮಾಡಿದವರು ಯಾರು ಎನ್ನುವುದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು.—ಅನಂತಕೃಷ್ಣರವರೆ......

ಶ್ರೀ ಎ. ಕೆ. ಅನಂತಕೃಷ್ಣ.—ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಆನ್ಸರ್ ಮಾಡುತ್ತೇನೆ.

ಅಧ್ಯಕ್ಷರು.— ಇದು ಕೊಶ್ಚನ್ ಅಂಡ್ ಆನ್ಸರ್ ಆಗುವುದಿಲ್ಲ. ನೀವು ಬೇಗ ಮುಗಿಸಿಬಿಡಿ.

ಶ್ರೀ ಎ. ಕೆ. ಅನಂತಕೃಷ್ಣ.—ಮುಗಿಸುತ್ತೇನೆ. ನಾನು ಹೇಳುತ್ತೇನೆ, I am Only requesting your protection......

MR. SPEAKER.—Yes, I am protecting you,

ಶ್ರೀ ಎ. ಕೆ. ಅನಂತಕೃಷ್ಣ.—ದೇಶಾದ್ಯಂತ ಈ ಹೆಸರುಗಳನ್ನು ಮುಂದಿಟ್ಟುಕೊಂಡು ಈ ಜನಕ್ಕೆ ಏಮಾರಿಸಿ ಈ ಒಂದು ಕೋಲಾಹಲವನ್ನುಂಟು ಮಾಡುತ್ತಿದ್ದಾರೆಂದು ಹೇಳುತ್ತಿದ್ದೇನೆ. ಈ ಸದನದ ಮೂಲಕವಾಗಿ ಮತ್ತು ತಮ್ಮ ಮೂಲಕವಾಗಿ ನಾನು ನಮ್ಮ ಜನತೆಗೆ ಒಂದು ಕಳಕಳಿಯಿಂದ ಬೇಡಿ ಕೊಳ್ಳುವಂಥ ಮತ್ತು ಅವರಿಗೆ ಕಣ್ಣು ತೆಗೆಸಿ ಮುನ್ನೆಚ್ಚರಿಕೆ ಕೊಡುವಂಥ ಪ್ರಯತ್ನ ಮಾಡುತ್ತಿದ್ದೇನೆ. ಇದರಲ್ಲಿ ನನ್ನ ಸ್ವಾರ್ಥ ಇಲ್ಲ. ನಾನು ಅವರನ್ನು ವೈಯಕ್ತಿಕವಾಗಿ ವಿರೋಧ ಮಾಡುತ್ತಿಲ್ಲ. ೧೯೭೭ರಿಂದ ೭೯ರ ಕಾಲದಲ್ಲಿ ಇವರ ಕೂಗು ಏನಿತ್ತು ಸ್ವಾಮಿ ? "ಅಂದು ಗಾಂಧಿ ಇಂದು ಜೆ.ಪಿ.", ಆ ಸ್ಲೋಗನ್‌ಅನ್ನು ಯಾರಾದರು ಮರೆಯುವುದಕ್ಕೆ ಸಾಧ್ಯವೇ ? ಏನು ಮಾಡಿದರು ಅಂದಿನ ಗಾಂಧಿಯನ್ನು ? ಅಂದು ಗಾಂಧಿಯವರನ್ನು ಅವರು ಸುಟ್ಟರು. ಇಂದಿನ ಜೆ.ಪಿ. ಅಂದರೆ ೭೯ನೇ ಜೆ.ಪಿ., ಅವರ ಪ್ರಜಾಪ್ರಭುತ್ವದ ರೀತಿ ನೀತಿ ಏನಿತ್ತು ? ಧೋರಣೆ ಏನಿತ್ತು ? ಅವರ ನಿಯಮಗಳು ಏನಿತ್ತು ? ಜೆ.ಪಿ.ಯವರು ಯಾವ ಒಂದು ಸಮಾಜವಾದಕ್ಕಾಗಿ, ಸರಿಸಮಾನತೆಗಾಗಿ, ಆರ್ಥಿಕ, ಸಮಾಜಿಕ ಶೋಷಣೆ ವಿರುದ್ಧವಾಗಿ ಈ ರಾಷ್ಟ್ರವನ್ನು ಸಂಘಟನೆ ಮಾಡುವಂಥ ಮಹಾನ್ ಸಮಾಜವಾದಿ ನಾಯಕರಾಗಿದ್ದಂಥವರು. ಅಂಥವರನ್ನು ದುರುಪಯೋಗ ಮಾಡಿಕೊಂಡು ಈ ಇಡೀ ರಾಷ್ಟ್ರಕ್ಕೆ ತಪ್ಪು ದಾರಿ ಹಿಡಿಸುವಂಥ ಪ್ರಯತ್ನ ಮಾಡಿದ್ದಾರೆ. "ಅಂದು ಗಾಂಧಿ ಇಂದು ಜೆ.ಪಿ." ಎಂದು ಹೇಳಿದವರು ಅಂದು ಗಾಂಧಿಯನ್ನು ಕೊಂದರು. ಮತ್ತು ಆಮೇಲೆ ಬಂದಂಥ ಜೆ.ಪಿ.ಯವರನ್ನು ಕೂಡ ಕೊಂದರು. ಅವರ ಧ್ಯೇಯಧೋರಣೆ ಏನಿದೆ ?

ಶ್ರೀ ಬಿ. ಎಸ್, ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್.

ಅಧ್ಯಕ್ಷರು.—ಅವರ ಪಾಯಿಂಟ್ ಆಫ್ ಆರ್ಡರ್ ಇದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳಿದಂಥ ಮಾತುಗಳು ಕಡತಕ್ಕೆ ಹೋಗಿದೆ. ಜಯಪ್ರಕಾಶ್ ನಾರಾಯಣ್‌ರವರನ್ನು ಇವರು ಕೊಂದರು ಎನ್ನುವಂಥ ಮಾತನ್ನು ಹೇಳಿದರು. ಅಧ್ಯಕ್ಷರೆ, ನೀವು ನಮ್ಮ ರಕ್ಷಣೆಗೆ ಬರಬೇಕು. ನಾನು ಹೇಳುವುದಕ್ಕೆ ಏನು ಹೊರಟಿದ್ದೇನೆಂದರೆ, ಅವತ್ತು ಜೆ.ಪಿ.ಯವರನ್ನು ಜೈಲಿನಲ್ಲಿಟ್ಟು ಜೀವ ಸಹಿತ ಸತ್ತರು ಎಂದು ಹೇಳಿ ಅವರನ್ನು ಕೊಲೆ ಮಾಡಿದಂಥವರು ಈ ಕಾಂಗ್ರೆಸ್‌ನವರು, ಅದು ರೆಕಾರ್ಡ್‌ಗೆ ಹೋಗಬೇಕು. ಏಕೆಂದರೆ, ಸತ್ಯ ಏನೆಂದು ಈ ಜನತೆಗೆ ಗೊತ್ತಿದೆ. ಅಸತ್ಯ ಹೇಳುವಂತಹ ಪ್ರಯತ್ನ ಮಾಡಬಾರದು. ಜಯಪ್ರಕಾಶ್ ನಾರಾಯಣ್‌ರವರನ್ನು ಕೊಂದಂತಹವರು ಕಾಂಗ್ರೆಸ್‌ನವರು ಎನ್ನುವುದು ಇಡೀ ಜಗತ್ತಿಗೇ ಗೊತ್ತು. ಆ ಪಾಪದ ಫಲದಿಂದ ಇವತ್ತು ಕಾಂಗ್ರೆಸ್ ಸರ್ವನಾಶವಾಗುತ್ತಿದೆ. ರೆಕಾರ್ಡ್‌ಗೆ ಸರಿಯಾದ ಮಾಹಿತಿ ಹೋಗಬೇಕು.

ಅಧ್ಯಕ್ಷರು.—ಇದು ಕ್ರಿಯಾಲೋಪವಾಗಲಿಲ್ಲ. ವಾದಕ್ಕೆ ಪ್ರತಿವಾದವಾಯಿತಷ್ಟೆ.

ಶ್ರೀ ಎ. ಕೆ. ಅನಂತಕೃಷ್ಣ.—ನಾನು ಗಾಂಧೀಜಿಯವರ ಧ್ಯೇಯ, ಗಾಂಧೀಜಿಯವರ ರಾಷ್ಟ್ರ ಪ್ರೇಮ, ಜೆ. ಪಿ. ಯವರ ರಾಷ್ಟ್ರ ಪ್ರೇಮ, ಅವರ ಪ್ರಜಾಪ್ರಭುತ್ವದ ಪ್ರೇಮ, ಅವರ ಜಾತ್ಯಾತೀತತೆ, ಆ ವಿಷಯವಾಗಿ ಮಾತನಾಡುತ್ತಾ ಈ ಧ್ಯೇಯವನ್ನು ತಂದವರೆಂದು ನಾನು ಹೇಳಿದೆ.

ಅಧ್ಯಕ್ಷರು.—ಅನಂತ ಕೃಷ್ಣಾರವರೆ, ಚೆನ್ನಾಗಿ ಹೇಳುತ್ತಿದ್ದೀರಿ, ಬೇಗ ಮುಗಿಸಿ. ಏಕೆಂದರೆ ಈಗ ಮುಖ್ಯ ಮಂತ್ರಿಗಳು ಉತ್ತರ ಕೊಡಬೇಕಾಗಿದೆ.

ಶ್ರೀ ಎ. ಕೆ. ಅನಂತಕೃಷ್ಣ.—ಅದಾದಮೇಲೆ ವಿನೋಬಾ ಅವರನ್ನು ತೆಗೆದುಕೊಂಡರು, ಈಗ ಕೊನೆ ಅಧ್ಯಾಯಕ್ಕೆ ಬರುತ್ತಿದ್ದೇನೆ. ಗೋ ಸಂರಕ್ಷಣೆ ಹೆಸರಿನಲ್ಲಿ ವಿನೋಬಾ ಅವರನ್ನು ದುರುಪಯೋಗ ಮಾಡಿಕೊಂಡರು. ರಾಷ್ಟ್ರದಾದ್ಯಂತ ಮತ್ತೆ ಜನತೆಯನ್ನು ಒಡೆಯುವುದಕ್ಕೆ ಪ್ರಯತ್ನ ಮಾಡಿದರು. ೧೯೮೩ರಲ್ಲಿ ನಮ್ಮ ರಾಜ್ಯದಲ್ಲಿ ಜನತಾ ಪಕ್ಷದ ಒಂದು ನಾಯಕತ್ವವನ್ನು ಬೆದರಿಸಿಯೋ, ಆಕರ್ಷಿಸಿಯೋ ಯಾವುದೋ ನಾನಾ ರೂಪಗಳಿಂದ ರಾಜಕೀಯವಾಗಿ ಬೆಳೆದುಕೊಂಡು ಬರುವಂಥ ಪ್ರಯತ್ನ ಮಾಡಿದರು. ಅದು ಅವರಿಗೆ ಅರ್ಥವಾಗಿ ಕಡೆಗೆ ಅವರು ಬೇರೆಯಾಗಿ ಇವರು ಬೇರೆಯಾಗಿ ಬೇರೆ ಬೇರೆ ನಿಂತರು. ಆದರೆ ಮತ್ತೊಂದು ನ್ಯಾಷನಲ್ ಫ್ರಂಟ್ ಎಂದು ಹೆಸರು ಹೇಳಿಕೊಂಡು ನ್ಯಾಷನಲ್ ಫ್ರಂಟನ್ನು ಏನು ಮಾಡಿದರು ಸ್ವಾಮಿ ? ನಮ್ಮ ನ್ಯಾಷನಲ್ ಫ್ರಂಟ್‌ಗೆ ಬೆಂಬಲ ಕೊಡುತ್ತೇವೆಂದು ಹೇಳಿ, ಕಡೆಗೆ ನಮ್ಮ ಸ್ನೇಹಿತರು ಸನ್ಮಾನ್ಯ ಸದಸ್ಯರು ಹೇಳಿದ ಹಾಗೆ, ಸರ್ಕಾರ ನಡೆಯುತ್ತಿರುವಂಥ ಕಾಲದಲ್ಲಿ ಆಡಳಿತವನ್ನು ಏತಕ್ಕೆ ಕಿತ್ತು ಹಾಕಿದರೆಂದರೆ, ಒಂದು ರಾಮ ಮಂದಿರ ಕಟ್ಟುವುದಕ್ಕೆ ಅವಕಾಶ ಕೊಡಲಿಲ್ಲವೆಂದು ಕಿತ್ತು ಹಾಕಿದರು, ನಾನು ಹೇಳುವುದಿಷ್ಟೇ. ಯಾವುದೇ ಒಂದು ಧರ್ಮ ಎಂದಿನವರೆಗೆ ನಮ್ಮ ಧರ್ಮವನ್ನು ಒಪ್ಪಿಕೊಂಡಂಥವರಿಗೆ, ನಂಬಿದವರಿಗೆ, ಆರ್ಥಿಕವಾಗಿ ಸಾಮಾಜಿಕವಾಗಿ ಒಂದು ರಕ್ಷಣೆ ಕೊಡುವುದಿಲ್ಲವೋ, ಎಲ್ಲಿಯವರೆಗೆ ಆರ್ಥಿಕ, ಸಾಮಾಜಿಕ ಪ್ರಗತಿ ಸಾಧಿಸುವುದಕ್ಕೆ ಅವಕಾಶ ಇರುವುದಿಲ್ಲವೋ ಅಂಥಾ ಧರ್ಮ ಬಹಳ ಕಾಲ ಉಳಿಯುವುದಕ್ಕೆ ಸಾಧ್ಯವಿಲ್ಲ. ಆದರೆ ನಮ್ಮ ರಾಷ್ಟ್ರದಲ್ಲಿ ಪುರಾತನ ಕಾಲದಿಂದ ಬೆಳೆದುಬಂದಂಥ ಧರ್ಮ, ಸಿವಿಲೈಜೇಷನ್ ಕಾರಣ. ಅದನ್ನು ರಿಲಿಜಿಯನ್ ಅನ್ನುವುದಕ್ಕಿಂತ ಹೆಚ್ಚಾಗಿ it is a growth of civilization ಎಂದು ಹೇಳಬೇಕು, It is a civilization that revolved and growth in its multifarious direction.........ಈ ಸಿವಿಲೈಜೇಷನ್ ಪ್ರತಿ ಕಡೆಯಿಂದಲೂ ಏನೇನು ಒಳ್ಳೆಯದು ಬಂತೋ ಅದನ್ನೆಲ್ಲ ಆಕರ್ಷಿಸಿಕೊಂಡು ಅಸಿಮಿಲೇಟ್ ಮಾಡಿಕೊಳ್ಳುವ ಧರ್ಮ ಏನಿದೆ ಅದನ್ನು ಹಿಂದೂ ಧರ್ಮ ಎನ್ನುತ್ತೇವೆ. ಆ ಧರ್ಮವನ್ನು ಕಾಪಾಡುವುದಕ್ಕೆ ಯಾವ ರಾಜಕೀಯ ಪಕ್ಷದಿಂದಲೂ ಸಾಧ್ಯವಿಲ್ಲ. ಅದರಲ್ಲೂ ಧರ್ಮದ ಹೆಸರಿನಲ್ಲಿ ಕೆಲಸ ಮಾಡುವ ವಿಹೆಚ್‌ಪಿ, ಹೆಚ್‌ಎಂಎಸ್ ಆಗಲಿ, ಬಿಜೆಪಿಯಾಗಿರಲಿ ಯಾವುದೇ ಆಗಿರಲಿ ಅವುಗಳ ಕೈಲಿ ಧರ್ಮವನ್ನು ಕಾಪಾಡುವುದಕ್ಕೆ ಸಾಧ್ಯವಿಲ್ಲ, ಅದನ್ನು ಅದೇ ಕಾಪಾಡಿಕೊಳ್ಳುತ್ತದೆ. ಸಿವಿಲೈಜೇಷನ್ನಿನಿಂದ ಬಂದಿರುವ ಕೋಟ್ಯಾಂತರ ಜನ ಯಾವುದೇ ಮಾನವೀಯ ಧರ್ಮಕ್ಕೂ ಹೋರಾಟ ಮಾಡುತ್ತಾರೆ, ನಮ್ಮ ಧರ್ಮ, ಸರ್ವ ಧರ್ಮಕ್ಕೂ ಗೌರವ ಕೊಟ್ಟಿದೆ, ಅಂತಹ ಧರ್ಮಕ್ಕೆ ಯಾವ ರಾಜಕೀಯ ಶಕ್ತಿಯ ಅವಕಾಶವಿಲ್ಲ. ಆ ಧರ್ಮ ತನಗೆ ತಾನೇ ಕಾಪಾಡಿಕೊಂಡು ಹೋಗುತ್ತದೆ ಎಂದು ಹೇಳುತ್ತೇನೆ. ಅಂತಿಮವಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಅಶಾಂತಿಗೆ ಕಾರಣ, ಕೋಮು ಗಲಭೆಗೆ ಕಾರಣ ನಮ್ಮಲ್ಲಿರುವ ಸಾಮಾಜಿಕ ಆರ್ಥಿಕ ವಿಪರ್ಯಾಸ ಒಂದೇ, ಇದರಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ ನಾವು ಏನು ಶೋಷಣೆಯನ್ನು ಮಾಡುತ್ತಿದ್ದೇವೆ, ಆ ಶೋಷಣೆಗೆ ಕಾರಣ ಎಂದಿನವರೆಗೆ ಈ ಶೋಷಣೆ ಮುಂದುವರೆಯುವುದೋ ಅಲ್ಲಿಯವರೆಗೆ ಮನುಷ್ಯನ ಜೀವನದಲ್ಲಿ ಅಶಾಂತಿ ಇದ್ದೇ ಇರುತ್ತದೆ. ಎಲ್ಲಿಯವರೆಗೆ ಅಶಾಂತಿ ಇರುವುದೋ ಅಲ್ಲಿಯ

ವರೆಗೆ ಅದು ನಾನಾ ರೂಪದಲ್ಲಿ ಹೊರಗಡೆ ಕಾಣುತ್ತಿರುತ್ತದೆ. ಆಂದಮೇಲೆ ಈ ಕೋಮು ಭಾವನೆಯು ದುಷ್ಟಶಕ್ತಿ ಏನಿದೆ ಅದು ಈ ಆರ್ಥಿಕ ಸಾಮಾಜಿಕ ಅಸಮಾನತೆಗೆ ಸೇರಿಕೊಂಡು ಬಂದರೆ ಯಾವ ಸಂದರ್ಭದಲ್ಲೂ ಮನುಷ್ಯನ ಜೀವನ ಉಳಿಯಲು ಆಗುವುದಿಲ್ಲ. ಆಟಂಬಾಂಬ್, ನ್ಯೂಕ್ಲಿಯರ್ ಬಾಂಬ್‌ಗಳಿಂದ ಬೇಕಾದರೆ ತಪ್ಪಿಕೊಳ್ಳಬಹುದು. ಆದರೆ ಇವರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಈ ಶಾಂತಿ ವಾತಾವರಣವನ್ನು ಉಳಿಸಿಕೊಂಡು ಬರಬೇಕಾದರೆ ನಮ್ಮ ಶಾಲೆಗಳಲ್ಲಿ, ಕಾರ್ಖಾನೆಗಳಲ್ಲಿ, ಯುವ ಜನಾಂಗದ ಸೋಶಿಯಲ್ ಅಂಡ್ ಕಲ್ಚರಲ್ ಆಕ್ಟಿವಿಟೀಸ್‌ನ ಪ್ರತಿ ಹಂತದಲ್ಲೂ ಕೂಡ ನಮ್ಮ ಯುವಕರಿಗೆ ಸೆಕ್ಯುಲರಿಸಂ ಏನು ಎಂದು ಪಾಠವನ್ನು ಹೇಳಿಕೊಟ್ಟು ಜೀವನವನ್ನು ಮಾರ್ಪಾಡು ಮಾಡಿದರೆ ಮಾತ್ರ ಸಾಧ್ಯವಾಗುತ್ತದೆ.

ಇನ್ನು ಪೋಲಿಸ್ ಇಲಾಖೆ ಬಗ್ಗೆ ಒಂದು ಮಾತನಾಡುತ್ತೇನೆ. ಶಿವಾಜಿನಗರ ಕ್ಷೇತ್ರದಲ್ಲಿ ತಮಗೆಲ್ಲಾ ಗೊತ್ತಿರುವ ಹಾಗೆ, ಎಲ್ಲ ಜಾತಿ ಮತದವರಿದ್ದಾರೆ. ಘರ್ಷಣೆಗೆ ಮೂಲ ಕ್ಷೇತ್ರವಾಗಿದೆ. ಆದರೆ ಕೆಲವು ತಿಂಗಳಿಂದ ಯಾವುದೇ ಪ್ರಚೋದನೆ ಇದ್ದರೂ ಕೂಡ, ರಾಮಜ್ಯೋತಿ, ಶಿಲಾನ್ಯಾಸಗಳ ಪ್ರಚೋದನೆ ಇದ್ದರೂ ಕೂಡ ಯಾರು ಬಲಿ ಆಗಲಿಲ್ಲ. ಶಾಂತಿ ವಾತಾವರಣ ಉಳಿಸಿದ್ದಾರೆ. ಇದರಿಂದ ಈ ಕ್ಷೇತ್ರದ ಜನತೆ ಯಾವ ಜಾತ್ಯಾತೀತ ಮನೋಭಾವನೆಯನ್ನು ಉಳಿಸಿಕೊಂಡು ಬಂದಿದ್ದಾರೆಂದು ಗೊತ್ತಾಗುವುದು. ಪೋಲೀಸರು ಕೂಡ ೨೪ ಗಂಟೆಗಳ ಕಾಲವೂ ಜನತೆಗೆ ರಕ್ಷಣೆ ಕೊಡಬೇಕು. ದುಷ್ಟಶಕ್ತಿಗಳಿಂದ ರಕ್ಷಣೆ ಕೊಟ್ಟಿದ್ದಾರೆ. ಮೊನ್ನೆ ಯಾವುದೋ ಕಾರಣಕ್ಕೆ ಯಾರೋ ಒಬ್ಬರು ಬಲಿಯಾದರೆ ಅಲ್ಲಿ ಟೆನ್‌ಶನ್ ಬಿಲ್ಡಪ್ ಆಗುತ್ತಿರುವಾಗ ಅಲ್ಲಿ ದುಷ್ಪರಿಣಾಮ ಆಗದಂತೆ ನೋಡಿಕೊಂಡಿದ್ದಾರೆ ಅದಕ್ಕಾಗಿ ಅಲ್ಲಿನ ಪೋಲೀಸರನ್ನು ನಾನು ಆತ್ಮೀಯವಾಗಿ ಅಭಿನಂದಿಸುತ್ತೇನೆ. ಶಿವಾಜಿನಗರ ಕ್ಷೇತ್ರದಲ್ಲಿ ದುಷ್ಟಶಕ್ತಿಗಳು, ದುಷ್ಪರಿಣಾಮ ಬೀರುವ ಮತಭೇದ ತೋರುವ ಶಕ್ತಿಗಳು ಏನಿವೆ ಅದನ್ನು ಬಲಿ ಹಾಕುವ ರೀತಿಯಲ್ಲಿ ನಗರಾದ್ಯಂತ, ರಾಜ್ಯಾದ್ಯಂತ ಕನ್ನಡಿಗರೆಲ್ಲ ಒಂದಾಗಿರಬೇಕೆಂದು ಹೇಳಿ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್.ಎಂ. ಯಾಹ್ಯಾ (ಜಯಮಹಲ್)—ಮಾನ್ಯ ಅಧ್ಯಕ್ಷರೇ, ಎರಡು ಮೂರು ತಿಂಗಳಿಂದ ಕರ್ನಾಟಕದಲ್ಲಿ ಮತ್ತು ದೇಶದ ವಿವಿದ ಭಾಗಗಳಲ್ಲಿ ಧರ್ಮದ ಹೆಸರಿನಿಂದ ನಡೆದ ಕೋಮು ಗಲಭೆಗಳ ಪರಿಣಾಮವಾಗಿ ನೂರಾರು ಜೀವಗಳು ಹೋಗಿವೆ. ಅದೇ ರೀತಿಯಲ್ಲಿ ಸಾವಿರಾರು ಜನರಿಗೆ ಗಾಯವಾಗಿ ಈಗಲು ಆಸ್ಪತ್ರೆಯಲ್ಲಿದ್ದಾರೆ. ನೂರಾರು ಮನೆಗಳು ಸುಟ್ಟು ಹೋಗಿವೆ ನೂರಾರು ಅಂಗಡಿಗಳು ನಾಶವಾಗಿವೆ. ಇಂತಹ ಒಂದು ಸಿಚುಯೇಷನ್‌ನಲ್ಲಿ, ಇಂತಹ ಒಂದು ವಾತಾವರಣದಲ್ಲಿ ಜನರಿಗೆ ಭಯಭೀತಿ ಉಂಟಾಗಿದೆ. ಇಂತಹ ವಾತಾವರಣ ನಮ್ಮ ರಾಜ್ಯದಲ್ಲಿ ಮೊದಲಿನಿಂದ ಎಂದೆಂದೂ ಇರಲಿಲ್ಲ. ಈಗ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯ ನಂತರ ಸಹ ಹಲವಾರು ಕಡೆ ಧರ್ಮದ ಹೆಸರಿನಲ್ಲಿ ಗಲಭೆಗಳಾಗಿವೆ, ಆದರೆ ಆ ಸಿಚುಯೇಶನ್‌ಗೂ ಮತ್ತು the present situation, there is lot of variation. In those days, communal trouble used to be in big cities and big towns. Now it has spread to rural areas. That is one thing. ನನ್ನ ಸ್ನೇಹಿತರಾದ ಶ್ರೀ ಬೆಳ್ಳಿಯಪ್ಪನವರು ನಿನ್ನೆ ಹೇಳಿದರು. ನಾವು ಕೊಡಗಿನಲ್ಲಿದ್ದೆವು, ನಾವು ಬಹಳ ವರ್ಷ ಅಲ್ಲಿ ಓದಿದ್ದೇವೆ. ನಾವು ಅಲ್ಲಿ ಕಾಲೇಜಿನಲ್ಲಿ ಓದುವಾಗ ನಮಗೆ ಗೊತ್ತಿರಲಿಲ್ಲ. ಜಾತಿ ವಿಚಾರದಲ್ಲಿ ಇಷ್ಟು ಭೇದಗಳಿವೆ. ಧರ್ಮದ ವಿಚಾರದಲ್ಲಿ ಇಷ್ಟು ಗಲಾಟೆಗಳು ನಡೆಯುತ್ತವೆಂದು ನಮಗೆ ಕೊಡಗಿನಲ್ಲಿ ಎಂದೆಂದಿಗೂ ಗೊತ್ತಿರಲಿಲ್ಲ. ಆದರೆ ಈಗಿನ ವಾತಾವರಣದಲ್ಲಿ ಏನಾಗಿದೆ ಅಂದರೆ, ಕೊಡಗು ಗ್ರಾಮಾಂತರ ಪ್ರದೇಶ. ಅಲ್ಲೂ ಕೂಡ ಬಹಳಷ್ಟು ಕೋಮು ಗಲಭೆಗಳಾಗಿವೆ. ಕೋಮು ಗಲಭೆಯು ಮೊದಲು ಯಾವ ವಾತಾರಣ ಇತ್ತೂ ಅಂದು ಈಗ ಇಲ್ಲ. ಈಗ ಹೊಸ ವಾತಾವರಣವಾಗಿ ಅದು ಹಳ್ಳಿ ಹಳ್ಳಿಗಳಿಗೆ ಹೋಗಿದೆ. ಮೊದಲು ಒಂದೆರಡು ದಿವಸ ಕೋಮು ಗಲಭೆಗಳು ನಡೆಯುತ್ತಿದ್ದವು. ಈಗ ವಾರ ವಾರಕ್ಕೂ ಈ ಕೋಮು ಗಲಭೆಗಳು ನಡೆಯುತ್ತಿವೆ. ಅದಕ್ಕಾಗಿ A new situation has arisen. How to prevent it and how to act in the present ? The new situation is important." ಮಾನ್ಯ ಕಾಗೋಡು ತಿಮ್ಮಪ್ಪನವರು, ಮಾನ್ಯ ಚಂದ್ರೇಗೌಡರು, ಡಾ॥ ನಂಜಪ್ಪನವರು ಹೀಗೆ ಪ್ರತಿ ಪ್ರತಿಯೊಬ್ಬರೂ ಉತ್ತಮ ರೀತಿಯಲ್ಲಿ ಈ ಒಂದು ಹೊಸ ವಾತಾವರಣದಲ್ಲಿ ಯಾವ ರೀತಿ ಶಾಂತಿ ತರಬೇಕು ಎಂದು ಚೆನ್ನಾಗಿ ಹೇಳಿದ್ದಾರೆ. ಅದು ಇವತ್ತು ಬಹಳ ಸಂತೋಷವಾದಂಥ ವಿಚಾರ. ಈ ಮನೆಯಲ್ಲಿ ಮಾತಾಡಿದ ಎಲ್ಲರೂ ಬರೀ ಐಡೆಂಟಿಫೈ ಮಾಡಲಿಲ್ಲ' ಹೊಸ ವಾತಾವರಣ ಯಾರು ಮಾಡಿದರು ಎಂದು ಕ್ಲಿಯರಾಗಿ ಐಡೆಂಟಿಫೈ ಮಾಡಿದ್ದಾರೆ. ನಂತರ ಈ ಹೊಸ ವಾತಾವರಣದಲ್ಲಿ ಯಾವ ರೀತಿ ಶಾಂತಿ ತರಬೇಕೆಂದು ಹೇಳಿದ್ದಾರೆ.

೪.೫೫ ಪಿ.ಎಂ.

ಎಲ್ಲಾ ಸೆಕ್ಯುಲರ್ ಫೋರ್ಸಸ್ ನಾವು ಒಂದಾಗಬೇಕು ಎಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ, ಎಲ್ಲಾ ಜಾತಿ, ಮತ, ಧರ್ಮದಲ್ಲಿ ಸೌಹಾರ್ದತೆ ಇರಬೇಕು, ಸಹೋದರ ಮನೋಭಾವನೆ ಇರಬೇಕು ಎಂದು ಮೊದಲಿನಿಂದಲೂ ಹೇಳುತ್ತೇವೆ. ಆದರೆ ಇವತ್ತು ನನಗೆ ನೋಡುವಾಗ ಸಂತೋಷವಾಯಿತು. ಬಹಳ ಪಾಸಿಟೀವ್ ಆಗಿ ನಾವು ಸೆಕ್ಯುಲರಿಸಂ ಕಡೆಗೆ ಹೋದರೆ ಮಾತ್ರ ಈ ದೇಶದಲ್ಲಿ ಶಾಂತಿ ಇರಲಿಕ್ಕೆ ಸಾಧ್ಯವಾಗುತ್ತದೆ ಎಂದು ಸಂಪೂರ್ಣವಾಗಿ ಎಲ್ಲರೂ ಮನಸ್ಸು ಬಿಚ್ಚಿ ಹೇಳಿದ್ದಾರೆ. ಏಕೆಂದರೆ, ಈ ಸೆಕ್ಯುಲರ್ ಫೋರ್ಸಸ್‌ಗೆ ಬಹಳಷ್ಟು ಧ್ವನಿಯೇ ಇರಲಿಲ್ಲ. ಯಾವುದು ಫ್ಯಾಸಿಸ್ಟ್ ಫೋರ್ಸಸ್ ಇತ್ತೋ, ಕಮ್ಯೂನಲ್ ಫೋರ್ಸಸ್ ಇತ್ತೋ ಯಾವುದು ಗಲಾಟೆ ಮಾಡುವಂಥ ಫೋರ್ಸ್‌ಸ್ ಇತ್ತೋ ಅವರದು ಬಹಳಷ್ಟು ಧ್ವನಿ ಇತ್ತು. ಇದು ಪಾಸೀಟೀವ್ ಫೋರ್ಸ್ ಆಗಿತ್ತು. ಹಿಂದೆ ಯಾವುದು ನೆಗಟೀವ್ ಫೋರ್ಸ್ ಆಗಿತ್ತೋ ಈಗ ಅದು ಪಾಸೀಟೀವ್ ಫೋರ್ಸ್‌ಸ್ ಆಗಿದೆ. ಅದೇ ರೀತಿಯಲ್ಲಿ ನಿಯೋ ಫ್ಯಾಸಿಲಿಸಂ, ಫ್ಯಾಸಿಸ್ಟ್ ಫೋರ್ಸಸ್ ಯಾವುದು ಇದೆ, ಅವರಿಗೆ ಇದೇನೂ ಇಲ್ಲ. ಮಂದಿರ-ಮಸೀದಿ ಸಮಸ್ಯೆ ಬಂದರೆ ಸುಪ್ರೀಂಕೋರ್ಟ್‌ನಲ್ಲಿ ವಾದ ಮಾಡಿದರೆ ಸುಪ್ರಿಂ ಕೋರ್ಟ್‌ನವರನ್ನೂ ನಾವು ನಂಬುವುದಿಲ್ಲ ಎಂದು ಹೇಳುವಂಥವರು ಒಂದು ಕಡೆ, ಇನ್ನೊಂದು ಕಡೆಯಲ್ಲಿ ಕಾನ್ಸ್‌ಟಿಟ್ಯೂಷನ್ ಇದೆ ಕಾನ್ಸ್‌ಟಿಟ್ಯೂಷನನ್ನು ನಂಬುವುದಿಲ್ಲ ಎಂದು ಹೇಳುವುದು ಒಂದು ಕಡೆ. ಈ ರೀತಿ ಹೊಸ ನಿಯೋ ಫ್ಯಾಸಿಸ್ಟ್ ಫೋರ್ಸಸ್‌ನಿಂದ ಈ ದೇಶದಲ್ಲಿ ಅಶಾಂತಿ, ಗಲಭೆ ಆಗಲಿಕ್ಕೆ ಸಾಧ್ಯ ಇದೆ. ಅಂಥ ನಿಯೋ ಫ್ಯಾಸಿಸ್ಟ್ ಫೋರ್ಸಸನ್ನು ಯಾವ ರೀತಿಯಲ್ಲಿ ನಾವು ತಡೆಗಟ್ಟಬೇಕು ? ಓಪನ್ ಆಗಿ ಸೆಕ್ಯುಲರ್ ಫೋರ್ಸಸ್ ಬಗ್ಗೆ ಯಾವ ರೀತಿಯಲ್ಲಿ ನಮ್ಮ ಸ್ನೇಹಿತರೆಲ್ಲಾ ಇಲ್ಲಿ ಮಾತನಾಡಿದ್ದಾರೋ ಆ ಸೆಕ್ಯುಲರ್ ಫೋರ್ಸ್‌ಸ್ ಒಟ್ಟಾಗಿ ಇದರಲ್ಲಿ ರಾಜಕೀಯ ಇಲ್ಲ, ನಾವೆಲ್ಲಾ ಒಟ್ಟಾಗಿ ಈ ಸೆಕ್ಯುಲರಿಸಂನಿಂದಲೆ, ನಮ್ಮ ದೇಶದ ಅಭಿವೃದ್ಧಿಯಾಗಲಿಕ್ಕೆ ಸಾಧ್ಯ ಇದೆ, ಈ ಸೆಕ್ಯುಲರಿಸಂ ಫೋರ್ಸಸ್‌ನಿಂದಲೇ ಬಡ ಜನರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವದಕ್ಕೆ ಸಾಧ್ಯ ಇದೆ ಎಂದು ಹೇಳಿ, ಸೆಕ್ಯುಲರ್ ಫೋರ್ಸಸ್‌ಗೆ ನೀವು ಮುಂದೆ ಬಂದರೆ ಖಂಡಿತವಾಗಿಯೂ ಈ ದೇಶದಲ್ಲಿ ಶಾಂತಿ ಬರಲಿಕ್ಕೆ ಸಾಧ್ಯತೆ ಇದೆ. ಆ ಒಂದು ವಾತಾವರಣ ಈ ಒಂದು ಗಲಭೆಯಿಂದ ಉಂಟಾಗುತ್ತಿದೆ, ಬಹಳ ಸಂತೋಷ. ಈ ಸೆಕ್ಯುಲರ್ ಫೋರ್ಸಸ್ ಇನ್ನು ಮುಂದೆ ಬರಬೇಕಾಗಿದೆ. ಇನ್ನು ಹೆಚ್ಚು ಹೆಚ್ಚು ಧೈರ್ಯದಿಂದ ಇವತ್ತು ಎಲ್ಲಾ ಮಾತನಾಡಿದ್ದನ್ನು ನೋಡಿಬಿಟ್ಟರೆ ನನಗೆ ಬಹಳ ಸಂತೋಷವಾಯಿತು. ಬಹಳ ಧೈರ್ಯದಿಂದ ಈ ಸೆಕ್ಯುಲರ್‌ಫೋರ್ಸಸ್‌ನ್ನು, ಸೆಕ್ಯುಲರ್ ವಾಯ್ಸ್‌ನ್ನು ನಾವು ರೈಡ್ ಮಾಡಿದ್ದೇವೆ. ಇದೇ ರೀತಿಯಲ್ಲಿ ಹೋದರೆ ಪುನಃ ನಾವು ಯಾವ ರೀತಿಯಲ್ಲಿ ಕರ್ನಾಟಕದಲ್ಲಿ, ಭಾರತದಲ್ಲಿ ಎಂದೆಂದೂ ಶಾಂತಿ ಇರುತ್ತಿತ್ತು ಎಂದು ಏನು ಹೇಳುತ್ತಿದ್ದೆವೋ ಆ ಶಾಂತಿ ಇರಲಿಕ್ಕೆ ಸಾಧ್ಯವಾಗುತ್ತದೆ. ಆ ಕಾರಣದಿಂದ ಯಾವ ಫೋರ್ಸಸ್‌ಗೆ ಬೆಂಬಲವನ್ನು ಕೊಡಬೇಕು, ಯಾವ ಫೋರ್ಸಸ್‌ನ್ನು ಅಂದರೆ ನಿಯೋ ಫ್ಯಾಸಿಸ್ಟ್ ಫೋರ್ಸಸ್, ಕಮ್ಯುನಲ್ ಫೋರ್ಸಸ್ ಅನ್ನು ತೆಗೆದು ಹಾಕಬೇಕು ಎಂದು ನಾವು ನಮ್ಮ ಮನಸ್ಸಿನಲ್ಲಿ ಚೆನ್ನಾಗಿ ಧೈರ್ಯ ಮಾಡಿಕೊಂಡು ಇದ್ದುಬಿಟ್ಟರೆ ಇದು ಒಳ್ಳೆಯ ಕೆಲಸವಾಗುತ್ತದೆ ಎಂದು ನಾನು ಹೇಳಲಿಕ್ಕೆ ಬಯಸುತ್ತೇನೆ. ನ್ಯಾಷನಲಿಸಂ ಅಥವಾ ರಾಷ್ಟ್ರೀಯತೆ ರಾಷ್ಟ್ರೀಯತೆ ದೇಶಕ್ಕೆ ಸಂಪೂರ್ಣವಾಗಿ ಹಿತವನ್ನು ಮಾಡಬೇಕಾದರೆ ಆ ರಾಷ್ಟ್ರೀಯತೆ, "The nationalism should be coupled with secularism, If nationalism is coupled with communalism or some other forces, there will be misunderstanding and distrust among the communities. Then, it is not really a true nationalism. What is true nationalism ? The nationalism which is coupled with secularism, with mutual understanding mutual friendship, mutual co-operation is the real nationalism. This is the way in which India has survived for so many centuries. Certainly it can survive today also. ಈ ಒಂದು ಹೊಸ ಕಮ್ಯೂನಲ್ ಸಿಚುಯೇಷನ್‌ನಲ್ಲಿ ಒಂದು ಹೊಸ ವಿಚಾರವನ್ನು ಎಲ್ಲರೂ ಹೇಳಿದ್ದಾರೆ, ಆದರೆ ಓಪನ್ ಆಗಿ ಹೇಳುತ್ತೇನೆ. ನಾವೆಲ್ಲರೂ ನೋಡುತ್ತಿದ್ದೇವೆ. ಎಲ್ಲಾ ಸ್ಕೂಲ್‌ಗಳಲ್ಲಿಯೂ, ಕಾಲೇಜುಗಳಲ್ಲಿಯೂ ಮಕ್ಕಳ, ವಿದ್ಯಾರ್ಥಿಗಳ ಯುವಕರ ಮನಸ್ಸನ್ನು ಕೆಡಿಸುವಂಥ ಪಾಯ್ಸನಸ್ ಹ್ಯಾಂಡ್ಸ್ ಬಿಲ್, ಪಾಂಪ್ಲೆಟ್ಸ್, ಲಿಟರೇಚರ್ ಬರುತ್ತಿದೆ. ಮೂರನೇ ತರಗತಿ, ನಾಲ್ಕನೇ ತರಗತಿ ಮಕ್ಕಳ ಹತ್ತಿರ ಇರುವಂಥದ್ದನ್ನು ನಾವು ಓದಿಬಿಟ್ಟರೆ ನಮಗೆ ಬಹಳಷ್ಟು ನೋವಾಗುತ್ತದೆ, ನಾವು ಯಾವ ಕಡೆಗೆ ಹೋಗುತ್ತಿದ್ದೇವೆ ಎಂದು ಗೊತ್ತಾಗುತ್ತದೆ. ಕೆಲವು

ಕಡೆಯಂತೂ ಅದನ್ನು ಓದಲಿಕ್ಕೆ ಸಾಧ್ಯವೇ ಇಲ್ಲ. ಕನ್ನಡದಲ್ಲಿ ಬಹಳ ದೊಡ್ಡ ದೊಡ್ಡ ಅಕ್ಷರದಲ್ಲಿ ಏನು ಬರೆದಿದ್ದಾರೆ, ಆ ವಿಷ ಯಾವ ರೀತಿ ಹಬ್ಬಿಸಬೇಕೋ ಅದನ್ನು ಬಹಳ ಒಳ್ಳೆಯ ಸ್ಟ್ರಾಟೆಜಿ ಮಾಡಿಕೊಂಡು ಈ ನಿಯೋ ಫ್ಯಾಸಿಸ್ಟ್ ಫೋರ್ಸಸ್ ಯಾವುದು ಇದೆ, ಕಮ್ಯೂನಲ್ ಫೋರ್ಸಸ್ ಯಾವುದು ಇದೆ, ಅವರು ಅದನ್ನು ಹರಡಿಸುತ್ತಿದ್ದಾರೆ. ಅವರು ಮುಸಲ್ಮಾನರ ಒಟ್ಟಿಗೆ ಆಟೋ ರಿಕ್ಷಾದಲ್ಲೂ ನೀವು ಹೋಗಬೇಡಿ, ಮುಸಲ್ಮಾನರ ಅಂಗಡಿಗಳಲ್ಲಿ ಸಾಮಾನನ್ನು ತೆಗೆದುಕೊಳ್ಳಬೇಡಿ, ಮತ್ತೆ ಸಾಮಾನನ್ನು ಕೊಡಬೇಡಿ, ಮುಸಲ್ಮಾನರ ಹತ್ತಿರ ಮಾತನಾಡಬೇಡಿ ಎಂದು ಹರಡಿಸುತ್ತಿದ್ದಾರೆ ಅದನ್ನು ಯಾರಾದರೂ ಓದಿಬಿಟ್ಟರೆ ಹೇಗೆ? ಮಾನ್ಯ ಸಿಂಧ್ಯಾರವರು ಒಂದು ಮಾತನ್ನು ಹೇಳಿದರು, ಅವರ ಮಗ ಮೂರನೇ ತರಗತಿಯಲ್ಲಿ ಓದುತ್ತಿದ್ದು, ಸ್ಕೂಲಿಗೆ ಏಕೆ ಹೋಗಲಿಲ್ಲ ಎಂದು ಕೇಳಿದಕ್ಕೆ ನಾನು ಸ್ಕೂಲ್‌ಗೆ ಹೋದರೆ ಮುಸಲ್ಮಾನರು ನನಗೆ ಹೊಡೆಯುತ್ತಾರೆ ಎಂದು ಹೇಳಿದನು ಎಂದು ಹೇಳಿದರು. ಹೀಗೆ ಮಕ್ಕಳ ಮನಸ್ಸನ್ನು ಕೆಡಿಸುವಂಥ ಯಾವ ಹ್ಯಾಂಡ್ಸ್ ಬಿಲ್ಸ್ ಇವೆ, ಯಾವ ಪ್ರಾಪೊಗ್ಯಾಂಡಾ ಮೆಟೀರಿಯಲ್ಸ್ ಇದೆ, ನಾವು ಅದರ ಬಗ್ಗೆ ಈಗ ಬಹಳಷ್ಟು ಚಿಂತನೆಯನ್ನು ಮಾಡಬೇಕು. ಅದೇ ಬಹಳ ಕಷ್ಟದ ಕೆಲಸ. ಈ ಒಂದು ಹ್ಯಾಂಡ್ ಬಿಲ್ಸ್, ಯಾವ ಒಂದು ಕಮ್ಯೂನಲ್ ವೈರಸ್ ಅನ್ನು ಸ್ಪ್ರೆಡ್ ಮಾಡುತ್ತದೆ ಅದನ್ನು ತಡೆಗಟ್ಟಲಿಕ್ಕೆ ನಮ್ಮ ಸರ್ಕಾರ ಏನು ಮಾಡಿದೆ? ಅವರಿಗೆ ಗೊತ್ತಿದೆ; ಈ ರೀತಿ ನೂರಾರು ಸಾವಿರಾರು ಹ್ಯಾಂಡ್ ಬಿಲ್‌ಗಳು, ಪಾಂಪ್ಲೆಟ್ಸ್ ಬರುತ್ತಿವೆ, ಇದರಿಂದ ಮನಸ್ಸು ಕೆಡುತ್ತದೆ. ಆ ಒಂದು ಮನಸ್ಸು ಒಂದು ವರ್ಷ ಎರಡು ವರ್ಷಕ್ಕೆ ಕೆಡುವುದಿಲ್ಲ. ನಮ್ಮ ಮಕ್ಕಳ ಮನಸ್ಸು ಈ ತರಹ ಕೆಟ್ಟರೆ ಮಾನ್ಯ ಸದಸ್ಯರು ಹೇಳಿದ ಹಾಗೆ ೩೦ ವರ್ಷ ೪೦ ವರ್ಷ ೫೦ ವರ್ಷದವರೆಗೆ ಆ ವಿಷ ಅವರ ಮನಸ್ಸಿನಲ್ಲಿ ಇರುತ್ತದೆ. ಅದಕ್ಕಾಗಿ ಇಂತಹ ಹ್ಯಾಂಡ್ ಬಿಲ್ಸ್ ಮತ್ತು ಮೆಟೀರಿಯಲ್ಸ್, ಲಿಟರೇಚರ್ ಸರ್ಕಾರಕ್ಕೆ ಸಿಕ್ಕಿದೆಯೆ? ಸಿಕ್ಕಿದ್ದರೆ ಅದು ಹರಡದ ಹಾಗೆ ಮಾಡಲಿಕ್ಕೆ ಸರ್ಕಾರ ಯಾವ ಕಾರ್ಯಗಳನ್ನು ಮಾಡಿದೆ. ಅದು ಹಳ್ಳಿಹಳ್ಳಿಗೆ ಹೋಗಿಬಿಟ್ಟಿದೆ ಅದು ಹರಡದ ಹಾಗೆ ಯಾವ ಕಾರ್ಯವನ್ನು ಸರ್ಕಾರ ಮಾಡಿದೆ? ನಮ್ಮ ಇಂಟೆಲಿಜೆನ್ಸ್ ಡಿಪಾರ್ಟ್‌ಮೆಂಟ್‌ನವರು ಯಾವುದಾದರೂ ಒಂದು ಪ್ರೆಸ್ ಅನ್ನು ಸೀಜ್ ಮಾಡಿದ್ದಾರಾ? ಯಾರನ್ನಾದರೂ ಅರೆಸ್ಟ್ ಮಾಡಿದ್ದಾರೋ? ಅದು ಸಂಪೂರ್ಣವಾಗಿದೆ. ಒಂದು ಕಡೆ ಯಾರಾದರೂ ಹಿಂದೂಗಳು ಅದನ್ನು ಓದಿದರೆ ಮುಸ್ಲಿಮರ ಬಗ್ಗೆ ಗೌರವ ಇರುವುದಿಲ್ಲ. ಈ ಕಡೆ ಮುಸಲ್ಮಾನರು ಅದರಲ್ಲೂ ಯುವಕರು ಓದಿಬಿಟ್ಟರೆ ಅವರು ಖಂಡಿತವಾಗಿಯೂ ಮಿಲಿಟೆಂಟ್ ಆಗುತ್ತಾರೆ. ನಮ್ಮನ್ನು ಇಷ್ಟು ಕೆಡಿಸಿಬಿಟ್ಟಿದ್ದಾರಲ್ಲ ಈ ದೇಶದಲ್ಲಿ ನಮ್ಮ ಗತಿ ಈ ರೀತಿ ಆಗಿದೆ ಎಂದು ಅವರು ಮಿಲಿಟೆಂಟ್ ಆಗಲಿಕ್ಕೆ ಹೊರಡುತ್ತಾರೆ. ನನಗೆ ತೋರಿದಂತೆ, ಎಲ್ಲಾ ಸಮಸ್ಯೆಗಳಿಗಿಂತ ಈ ಹ್ಯಾಂಡ್ ಬಿಲ್ಸ್ ಪಾಂಪ್ಲೆಟ್ಸ್, ಯಾವುದು ಈ ಪಾಯಿಸನಸ್ ಲಿಟರೇಚರ್ ಇದೆ ಅದನ್ನು ಸ್ಕೂಲ್ ಮತ್ತು ಕಾಲೇಜುಗಳಲ್ಲಿ ಹರಡುತ್ತಿದ್ದಾರೆ, ಅದನ್ನು ತಡೆಗಟ್ಟುವುದು ಸರ್ಕಾರದ ಪ್ರಾಮುಖ್ಯವಾದ ಕರ್ತವ್ಯ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಈ ಕಾರ್ಯದಲ್ಲಿ ಸರ್ಕಾರ ಏನು ಮಾಡಿದೆ? ಎಷ್ಟು ಪ್ರೆಸ್‌ನಲ್ಲಿ ಇಂತಹ ಹ್ಯಾಂಡ್ ಬಿಲ್ಸ್, ಮೆಟೀರಿಯಲ್ಸ್ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿದೆಯೋ ಅಥವಾ ನಮ್ಮ ಇಂಟೆಲಿಜೆನ್ಸ್‌ನವರು ಯಾವ ಯಾವ ಕಾರ್ಯಗಳನ್ನು ಈ ಒಂದು ವಿಚಾರದಲ್ಲಿ ಮಾಡಿದ್ದಾರೆ ಎಂದು ಖಂಡಿತವಾಗಿ ನಮಗೆ ಹೇಳಬೇಕು. ಇನ್ನು ಮುಂದೆ ಗಲಭೆಗಳು ಆಗಬೇಕಾದರೆ ಇದೇ ಕಾರಣ ಆಗುತ್ತದೆ. ಇನ್ನು ಮುಂದೆ ಯಾವುದೇ ಒಂದು ಕೋಮುವಾರು ಗಲಭೆ ಆಗಲೇಬಾರದು. ಇಂತಹ ಒಂದು ಹ್ಯಾಂಡ್ ಬಿಲ್ಸ್, ಪಾಯಿಸನಸ್ ಮೆಟೀರಿಯಲ್ಸ್, ಲಿಟರೇಚರ್ ಹರಡಿಸಿದ್ದರಿಂದಲೇ ಈ ರೀತಿ ಆಗಿದೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ಕೆಲವು ಒಳ್ಳೆಯ ಹೆಜ್ಜೆಗಳನ್ನು ತೆಗೆದುಕೊಂಡಿರಬಹುದೆಂದು ನಾನು ನಂಬಿದ್ದೇನೆ. ಅದಕ್ಕಾಗಿ ಅವರು ಇಡೀ ಕರ್ನಾಟಕದ ಜನರಿಗೆ ಅದನ್ನು ಹೇಳಬೇಕಾಗಿದೆ. ಇಂತಹ ರೀತಿ ಆಗಿದೆ. ಇನ್ನು ಮುಂದೆ ಆಗದ ಹಾಗೆ ಎಷ್ಟು ಕಾರ್ಯಗಳನ್ನು ಮಾಡಲಿಕ್ಕೆ ಖಂಡಿತವಾಗಿಯೂ ಅವರಲ್ಲಿ ಶಕ್ತಿ ಇದೆ, ಮಾಡುತ್ತಾರೆ ಎಂದು ನಾನು ನಂಬಿದ್ದೇನೆ. The primary duty of any Government is to see That the life and property of the people is safeguarded, Literature can create a permanent scar and a permanent poison in the minds of the youth and the people. Therefore, the primary duty of the Government si to see that such literature should not be allowed to be spread and thereby peace can be maintained. ಕರ್ನಾಟಕದಲ್ಲಿ ಈವರೆಗೆ ಹಲವಾರು ಜೀವಗಳು ಹೋಗಿದೆ. ಹಲವಾರು ಮನೆಗಳು ಸುಟ್ಟು ಹೋಗಿವೆ. ಇದರಲ್ಲಿ ಯಾರೆಲ್ಲಾ

ಮೃತ ಹೋದಿದ್ದಾರೆ, ಅಥವಾ ಡೆತ್ ಆಗಿದೆ ಅವರಿಗೆ ೫೦ ಸಾವಿರ ರೂಪಾಯಿ ಪರಿಹಾರ ಕೊಡುತ್ತೇವೆ ಎಂದು ಹೇಳಿದ್ದಾರೆ. ಹಿಂದೆ ೨೦ ಸಾವಿರ ರೂಪಾಯಿ ಇತ್ತು, ೨-೩ ತಿಂಗಳ ಹಿಂದೆ ಅದನ್ನು ೫೦ ಸಾವಿರ ರೂಪಾಯಿ ಮಾಡಿದರು. ನಾನು ಇಷ್ಟು ಈ ಸಂದರ್ಭದಲ್ಲಿ ಕೇಳಲಿಕ್ಕೆ ಬಯಸುತ್ತೇನೆ.

ಯು.ಪಿ. ಸರ್ಕಾರದವರು, ಹರಿಯಾಣ ಸರ್ಕಾರದವರು, ಇತರೆ ಸರ್ಕಾರದವರು ಒಂದು ಲಕ್ಷ ರೂಪಾಯಿಯನ್ನು ಕೊಡುತ್ತಿದ್ದಾರೆ. ಇದರಿಂದ ನಮಗೆ ಏನು ತೋರುತ್ತದೆ ಅಂದರೆ ಕರ್ನಾಟಕದಲ್ಲಿ ೫೦ ಸಾವಿರ ರೂಪಾಯಿಗಳನ್ನು ಕೊಡುವಾಗ ಕರ್ನಾಟಕದ ಲೈಫ್ ಚೀಪ್ ಆಗಿದೆಯೋ 50% cheap then U.P. life or Haryana life ಎಂದು ತೋರುತ್ತದೆ. ಅದಕ್ಕಾಗಿ ಈಗ ಯಾವ ಕಾಂಪೆನ್‌ಸೇಷನ್ ಅನ್ನು ಯು.ಪಿ. ಮತ್ತು ಇತರೆ ರಾಜ್ಯದವರು ಕೊಡುತ್ತಿದ್ದಾರೊ ಖಂಡಿತವಾಗಿ ಕರ್ನಾಟಕದಲ್ಲಿಯೂ ಸಹ ಅಷ್ಟೇ ಕೊಡಬೇಕಾಗಿದೆ, ಇಲ್ಲದಿದ್ದರೆ ಏನು ತೋರುತ್ತದೆ ಅಂದರೆ, ಕರ್ನಾಟಕದಲ್ಲಿ ಜೀವಕ್ಕೆ ಬಹಳಷ್ಟು ಕಡಿಮೆ ವ್ಯಾಲ್ಯು ಇದೆ ಎಂದು ತೋರುತ್ತದೆ. ಆದ್ದರಿಂದ ಇಲ್ಲೂ ಸಹ ಸರಿಯಾಗಿ ಒಂದು ಲಕ್ಷ ರೂಪಾಯಿಯನ್ನು ಕೊಡುವುದಕ್ಕೆ ಸರ್ಕಾರ ಗಮನಿಸಬೇಕೆಂದೂ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಡುವಾಗ ಖಂಡಿತವಾಗಿ ಇದನ್ನು ಹೇಳುತ್ತಾರೆಂದು ನಾನು ಸಹ ನಂಬಿದ್ದೇನೆ. ಇಲ್ಲದಿದ್ದರೆ ಇದರಲ್ಲೂ ಒಂದು ಏರಿಯಾದಿಂದ ಮತ್ತೊಂದು ಏರಿಯಾಕ್ಕೆ ಡಿಸ್ಕ್ರಿಮಿನೇಷನ್ ಆದಹಾಗೆ ಆಗುತ್ತದೆ. ಆ ಕಾರಣದಿಂದ ಅದನ್ನು ಖಂಡಿತವಾಗಿ ಸರಿಯಾಗಿ ಮಾಡುತ್ತಾರೆಂದು ನಾನು ಹೇಳಬಯಸುತ್ತೇನೆ. ಈ ಒಂದು ಹೊಸ ಕಮ್ಯೂನಲ್ ಸಿಚ್ಯುಯೇಷನ್‌ನಲ್ಲಿ ಏನಾಗಿದೆ ಎಂದರೆ ಮೊದಲು ಜನರಿಗೆ ಹೊಡೆಯುತ್ತಿದ್ದರು ಒಂದೆರಡು ದಿವಸ ಗಲಾಟೆಯಾಗುತ್ತಿತ್ತು. ಅಲ್ಲಿಗೆ ಅದು ಮುಗಿದುಹೋಗುತ್ತಿತ್ತು. ಈಗ ಅದು ಹಳ್ಳಿಗಳಿಗೆ ಮಾತ್ರ ಹೋಗಲಿಲ್ಲ, ಹಳ್ಳಿಗಳಲ್ಲಿನ ಗಿಡಮರಗಳನ್ನು ಕಡಿಯುವಂತಹ ಒಂದು ಪರಿಸ್ಥಿತಿಗೆ ಬಂದಿದೆ. ಇದು ಒಂದು ಹೊಸ ವಾತಾವರಣವಾಗಿದೆ. ೧೯೭೭-೭೮ ರಲ್ಲಿ ಒಂದು ಸಲ ಮಂಡ್ಯದಲ್ಲಿ ಕೆಲವು ತೆಂಗಿನ ಗಿಡಗಳನ್ನು ಕಟ್‌ಮಾಡಿದರು ಅನಂತರ ಈಗೀಗ ಬಹಳಷ್ಟು ಶುರುವಾಗಿದೆ ಸುಮಾರು ೪೦೦ ಎಕರೆಯಲ್ಲಿನ ಮಾವಿನ ಗಿಡ ಮರಗಳನ್ನು ಕಡಿದಿದ್ದಾರೆ ಒಂದು ಜೀವ ಹೋದರೂ ಒಂದೊಂದು ಸಲ ಬೇಸರವಾಗುವುದಿಲ್ಲ, ಫಲ ಕೊಡುವಂತಹ ಮರಗಳನ್ನು ಕಡಿಯುತ್ತಿದ್ದಾರೆ ಸ್ಕೀಮ್ ಮಾಡಿ, ಯೋಜನೆ ಮಾಡಿ ಅದನ್ನೆಲ್ಲ ಕಡಿಯುತ್ತಿದ್ದಾರೆ, ಅದರಲ್ಲೂ ಮೈನಾರಿಟಿಯವರದ್ದೇ ಹೆಚ್ಚಾಗಿ ಹೋಗಿದೆ ಕೋಮುಗಲಭೆಯಾದರೆ ಹೆಚ್ಚಾಗಿ ಮೈನಾರಿಟೀಸ್‌ಗೆ ಹಾಗೂ ಬಡವರಿಗೆ ತೊಂದರೆಯಾಗುವುದು ಎಷ್ಟು ಜೀವ ಹೋಗುತ್ತದೋ ಹೆಚ್ಚಾಗಿ ಅದು ಮೈನಾರಿಟೀಸ್‌ಗೆ ಎಷ್ಟು ನಾಶವಾಗುತ್ತದೊ ಅದೂ ಹೆಚ್ಚು ಮೈನಾರಿಟೀಸದೆ ಮತ್ತು ಬಡವರದ್ದು ಹೋಗಿದೆ. ಈಗ ಎಷ್ಟು ತೋಟಗಳು ಹೋಗಿವೆ ಅವೆಲ್ಲ ಮೈನಾರಿಟೀಸ್‌ಗೆ ಸೇರಿದಂಥವು. ಅದಕ್ಕಾಗಿ ಈಗ ಯಾವ ಬೇಸಿಸ್ ಮೇಲೆ ಕಾಂಪೆನ್‌ಸೇಷನ್ ಕೊಡುತ್ತಿದ್ದೀರಿ ? ಈಗ ಅಡ್‌ಹಾಕ್ ಆಗಿ ೧೦-೨೦ ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದಾರೆ ಮಾನ್ಯ ಸಿಂಧ್ಯರವರು ಹೇಳಿದಹಾಗೆ, ರೆವಿನ್ಯೂ ಆಫೀಸರ್‌ಗಳಿಗೆ ಟ್ರೈನಿಂಗ್ ಆಗಿರುವುದಿಲ್ಲ. ಇದರಿಂದ ಎಷ್ಟು ಲುಕ್ಸಾನ್ ಆಗಿದೆ. ಯಾವರೀತಿ ವ್ಯಾಲ್ಯುಯೇಷನ್ ಮಾಡಬೇಕೆಂದು ಯಾವರೀತಿ ಅವರಿಗೆ ಟ್ರೈನಿಂಗ್ ಇರಬೇಕು ಇದು ಇಲ್ಲವಾಗಿದೆ ಅಂತೂ ಈಗ ಯಾವರೀತಿ ಮಾಡುತ್ತಿದ್ದಾರೋ ಅದನ್ನೂ ಸಹ ತಪ್ಪು ಮಾಡುತ್ತಿದ್ದಾರೆ ನನಗೆ ಒಂದು ಸಂತೋಷವಾಗುತ್ತಿದೆ. ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಹೋದರೂ ಬಹಳ ಲಿಬರಲ್ಲಾಗಿ ಕೊಡಿ ಎಂದು ಹೇಳಿದ್ದಾರೆ ಲಿಬರಲ್ಲಾಗಿ ಕೊಡುವಾಗಲೂ ಮಾವಿನ ಹಾಗೂ ಇತರ ಮರಗಳನ್ನು ನಾಶಮಾಡಿದ್ದರೆ ಅದರ ಬಗ್ಗೆ ಯಾವುದಾದರೂ ಒಂದು ಬೇಸಿಸ್ ಮೇಲೆ ಮಾಹಿತಿಯನ್ನು ಕೇಳಬೇಕು ಈಗ ನಮ್ಮ ರೆವಿನ್ಯೂ ಆಫೀಸರ್‌ನವರು ಹೋಗಿ ಗಿಡ ಮರಗಳ ಬರ್ತ್ ಸರ್ಟಿಫಿಕೇಟ್ ಕೇಳುತ್ತಿದ್ದಾರಂತೆ ಗಿಡವನ್ನು ಯಾವಾಗ ನೆಟ್ಟಿದ್ದೀರಿ ಏನು ಮಾಡಿದ್ದೀರಿ ಎಂದು ಮೋಸ್ಟ್ ಇಂಪ್ರಾಕ್ಟಿಕಲ್ ಆಗಿ ಕೇಳುತ್ತಿದ್ದಾರೆ. ನಮ್ಮ ಬಡ ಜನರಿಗೆ ಯಾವಾಗ ಹುಟ್ಟಿದ್ದು ಎಂದು ಗೊತ್ತಿಲ್ಲದ ಕಾರಣ ಮರಕ್ಕೆ ಹೋಗಿ ಅಥವಾ ಮರದ ಮಾಲೀಕರಿಗೆ ಹೋಗಿ ಕೇಳಿದರೆ ಹೇಗೆ ಆಗುತ್ತದೆ.

ಅಧ್ಯಕ್ಷರು.—ಪ್ಲಾಂಟ್ ಮಾಡಿದ ಸರ್ಟಿಫಿಕೇಟ್ ಬೇಕಲ್ಲಾ ? ನೆಟ್ಟ ಸರ್ಟಿಫಿಕೇಟ್.

ಶ್ರೀ ಎಸ್.ಎಂ. ಯಾಹ್ಯ.—ಮರ ಕಟ್ ಮಾಡಿದರೆ ಡೆತ್ ಸರ್ಟಿಫಿಕೇಟ್ ಗೊತ್ತಾಗುತ್ತದೆ ಆದರೆ ಬರ್ತ್ ಸರ್ಟಿಫಿಕೇಟ್ ಗೊತ್ತಾಗುವುದಿಲ್ಲ.

ಅಧ್ಯಕ್ಷರು.—ತಹಶೀಲ್ದಾರರಿಗೆ ಡೆತ್ ಸರ್ಟಿಫಿಕೇಟ್ ಗೊತ್ತಾಗುತ್ತದೆ. ನೆಟ್ಟ ಸರ್ಟಿಫಿಕೇಟ್ ಅವರ ಹತ್ತಿರವಿರುವುದಿಲ್ಲ.

ಶ್ರೀ ಎಸ್.ಎಂ. ಯಾಹ್ಯ.—ಅದಕ್ಕಾಗಿ ಯಾವುದಾದರೂ ಒಂದು ಪ್ರಾಕ್ಟಿಕಲ್ ಬೇಸಿಸ್ ಅನ್ನು ಇಟ್ಟುಕೊಳ್ಳಬೇಕಾಗುತ್ತದೆ ಈಗ ಏನು ಮಾಡುತ್ತಿದ್ದಾರೆಂದರೆ, ಎರಡು ಎಕರೆಯಾಗಲಿ, ಮೂರು ಎಕರೆಯಾಗಲಿ, ಹತ್ತು ಎಕರೆಯಾಗಲಿ ಅವರಿಗೆಲ್ಲಾ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೊಟ್ಟು

ಬಿಟ್ಟಿದ್ದಾರೆ. It may be adhoc. But there must be some basis. ಮೊದಲು ಶ್ರೀಮಾನ್ ದೇವರಾಜ್ ಅರಸುರವರ ಕಾಲದಲ್ಲಿ ಮಂಡ್ಯದಲ್ಲಿ ಒಂದು ಗಿಡಕ್ಕೆ ೧೦೦೦ ರೂಪಾಯಿ ಕೊಟ್ಟಿದ್ದಾರೆ ಈಗ ಮಾವಿನ ಗಿಡ ಬಹಳ ವ್ಯಾಲ್ಯೂಯೇಬಲ್ ಟ್ರೀ ಯಾಗಿದೆ. Valuation should be scientific. You are just giving 5,000 or ten thousand. It is not scientifically based ಅಗ್ರಿಕಲ್ಚರ್ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನವರ ಹತ್ತಿರ ಹೋದರೆ ಅವನು ಸತ್ತುಹೋದರೂ ಅವನಿಗೆ ಕಾಂಪನ್‌ಸೇಷನ್ ಸಿಕ್ಕಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಅವರಿಗೆ ಸರಿಯಾದ ರೀತಿಯಲ್ಲಿ ಸರಿಯಾಗಿ ಕಾಂಪನ್‌ಸೇಷನ್ ಸಿಕ್ಕುವ ರೀತಿಯಲ್ಲಿ ಆಗಬೇಕು ಅದು ಮಾತ್ರವಲ್ಲ, ಈ ಕಾಂಪನ್‌ಸೇಷನ್ ಕೊಡುವಾಗ ಸಮಯಕ್ಕೆ ಸರಿಯಾಗಿ ಅವರಿಗೆ ಕೊಡಬೇಕು ಹಿಂದೆ ನಾನು ಸ್ವಲ್ಪ ಕಾಲ ಫೈನಾನ್ಸ್ ಮಿನಿಸ್ಟರ್ ಆಗಿದ್ದೆ ಆಗ ಅಷ್ಟು ಗಲಾಟೆ ಇರಲಿಲ್ಲ. ಈಗ ಬಹಳಷ್ಟು ಡಿಲೇ ಆಗಲಿಕ್ಕೆ ಒಂದು ಕಾರಣ ಇದೆ ಏನೆಂದರೆ, ನಮ್ಮ ಬಡ್ಜೆಟ್‌ನಲ್ಲಿ ಇಂತಹ ಒಂದು ಹೆಡ್ ಇಲ್ಲ. There must be separate Budget Head in the name of 'Compensation for Riot victims' or whatever it is so that the entire complicated procedure can be avoided. We must keep some amount exclusively for this under separate Budgetary Head. ಈಗ ಯಾವುದು ಒಂದು ಪ್ರೊಸೀಜರ್ ಇದೆ, ಅದು ಬಹಳಷ್ಟು ಡಿಲೇ ಆಗಿ ಯಾರು ನೊಂದು ಹೋಗಿದ್ದಾರೆ, ಯಾರು ತೊಂದರೆಯಲ್ಲಿದ್ದಾರೆ. ಅವರಿಗೆ ಕಾಂಪನ್‌ಸೇಷನ್ ಸಿಕ್ಕುವುದು ಬಹಳಷ್ಟು ಡಿಲೇ ಆಗುತ್ತದೆ ಆದ್ದರಿಂದ, ಅದಕ್ಕೆ ಒಂದು ಬಿಡ್ಜೆಟರಿ ಹೆಡ್ ಮಾಡಿಕೊಂಡು ಅದಕ್ಕೆ ೨೦-೨೫ ಕೋಟಿ ರೂಪಾಯಿ ವರ್ಷವರ್ಷಕ್ಕೆ ಹೆಚ್ಚಿಸಿದರೆ ಬಹಳಷ್ಟು ಸುಗಮವಾಗಿ, ಸರಿಯಾದ ಸಮಯದಲ್ಲಿ ಅವರಿಗೆ ಕಾಂಪನ್‌ಸೇಷನ್ ಸಿಕ್ಕಲಿಕ್ಕೆ ಕಾರಣವಾಗುತ್ತದೆ. ಆ ಕಾರಣದಿಂದ ಈ ಕಾಂಪನ್‌ಸೇಷನ್ ವಿಚಾರದಲ್ಲಿ ನೆಕ್ಸ್ಟ್ ಬಡ್ಜೆಟ್ ಮಾಡುವಾಗಲೆ ಹೊಸ ಬಡ್ಜೆಟರಿ ಹೆಡ್ ಇಟ್ಟುಕೊಂಡರೆ, ಅದು ಸುಲಭವಾಗಿ ಬಹಳಷ್ಟು ಸಮಯಕ್ಕೆ ಸರಿಯಾಗಿ ಅವರಿಗೆ ಕಾಂಪನ್‌ಸೇಷನ್ ಸಿಕ್ಕಲಿಕ್ಕೆ ಸಾಧ್ಯವಾಗುತ್ತದೆಂದು ನಾನು ಬಯಸಿ. ಇನ್ನೂ ಹಲವಾರು ವಿಚಾರಗಳು ಇದ್ದರೂ, ಮಾನ್ಯ ಅಧ್ಯಕ್ಷರು ಸ್ಪೆಷಲ್ ಕೇಸ್ ಆಗಿ ಎರಡು ಸಜೆಷನ್ಸ್ ಕೊಡಬೇಕೆಂದು ಹೇಳಿದರು, ನಾನು ಮೂರು ಸಜೆಷನ್ಸ್ ಕೊಟ್ಟಿದ್ದೇನೆ ಒಂದನೆಯದು, ಸೆಕ್ಯೂಲರ್ ಫೋರ್ಸ್‌ಸ್ ಅನ್ನು ಬಹಳಷ್ಟು ಆ್ಯಕ್ಟೀವ್ ಮಾಡಿ, ಆ ಸೆಕ್ಯೂಲರ್ ಫೋರ್ಸ್‌ಸ್‌ನಿಂದ ಶಾಂತಿ ತರುವಂಥಾದ್ದು ಎರಡನೆಯದು, ಪ್ರಾಪಗಂಡ ಮೆಟೀರಿಯಲ್ಸ್ ಯಾವುದು ಇದೆ, ಅದರ ಬಗ್ಗೆ ನಮ್ಮ ಸರ್ಕಾರ ಒಳ್ಳೆಯ ಹೆಜ್ಜೆಯನ್ನು ಇಟ್ಟು ನಮ್ಮ ಯುವಕರ, ವಿದ್ಯಾರ್ಥಿಗಳ ಮನಸ್ಸನ್ನು ಕೆಡಿಸುವಂಥ ಲಿಟರೇಚರ್ಸ್ ಪ್ರಾಪಗಂಡ ಮೆಟೀರಿಯಲ್ಸ್ ಅನ್ನು ಸಂಪೂರ್ಣವಾಗಿ ನಾಶಮಾಡಬೇಕು ಇನ್ನು ಮೂರನೆಯದು ಈ ಕಾಂಪನ್‌ಸೇಷನ್ ವಿಚಾರದಲ್ಲಿ ಅದು ಡೆತ್ ಆಗಲಿ, ಅದು ಮರಗಳನ್ನು ಕಡಿಯುವಂಥಾದ್ದರ ಕಾಂಪನ್‌ಸೇಷನೇ ಆಗಲಿ ಅದು ಯೋಗ್ಯವಾಗಿ ಸೈಂಟಿಫಿಕ್ ಬೇಸಿಸ್‌ನಲ್ಲಿ ಬಹಳಷ್ಟು ಬೇಗನೆ ಕಾಂಪನ್‌ಸೇಷನ್ ಕೊಡಬೇಕು ಮತ್ತೆ ಅಂಗಡಿ ಹೋಗಿರಲಿ, ಮನೆ ಹೋಗಿರಲಿ, ಆ ಎಕನಾಮಿಕ್ ಸ್ಟೇಟಸ್ ಮೊದಲು ಯಾವರೀತಿ ಇತ್ತು ಅದನ್ನೇ ರೆಸ್ಟೋರ್ ಮಾಡಬೇಕೆಂದು ಹೇಳಿ ಈ ಮೂರು ಸಲಹೆಗಳನ್ನು ಕೊಟ್ಟು, ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮ್ಮನ್ನು ಅಭಿನಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ, ಈ ವಿಚಾರದಲ್ಲಿ ಸದನದಲ್ಲಿ ಹಲವಾರು ಅಥವಾ ವಿಭಿನ್ನ ಅಭಿಪ್ರಾಯಗಳು ಒಡಮೂಡಿ ಬಂದಿದೆ ಮಾನ್ಯ ಸದಸ್ಯರು ಅವರವರ ಪ್ರದೇಶದ ಅಥವಾ ರಾಜ್ಯಮಟ್ಟದ ಆಡಳಿತದ ಬಗ್ಗೆ ಹೇಳಿರತಕ್ಕದ್ದು ಅವರ ಅನುಭವದ ಮಾತುಗಳು ಅವರು ತಮ್ಮ ಪ್ರದೇಶದ ಹಿನ್ನೆಲೆಯಲ್ಲಿಯೂ ಕೂಡ ವಿಚಾರವನ್ನು ಇಟ್ಟು ನಡೆಸಿರತಕ್ಕಂಥ ಈ ಚರ್ಚೆ ಇದು ಈ ಚರ್ಚೆ ಸದನದಲ್ಲಿ ಆಗಬೇಕು ಎನ್ನತಕ್ಕಂಥ ಅಭಿಲಾಷೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು, ಉಪ ನಾಯಕರು ಮತ್ತು ಇನ್ನಿತರ ತಕ್ಕಂಥ ರಾಜಕೀಯ ಪಕ್ಷಗಳ ಮುಖಂಡರು ವ್ಯಕ್ತಪಡಿಸಿದಾಗ, ಕಳೆದ ಒಂದು ದಿನದ ಅಧಿವೇಶನದಲ್ಲಿ ಈ ವಿಚಾರ ನಿಜವಾಗಿ ಚರ್ಚೆಗೆ ಬರತಕ್ಕಂಥ ಸಂದರ್ಭ ಕೂಡ ಇತ್ತು ಆದರೆ ಆಗ ಒಂದು ತೀರ್ಮಾನಕ್ಕೆ ನಾವು ಬಂದಿದ್ದೆವು. ಆದರೆ ಅದು ಒಂದು ದಿನದ ಅಧಿವೇಶನ, ಬೇರೆ ವಿಷಯಕ್ಕೆ ಸೀಮಿತಗೊಂಡಿರತಕ್ಕಂಥ ಅಧಿವೇಶನವಾಗಿತ್ತು, ಆದ್ದರಿಂದ ಈ ಚರ್ಚೆಯನ್ನು ಮುಂದಿನ ಸಾರಿ ಇಟ್ಟುಕೊಳ್ಳೋಣ ಅಂದರೆ ಈಗ ಪ್ರಾರಂಭವಾಗತಕ್ಕ ಅಧಿವೇಶನಕ್ಕೆ ಇಟ್ಟುಕೊಳ್ಳೋಣ ಎಂದಾಯಿತು ಆಗ ನಾವೆಲ್ಲರೂ, ಎಲ್ಲ ರಾಜಕೀಯ ಪಕ್ಷಗಳವರೂ ಸೇರಿ, ಶಾಂತಿಯನ್ನು ಕಾಪಾಡತಕ್ಕಂಥ ವಿಚಾರವನ್ನು ಕರ್ನಾಟಕ ರಾಜ್ಯದ ಜನತೆಯ ಮುಂದೆ ಇಡೋಣ ವಿನಂತಿಯನ್ನು ಮಾಡೋಣ ಎನ್ನುವ ತೀರ್ಮಾನಕ್ಕೆ ನಾವು ಎಲ್ಲಾ ಬಂದಿದ್ದೆವು.

ಈಗ ಈ ವಿಚಾರವನ್ನು ನಾನು ಪೂರ್ವ ಪೀಠಿಕೆಯಾಗಿ ಏತಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ನಮ್ಮೆಲ್ಲರ ಆಸೆ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲ, ನಾವು ನಮ್ಮ ಕ್ಷೇತ್ರದ ರಾಜಕೀಯಕ್ಕೆ ಸೀಮಿತಗೊಂಡಿದ್ದರೂ ಕೂಡ ಈ ಬೃಹತ್ ರಾಷ್ಟ್ರದ ಅವಿಭಾಜ್ಯ ಅಂಗವೆಂಬುದು ಮುಖ್ಯವಾದುದು. ಇಲ್ಲಿ ಶಾಂತಿಯನ್ನು ಕಾಪಾಡುವ ವಿಚಾರದಲ್ಲಿ, ಕೋಮುಸೌಹಾರ್ದತೆಯನ್ನು ಕಾಪಾಡುವ ವಿಚಾರದಲ್ಲಿ ಕರ್ನಾಟಕ ರಾಜ್ಯದ ಪಾತ್ರ ಬಹಳ ದೊಡ್ಡದು. ಆಗ ನಾವು ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ಮಾತನಾಡಿದ್ದೆವು. ಈಗಲೂ ಕೂಡ ಅದೇ ಧಾಟಿಯನ್ನು ಹಿಡಿದು ಚರ್ಚೆ ಮಾಡತಕ್ಕ ಸಂದರ್ಭದಲ್ಲಿ ಕೆಲವುಸಾರಿ ಬೇರೆ ದಾರಿಯಲ್ಲಿ ಸಾಗಿದ್ದೇವೇನೋ ಎಂಬ ಭಾವನೆ ಬಂದರೂ ಕೂಡ ನಾವು ಒಳ್ಳೆಯ ದಾರಿಯಲ್ಲೇ ಸಾಗಿದ್ದೇವೆ. ಬೇರೆ ಉದ್ದೇಶ ಯಾವುದೂ ಅಲ್ಲ. ಕೋಮು ಸೌಹಾರ್ದದಲ್ಲಿ ನಮ್ಮ ಸಮಾಜದಲ್ಲಿ ಮೊಟ್ಟಮೊದಲನೇ ಸ್ಥಾನವನ್ನು ನಾವು ಕೊಟ್ಟಿದ್ದೇವೆ, ಅದನ್ನು ಕಾಪಾಡಿಕೊಂಡು ಹೋಗಬೇಕೆಂಬ ಜವಾಬ್ದಾರಿಯ ಹಿನ್ನೆಲೆಯಲ್ಲಿ ನಾವೆಲ್ಲರೂ ಇಲ್ಲಿ ಚರ್ಚೆಯನ್ನು ನಡೆಸಿದ್ದೇವೆ. ಈ ಚರ್ಚೆಯಲ್ಲಿ ಭಾಗವಹಿಸಿರತಕ್ಕ ವಿರೋಧ ಪಕ್ಷದ ನಾಯಕರನ್ನೊಳಗೊಂಡು ವಿವಿಧ ರಾಜಕೀಯ ಪಕ್ಷಗಳ ಮತ್ತು ಸ್ವತಂತ್ರವಾಗಿ ಗೆದ್ದು ಬಂದಿರತಕ್ಕ ನನ್ನ ಮಿತ್ರರನ್ನೂ ಸೇರಿ ತಮ್ಮೆಲ್ಲರಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಸದುದ್ದೇಶದ ಕಡೆಗೆ ನಮ್ಮ ಚರ್ಚೆಯನ್ನು ತೆಗೆದುಕೊಂಡು ಹೋಗತಕ್ಕ ಜವಾಬ್ದಾರಿಯನ್ನು ಸ್ಪಷ್ಟವಾಗಿ ನಾವು ನಿರ್ವಹಣೆ ಮಾಡಬೇಕಾಗಿದೆ. ಇಲ್ಲಿ ಯಾವ ರೀತಿಯ ಸಮಾಜ ಎನ್ನತಕ್ಕ ಚಿತ್ರಣ ಹಿನ್ನೆಲೆ ಅವಶ್ಯಕವಾಗಿದೆ. ಈ ವಿಚಾರವನ್ನು ತಾವು ಯಾರೂ ಕೂಡ ಮಾತನಾಡಿಲ್ಲ ಎಂದು ನಾನು ಹೇಳುತ್ತಿಲ್ಲ. ಅದನ್ನು ನಾನು ಮಾತನಾಡಿದರೂ ಒಂದೇ, ತಾವು ಮಾತನಾಡಿದರೂ ಒಂದೇ. ಈ ಒಂದು ಫ್ಯಾಬ್ರಿಕ್ಸ್ ಏನಿದೆ, ಇದರ ಚಿತ್ರವನ್ನು ಮತ್ತೊಂದುಸಾರಿ ನಾನು ತಿಳಿಸಿದರೆ ತಪ್ಪಾಗಲಾರದು ಎಂದು ನಾನು ಭಾವಿಸಿದ್ದೇನೆ. ಸಾಮಾನ್ಯವಾಗಿ ಈ ಪ್ರಪಂಚದ ಹಲವಾರು ಸಮಾಜಗಳಲ್ಲಿ ಇದು ಒಂದು ಅಪರೂಪದ ಸಮಾಜವಾಗಿದೆ. ನಮ್ಮಲ್ಲಿ ಹಲವಾರು ಧರ್ಮಗಳಿವೆ ಹಲವಾರು ಜಾತಿಗಳಿವೆ, ಮತಗಳಿವೆ, ನಂಬಿಕೆಗಳಿವೆ, ಅದೇ ರೀತಿ ಹಲವಾರು ಭಾಷೆಗಳಿವೆ. ಜೊತೆಗೆ ಭೌಗೋಳಿಕವಾಗಿ ಇದು ಒಂದು ಬೃಹತ್ ರಾಷ್ಟ್ರ. ಅಂದ ಮೇಲೆ ಇಲ್ಲಿ ನಾವು ವಿಭಿನ್ನತೆಯನ್ನು ಕಾಣುವುದು ಸಹಜ ಲಕ್ಷಣ ಇದನ್ನು ನೋಡಿಯೇ ಪಂಡಿತ್ ಜವಾಹರಲಾಲ್ ನೆಹರೂರವರು, ಅಬುಲ್‌ಕಲ್ ಆಜಾದ್‌ರವರು ಸರ್ದಾರ್ ವಲ್ಲಭಾಯ್ ಪಟೇಲ್‌ರವರು ಇನ್ನೂ ಇತ್ಯಾದಿ, ಇತ್ಯಾದಿ ಮಹಾನ್ ನಾಯಕರು ಪೂಜ್ಯ ಮಹಾತ್ಮ ಗಾಂಧೀಜಿಯವರ ಅನುಯಾಯಿಗಳಾಗಿ ಈ ವಾದವನ್ನೇ ಪ್ರಮುಖವಾಗಿ ತಮ್ಮ ರಾಜಕೀಯ ಜೀವನಾಡಿಯಲ್ಲಿ ಸ್ಪಷ್ಟವಾಗಿ ಇಟ್ಟುಕೊಂಡಿದ್ದರು. ಅದರ ಹಿನ್ನೆಲೆಯಲ್ಲಿ ಲಕ್ಷಾಂತರ, ಕೋಟ್ಯಾಂತರ ಜನರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದರು. ಅದೂ ಕೂಡ ಪೂಜ್ಯ ಮಹಾತ್ಮ ಗಾಂಧೀಜಿಯವರು ಇದ್ದ ಕಾಲದಲ್ಲಿ ಬಂದಿತ್ತು. ಇದು ನಾವು ಚರಿತ್ರೆಯಲ್ಲಿ ಓದಿ ತಿಳಿದುಕೊಳ್ಳತಕ್ಕಂಥ ವಿಷಯವಾಗಿದೆ. ಅದನ್ನು ನೋಡಿದಂಥ ಆ ಕಾಲದಲ್ಲಿದ್ದಂಥ ಈಗಲೂ ವಯಸ್ಸಾದ ಹಿರಿಯರು ಅದನ್ನು ಮೆಲುಕು ಹಾಕುವಂಥ ವಿಚಾರ ಇದಾಗಿದೆ. ಈ ಸಂದರ್ಭದಲ್ಲಿ ನಾನು ಅದನ್ನು ನೆನಪಿಗೆ ತಂದುಕೊಂಡೆ ಅಷ್ಟೆ. ಯಾವ ವಿಚಾರದಲ್ಲಿ ಈ ವಿಚಾರತನವನ್ನು ಅವರು ಇಟ್ಟು ಈ ಹೋರಾಟವನ್ನು ಸ್ವಾತಂತ್ರ್ಯಗಳಿಕೆ ಕಾಲದಲ್ಲಿ ಮಾಡಿದರೋ ಅದರ ಜೊತೆಯಲ್ಲಿ ಈ ಸೌಹಾರ್ದತೆ ಬಗ್ಗೆ ಕೂಡ ಹೆಚ್ಚಿನ ಗಮನ ಇಟ್ಟು ಬಂದಿದ್ದಾರೆ. ಇದೇ ಅಭಿಪ್ರಾಯವನ್ನು ಇಟ್ಟು ಇದೇ ವಿಚಾರವನ್ನಿಟ್ಟು ಜಯಪ್ರಕಾಶ ನಾರಾಯಣ್‌ರವರು ಸುಭಾಷ್ ಚಂದ್ರಬೋಸ್ ಆದಿಯಾಗಿ ಎಲ್ಲರೂ ಸೇರಿ ಹೋರಾಟವನ್ನು ಮಾಡಿದರು. ನನಗನ್ನಿಸುತ್ತದೆ, ನಮ್ಮಂಥ ಸಮಾಜದಲ್ಲಿ ಸಮಾಜ ಚಿತ್ರವನ್ನು ಹಿನ್ನೆಲೆಯಾಗಿ ಇಟ್ಟರೆ ಅವರ ಅನಿಸಿಕೆ ಚಿಂತನೆ ಮತ್ತು ಆಗ ತೆಗೆದುಕೊಂಡಿರತಕ್ಕಂಥ ತೀರ್ಮಾನ ಅವರ ಕಾಲಕ್ಕೆ ಮುಗಿದು ಹೋಗಲಿಲ್ಲ ಅವರು ಕಾಲವಾದರೂ ಕೂಡ ನಮ್ಮ ಕಾಲಕ್ಕೆ ಸ್ಪಷ್ಟವಾಗಿ ಅವರ ಚಿಂತನೆಯ ಜವಾಬ್ದಾರಿಯನ್ನು ನಮಗೆ ಬಳುವಳಿಯಾಗಿ ಬಿಟ್ಟು ಹೋಗಿದ್ದಾರೆ. ಆದರೆ ಭವಿಷ್ಯದಲ್ಲಿ ಈ ಒಂದು ಚಿಂತನೆ ಅತ್ಯಾವಶ್ಯಕ ಎನ್ನತಕ್ಕಂಥ ಒಂದು ದೃಷ್ಟಿಯಿಂದ ಹೇಳುತ್ತಿದ್ದೇನೆ. ನಮ್ಮಂಥ ಸಮಾಜ ಏನು ವಿಭಿನ್ನವಾಗಿದೆ. ಆ ಸಮಾಜದಲ್ಲಿ ಏಕತೆ ಸಮಗ್ರತೆ ಮತ್ತು ಒಗ್ಗಟನ್ನು ಹುಟ್ಟಿಸಿ ಅದನ್ನು ಬೆಳೆಸಿ ಕಾಪಾಡಿಕೊಂಡು ಬರತಕ್ಕಂಥದ್ದು ಬಹಳ ಕಷ್ಟ ಎನ್ನತಕ್ಕಂಥ ಮಾತು ಇದರಲ್ಲಿ ಅಡಕವಾಗಿದೆ. ಅದಕ್ಕಾಗಿ ನಾವು ಎಲ್ಲಾ ರಾಜಕೀಯ ಪಕ್ಷಗಳೂ ಕೂಡ ಸ್ಪಷ್ಟವಾಗಿ ಈ ಮಾತನ್ನು ಪದೇ ಪದೇ ಹೇಳುತ್ತಿದ್ದೇವೆ. ಚುನಾವಣೆಗಳು ಬಂದಾಗಲೂ ಕೂಡ ನಮ್ಮ ಚುನಾವಣೆಯ ಪ್ರಣಾಳಿಕೆಯನ್ನು ಬಿಡುಗಡೆ ಮಾಡತಕ್ಕಂಥ ಸಂದರ್ಭದಲ್ಲಿ ಈ ಮಾತನ್ನು ಆಡುತ್ತೇವೆ. ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಸೆಕ್ಯುಲರ್ ಸ್ಟೇಟ್ ಅಥವಾ ಜಾತ್ಯಾತೀತ ರಾಷ್ಟ್ರದ ನಿರ್ಮಾತೃಗಳಿಗೆ ನಮ್ಮ ಚಿಂತನೆ ಸಂಪೂರ್ಣ ಹೋಗುತ್ತದೆ. ನಾವು ಚುನಾವಣೆಗಳಲ್ಲಿ ಗೆಲ್ಲಲಿ ಅಥವಾ ಸೋಲಲಿ ಮೂಲಭೂತವಾಗಿ ನಾವು ಇದಕ್ಕೆ ಬದ್ಧರು. ಈ ಬದ್ಧತೆಯನ್ನು ನಾವು ಮತ್ತೊಬ್ಬರಿಗೆ ಬಳುವಳಿಯಾಗಿ ಕೊಡುವುದಕ್ಕಾಗುವುದಿಲ್ಲ. ಅದು ನಾವು ರಾಜಿ ಕೂಡ ಮಾಡಿಕೊಳ್ಳುವುದಕ್ಕೆ

ಸಾಧ್ಯವಿಲ್ಲದ ಒಂದು ವಿಚಾರಧಾರೆ. ಈ ಒಂದು ದೃಷ್ಟಿಯಿಂದ ನನಗನ್ನಿಸುತ್ತದೆ, ಈ ಒಂದು ಚಿಂತನೆಯನ್ನು ನಾವು ಮುಂದುವರೆಸಿ, ಬೆಳೆಸಿ ಜವಾಬ್ದಾರಿಯನ್ನು ನಿರ್ವಹಣೆ ಮಾಡದಿದ್ದರೆ ಸಮಾಜದ ಎಲ್ಲ ಧರ್ಮ, ಜಾತಿ ಮತ ಭಾಷೆಗಳ ಜನರಲ್ಲಿ ನಾವು ಒಗ್ಗಟನ್ನು ಬೆಳೆಸಿಕೊಂಡು, ಕಾಪಾಡಿಕೊಂಡು ಹೋಗತಕ್ಕಂಥದ್ದು ಬಹಳ ಕಷ್ಟವಾಗುತ್ತದೆ. ಇದರ ಜವಾಬ್ದಾರಿಯನ್ನು ಅರಿತೇ ನಾವೆಲ್ಲರೂ ಕೂಡ ಚರ್ಚೆಯ ಕಾಲದಲ್ಲಿ ಪದೇ ಪದೇ ಈ ಮಾತನ್ನು ಆಡಿದ್ದೇವೆ. ಸೌಹಾರ್ದತೆ, ಕೋಮುಗಳ ಮಧ್ಯೆ ಮೂಲಭೂತವಾಗಿ ಅತಿ ಅವಶ್ಯಕತೆಯಾಗಿ ಇರತಕ್ಕದ್ದು. ಇದಕ್ಕೆ ಧಕ್ಕೆ ಅಥವಾ ಊನ ಬಾರದ ರೀತಿಯಲ್ಲಿ ನಮ್ಮ ತಿಳುವಳಿಕೆ, ಚಿಂತನೆ ಹರಿದುಹೋಗಬೇಕು ಎನ್ನತಕ್ಕಂಥಾದ್ದು ನನ್ನ ಅನಿಸಿಕೆ. ಅದು ಎಲ್ಲರೂ ಒಪ್ಪತಕ್ಕಂಥಾದ್ದು, ಮಾನ್ಯ ಸಭಾಧ್ಯಕ್ಷರೇ, ಸ್ವಾತಂತ್ರ್ಯಾನಂತರವೂ ಕೂಡ ಕೆಲವು ವರ್ಷಗಳಲ್ಲಿ, ಕೆಲವು ತಿಂಗಳಲ್ಲಿ, ಕೆಲವು ದಿನಗಳಲ್ಲಿ ಅಲ್ಲಲ್ಲಿ ಸಣ್ಣಪುಟ್ಟ ಘಟನೆಗಳು, ಕೋಮುಸೌಹಾರ್ದತೆಯನ್ನು ಕಲಕತಕ್ಕಂಥ ಅಥವಾ ಭಿನ್ನತೆಗೆ ಎಡೆ ಮಾಡಿಕೊಡತಕ್ಕಂಥ ಘಟನೆಗಳು ನಡೆದಿರತಕ್ಕದ್ದು ನಿಜ. ಅವು ರಿಜಿಸ್ಟರಾಗಿರತಕ್ಕ ಕೇಸ್‌ಗಳು ಕೇಂದ್ರ ಮತ್ತು ರಾಜ್ಯದ ಆಡಳಿತಾರಂಗದಲ್ಲಿ ಯಾವುದೇ ಪಕ್ಷದ ಸರ್ಕಾರವಿರಲಿ ನಾವು ಹೇಳುತ್ತೇವೆ. ಸ್ವಾತಂತ್ರ್ಯ ಬಂದ ಮೇಲೆ ಅಂದರೆ ಸ್ವಾತಂತ್ರ್ಯ ಬಂದ ತಕ್ಷಣದ ಕೆಲವು ದಿನಗಳನ್ನು ಬಿಟ್ಟರೆ ನಂತರ ಈ ಪರಿಸ್ಥಿತಿ ಉಲ್ಬಣವಾಗಿರಾಷ್ಟ್ರದ ಉದ್ದಗಲಕ್ಕೂ ಅವಶ್ಯವಾಗಿ ಮುಟ್ಟಿತೇನೊ, ಪರಿಸ್ಥಿತಿ ನಮ್ಮ ತಹಬಂದಿಗೆ ರಾಷ್ಟ್ರ ವ್ಯಾಪಿಯಾಗಿ ಅಥವಾ ರಾಜ್ಯಮಟ್ಟದಲ್ಲಿ ಬರಲಾರದೇನೊ ಎನ್ನತಕ್ಕಂಥ ಆತಂಕ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲಿ ಉದ್ಭವವಾಗತಕ್ಕಂಥ ಮಟ್ಟ ಮುಟ್ಟಿತು. ಈ ರೀತಿ ಉಂಟಾಗುತ್ತದೆನ್ನುವ ಭಾವನೆ ನಮಗೆ ಯಾರಿಗೂ ಇರಲಿಲ್ಲ ಕೆಲವು ಸಾರಿ ಒಂದೊಂದು ಜಾಗದ ಬಗ್ಗೆ ಮತ್ತೊಂದರ ಬಗ್ಗೆ ಕೆಲವು ಇಷ್ಯೂಸ್ ಬರುತ್ತದೆ. ಬಹಳ ಸೆನ್‌ಸಿಟೀವ್ ಇಷ್ಯೂಸ್ ಎಂದು ನಾವು ಏನು ಕರೆಯುತ್ತೇವೆ ಅದರ ಬಗ್ಗೆ ಕೋಮು ಸೌಹಾರ್ದತೆ ಅಲ್ಪಸ್ವಲ್ಪವೂ ಕದಡದ ಹಾಗೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯನ್ನು ನಿರ್ವಹಣೆ ಮಾಡುವ ವಿಚಾರದಲ್ಲಿ ನಮ್ಮ ವಿಚಾರಧಾರೆಗಳನ್ನು ತಹಬಂದಿಯಲ್ಲಿಟ್ಟೇ ನಾವು ವ್ಯವಹಾರವನ್ನು ಮಾಡುತ್ತಾ ಬಂದಿದ್ದೇವೆಂದು ನನ್ನ ಭಾವನೆ. ಅದಕ್ಕಾಗಿ ಆ ಸಂದರ್ಭಗಳು ಬಂದಾಗ ಅವುಗಳನ್ನು ನಿಭಾಯಿಸತಕ್ಕಂಥ ಜವಾಬ್ದಾರಿಯನ್ನು ಕೂಡ ಅವರು ಹೊತ್ತಿದ್ದಾರೆ. ನಾನು ಹಿಂದಿನ ಚರಿತ್ರೆಗೆ ಹೋಗುವುದಿಲ್ಲ. ಪೀಠಿಕೆಯಾಗಿ ಇಷ್ಟು ಮಾತ್ರ ಹೇಳಿದ್ದೇನೆ.

೫—೨೫ ಪಿ.ಎಂ.

ಈ ಸಾರಿ ಈ ರೀತಿ ನಡೆಯುವುದಕ್ಕೆ ಏನು ಕಾರಣ ಎಂಬುದು ನಮಗೆಲ್ಲರಿಗೂ ಮನದಟ್ಟಾಗಿದೆ. ಬಾಬ್ರಿ ಮಸೀದಿ ಮತ್ತು ರಾಮಜನ್ಮಭೂಮಿ ವಿವಾದ ಏನಿದೆ ಇದು ರಾಷ್ಟ್ರಮಟ್ಟದಲ್ಲಿ ಜನರ ಗಮನ ಸೆಳೆದಿರತಕ್ಕ ವಿಚಾರ ಎಂಬುದರಲ್ಲಿ ಸಂಶಯ ಇಲ್ಲ ಮತ್ತು ಇದು ನಿಸ್ಸಂಶಯವಾಗಿ ಯಾರಾದರೂ ಮಾತನಾಡತಕ್ಕ ವಿಚಾರವಾಗಿದೆ. ಅದನ್ನು ಬಗೆಹರಿಸುವುದಕ್ಕೆ ಹಲವಾರು ಕಾರಣಗಳು ಅಡ್ಡ ಬಂದಿರ ಬಹುದು. ನಾನು ಈಗ ಆ ವಿವರಗಳಿಗೆ ಹೋಗುವುದಿಲ್ಲ. ಕೆಲವರು ಕೋರ್ಟ್ ಕೊಡತಕ್ಕ ತೀರ್ಪಿಗೆ ಬದ್ಧರಾಗ ಬೇಕೆಂದರೆ ಇನ್ನು ಕೆಲವರು ಕೋರ್ಟಿನ ವ್ಯಾಪ್ತಿಯಿಂದ ಹೊರಗಡೆ ಇರಬೇಕೆಂಬ ಅಭಿಪ್ರಾಯ ವನ್ನು ವ್ಯಕ್ತಪಡಿಸಿದ್ದಾರೆ. ಮತ್ತೆ ಕೆಲವರು ಸಂಧಾನದ ಮುಖೇನ ವಿಚಾರ ಸರಿಸಮಾಪ್ತಿಗೊಳ್ಳಬೇಕು ಎಂದು ಆತಂಕದ ಹಿನ್ನೆಲೆಯಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ ಮತ್ತೆ ಕೆಲವರು ಅದಕ್ಕೆ ಎಡೆಯಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವುದನ್ನು ನಾವು ನೋಡಿದ್ದೇವೆ. ಹೀಗೆ ವಿಭಿನ್ನ/ಅಭಿಪ್ರಾಯಗಳ ಮಧ್ಯೆ ಆ ಒಂದು ವಿವಾದ ಇತ್ಯರ್ಥ ಕಾಣದ ಹಾಗೆ ಉಳಿದಿರುವುದು ಭವಿಷ್ಯದ ದೃಷ್ಟಿಯಿಂದ ಮತ್ತೊಂದುಸಾರಿ ಆತಂಕಕ್ಕೆ ಎಡೆಮಾಡಿಕೊಡತಕ್ಕ ವಿಚಾರವಾಗಿದೆ. The fall out of that matter, I think, has engulfed all the right thinking people in the entire country. ಎಂಬುದು ನಮ್ಮೆಲ್ಲರನ್ನು ಚಿಂತನೆಗೆ ಈಡುಮಾಡಿದೆ. ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕ ಘಟನೆಗಳ ಬಗ್ಗೆ ಒಂದೇ ಒಂದು ಮೂಲಭೂತವಾದ ಅಂಶವನ್ನು ತಮ್ಮ ಗಮನಕ್ಕೆ ತರುತ್ತೇನೆ. ಅವುಗಳ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರ ಮತ್ತು ಉಪ ನಾಯಕರ ಗಮನಕ್ಕೂ ತರುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನಡೆದಿರತಕ್ಕ ಘಟನೆಗಳನ್ನು ನೋಡಿ ನಮಗೆ ನಿಮಗೆ ಯಾರಿಗೂ ಸಮಾಧಾನವಾಗಿಲ್ಲ. ರಾಷ್ಟ್ರದಲ್ಲೆ ಘಟನೆಗಳು ನಡೆದಿವೆ ಎಂಬ ಕಾರಣದಿಂದ ಇವತ್ತು ಯಾವುದೇ ಷೆಲ್ಟರ್ ತೆಗೆದುಗೆಕೊಳ್ಳತಕ್ಕ ಪ ಯತ್ನ ನಾನು ಮಾಡುವುದಿಲ್ಲ. ಈ ಮಾತನ್ನು ಸ್ಪಷ್ಟವಾಗಿ ಮಾನ್ಯ ಅಧ್ಯಕ್ಷರ ಮೂಲಕ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಆದರೆ ರಾಷ್ಟ್ರ ವ್ಯಾಪ್ತಿಯಾಗಿ ನಡೆದಿರತಕ್ಕ ಘಟನೆಗಳ ಹಿನ್ನೆಲೆಯನ್ನು ಮರೆಯುವುದಕ್ಕೆ ಆಗುವುದಿಲ್ಲ. ಅದು ತಮ್ಮೆಲ್ಲರ ಮನಸ್ಸಿನಲ್ಲಿದ್ದರೆ ಒಳ್ಳೆಯದು. ಯಾವುದೋ ಒಂದು ವಿವಾದ ಕರ್ನಾಟಕ ರಾಜ್ಯದಲ್ಲಿ ಹುಟ್ಟಿ ಬೆಳೆದಿದ್ದರೆ ಕರ್ನಾಟಕಕ್ಕೆ ಸೀಮಿತಗೊಂಡಿದ್ದಗೆ ಇಲ್ಲಿ ಆಡಳಿತಾಂಗದ ಬಗ್ಗೆ ಹೆಚ್ಚಿನ ವ್ಯಾಖ್ಯಾನ ಮಾಡತಕ್ಕ

ಅಧಿಕಾರ, ಸಾರ್ವಜನಿಕರಿಗೆ ಮಾನ್ಯ ಸದಸ್ಯರಿಗೆ ಸಹಜವಾಗಿ ಉದ್ಭವವಾಗುತ್ತವೆ. ಆದರೆ ಇದು ಹಾಗಲ್ಲ. ಇದು ಎಲ್ಲೋ ನಡೆದಿರತಕ್ಕದ್ದು, ಆದರೆ ನಮ್ಮ ರಾಷ್ಟ್ರದಲ್ಲಿ ನಡೆದಿರತಕ್ಕದ್ದು. ಎಲ್ಲೇ ನಡೆದರೂ ಕೂಡ, ಎಲ್ಲೋ ನಡೆದರೂ ಕೂಡ ನಮ್ಮನ್ನು ಕೂಡ ಚಿಂತೆಗೆ ಈಡುಮಾಡಿದೆಯೆಂಬ ವಿಚಾರವನ್ನು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದುದರಿಂದ ಈ ವಿಚಾರ ರಾಷ್ಟ್ರವ್ಯಾಪ್ತಿಯಾಗಿದೆ. ಕರ್ನಾಟಕದಲ್ಲಿ ಕೂಡ ಇದೆ. ನಾನು ಉತ್ತರ ಪ್ರದೇಶದಲ್ಲಿ ಏನು ನಡೆಯಿತು, ಬಿಹಾರದಲ್ಲಿ ಏನು ನಡೆಯಿತು, ಮಧ್ಯಪ್ರದೇಶದಲ್ಲಿ, ರಾಜಸ್ಥಾನದಲ್ಲಿ, ಒರಿಸ್ಸಾ, ಗುಜರಾತ್, ಮಹಾರಾಷ್ಟ್ರ, ಆಂಧ್ರಪ್ರದೇಶ, ತಮಿಳ್ನಾಡು ಮತ್ತು ವೆಸ್ಟ್‌ಬೆಂಗಾಲ್‌ನಲ್ಲಿ ನಡೆದಿರತಕ್ಕ ಘಟನೆಗಳ ವಿವರಗಳಿಗೆ ಹೋಗುವುದಿಲ್ಲ. ಬಹುಶಃ ಒಂದು ಮಾತನ್ನು ತಾವು ಒಪ್ಪುತ್ತೀರೆಂದು ಭಾವಿಸಿದ್ದೇನೆ. ಎಲ್ಲ ಕಡೆಯಲ್ಲೂ ಕೂಡ ಇದರ ಒಂದು ಅನುಭವವನ್ನು ಜನತೆ ಪಡೆದಿದ್ದಾರೆ. ಘಟನೆಗಳ ಸಂಖ್ಯೆ ಒಂದು ರಾಜ್ಯದಲ್ಲಿ ಕಡಿಮೆ ಇದ್ದರೆ ಮತ್ತೊಂದು ರಾಜ್ಯದಲ್ಲಿ ಜಾಸ್ತಿ ಇರಬಹುದು. ಆದರೆ ಇದರ ಎಫೆಕ್ಟ್ ಏನಿದೆ ಅದು ಸ್ಪಷ್ಟವಾಗಿ ಎಲ್ಲಾ ಕಡೆ ಆಗಿದೆ. ಈ ವಿಚಾರದ ಹಿನ್ನೆಲೆಯಲ್ಲಿ ನಾವು ಕರ್ನಾಟಕದಲ್ಲಿ ನಡೆದಿರತಕ್ಕ ಘಟನೆಗಳನ್ನು ನೋಡಬೇಕಾಗುತ್ತದೆಂದು ಹೇಳಿದರೆ ತಪ್ಪಾಗುವುದಿಲ್ಲವೆಂದು ಭಾವಿಸಿದ್ದೇನೆ. ಅದನ್ನು ತಾವು ಒಪ್ಪುತ್ತೀರೆಂದು ನನ್ನ ಭಾವನೆ. ಇಲ್ಲಿ ಏನು ಘಟನೆಗಳು ನಡೆದವು ಅವು ಅಷ್ಟರಮಟ್ಟಿಗೆ ನಡೆಯುತ್ತವೆಂದು ಯಾರೂ ಕೂಡ ನಿಜವಾಗಿಯೂ ನಿರೀಕ್ಷೆ ಮಾಡಿರಲಿಲ್ಲ. ಯಾವುದೇ ಪಕ್ಷದ ಸರ್ಕಾರ ಇರಲಿ, ಮತ್ತೊಂದು ಇರಲಿ, ನಮ್ಮಲ್ಲಿ ಶಾಂತಿಯನ್ನು ಕಾಪಾಡಿಕೊಂಡು ಹೋಗತಕ್ಕಂಥ ವಿಚಾರದಲ್ಲಿ ಎಲ್ಲಿಯೂ ಭಿನ್ನತೆ ಬಂದಿಲ್ಲ. ಒಂದೇಸಾರಿ ದಿಗ್ಗನೆ ಎದ್ದು ಅಲ್ಲಲ್ಲಿ ಘಟನೆಗಳು ಪ್ರಾರಂಭವಾದರೆ ಬಹಳ ಕಷ್ಟವಾಗುತ್ತದೆ. ಘಟನೆಗಳು ಇಲ್ಲಿ ಇವತ್ತು ನಡೆಯುತ್ತದೆ, ಮಧ್ಯಾಹ್ನ ಮತ್ತೊಂದು ಕಡೆ ನಡೆಯುತ್ತದೆ, ಸಂಜೆ ಒಂದು ಕಡೆ ನಡೆಯುತ್ತದೆ. ಬೆಳಿಗ್ಗೆ ಇನ್ನೊಂದು ಕಡೆ ನಡೆಯುತ್ತದೆ. ಆಮೇಲೆ ಅಲ್ಲಲ್ಲಿ ಘಟನೆಗಳು ನಡೆಯುವುದು ದೈನಂದಿನ ಕಾರ್ಯಕ್ರಮವಾಗುತ್ತದೆ. ಇವತ್ತಿನ ದಿವಸ ಪಂಜಾಬಿನಲ್ಲಿ ಜನ ಸಾಯುವ ಬಗ್ಗೆ ಯಾರೂ ಕೂಡ ಸೀರಿಯಸ್ಸಾಗಿ ಗಮನ ಕೊಡುತ್ತಿಲ್ಲವೆಂದು ನನ್ನ ಭಾವನೆ. ಪಾಪ, ಅಮಾಯಕರು ಅಲ್ಲಿ ಸಾಯುತ್ತಿದ್ದಾರೆ. ನಾನು ಆದರ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ಆದರೆ ದಿನನಿತ್ಯ ಏನಾದರೂ ನಡೆಯುತ್ತಾ ಇದ್ದರೆ ಸಾವಿಗೆ ಅಷ್ಟೊಂದು ಗಮನ ಕೊಡದ ಪರಿಸ್ಥಿತಿ ಉದ್ಭವವಾಗುತ್ತದೆ. ಒಂದು ಸಾರಿ ಸತ್ತರೆ ಜನ ಅಳಬಹುದು. 'ದಿನಾ ಸತ್ತರೆ ಅಳುವವರು ಯಾರು' ಎಂದು ಬಯಲುಸೀಮೆಯ ಗಾದೆ ಇದೆ. ಮಾನಸಿಕವಾಗಿ ಮನುಷ್ಯನ ಸ್ವಭಾವ ಏನೆಂದರೆ, ಕೈಕಾಲಿಗೆ ಪೆಟ್ಟು ಬಿದ್ದರೆ ಜನ ಬಹಳ ಗಮನ ಕೊಡುತ್ತಾರೆ. ಆದರೆ ಜನ ಸಾಯುವ ಪರಿಸ್ಥಿತಿ ಬಂದರೆ ಕಾಲಿಗೆ ಪೆಟ್ಟು ಬಿದ್ದದ್ದು ಲೆಕ್ಕಕ್ಕೆ ಬರುವುದಿಲ್ಲ. ಈ ಮಟ್ಟಕ್ಕೆ ಹೋಗಬಾರದು. ಮಾನ್ಯ ಸಭಾಧ್ಯಕ್ಷರೆ, ನಾನು ನಮ್ಮ ರಾಜ್ಯವನ್ನು ಪಂಜಾಬಿಗೆ ಹೋಲಿಸುವುದಿಲ್ಲ. ಅದು ಒಳ್ಳೆಯದಲ್ಲ. ಅದನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡಬೇಕೆಂಬ ದೃಷ್ಟಿಯಿಂದ ಬಿಟ್ಟಿದ್ದೇನೆ. ಆದರೆ ರಾಷ್ಟ್ರದಲ್ಲಿ ನಡೆದಂಥ ಘಟನೆ ನೋಡಿದರೆ, ನಮ್ಮಲ್ಲೂ ಕೂಡ ನಡೆದಿದೆ. ಇಲ್ಲಿ ಭುಗಿಲ್ ಎಂದು ನಡೆದಿದೆ. ತಕ್ಷಣ ಏನು ಮಾಡಬೇಕು ಎಂಬುದು ಗೊತ್ತಾಗಲಿಲ್ಲ. ಅಸತ್ಯ ಸಂಗತಿಗಳು, ವದಂತಿಗಳು ಸುಮಾರಾಗಿ ಸಾಕಷ್ಟು ಪ್ರಮಾಣದಲ್ಲಿ ಹುಟ್ಟಿ ಹಬ್ಬಿ ಕೆಲವು ಜನರ ಜೀವನವನ್ನು ಆಹುತಿ ತೆಗೆದುಕೊಂಡಿದ್ದರೆ, ಕೆಲವರ ಮೈಕೈಗೆ ನೋವನ್ನುಂಟು ಮಾಡಿದ್ದರೆ, ಲಕ್ಷಾಂತರ ರೂಪಾಯಿ ಆಸ್ತಿಪಾಸ್ತಿ ಹಾಳಾಗಿವೆ. ನಾನು ಅಧಿಕಾರ ವಹಿಸಿಕೊಂಡ ಮೇಲೆ ಎಲ್ಲೆಲ್ಲಿ ಹೋದೆ ಎಂಬುದನ್ನು ಹೇಳುತ್ತೇನೆ. ಅಂದರೆ ಮೊದಲಿದ್ದವರು ಏನು ಮಾಡಿದರು ಎನ್ನುವುದರ ಬಗ್ಗೆ ಅಲ್ಲ, ಅಂದರೆ ಅದು ನಮಗೆ ಸಂಬಂಧ ಇಲ್ಲ ಎಂದು ಮಾತನಾಡುವುದಿಲ್ಲ ಅದು ಯಾರ ಕಾಲದಲ್ಲಿ ನಡೆದಿದ್ದರೂ ಕೂಡ ವಿಚಾರ ಮಾಡತಕ್ಕ ವಿಚಾರ. ಅಸತ್ಯದ ವದಂತಿಗಳು ಸಾಕಷ್ಟು ಪ್ರಮಾಣದಲ್ಲಿ ಹಬ್ಬಿ ಜನರ ತಲೆ ಕೆಡೆಸಿರುವುದಂತೂ ನಿಜ. ಹಿಂದೆ ಕೋಮುಗಲಭೆಗಳು ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ಮಾತ್ರ ಸೀಮಿತಗೊಂಡಿತ್ತು. ಆದರೆ ಗ್ರಾಮೀಣ ಪ್ರದೇಶಗಳಿಗೆ ಎಂದೂ ಕೂಡ ಹಬ್ಬಿರಲಿಲ್ಲ. ಎಲ್ಲೋ ಒಂದೆರಡು ಘಟನೆಗಳು ಇರಬಹುದು; ನನಗಂತೂ ನೆನಪಿಲ್ಲ, ಪಟ್ಟಣ ಪ್ರದೇಶಕ್ಕೆ ಮಾತ್ರ ಅದು ಸೀಮಿತಗೊಳ್ಳುತ್ತಿತ್ತು. ಅಲ್ಲಲ್ಲೇ ತಕ್ಷಣ ಸರಿಹೋಗುತ್ತಿತ್ತು. ಈ ಸಾರಿ ಅದೇನು ಬಂತೋ ನನಗಂತೂ ಗೊತ್ತಿಲ್ಲ. ಎಲ್ಲ ಕಡೆಗಳಲ್ಲಿ ಹಳ್ಳಿ ಕಡೆ ಬಿಸಿ ತಾಕಿದೆ ಹಳ್ಳಿ ಜನ ಭಾಗವಹಿಸಿರುವುದು ನಮ್ಮ ತನಿಖೆಯಿಂದೆ ಸ್ಪಷ್ಟವಾಗಿ ಗೊತ್ತಾಗಿದೆ. ಪಟ್ಟಣ ಪ್ರದೇಶದಿಂದ ಗ್ರಾಮೀಣ ಪ್ರದೇಶಗಳಿಗೂ ಹೋಗಿದೆ ಎಂಬುದು ಸ್ಪಷ್ಟವಾಗಿ ಗೋಚರವಾಗಿದೆ. ಒಂದು ಸಂತೋಷದ ಸಂಗತಿ ಎಂದರೆ, ಇಷ್ಟಿದ್ದರೂ ಕೂಡ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ಎಲ್ಲಾ ತಾಲ್ಲೂಕುಗಳಲ್ಲಿ ಇದು ಹೋಗಿಲ್ಲ ಕೆಲವು ಕಡೆ ಲಕ್ಷಾಂತರ ಜನರು ಇದರಿಂದ ಭಯಭೀತರಾಗಿ ದೂರ ಉಳಿದರು ಹಿಂದೂ ಬಾಂಧವರು ಇರಬಹುದು, ಮುಸಲ್ಮಾನ್ ಬಾಂಧವರಿರಬಹುದು, ಅಥವಾ ಇನ್ಯಾವುದೇ ಕೋಮಿಗೆ ಸೇರಿದ ಜನರಿರಬಹುದು ಅವರು ಸ್ಪಷ್ಟವಾಗಿ ದೂರ ಉಳಿದರು. ಇಲ್ಲಿ ಕೂಡ

ಎಲ್ಲರೂ ಅದರಲ್ಲಿ ಭಾಗವಹಿಸಿಲ್ಲವೆಂದು ತನಿಕೆಯಿಂದ ಗೊತ್ತಾಗುತ್ತದೆ. ಅದಕ್ಕೆ ತನಿಖೆಯೂ ಕೂಡ ಬೇಕಾಗಿಲ್ಲ. ಏಕೆಂದರೆ, ಒಂದು ಕಡೆ ಸಾವಿರ ಜನ ಇದ್ದರೆ ಅಷ್ಟು ಜನರೂ ಭಾಗವಹಿಸಿಲ್ಲ. ಕೆಲವೇ ಕೆಲವು ಜನ ಅದರಲ್ಲಿ ಇರುತ್ತಾರೆ. ಅವರನ್ನು ನೀವು ಯಾವ ಯಾವ ಹೆಸರಿನಿಂದ ಕರೆಯುತ್ತೀರಿ ಅದನ್ನು ನಾನೂ ಕರೆಯುತ್ತೇನೆ. ಕಿಡಿಗೇಡಿಗಳು, ಸಮಾಜ ಘಾತುಕರು, ವಿಚ್ಛಿದ್ರಕಾರಕ ಪ್ರವೃತ್ತಿಯುಳ್ಳ ಜನ, ಕಾನೂನು ಮುರಿಯುತಕ್ಕವರು, ಸೌಹಾರ್ದತೆಗೆ ಸಂಪೂರ್ಣವಾಗಿ ಭಂಗ ತರತಕ್ಕವರು, ಶಾಂತಿ, ಪ್ರೀತಿ, ವಿಶ್ವಾಸ, ಕೋಮು ಸೌಹಾರ್ದತೆಗೆ ಎಳ್ಳಷ್ಟೂ ಗಮನ ಕೊಡದೇ ಇರುವವರು ಕೆಲವೇ ಜನ ಮಾತ್ರ ಜೀವ ಹರಣಕ್ಕೆ ಕಾರಣರಾಗಿದ್ದಾರೆ. ಕೈ, ಕಾಲುಗಳಿಗೆ ಊನ ಉಂಟಾಗುವುದಕ್ಕೆ ಕಾರಣರಾಗಿದ್ದಾರೆ. ಕೋಟ್ಯಾಂತರ ರೂಪಾಯಿ ಆಸ್ತಿಪಾಸ್ತಿ ನಷ್ಟಕ್ಕೆ ಕಾರಣರಾಗಿದ್ದಾರೆ. ನಾನು ಒಂದು ಮಾತನ್ನು ಪತ್ರಿಕಾ ಗೋಷ್ಠಿಯಲ್ಲಾಗಲಿ ಹೋದಕಡೆಯಲ್ಲಾಗಲಿ ಹೇಳುತ್ತಿದ್ದೆ.

ಕರ್ನಾಟಕ ರಾಜ್ಯದಲ್ಲಿ ನಾವು ಯಾವಾಗಲೂ ಶಾಂತಿಪ್ರಿಯರು. ನಾವು ಶಾಂತಿ ಕಾಪಾಡುವ ವಿಚಾರದಲ್ಲಿ ಮೂಲಭೂತವಾಗಿ ಅಪಾರವಾದ ನಂಬಿಕೆಯನ್ನು ಇಟ್ಟುಕೊಂಡಿರುವವರು. ಅದಕ್ಕೆ ಏನಾದರೂ ಭಂಗ ಬಂದರೆ ಯಾವುದೇ ಜನರು ಇದ್ದರೂ ಅದನ್ನು ಒಪ್ಪುವುದಿಲ್ಲ. ಗಲಭೆಪೀಡಿತ ಪ್ರದೇಶಕ್ಕೆ ನಾನು ಹೋಗಿ ಅಪೀಲ್ ಮಾಡಿದ್ದೇನೆ. ವಿರೋಧ ಪಕ್ಷದ ನಾಯಕರು ಅಪೀಲ್ ಮಾಡಿದ್ದಾರೆ, ಶಾಂತಿ ಸಮಿತಿಯಲ್ಲಿ ನಾವು ಮಾತನಾಡಿದ್ದೇವೆ, ಅವರೂ ಮಾತನಾಡಿದ್ದಾರೆ. ಶಾಂತಿ ಕಾಪಾಡುವ ವಿಷಯದಲ್ಲಿ ಬರೀ ಮುಖ್ಯಮಂತ್ರಿಗಳು ಹೇಳಬೇಕೆಂದಿಲ್ಲ. ಶಾಂತಿ ಕಾಪಾಡುವ ವಿಚಾರದಲ್ಲಿ ಬರೀ ಸರ್ಕಾರದ ಪಾತ್ರ ಮಾತ್ರ ಸಾಲದು. ವಿರೋಧ ಪಕ್ಷದ, ಇತರ ಎಲ್ಲರ ಪಾತ್ರ ಇರಬೇಕಾಗುತ್ತದೆನ್ನುವ ಮಾತನ್ನು ನಾನು ಪದೇ ಪದೇ ಒತ್ತಾಯ ಪೂರ್ವಕವಾಗಿ ಹೇಳಿದ್ದೇನೆ. ಪ್ರಕಟಣೆಗಳ ಮೂಲಕ ತಿಳಿಸಿದ್ದೇನೆ. ಸರ್ಕಾರ ಹೇಗೆ ಬರುತ್ತದೆಂದು ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ನಮ್ಮ ಸಮಾಜ ನಿರ್ಮಾಣ ಮಾಡಿರತಕ್ಕ ಒಂದು ಪೊಲಿಟಿಕಲ್ ಸಿಸ್ಟಮ್ ಇದು. ಇದು ರಾಜ್ಯದ ಒಂದು ವ್ಯವಸ್ಥೆ. ಸ್ವಾತಂತ್ರ್ಯಾನಂತರ ಚುನಾವಣೆ ಆಗಬೇಕು, ಮತ ಚಲಾವಣೆಯಾಗಬೇಕು. ಬಹುಮತ ಪಡೆದವರು ಅಧಿಕಾರಕ್ಕೆ ಬರುತ್ತಾರೆ, ಉಳಿದವರು ಆ ಕಡೆ ಕೂರುತ್ತಾರೆ. ಇದು ಒಂದು ವ್ಯವಸ್ಥೆ. ಇದು ಈ ಸಮಾಜದಲ್ಲಿ ಹುಟ್ಟಿ ಬಂದಿರತಕ್ಕ ಸರ್ಕಾರ ಆದ್ದರಿಂದ ಬರೀ ಸರ್ಕಾರವೇ ವಿನಂತಿ ಮಾಡಿದರೆ ಸಾಲದು. ನಾನು ಈ ಮಾತನ್ನು ಮೈಕ್‌ನಲ್ಲಿ ಪದೇ ಪದೇ ಹೇಳುತ್ತಿದ್ದೇನೆ. ನಾನು ಅಷ್ಟೇ ಅಲ್ಲ, ನಮ್ಮ ಅಧಿಕಾರಿಗಳೂ ಕೂಡಾ ಸ್ಥಳೀಯವಾಗಿ ಬೇರೆ ಕಡೆ ಬೇಕಾದಷ್ಟು ವಿನಂತಿ ಮಾಡುತ್ತಾ ಬಂದಿದ್ದಾರೆ. ತಾವೂ ಕೂಡಾ ಮಾಡಿದ್ದೀರಿ. ಪಕ್ಷಾತೀತವಾಗಿ ನಾವೂ ಮಾಡುತ್ತಿದ್ದೇವೆ. ಇವತ್ತು ಯಾವುದೇ ಸಂಘ ಸಂಸ್ಥೆ ಇರಬಹುದು, ಯಾವುದೇ ಜನತೆ ಇರಬಹುದು. ವಿರೋಧ ಪಕ್ಷದವರು ಇರಬಹುದು, ಶಾಸಕರು ಇರಬಹುದು. ಈ ಮನೆಯ ಆ ಮನೆಯ ಯಾರೇ ಸದಸ್ಯರು ಇರಬಹುದು, ಯಾರು ಯಾರು ಶಾಂತಿ ಕಾಪಾಡುವ ವಿಚಾರದಲ್ಲಿ ವಿನಂತಿ ಮಾಡಿದ್ದಾರೆ ಅದು ಬಾಯಿ ಮಾತಿನಲ್ಲಿ ಇರಬಹುದು ಅಥವಾ ಬರವಣಿಗೆಯಲ್ಲಿ ಇರಬಹುದು ಅದು ಕಟ್ಟೆಯ ಮೇಲೆ ಇರಬಹುದು, ಹೊಲದಲ್ಲಿ ಇರಬಹುದು, ಬೀದಿಯಲ್ಲಿ ಇರಬಹುದು, ಅವನ್ನು ಗೋಚರವಾಗಿ ಅಥವಾ ಅಗೋಚರವಾಗಿ ಮಾಡಿರಬಹುದು—ಅಂತಹವರೆಲ್ಲರಿಗೂ ಕೂಡಾ ನಾನು ಸರ್ಕಾರದ ಪರವಾಗಿ ಅಭಿನಂದನೆಯನ್ನು ಸಲ್ಲಿಸುತ್ತೇನೆ ಎಲ್ಲಾ ತಲೆಗಳೂ ಒಟ್ಟಿಗೆ ಸೇರಿ ಚಿಂತನೆ ಮಾಡಬೇಕಾದ ವಿಚಾರ ಇದಾಗಿದೆ. ಇದರಲ್ಲಿ ಲೋಪ ಉಂಟಾದರೆ ನಾಳೆ ಸರ್ಕಾರ ತನ್ನ ಕರ್ತವ್ಯದಿಂದ ದೂರ ಸರಿದೀತು ಎ ದು ನನ್ನ ಅನಿಸಿಕೆ ಇದರಲ್ಲಿ ಸರ್ಕಾರದ ಜವಾಬ್ದಾರಿ ಇದೆ. ಆದರೆ ಸರ್ಕಾರ ಒಂದೇ ಜವಾಬ್ದಾರಿ ಸ್ಥಾನದಲ್ಲಿ ಇಲ್ಲ. ಸಮಾಜ ಮತ್ತು ಸರ್ಕಾರ ಒಟ್ಟಿಗೇ ಸೇರಬೇಕೆಂದು ನಾನು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ತಾವೂ ಕೂಡಾ ಆ ಮಾತನ್ನು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದಲ್ಲಿ ಹೈದರಾಬಾದ್ ಕರ್ನಾಟಕದ ಭಾಗದ ಬೀದರ್, ಗುಲ್ಬರ್ಗ, ರಾಯಚೂರು ಮತ್ತು ಬಳ್ಳಾರಿಯನ್ನೂ ಸೇರಿಸಿ ಹೇಳುವುದಾದರೆ ಘಟನೆಗಳು ಎಲ್ಲೋ ಒಂದೊಂದು ಅಪರೂಪವಾಗಿ ನಡೆದಿವೆ ಇದು ಸಂತೋಷಪಡುವ ವಿಚಾರ. ಬಾಂಬೆ ಕರ್ನಾಟಕದಲ್ಲೂ ಕೂಡಾ ಬೆಳಗಾಂ, ಬಿಜಾಪುರ, ಕಾರವಾರಗಳಲ್ಲಿ ಏನೂ ಇಲ್ಲವೇ ಇಲ್ಲ. ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಟೌನ್‌ನಲ್ಲಿ ಸ್ವಲ್ಪ...

ಶ್ರೀ ಬಸವರಾಜ ರಾಯರೆಡ್ಡಿ — ಬೀದರ್‌ನಲ್ಲಿ ನಡೆದಿವೆ.

ಶ್ರೀ ಎಸ್. ಬಂಗಾರಪ್ಪ —ಬೀದರ್‌ನಲ್ಲಿ ನಡೆದ ಘಟನೆಗೆ ಬೇರೆ ಕೆಲವು ಕಾರಣಗಳು ಇರುವುದರಿಂದ ಅದನ್ನು ಇಲ್ಲಿ ಮಿಕ್ಸ್ ಮಾಡುವುದು ಬೇಡ. ಈ ಸಂದರ್ಭದಲ್ಲಿ ಹುಬ್ಬಳ್ಳಿಯಲ್ಲಿನ ಟೆನ್‌ಷನ್ ಬಿಟ್ಟರೆ ಬೇರೆ ಕಡೆ ಪರಿಸ್ಥಿತಿ ಅಷ್ಟೊಂದು ಗಂಭೀರವಾಗಿರುವುದು ನನಗೆ ಗೋಚರವಾಗಿಲ್ಲ. ಇನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡಾ ಒಂದೆರಡು ಕಡೆ ಟೆನ್‌ಷನ್ ಬಿಟ್ಟರೆ ಏನು ಹೆಚ್ಚು ಆಗಿಲ್ಲ ಎನ್ನುವ ಭಾವನೆ ಇದೆ.

ಎಲ್ಲೂ ಏನೇನೂ ಆಗಿಲ್ಲ ಎಂದು ಹೇಳುತ್ತಾ ಇಲ್ಲ. ಬೇರೆ ಕಡೆ ನಡೆದಿರುವುದನ್ನು ಹೋಲಿಸಿದರೆ ಇಲ್ಲಿ ಏನೇನೂ ಇಲ್ಲ ಎಂದು ಹೇಳಬಹುದು. ಎಂತ್ತೆ ಹಳೇ ಮೈಸೂರು ರಾಜ್ಯದಲ್ಲಿ ಉಳಿದಿರತಕ್ಕ ಭಾಗದಲ್ಲಿ ನಮ್ಮ ಮನಸ್ಸನ್ನು ಕೇಂದ್ರೀಕೃತಗೊಳಿಸಬಹುದು. ಸುಮಾರಾಗಿ ಕೋಲಾರ ಜಿಲ್ಲೆಯಲ್ಲಿ ಘಟನೆಗಳು ನಡೆದಿದೆ. ಕೋಲಾರದ ಶ್ರೀನಿವಾಸಪುರ ತಾಲ್ಲೂಕು, ಮುಳಬಾಗಿಲಿನಲ್ಲಿ ಘಟನೆಗಳು ನಡೆದಿವೆ, ಆದರೆ ಒಂದು ಸಂತೋಷದ ಸಂಗತಿಯೇನೆಂದರೆ. ಬೆಂಗಳೂರು ಸಿಟಿಯಲ್ಲಿ ಮಾತ್ರ ಎಲ್ಲೋ ಸಣ್ಣ ಪುಟ್ಟ ಘಟನೆಗಳು ನಡೆದಿದೆ, ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕಂಥಾದ್ದು ಅವಶ್ಯಕತೆ ಇಲ್ಲ. ಇದಕ್ಕಾಗಿ ನಾವು ನಮ್ಮ ಬೆಂಗಳೂರು ನಗರದ ನಾಗರೀಕರನ್ನು ಪ್ರತ್ಯೇಕವಾಗಿ ಅಭಿನಂದಿಸಬೇಕಾಗುತ್ತದೆ. ಕರ್ನಾಟಕದ ರಾಜಧಾನಿಯಲ್ಲಿ ಗಲಭೆಗಳು ಇಲ್ಲ ಎನ್ನುವುದು ಸಂತೋಷದ ಸಂಗತಿ. ಇದಕ್ಕಾಗಿ ಇಲ್ಲಿ ಕೆಲಸ ಕೆಲಸ ಮಾಡಿದಂತಹ ಪೋಲೀಸರ ಬಗ್ಗೆ ಒಳ್ಳೆಯ ಮಾತು ಆಡಿದರೆ ಅದನ್ನು ತಪ್ಪು ಎಂದು ಯಾರೂ ಭಾವಿಸಲಾರಿರಿ ಎಂದು ನಾನು ತಿಳಿದಿದ್ದೇನೆ. ಹೊಗಳಿಕೆಗಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಂದು ತಾವು ತಿಳಿಯಬಾರದು. ಬೆಂಗಳೂರು ನಗರದ ಪೋಲೀಸ್ ಅಧಿಕಾರಿಗಳ ಕರ್ತವ್ಯ ನಿರ್ವಹಣೆ ಶ್ಲಾಘನೀಯವೆಂದು ಎಲ್ಲರೂ ಹೇಳಿದ್ದಾರೆ ಇದನ್ನು ತಾವು ಕೂಡ ಒಪ್ಪಬಹುದು. ಕೆಲವು ದಿನಗಳು ರಾತ್ರಿಯಿಂದ ಬೆಳಗಿನ ತನಕ ನಿದ್ದೆ ಕೆಟ್ಟಿದ್ದಾರೆ. ಇನ್ನು ಕೆಲವು ದಿನಗಳಲ್ಲಿ ನಿದ್ದೆ ಕೆಡತಕ್ಕಂಥಾದ್ದು ಅವಶ್ಯಕತೆ ಇರಲಿಲ್ಲ. ಇದನ್ನು ನಾನು ಬೆಂಗಳೂರು ನಗರಕ್ಕೆ ಸೀಮಿತವಾಗಿ ಹೇಳುತ್ತಿದ್ದೇನೆ. ಇನ್ನು ಬೆಂಗಳೂರು ಗ್ರಾಮಾಂತರ ಪ್ರದೇಶಗಳಾದ ರಾಮನಗರ, ಚನ್ನಪಟ್ಟಣ, ಪ್ರಾಮುಖ್ಯವಾಗಿ ನಮ್ಮ ಗಮನ ಸೆಳೆದಿರತಕ್ಕ ಸ್ಥಳಗಳು ಜೀವಹರಣ, ಆಸ್ತಿಪಾಸ್ತಿ ನಷ್ಟ ಎಲ್ಲ ನಡೆದು ಹೋಗಿದೆ. ಇಲ್ಲಿ ಬಿಟ್ಟರೆ ಮಂಡ್ಯ ಜಿಲ್ಲೆಯಲ್ಲಿ ಇಲ್ಲ. ಮೈಸೂರು ನಗರದಲ್ಲಿ ಎಲ್ಲೋ ಸ್ವಲ್ಪ ಪ್ರಕ್ಷುಬ್ಧ ವಾತಾವರಣ ಉಂಟಾಗಿದೆ ಎಂದು ಹೇಳಿದರೂ ಕೂಡ ಎಲ್ಲೋ ಒಂದೆರಡು ಕಡೆ ಮಾತ್ರ ಘಟನೆ ಆಗಿದೆ. ಕೆಲವರು ವೈಯಕ್ತಿಕವಾಗಿ ದ್ವೇಷದಿಂದ ಅನೇಕರ ಕೈಕಾಲು ಮುರಿದರೆ ಜೀವ ಹೋಗಿದ್ದರೆ ಅದೂ ಕೂಡ ಕಮ್ಯೂನಲ್ ಗಲಭೆಯಿಂದಾಗಿದೆ ಎಂದು ಅದಕ್ಕೆ ಸೇರಿಸಿರುವುದು ತನಿಖೆಯಲ್ಲಿ ಗೊತ್ತಾಗಿದೆ. ಇನ್ನು ಕೆಲವು ತನಿಖೆಯಿಂದ ಗೊತ್ತಾಗಬೇಕು. ಇನ್ನು ಬೀದರ್ ವಿಚಾರವೆಂದು ಹೇಳಿದ ತಕ್ಷಣ ಅನುಮಾನ ಬರತಕ್ಕಂಥಾದ್ದು ಸಹಜ. ಬೀದರ್‌ನಲ್ಲಿ ಹಾಗೆ ನಡೆದಿಲ್ಲ ಎನ್ನುವುದು ನಮಗೆ ಗೊತ್ತಿದೆ. ಹೀಗೆ ಘಟನೆಗಳ ಜೊತೆ ಜೊತೆಯಲ್ಲೇ ಅವೂ ಕೂಡ ಕೆಲವು ನಡೆದು ಹೋಗಿದೆಯೆನ್ನುವುದು ತಮ್ಮ ಗಮನಕ್ಕೆ ಸ್ಪಷ್ಟವಾಗಿ ಬಂದಿದೆ. ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲ್ಲೂಕಿನಲ್ಲಿ ಹೆಚ್ಚಾಗಿ ತೊಂದರೆಯಾಗತಕ್ಕಂಥಾದ್ದು ಗೊತ್ತಾಗಿದೆ. ತುಮಕೂರು ಜಿಲ್ಲೆಯ ಕುಣಿಗಲ್ ಮತ್ತು ಪ್ರಾಪರ್ ತುಮಕೂರಿನಲ್ಲಿ ಕೆಲವು ಸಣ್ಣ ಪುಟ್ಟ ಘಟನೆಗಳು ನಡೆದಿವೆ. ಹಾಸನ ಜಿಲ್ಲೆಯ ಸಕಲೇಶಪುರ, ಚನ್ನರಾಯಪಟ್ಟಣ, ಶುಕ್ರವಾರ ಸಂತೆ ಬಾಳು ಪೇಟೆ ಮುಂತಾದ ಕಡೆಗಳಲ್ಲಿ, ಅನಂತರ ಚಿತ್ರದುರ್ಗ, ಜಿಲ್ಲೆಯ ಹೊಸದುರ್ಗ ದಾವಣಗೆರೆಯಲ್ಲಿ ನಡೆದಂತಹ ಘಟನೆಗಳು ನಮ್ಮ ಗಮನ ಸೆಳೆದಿವೆ. ಈ ಜಾಗಗಳಲ್ಲಿ ನಡೆದಂತಹ ಘಟನೆಗಳು ಪ್ರಮುಖವಾಗಿ ನಮ್ಮ ಗಮನಕ್ಕೆ ಬರತಕ್ಕಂತಹ ಜಾಗಗಳು. ಶಿವಮೊಗ್ಗದಲ್ಲಿ ಅಲ್ಪಸ್ವಲ್ಪ ಟೆನ್‌ಷನ್ ಇಲ್ಲದ ಹಾಗೆ ಆಗಿದೆ. ಇನ್ನು ಕೆಲವು ಸಾರಿ ನಾವು ಎಲ್ಲೆಲ್ಲಿ ಇಂತಹ ಘಟನೆಗಳಾಗಬಹುದೆಂದು ನಿರೀಕ್ಷೆ ಮಾಡುತ್ತೇವೆಯೋ ಅಲ್ಲಿ ಇಲ್ಲ ಎಲ್ಲಿ ಇಂತಹ ಘಟನೆಗಳು ಆಗುತ್ತವೆಂದು ನಿರೀಕ್ಷೆ ಮಾಡಿಲ್ಲವೋ ಅಲ್ಲಿ ಇದು ನಡೆದು ಹೋಗಿದೆ. ಇದು ಘಟನೆ ನಡೆದಿರತಕ್ಕಂತಹ ಜಾಗಗಳ ಒಂದು ಚಿತ್ರಣ. ಇಂತಹ ಘಟನೆಗಳು ನಡೆದಾಗ ಅದನ್ನು ತಹಬಂದಿಗೆ ತರತಕ್ಕಂತಹ ವಿಚಾರದಲ್ಲಿ ಪೋಲೀಸ್ ಇಲಾಖೆಯ ಕರ್ತವ್ಯ ಪ್ರಾಮುಖ್ಯ ಇಂತಹ ಘಟನೆಗಳು ನಡೆದು ಹೋದ ಮೇಲೆ ಅವರಿಗೆ ಪರಿಹಾರ ಕೊಡುವ ವಿಚಾರದಲ್ಲಿ ಕಂದಾಯ ಇಲಾಖೆಯ ಜವಾಬ್ದಾರಿ ಬರುತ್ತದೆ. ಅದರ ಬಗ್ಗೆ ನಂತರ ಮಾತನಾಡೋಣ. ಇವತ್ತು ಜನರ ಜೀವ ಆಸ್ತಿಯನ್ನು ಕಾಯತಕ್ಕಂತಹ ವಿಚಾರದಲ್ಲಿ ಸರಕಾರ ಈ ಇಲಾಖೆಗಳ ಮುಖಾಂತರವಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಿದೆ. ಈ ವಿಚಾರವನ್ನು ನಾವು ಮನಗಂಡು ಈ ಇಲಾಖೆಯ ಬಗ್ಗೆ ಒಳ್ಳೆಯ ಮಾತನ್ನು ಹೇಳಿದರೆ, ಅದು ತಪ್ಪಿಲ್ಲವೆಂದು ನನ್ನ ಭಾವನೆ. ಇವತ್ತು ನಮ್ಮ ಪೋಲೀಸ್ ಇಲಾಖೆಯಲ್ಲಿರತಕ್ಕಂತಹ ಶಕ್ತಿಯನ್ನು ನೋಡಿದರೆ ಗೊತ್ತಾಗುತ್ತದೆ. ಹಿಂದೆಲ್ಲಾ ಇಷ್ಟೇ ಪೋಲೀಸರು ಸಾಕು. ಪೋಲೀಸ್ ಇಲಾಖೆಯೇ ಬೇಡ ಆ ಪೋಲೀಸ್ ಸ್ಟೇಷನ್ ತೆಗೆದುಹಾಕಿ ಅವರು ಇರುವುದರಿಂದ ತೊಂದರೆಯಾಗಿದೆ ಎಂದು ಕೆಲವು ಸಾರಿ ಭಾಷಣ ಮಾಡಿದ್ದೂ ಉಂಟು.

ಹಳ್ಳಿಯಲ್ಲಿ ನಾವೇ ಶಾಂತಿಯುತವಾಗಿ ಹೋಗುತ್ತಿರುತ್ತೇವೆ. ಇವರೇಕೆ ಬಂದು ಇದಕ್ಕೆ ಕೈ ಹಾಕುತ್ತಾರೆ ಎನ್ನುವ ಭಾವನೆಯಿಂದ ಹೇಳಿರತಕ್ಕ ಸಂದರ್ಭ ಕೂಡ ಉಂಟು. ಆದರೆ ನಾವು ಈಗ ಹಾಗೆ ಮಾಡುವ ಹಾಗೆ ಇಲ್ಲ ತಾವು ಹೇಳುತ್ತಿದ್ದೀರಿ ಎಲ್ಲರೂ ಹೇಳುತ್ತಿದ್ದಾರೆ, ಸರ್ವಾನುಮತದ ಅಭಿಪ್ರಾಯವಿದೆ. ಪೋಲೀಸ್ ಇಲಾಖೆಯನ್ನು ಸಂಖ್ಯಾ ದೃಷ್ಟಿಯಿಂದ ಅದರ ಶಕ್ತಿಯನ್ನು ನಾವು ವೃದ್ಧಿ ಮಾಡದಿದ್ದರೆ ಯಾವುದೇ ಸರ್ಕಾರ ಇದ್ದರೂ ಕೂಡ ಗಲಭೆಗಳನ್ನು ತಹಬಂದಿಗೆ

ತರುವುದಕ್ಕಾಗುವುದಿಲ್ಲ. ಒಂದೇ ಸಾರಿ ಎಲ್ಲಾ ಕಡೆ ಘಟನೆಗಳು ಎದ್ದುಬಿಟ್ಟರೆ ಅವುಗಳನ್ನು ತಹಬಂದಿಗೆ ತರುವುದು ಬಹಳ ಕಷ್ಟವಾಗುತ್ತದೆ. ಆ ಸಂದರ್ಭದಲ್ಲಿ ನಾನು ವಿರೋಧಪಕ್ಷದ ನಾಯಕರುಗಳ ಸಭೆಯನ್ನು ಸಹ ಕರೆದಿದ್ದೆ. ನಾನು ಅವರುಗಳನ್ನು ಅಭಿನಂದಿಸುತ್ತೇನೆ, ನಾವು ಕರೆದಾಗ ಅವರು ಬಂದಿದ್ದಾರೆ. ಮಾತುಕತೆ ನಡೆಸಿದ್ದಾರೆ. ಜಂಟಿಯಾಗಿ ಶಾಂತಿಗೋಸ್ಕರ ಅಪೀಲನ್ನು ಸಹ ಮಾಡಿದ್ದೇವೆ. ಆದ್ದರಿಂದ ಈ ಸಂದರ್ಭದಲ್ಲಿ ಪೋಲೀಸ್ ಸಿಬ್ಬಂದಿಯನ್ನು ಸಂಖ್ಯಾಬಲ ದೃಷ್ಟಿಯಿಂದ ಯಾವುದೇ ಸರ್ಕಾರವಿದ್ದರೂ ಹೆಚ್ಚಿಸಲೇಬೇಕಾಗುತ್ತದೆಂದು ಸ್ಪಷ್ಟವಾಗಿ ಒಂದು ತೀರ್ಮಾನಕ್ಕೆ ನಾವು ಅನಿವಾರ್ಯವಾಗಿ ಬರಬೇಕಾಗಿದೆ. ಏಕೆಂದರೆ, ಇವತ್ತು ಘಟನೆಗಳು ನಡೆದಿವೆ. ಮುಂದೆ ಘಟನೆಗಳು ಇದೇ ರೀತಿಯಲ್ಲಿ ನಡೆದರೆ, ಇದಕ್ಕಿಂತ ಹೆಚ್ಚಾಗಿ ನಡೆದರೆ, ನಾವು ನೀವು ಏನೂ ಮಾಡುವುದಕ್ಕಾಗುವುದಿಲ್ಲ. ನಾವು, ನೀವು ಭಾಷಣ ಮಾಡುತ್ತೇವೆ, ಘಟನೆಗಳನ್ನು ತಹಬಂದಿಗೆ ತರುವುದಕ್ಕೆ ಪೋಲೀಸ್ ಶಕ್ತಿಯನ್ನು ಪ್ರಬಲವಾಗಿ ಹೆಚ್ಚಿಸಬೇಕಾಗಿದೆ. ಇದೇನು ಪೋಲೀಸ್ ರಾಜ್ಯವೇ ಎಂದು ತಾವು ಹೇಳಬಹುದು, ಎಲ್ಲಾ ಕಡೆ ಇಷ್ಟೊಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪೋಲೀಸ್ ಇಲಾಖೆಯನ್ನು ಪ್ರಬಲ ಮಾಡುತ್ತೀರಿ. ಇಷ್ಟೊಂದು ನೇಮಕಾತಿಯನ್ನು ಏತಕ್ಕೆ ಮಾಡುತ್ತೀರಿ ಎಂದು ಕೇಳಬಹುದು. ಕ್ಷಮಿಸಬೇಕು, ಅದಕ್ಕೆ ಉತ್ತರ ಇದುವರೆಗೆ ನಮ್ಮ ನಿಮ್ಮೆಲ್ಲರ ಭಾಷಣವೇ ನಡೆದಿರತಕ್ಕ ಘಟನೆಗಳೇ ಸಾಕ್ಷಿ ಇದಕ್ಕಿಂತ ಉತ್ತರವನ್ನು ನಾವು ಯಾರೂ ಹುಡುಕುವುದು ಬೇಕಾಗಿಲ್ಲವೆಂದು ನನ್ನ ಭಾವನೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತಂದರೆ ಒಳ್ಳೆಯದು. According to the National Police Commission, there should be a police station for a population of 50,000 covering an area of 150 sq. Kms. At present we have only 658 police stations and 305 outposts all over the State. If the norm of the National Police Commission is adopted. then we require 900 police stations. ೬೫೮ ಎಲ್ಲಿ? ೯೦೦ ಎಲ್ಲಿ? ಅವರ ನಾರ್ಮ್ಸ್ ಪ್ರಕಾರ ಸುಮಾರು ಇನ್ನೂರು ಚಿಲ್ಲರೆ ಪೋಲೀಸ್ ಸ್ಟೇಷನ್‌ಗಳನ್ನು ನಾವು ಹೆಚ್ಚು ಮಾಡಬೇಕಾಗುತ್ತದೆ. ಆಮೇಲೆ ೧೫೭೮ ಪೋಲೀಸ್ ಸ್ಟೇಷನ್ಸ್ ಏರಿಯಾವೈಸ್ ಈಗಿರತಕ್ಕ ಪೋಲೀಸ್ ಸ್ಟೇಶನ್‌ನಲ್ಲಿ ಎಷ್ಟು ಜನರನ್ನು ಇಟ್ಟಿದ್ದೇವೆ, ಆವರೇಜ್ ಈಗ ಎಷ್ಟಿವೆ ಎಂಬುದನ್ನು ಹೇಳಿಬಿಟ್ಟರೆ ಒಳ್ಳೆಯದು. ರೂರಲ್ ಪೋಲೀಸ್ ಸ್ಟೇಶನ್‌ನಲ್ಲಿ ಒಬ್ಬ ಪೋಲೀಸ್ ಸಬ್ ಇನ್‌ಸ್ಪೆಕ್ಟರ್, ಇಬ್ಬರು ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್ಸ್, ಏಳು ಜನ ಹೆಡ್ ಕಾನ್ಸ್‌ಟೇಬಲ್‌ಗಳು, ಇಪ್ಪತ್ತೊಂದು ಜನ ಪೋಲೀಸ್ ಕಾನ್ಸ್‌ಟೇಬಲ್‌ಗಳು, ಒಟ್ಟು ೩೧ ಜನರಿರುತ್ತಾರೆ. ಟೌನ್ ಪೋಲೀಸ್ ಸ್ಟೇಶನ್‌ನಲ್ಲಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಇಬ್ಬರು, ಅಸಿಸ್ಟೆಂಟ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಇಬ್ಬರು, ಹೆಡ್ ಕಾನ್ಸ್‌ಟೇಬಲ್‌ಗಳು ಹತ್ತು, ಪೋಲೀಸ್ ಕಾನ್ಸ್‌ಟೇಬಲ್‌ಗಳು ಮೂವತ್ತು, ಒಟ್ಟು ನಲವತ್ತನಾಲ್ಕು ಜನರಿರುತ್ತಾರೆ. ಸಿಟಿ ಪೋಲೀಸ್ ಸ್ಟೇಶನ್‌ನಲ್ಲಿ ಇಬ್ಬರು ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು, ನಾಲ್ಕು ಅಸಿಸ್ಟೆಂಟ್ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು, ಹೆಡ್ ಕಾನ್ಸ್‌ಟೇಬಲ್‌ಗಳು ಹದಿನೆಂಟು ಪೋಲೀಸ್ ಕಾನ್ಸ್‌ಟೇಬಲ್‌ಗಳು ೫೪ ಒಟ್ಟು ಎಪ್ಪತ್ತೆಂಟು ಜನರು ಇರುತ್ತಾರೆ. It is seen that there should be at least 20 constables in each police station. ಇರತಕ್ಕ ವಾಸ್ತವಾಂಶವನ್ನು ಹೇಳುತ್ತಿದ್ದೇನೆ. ಅವರು ಜನಸಂಖ್ಯೆಯ ಆಧಾರದ ಮೇಲೆ ಇಷ್ಟಿರಬೇಕೆಂದು ರೆಕಮೆಂಡೇಷನ್ ಮಾಡುತ್ತಾರೆ. ನಮ್ಮ ಕಾಲದಲ್ಲಿ ಅಲ್ಲ. ತಮ್ಮ ಪಕ್ಷದ ಸರ್ಕಾರವಿದ್ದಾಗ ಅದರ ಬಗ್ಗೆ ಬೇಕಾದಷ್ಟು ಚರ್ಚೆಯಾಗಿದೆ. ಈಗ ಒಂದು ಸ್ಕೀಮ್ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಆ ಸ್ಕೀಮಿನ ಡ್ರಾಫ್ಟ್ ಮಾಡುತ್ತಿದ್ದೇವೆ. ಸಿವಿಲ್ ಪೋಲೀಸ್ ಜಾಸ್ತಿ ಮಾಡಬೇಕೆಂದು ಆರ್ಮ್ಡ್ ರಿಸರ್ವ್ ಪೋಲೀಸ್ ಜಾಸ್ತಿ ಮಾಡಬೇಕೆಂದು ಬೆಟರ್ ಎಕ್ವಿಪ್‌ಮೆಂಟ್ಸ್ ಕೊಡಬೇಕೆಂದು ಮಾಡಿದ್ದೇವೆ. ಎಕ್ವಿಪ್‌ಮೆಂಟ್ ವೈರ್‌ಲೆಸ್ ಸೆಟ್ ಆಫೀಸ್ ಬಿಲ್ಡಿಂಗ್ at a cost of Rs. 135 crores spread over a period of 5 years. ಈ ಘಟನೆಗಳ ಪರಿಣಾಮವನ್ನು ನೋಡಿದಾಗ, ಪೋಲೀಸ್ ಕಮೀಷನ್‌ರವರ ಶಿಫಾರಸುಗಳನ್ನು ಸಂಪೂರ್ಣವಾಗಿ ಒಪ್ಪಲೇಬೇಕೆಂಬ ಅಭಿಪ್ರಾಯದಿಂದ ನಾನು ಹೇಳುತ್ತಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅದನ್ನು ಒಪ್ಪಿದರೆ ಸಿಕ್ಕಾಪಟ್ಟೆ ಇನ್ನೂ ಜಾಸ್ತಿ ಹೋಗುತ್ತದೆ. ನಾವು ತೆರಿಗೆದಾರರ ಕೋಟಿಗಟ್ಟಲೆ ಹಣವನ್ನು ತೆಗೆದುಕೊಂಡು ಹೋಗಿ ಅದಕ್ಕೆ ಹಾಕಿದರೆ ನಾಳೆ ಜನತೆಯ ಮೇಲೆ ಹೆಚ್ಚಿನ ತೆರಿಗೆ ಹಾಕತಕ್ಕಂಥ ಸಂದರ್ಭ ಸಹಜವಾಗಿ ಉದ್ಭವವಾಗುತ್ತದೆ. ನಾವು ಅದನ್ನು ಕೂಡ ತಡೆದುಕೊಳ್ಳುವ ಹಾಗಿಲ್ಲ. ಇದನ್ನು ಕೂಡ ಕೈಬಿಡುವ ಹಾಗಿಲ್ಲ ಎನ್ನತಕ್ಕಂಥ ಪರಿಸ್ಥಿತಿ

ಇಲ್ಲಿ ಉದ್ಭವವಾಗಿದೆ ಎಂಬ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದರೆ ಇಲ್ಲಿ ನಾವು ಆದ್ಯತೆಗೆ ಅನುಗುಣವಾಗಿ ಎಷ್ಟೆಷ್ಟು ಸಾಧ್ಯವೋ ಅಷ್ಟು ಮಾಡಿಕೊಂಡು ಐದು ವರ್ಷಗಳ ಅವಧಿಯಲ್ಲಿ ಪೋಲೀಸ್ ಫೋರ್ಸ್‌ನ್ನು ಸ್ಟ್ರೆಂಥನ್ ಮಾಡಬೇಕಾಗುತ್ತದೆ. ೧೩೫ ಕೋಟಿ ಅಲ್ಲದಿದ್ದರೂ ಅದಷ್ಟು ಕಡಿಮೆ ಮಾಡಿ ಎಷ್ಟು ಸಾಧ್ಯ ಎನ್ನತಕಂಥ ವಿಚಾರದ ಕಡೆಗೆ ಗಮನಕೊಟ್ಟು ನಾಳೆ ಜನತೆಯ ಮೇಲೆ ಕೂಡ ಹೆಚ್ಚಿನ ಹೊರೆ ಬೀಳದ ಹಾಗೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮ್ಮ ಮೇಲೆ ಇದೆ. ನಾವು ಅದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಈ ಸ್ಕೀಮ್‌ನ್ನು ಸುಮ್ಮನೆ ಟೆಂಟಟೀವ್ ಆಗಿ ಇಟ್ಟಿರತಕ್ಕದ್ದು, ತೀರ್ಮಾನವಾಗಿದೆಯೆಂದು ನಾನು ಹೇಳಿಲ್ಲ. ಸುಮಾರಾಗಿ ಮಾನ್ಯ ಸದಸ್ಯರು ಆ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಪೋಲೀಸರು ಹೋಗಲಿಲ್ಲ, ಮಾಡಲಿಲ್ಲ. ಅವರು ಹೋಗಿ ನೋಡಿದ್ದರೆ ಘಟನೆಗಳು ಆಗುತ್ತಿರಲಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಿಜ ಹೇಳಬೇಕೆಂದರೆ ಘಟನೆ ನಡೆದ ವಿವರಗಳನ್ನು ನಾನು ತೆಗೆದುಕೊಂಡಿದ್ದೇನೆ. ಆ ಸಂದರ್ಭದಲ್ಲಿ ಹೋಮ್ ಇಲಾಖೆ ನನ್ನ ಹತ್ತಿರ ಇತ್ತು. ಆ ಸಂದರ್ಭದಲ್ಲಿ ನೋಡಿದಾಗ ಮಾಬ್ ವಿರುದ್ಧವಾಗಿ ಪೋಲೀಸ್ ಕಾನ್‌ಸ್ಟೇಬಲ್‌ಗಳು ಒಬ್ಬಿಬ್ಬರಾಗಿ ಯಾರಿಗೂ ಹೋಗಲಿಕ್ಕೆ ಸಾಧ್ಯವಿರಲಿಲ್ಲ. ಅಂತಹ ಪರಿಸ್ಥಿತಿ ಒಮ್ಮೆಲೆ ಎದ್ದುಬಿಟ್ಟಿದೆ. ಅಲ್ಲಿ ರಾಮನ ಮೂರ್ತಿ ಶಿಥಿಲವಾಯಿತಂತೆ. ಶಿಥಿಲ ಆಯಿತು, ಬಿಡ್ತು ನೋಡೋರಿಲ್ಲ, ಹೇಳೋರಿಲ್ಲ. ಶಿಥಿಲವಾಯಿತು ಎಂದ ತಕ್ಷಣ ದೊಣ್ಣೆ ತಗೋ ಕತ್ತಿ ತಗೋ ಎಂದು ಹೊರಟೇ ಬಿಡುವುದು. ಪೋಲೀಸ್ ಕಾನ್‌ಸ್ಟೇಬಲ್‌ಗಳು ಪೋಲೀಸ್ ಸ್ಟೇಷನ್‌ನಲ್ಲಿ ಕುಳಿತುಕೊಂಡಿರುತ್ತಾರೆ ಅವರಿಗೇನು ಗೊತ್ತಿರುತ್ತದೆ. ಅವರು ಧಡಕ್ಕನೆ ಹೋಗಿ ಪರಿಸ್ಥಿತಿಯನ್ನು ನಿಭಾಯಿಸಬೇಕು ಎಂದರೆ ಎಷ್ಟು ಕಷ್ಟಸಾಧ್ಯ ಎನ್ನತಕ್ಕಂಥ ಮಾತು ನಮ್ಮ ಅರಿವಿನ ವ್ಯಾಪ್ತಿಗೆ ಸ್ಪಷ್ಟವಾಗಿ ಬರುತ್ತದೆ. ಆ ಸಂದರ್ಭದಲ್ಲಿ ನಾನು ನೋಡಿದ್ದೇನೆ, ಎಷ್ಟು ಜನ ಇವತ್ತು ಜೀವ ಕಳೆದುಕೊಂಡಿದ್ದಾರೆ. ಅವರ ಕುಟುಂಬವರ್ಗದ ನೋವಿನಲ್ಲಿ ಅವಿಭಾಜ್ಯ ಅಂಗವಾಗಿ ಸರ್ಕಾರ ಮತ್ತು ಇಡೀ ಸಮಾಜ ಉಳಿದಿದೆ. ಈ ಮಾತನ್ನು ನೀವೂ ಆಡಿದ್ದೀರಿ, ನಾವೂ ಆಡಿದ್ದೇವೆ. ಅವರ ನೋವಿನಲ್ಲಿ ಭಾಗಿಗಳಾಗಿ ಸಾಂತ್ವನ ಮಾಡುತಕ್ಕಂಥ ಜವಾಬ್ದಾರಿಯನ್ನು ನಾವು ನೀವು ಎಲ್ಲರೂ ಸೇರಿ ಮಾಡಿದ್ದೇವೆ. ಆ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ಆದರೆ ಜೀವವನ್ನು ತಂದು ಕೊಡಲಿಕ್ಕೆ ಒಬ್ಬರಿಗೂ ಸಾಧ್ಯವಾಗುತ್ತಿಲ್ಲ. ಕೆಲವು ಕಡೆ ಪರಿಸ್ಥಿತಿ ಏನು ಆಗಿದೆ ಎಂದರೆ, ಪೋಲೀಸ್ ಕಾನ್‌ಸ್ಟೇಬಲ್‌ಗಳು ಒಬ್ಬರು ಇಬ್ಬರು ಇದ್ದವರು ಏನು ಮಾಡಬೇಕೆಂದು ಗೊತ್ತಾಗದೆ ಕಣ್ಣು ಕಣ್ಣು ಬಿಡತಕ್ಕಂಥ ಪರಿಸ್ಥಿತಿ ಧಡಕ್ಕನೆ ಉದ್ಭವವಾಗಿರತಕ್ಕಂಥಾದ್ದು ನಮ್ಮ ಗಮನಕ್ಕೆ ಸಹಜವಾಗಿ ಬಂದಿದೆ. ಅದಕ್ಕಾಗಿ ಅಂತಹ ಸಂದರ್ಭದಲ್ಲಿ ನಾವು ಪೋಲೀಸ್ ರಾಜ್ಯ ನಡೆದಿದೆ ಎನ್ನತಕ್ಕಂಥ ಅರ್ಥ ವ್ಯಾಖ್ಯೆಯಿಂದ ದೂರವಿತರತಕ್ಕಂಥ, ಆದರೆ ಆಗತ್ಯತೆಗೆ ಅನುಗುಣವಾಗಿ ಎಷ್ಟು ಜನ ಇರಬೇಕು, ಅದಕ್ಕೆ ಅನುಗುಣವಾಗಿ ನೇಮಕಾತಿ ಮಾಡತಕ್ಕಂಥ ಮೂಲ ವಿಚಾರಧಾರೆ ಏನಿದೆ ಅದಕ್ಕೆ ಎಲ್ಲರೂ ಒಪ್ಪುತ್ತೀರಿ ಎಂದು ನಾನು ಭಾವಿಸುತ್ತೇನೆ. ಪೋಲೀಸ್ ಇಲಾಖೆಯನ್ನು ಸ್ವಲ್ಪ ಸ್ಟ್ರೆಂಥನ್ ಜಾಸ್ತಿ ಮಾಡುವುದಕ್ಕೆ ನಾವು ಹೋಗೋಣ. ಸರ್ಕಾರ ಅದರ ಬಗ್ಗೆ ತೀರ್ಮಾನ ಮಾಡುತ್ತದೆ. ಈ ಕಾರ್ಯಕ್ರಮವನ್ನು ಕೂಡ ನಾವು ಹಾಕುತ್ತೇವೆ. ಇದರ ಬಗ್ಗೆ ಭಿನ್ನಾಭಿಪ್ರಾಯ ಬರಲಾರದು ಎಂದು ನಾನು ಭಾವಿಸುತ್ತೇನೆ. ಇವತ್ತು ಅನೇಕ ಜನ ಜೀವ ಕಳೆದುಕೊಂಡಿದ್ದಾರೆ. ಜೀವ ಕಳೆದುಕೊಂಡಮೇಲೆ ಇದರಲ್ಲಿ ಏನಾಗಿದೆ? ಇಷ್ಟೊಂದು ಘಟನೆಗಳಲ್ಲಿ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಸತ್ತು ಹೋಗಿದ್ದಾನೆ. ತಣ್ಣೀರಹಳ್ಳ ಎನ್ನತಕ್ಕಂಥ ಒಂದು ಹಳ್ಳಿ, ಅಲ್ಲಿಗೆ ತಾವು ಕೂಡ ಹೋಗಿ ಬಂದಿದ್ದೀರಿ ಎಂದು ನಾನು ಕೂಡ ಕೇಳಿದೆ, ಅದು ಸೋಮವಾರ ಪೇಟೆ ತಾಲ್ಲೂಕಿನಲ್ಲಿದೆ, ಅಲ್ಲಿ ಯಾರೂ ಹೋಡೆದಿದ್ದಲ್ಲ. ವ್ಯಾನಿನಲ್ಲಿ ಹೋಗಬೇಕಾದರೆ ರಾತ್ರೋ ರಾತ್ರಿ ಪ್ರಯಾಣ ಮಾಡಬೇಕು, ಮಂಜು ಮುಸುಕು ಗೊತ್ತಾಗುವುದಿಲ್ಲ. ತಣ್ಣೀರಹಳ್ಳ ಎಂಬ ಹಳ್ಳಿ ಒಂದು ಹಳ್ಳವೇ ಸರಿ ಅಲ್ಲಿಗೆ ನಾನು ಹೋಗಿ ನೋಡಿದ್ದೇನೆ. ಅಲ್ಲಿ ವ್ಯಾನ್ ಬಿದ್ದು ಹತ್ತು ಹದಿನೈದು ಜನ ಪೋಲಿಸರಿಗೆ ಪೆಟ್ಟಾಗಿ, ಅವರಲ್ಲಿ ಒಬ್ಬ ಸತ್ತು ಹೋಗಿಬಿಟ್ಟ ಅದೂ ಆತ ಡ್ಯೂಟಿಯಲ್ಲಿದ್ದಾಗ, ಅದೇ ರೀತಿಯಾಗಿ ಪೋಲೀಸ್ ಇಲಾಖೆಯ ಅನೇಕ ಜನರಿಗೆ ಪೆಟ್ಟಾಗಿ ಅವರು ಆಸ್ಪತ್ರೆಗೆ ಸೇರಿಸತಕ್ಕಂಥಾದು ಇದೆ. ಆದ್ದರಿಂದ ಘಟನೆ ನಡೆದಾಗ ಬರೇ ಒಂದು ಕಡೆಗಷ್ಟೇ ಕಲ್ಲು ಬೀಳುವುದಿಲ್ಲ. ಮತ್ತೊಂದು ಕಡೆಗೂ ಕಲ್ಲು ಬಿದ್ದೇ ಬೀಳುತ್ತದೆ ಎಂಬ ವಿಚಾರ ನಮಗೆಲ್ಲ ಗೊತ್ತಿದೆ. ಆ ದೃಷ್ಟಿಯಿಂದ ನಾನು ಮಾತನಾಡಿದ್ದೇನೆ. ಇವತ್ತು ಜೀವ ಕಳೆದುಕೊಂಡವರ ಕುಟುಂಬದ ನೋವು ನನಗೆ ಗೊತ್ತಿದೆ. ನಿಜ ಹೇಳಬೇಕೆಂದರೆ, ಹೀಗೆ ಗಲಾಟೆ ನಡೆದಾಗ ಜನ ಹೇಗೆ ಸಾಯುತ್ತಾರೆ ಎಂಬುದು ಆಶ್ಚರ್ಯಕರವಾಗಿ ಕಾಣುತ್ತದೆ. ಗೋಲಿಬಾರ್ ಆದರೆ ಅಥವಾ ಕಲ್ಲು ಬೀಸಿದರೆ, ಎಲ್ಲೋ ಬೀಸಿದ ಕಲ್ಲು ಯಾರ ತಲೆಗೋ ಹೋಗಿ ಬಡಿದು ಅವನು ಸತ್ತು ಹೋಗುತ್ತಾನೆ ಚನ್ನರಾಯಪಟ್ಟಣದಲ್ಲಿ ಎಂದು ಕಾಣುತ್ತದೆ. ಅಲ್ಲಿ ಗಾಳಿಯಲ್ಲಿ ಗುಂಡು ಹಾರಿಸಿದಾಗ ಒಂದು ಮನೆಯ ಮಹಡಿಯ ಮೇಲೆ

ಒಬ್ಬ ಹುಡುಗ ನಿಂತುಕೊಂಡಿದ್ದ. ಅದು ಅವನಿಗೆ ತಗುಲಿತು. ಅದು ಹೇಗೆ ಅವನಿಗೆ ಹೊಡೆಯಿತೋ ನನಗೆ ಗೊತ್ತಾಗಲಿಲ್ಲ.

೫.೫೫ ಪಿ. ಎಂ.

ಏಕೆಂದರೆ ಜನರ ನೂಕುನುಗ್ಗಲಿನಲ್ಲಿ ಗೊತ್ತಾಗುವುದಿಲ್ಲ ಚೇಂಜ್ ಆಗಿ ಬಿಡುತ್ತಾರೆ. ಪಾಪ ತನ್ನ ಮನೆಯ ಉಪ್ಪರಿಗೆಯ ಮೇಲೆ ನಿಂತುಕೊಂಡಿದ್ದವನನ್ನು ಹೊಡೆದು, ಅವನು ಸತ್ತು ಹೋಗಿದ್ದಾನೆ. ಇದೂ ಒಂದು ಸಾವಿನ ಪ್ರಕರಣವಾಯಿತು. ಇದು ಒಂದು ನಮ್ಮ ಲೆಕ್ಕಕ್ಕೆ ಹೀಗಾಗಿ ಮಾನ್ಯ ಸಭಾಧ್ಯಕ್ಷರೇ. ಸಾವಿನ ಪ್ರಕರಣಗಳು ಕೆಲವು ಗೊತ್ತಾಗಿಯೇ ಆಗಿವೆ. ಬೆಂಕಿ ಬಿದ್ದು, ಮನೆಯೊಳಗೆ ಸುಟ್ಟು ಕರಕಲಾಗಿರತಕ್ಕ ದೇಹಗಳು, ದೊಣ್ಣೆಯಿಂದ ಪೆಟ್ಟು ತಿಂದು ಸಾವಾಗಿರತಕ್ಕ ಪ್ರಕರಣಗಳು ಗೋಲಿಬಾರ್‌ನಿಂದ ಆಗಿರತಕ್ಕ ವಿಚಾರಗಳು, ದಾವಣಗೆರೆ ಇತ್ಯಾದಿ ಕಡೆಗಳಲ್ಲಿ ಆಗಿರುವುವು ನಾನು ಜನರಲ್ ಆಗಿ ಹೇಳುತ್ತಾ ಹೋಗುತ್ತೇನೆ. ಹೇಳಬೇಕೆಂದರೆ ವಿವರಗಳು ಬೇಕಾದಷ್ಟು ಇವೆ. ಈ ರೀತಿಯಾಗಿ ನಡೆದಿವೆ ನನಗನ್ನಿಸುತ್ತದೆ. ಈ ಎಲ್ಲಾ ಘಟನೆಗಳನ್ನೂ ಸಂಪೂರ್ಣವಾಗಿ ಅವಲೋಕನ ಮಾಡಿದಾಗ, ಕೆಲವು ದುಷ್ಟಶಕ್ತಿಗಳು ಸ್ಪಷ್ಟವಾಗಿ ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ತಮ್ಮ ಹತೋಟಿಗೆ ತೆಗೆದುಕೊಂಡಿದ್ದಾರೆ. ಇದು ನಮಗಷ್ಟೇ ಅಲ್ಲ. ಜನಸಾಮಾನ್ಯರಿಗೂ ಗೊತ್ತಾಗತಕ್ಕ ವಿಚಾರ ಅವರು ಪರಿಸ್ಥಿತಿಯನ್ನು ತಮ್ಮ ಹತೋಟಿಗೆ ತೆಗೆದುಕೊಂಡು. ಸಮಾಜದ ಎಲ್ಲಾ ವರ್ಗಗಳಿಗೂ ಈ ಹಿಂಸಾ ಕಾಲ್ಗಿಚ್ಚನ್ನು ಹಚ್ಚಿಸಿ, ಅವರ ಸ್ವಷ್ಟವಾದ ವಿಚಾರಧಾರೆಯ ತೀಟೆ ತೀರಿಸಿಕೊಂಡಿದ್ದಾರೆ. ಈ ಮಾತನ್ನು ನಾವೆಲ್ಲರೂ ಆಡಿಕೊಂಡಿದ್ದೇವೆ. ಇಂತಹ ಜನ ಇವತ್ತು ಒಳ್ಳೆಯ ಹೆಸರು ಇರತಕ್ಕ ಕರ್ನಾಟಕ ರಾಜ್ಯದ ಮುಖಕ್ಕೆ ಮಸಿ ಬಳಿಯತಕ್ಕ ಕೆಲಸವನ್ನು ಮಾಡಿದ್ದಾರೆ. ಇನ್ನು ಕೆಲವು ಕಡೆ ಬೆಂಕಿ ಹಚ್ಚುವುದು ಬಿಟ್ಟರೆ, ಯಾವುದೇ ಸಾಮಾನು ತೆಗೆದುಕೊಂಡು ಹೋಗಿಲ್ಲ. ಮತ್ತೆ ಕೆಲವು ಕಡೆ ಸಾಮಾನುಗಳನ್ನು ಕೂಡ ತೆಗೆದುಕೊಂಡು ಹೋಗಿದ್ದಾರೆ. ಕಳ್ಳರು ಸುಳ್ಳರು ಇರುತ್ತಾರೆ ಅವರು ಟಿವಿ ಸೆಟ್ ಎತ್ತಿಕೊಂಡು ಹೋಗಿದ್ದಾರೆ. ನಿಜವಾಗಿಯೂ ಬರೀ ಬೆಂಕಿ ಹಚ್ಚುವರಾಗಿದ್ದರೆ ಟಿವಿ. ಸೆಟ್ ಸುಡಲು ಎಲ್ಲಾ ಸುಡಲಿ ಎಂದು ಬೆಂಕಿ ಹಚ್ಚುತ್ತಿದ್ದರು ಅದರ ಬದಲು ಇವರು ಒಳ್ಳೆಯ ಟಿ ವಿ. ಸೆಟು ಬೇರೆ ಬೇರೆ ಪಾತ್ರೆ ತೆಗೆದುಕೊಂಡು ಹೋಗಿದ್ದಾರೆ. ನಾವು ಪಾತ್ರೆ ಅಂಗಡಿಗಳಲ್ಲಿ ನೋಡಿದ್ದೇವೆ. ಬಟ್ಟೆ ಅಂಗಡಿಗಳಲ್ಲಿ ನೋಡಿದ್ದೇವೆ. ಬಟ್ಟೆಯನ್ನು ಸುತ್ತಿಟ್ಟಿದ್ದರೆ, ಅವೆಲ್ಲವನ್ನೂ ಹೆಗಲ ಮೇಲೆ ತೆಗೆದುಕೊಂಡು ಹೋಗಿರುತ್ತಾರೆ. ಇದನ್ನೂ ತಾವೂ ಕೂಡ ನೋಡಿದ್ದೀರಿ ಕೋಮುಗಲಭೆಯೇ ಬೇರೆ. ಇರುವ ಉದ್ಯೋಗವೇ ಬೇರೆ ಅವನ ಕೆಲಸಕಾರ್ಯವೇ ಬೇರೆ. ಇದು ನಮಗೂ ನಿಮಗೂ ಗೊತ್ತಾಗುತ್ತದೆ. ಇದೇ ಸಂದರ್ಭದಲ್ಲಿ ಒಂದು ತಾಪತ್ರಯ ಏನೆಂದರೆ, ಥೆಫ್ಟ್ ಕೇಸ್ ಎಂಬ ಭಾವನೆ ಬಂದರೆ. ಥೆಫ್ಟ್ ಕೇಸ್ ಎಂದು ರಿಜಿಸ್ಟರ್ ಮಾಡಬೇಕು. ಕೆಲವು ಕಡೆಗಳಲ್ಲಿ ಬೆಂಕಿ ಬಿದ್ದು ಸಾಮಾನು ಹೊರಟು ಹೋಗಿವೆ. ಬಾಗಿಲು ಮುರಿದು ಹೋಗಿದೆ ಮತ್ತೊಂದು ಆಗಿವೆ ಕೋಮು ಗಲಭೆ ಬಗ್ಗೆ ನೋಡಿದರೆ ಕೋಮು ಗಲಭೆ ಹೆಸರಿನಲ್ಲಿ ನಡೆಯಬಾರದ ಪ್ರಕರಣಗಳು ನಡೆದು ಹೋಗಿವೆ. ಇದು ನಮ್ಮೆಲ್ಲರ ಗಮನಕ್ಕೂ ಸ್ಪಷ್ಟವಾಗಿ ಬಂದಿದೆ. ಮಾನ್ಯ ಸಭಾಧ್ಯಕ್ಷರೇ. ಇಷ್ಟು ವಿಚಾರ ಹೇಳಿದ್ದೇನೆ ಇನ್ನು ಪೋಲೀಸ್ ಇಲಾಖೆಯ ವಿಚಾರದ ಬಗ್ಗೆ ಹೇಳುತ್ತೇನೆ. ಇರತಕ್ಕ ಸಿಬ್ಬಂದಿಯ ಶಕ್ತಿಸಾಮರ್ಥ್ಯದ ಹಿನ್ನೆಲೆಯಲ್ಲಿ ಶಕ್ತಿಮೀರಿ ನಮ್ಮ ಇಲಾಖೆಯವರು ಕೆಲಸ ಮಾಡಿದ್ದಾರೆ ಇದರ ಬಗ್ಗೆ ಅನುಮಾನ ಬೇಕಾಗಿಲ್ಲ ನಾನು ಕಳೆದ ತಿಂಗಳು ೧೭ನೇ ತಾರೀಖು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ನಾನು ಸ್ಟ್ಯಾಂಡಿಂಗ್ ಇನ್‌ಸ್ಟ್ರಕ್ಷನ್ ಕೊಟ್ಟಿದ್ದೇನೆ ಐಜಿ. ಇಂಟೆಲಿಜೆನ್ಸ್, ಡಿಜಿಪಿ ಪೋಲೀಸ್ ಉನ್ನತ ಮಟ್ಟದ ಅಧಿಕಾರಿಗಳ ಸಭೆಯನ್ನು ಡಿ.ಜಿ.ಪಿ. ಆಫೀಸಿನಲ್ಲಿ ಮಾಡಿ ಎಲ್ಲರಿಗೂ ಹೇಳಿದ್ದೇನೆ. ಯಾವುದೇ ಹೊತ್ತಿಗಾದರೂ ಕೂಡ ಸರ್ಕಾರದ ವತಿಯಿಂದ ಆದೇಶ ಬಂದಾಗ ಅದಕ್ಕೆ ನೀವು ಸಿದ್ಧರಾಗಿರಬೇಕು. ಹೋಮ್ ಕಮೀಷನರ್ ಇರುತ್ತಾರೆ. ನಿಜ ಹೇಳಬೇಕೆಂದರೆ, ಚೀಫ್ ಸೆಕ್ರೆಟರಿ, ಲಾ ಅಂಡ್ ಆರ್ಡರ್ ಪೀರಿಯಾಡಿಕಲ್ ಚೆಕಿಂಗ್ ಇವೆಲ್ಲದರ ಬಗ್ಗೆ ಸಭೆ ಮಾಡುತ್ತಾರೆ. ಅವರು ಸಂಪೂರ್ಣವಾಗಿ ನಿಭಾಯಿಸಿದ್ದಾರೆ. ಇದು ಹೊಗಳಿಕೆ ಪ್ರಶ್ನೆ ಅಲ್ಲ. ಕರ್ತವ್ಯದ ದೃಷ್ಟಿಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ ಅದೇ ರೀತಿ ಡಿ.ಐ.ಜಿ. ಮಟ್ಟದಲ್ಲಿ ಅವರು ತಮ್ಮ ಕರ್ತವ್ಯವನ್ನು ಮಾಡಿದ್ದಾರೆ. ಐ ಜಿ. ಇಂಟೆಲಿಜೆನ್ಸ್ ಡಿ.ಐ ಜಿ, ಡಿ.ಜಿ ಪಿ. ಇವರೆಲ್ಲರೂ ಸೇರಿ ಮೀಟಿಂಗ್ ಮಾಡಿದ ಸಂದರ್ಭದಲ್ಲಿ ದೂರ ಇರತಕ್ಕ ಡಿ.ಐ.ಜಿ.ಗಳು ಸಭೆಗೆ ಬರುವುದು ಬೇಡ ಎಂದು ಆದೇಶ ಕೊಡಲಾಗಿತ್ತು. ಏಕೆಂದರೆ, ಈ ಸಂದರ್ಭದಲ್ಲಿ ಕೆಲವು ಕಡೆ ಘಟನೆಗಳು ನಡೆಯಬಹುದು. ಅವರನ್ನೂ ಕರೆಸಿಕೊಂಡರೆ ಅಲ್ಲಿ ಆದೇಶ ಕೊಡುವುದಕ್ಕೆ ಯಾರು ಇಲ್ಲದಹಾಗೆ ಆಗುತ್ತದೆ. ಮತ್ತೆ ಹೊಲಸಾಗಿ, ಗಲಾಟೆ ಜಾಗುತ್ತದೆ ಎಂದು ದೂರ ಇರತಕ್ಕವರು ಯಾರೂ ಬರುವುದು ಬೇಡವೆಂದು ಹೇಳಿದ್ದೆವು. ಇಲ್ಲಿಯವರು ನಾವೇ ಕುಳಿತು ಕೊಂಡು ಮಾತನಾಡಿ, ಇಲ್ಲಿಂದ ಆದೇಶವನ್ನು ಕಳುಹಿಸೋಣ ಎಂದು ತೀರ್ಮಾನ ಮಾಡಿದ್ದೇವೆ

ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಒಂದು ವಿಚಾರವನ್ನು ತಿಳಿಸಿದ್ದೆ. ನೀವು ಎಷ್ಟು ಹೊತ್ತಿಗಾದರೂ ನನ್ನನ್ನು ಎಬ್ಬಿಸಬಹುದು ರಾತ್ರಿ ೧೨ ಗಂಟೆ ೧, ೨, ೩, ೪ ಗಂಟೆಗೆ ಎಬ್ಬಿಸಬಹುದು ಎಂದು ತಿಳಿಸಿದ್ದೆ ನಿಜ ಹೇಳಬೇಕೆಂದರೆ, ಆ ರೀತಿಯಲ್ಲಿ ನಮ್ಮ ಇಲಾಖೆಯವರು ಎಬ್ಬಿಸಿದ್ದಾರೆ. ನನಗೆ ಕೆಲವು ಸಾರಿ ನೇರವಾಗಿ ಫೋನ್ ಬಂದಾಗ ನಾನೂ ಕೂಡ ಅವರನ್ನು ಎಬ್ಬಿಸಿದ್ದೇನೆ. ಐ.ಜಿ. ಇಂಟೆಲಿಜೆನ್ಸ್ ಅವರನ್ನೂ ನಾನೇ ಎಬ್ಬಿಸಿದ್ದೇನೆ. Be on the job Immediately, let me know the situation within half-an-hour or one hour. ಎಂದು ಹೇಳಿ, ನಾನು ನಿದ್ದೆಗೆಟ್ಟು ಕಾದಿರತಕ್ಕ ಗಳಿಗೆಗಳನ್ನು ಸ್ಪಷ್ಟವಾಗಿ ಕಳೆದಿದ್ದೇನೆ. ಈ ಸಂದರ್ಭದಲ್ಲಿ ನಾನು ಇದನ್ನು ಏತಕ್ಕೆ ಹೇಳಿದೆ ಎಂದರೆ ಹೊಗಳಿಕೆಗೆ ಅಲ್ಲ, ಕರ್ತವ್ಯ ಹೇಗೆ ಮಾಡಿದ್ದಾರೆ ಎಂದು ಹೇಳಿದೆ. ನಮ್ಮಿಂದ ಬಹಳ ಜೀವ ಉಳಿದವು ಎಂದೂ ನಾನು ಮಾತನಾಡುವುದಿಲ್ಲ. ಇದರ ಪರಿಣಾಮವಾಗಿ ನಾವು ರೌಂಡ್ ದಿ ಕ್ಲಾಕ್ ವರ್ಕ್ ಮಾಡತಕ್ಕ ವಿಚಾರ ಹೇಳಿದೆ. ನಾನು ಅಧಿಕಾರ ವಹಿಸಿಕೊಂಡಾಗಿನಿಂದ ಬರೀ ಲಾ ಅಂಡ್ ಆರ್ಡರ್ ಮ್ಯಾಟರ್ ತಲೆ ತುಂಬ ತುಂಬಿಕೊಂಡಿರತಕ್ಕ ವಿಚಾರವಾಯಿತು. ಬೇರೆ ಡೆವಲಪ್‌ಮೆಂಟಲ್ ಆಕ್ಟಿವಿಟೀಸ್ ಮತ್ತೊಂದು ನೋಡತಕ್ಕಂಥ ಪರಿಸ್ಥಿತಿಯೇ ಇರಲಿಲ್ಲ. ಹೋದ ಕಡೆಯಲ್ಲೆಲ್ಲಾ ಇದೊಂದೇ ಹೇಳಿಕೊಂಡು ಬಂದೆ. ಈ ವಿಚಾರದಲ್ಲಿ ನಾನು ನಮ್ಮ ಪೋಲೀಸ್ ಇಲಾಖೆಯ ಅಧಿಕಾರಿಗಳನ್ನು ಮೆಚ್ಚಬೇಕು. ಬಹಳ ಹೊಗಳಿಕೆ ಮಾಡಿ ಮಾತನಾಡಿದರು. ಏತಕ್ಕೆ ಹೀಗೆ ಅನ್ನುತ್ತಾರೆ ಎಂದು ಯೋಚನೆ ಬರಬಹುದು. ಆದರೆ ಮೆಚ್ಚುವಂತಹ ಮಾತನ್ನು ನೀವೂ ಒಪ್ಪುತ್ತೀರಿ ಎಂದು ನಾನು ಭಾವಿಸಿದ್ದೇನೆ. ಅವರ ಕರ್ತವ್ಯದಲ್ಲಿ ಎಂದೂ ಕೂಡಾ ಅವರು ಲೋಪದೋಷವನ್ನು ತಂದುಕೊಂಡಿಲ್ಲ ಪೋಲೀಸ್ ಇಲಾಖೆ ಮಾಡತಕ್ಕಂಥ ಕರ್ತವ್ಯವೇ ಹೊರತು ಸರಿ ಎನ್ನತಕ್ಕಂಥ ನನ್ನ ವಾದಅಲ್ಲ ಪೋಲೀಸ್ ಇಲಾಖೆ ಏನೇನು ಮಾಡಿದೆ ಎಲ್ಲಾ ಸರಿ ಎಂದು ನನ್ನ ಭಾವನೆ ಅಲ್ಲ. ಲೋಪದೋಷ ನಡೆದಿದೆ. ಅದು ನನ್ನ ಗಮನಕ್ಕೆ ಕೂಡಾ ಬಂದಿದೆ. ಕೆಲವು ಕಡೆ ಇರತಕ್ಕ ಲೋಪದೋಷವನ್ನು ನಾನೇ ಪತ್ತೆ ಹಚ್ಚಿ ಹೇಳಿದ್ದೇನೆ. ಲೋಪದೋಷ ರಹಿತವಾಗಿರತಕ್ಕಂಥ ಒಂದು ಕಾರ್ಯವನ್ನು ನೆರವೇರಿಸಿದ್ದಾರೆ ಎಂದು ಅರ್ಥ ಅಲ್ಲ. ಲೋಪದೋಷಗಳು ನಡೆದರೂ ಕೂಡ ಅತೀ ಚಿಕ್ಕಪುಟ್ಟ ಲೋಪದೋಷಗಳು ನಡೆದಿವೆ ಎಂಬುದನ್ನು ನಾವು ಗ್ರಹಿಸಿದರೆ ಒಳ್ಳೆಯದು. ದೊಡ್ಡ ದೊಡ್ಡ ಲೋಪದೋಷಗಳು ಇದ್ದರೆ ಅದನ್ನು ಸರಿಪಡಿಸುವ ಜವಾಬ್ದಾರಿ ಇರಲಿ ಎಂಬ ಮಾತನ್ನು ತಮ್ಮ ಮುಖಾಂತರ ಸದನಕ್ಕೆ ಕೊಡುತ್ತಿದ್ದೇನೆ. A Commendable job has been done by the police including Intelligence Wing. ಇಂಟೆಲಿಜೆನ್ಸ್ ವಿಂಗ್‌ನ್ನು ಸ್ಟ್ರೆಂಥೆನ್ ಮಾಡದೇ ಹೋದರೆ ಆಗುವುದಿಲ್ಲ. ಇವತ್ತು ವಿವರ ತರುವುದು ಒಂದು ಕಡೆ ಆದರೆ, ಅದನ್ನು ನಿಭಾಯಿಸುವುದು ಮತ್ತೊಂದು ಎರಡೂ ವಿಂಗ್‌ನ್ನು ಬಲಪಡಿಸಬೇಕು. ಸುಮಾರಾಗಿ ನಿಭಾಯಿಸಿದ್ದಾರೆ. ಒಳ್ಳೆಯ ಕೆಲಸ ಮಾಡಿದ್ದಾರೆ ಎಂಬ ಮಾತನ್ನು ಕೆಲವು ಸದಸ್ಯರು ಹೇಳಿದ್ದೀರಿ. ಹೊಗಳಿದ್ದೀರಿ ನಾನು ಅದಕ್ಕಾಗಿ ಅಭಿನಂದನೆ ಸಲ್ಲಿಸದಿದ್ದರೆ ತಪ್ಪಾಗುತ್ತದೆ ಎಂಬ ದೃಷ್ಟಿಯಿಂದ ನಾನು ಅಭಿನಂದನೆಯನ್ನು ಸಲ್ಲಿಸುತ್ತಿದ್ದೇನೆ ಆದರೆ ಆ ಹೊಗಳಿಕೆಯಿಂದ ಮಾತ್ರ ನಾನು ಈ ಮಾತನಾಡುತ್ತಿಲ್ಲ ಎಷ್ಟೇ ಹೊಗಳಿದರೂ ಲೋಪದೋಷಗಳು ಇವೆ ಎಂಬ ಮಾತನಾಡಿ ಮುಂದಕ್ಕೆ ಹೋಗುತ್ತಿದ್ದೇನೆ. ನಾನು ಆ ಕಡೆ ಸಹ ಕುಳಿತುಕೊಂಡು ಮಾತನಾಡಿದ್ದೇನೆ. ಈ ಕಡೆ ಕುಳಿತುಕೊಂಡು ಮಾತನಾಡುವಾಗ ವಹಿಸಿಕೊಳ್ಳಬೇಕೆಂದೇನೂ ಇಲ್ಲ. ಲೋಪದೋಷಗಳು ಇದೆ ಎಂದು ಹೇಳಿದ್ದೇನೆ. ಈ ಮಾತನ್ನು ಪೋಲೀಸ್ ಇಲಾಖೆಯ ವರಿಷ್ಟರೂ ಕೂಡಾ ಒಪ್ಪಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಈ ರೀತಿ ತೊಂದರೆ ಇತ್ತು ಎಂಬ ಕಾರಣವನ್ನೂ ಕೂಡಾ ಕೊಟ್ಟಿದ್ದಾರೆಯೇ ವಿನಃ ಮತ್ತು ಅದಕ್ಕೆ ಕಾರಣ ಬೇರೆ ಯಾವುದೂ ಅಲ್ಲ ಎಂಬ ಮಾತನ್ನೂ ಕೂಡಾ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ ಇವತ್ತು ನಾನು ತಮ್ಮ ಗಮನಕ್ಕೆ ಒಂದು ವಿಚಾರ ತರಬೇಕಾಗಿದೆ. ಎಲ್ಲೆಲ್ಲಿ ಎಷ್ಟೆಷ್ಟು ಜನ ಸತ್ತರು ಎಷ್ಟು ಜನಕ್ಕೆ ತೊಂದರೆ ಆಯಿತು. ಇತ್ಯಾದಿ ಇತ್ಯಾದಿ ವಿಚಾರಗಳ ಬಗ್ಗೆ ನಾನು ಹೇಳಬೇಕು. ಒಟ್ಟು ಎಷ್ಟು ಎಂಬುದನ್ನು ಹೇಳಿಬಿಡುತ್ತೇನೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥದ್ದು. ಒಟ್ಟು ಡೆಡ್ಸ್ ೬೯ ಮೊನ್ನೆ ಸಕಲೇಶಪುರಕ್ಕೆ ಹೋಗಿದ್ದಾಗ, ಬಾಳೆ ಪೇಟೆಯಲ್ಲಿ ತೀರಿಕೊಂಡು ಹೋಗಿರತಕ್ಕಂಥವರನ್ನು ನಾವು ನೋಡಿದೆವು. ಪಾಪ ಚಿಕ್ಕ ಚಿಕ್ಕ ಮಕ್ಕಳು ತೀರಿಕೊಂಡು ಹೋಗಿದ್ದಾರೆ ಯಜಮಾನರು ಹೋಗಿದ್ದಾರೆ. ಅವರಿಗೆ ಚೆಕ್ ನಮ್ಮ ಕೈಯಿಂದ ಕೊಡಿಸಿದರು. ಮತ್ತೊಬ್ಬರ ಕೈಯಿಂದ ಕೊಡಿಸಿದರು. ನಮ್ಮ ಕೈಯಿಂದ ಕೊಡಿಸುವುದು ಬೇಡ, ಅಲ್ಲೇ ಕೊಟ್ಟು ಬೇಗ ಮುಗಿಸಿ ಎಂದು ಹೇಳಿದ್ದೇನೆ, ಸಕಲೇಶಪುರದಲ್ಲಿ ಕಮ್ಯುನಲ್ ಗಲಾಟೆ ಆಗಿದೆಯೋ ಮತ್ತೊಂದು ಆಗಿದೆಯೋ ಎಂಬ ಅನುಮಾನ ಕೂಡಾ ಬಂತು. ಈ ವಿಭಿನ್ನ ಅಭಿಪ್ರಾಯ ತಮ್ಮ ಗಮನಕ್ಕೆ ಕೂಡಾ ಬಂದಿರಬಹುದು. ಆದರೂ ಕೂಡಾ ಅಲ್ಲಿ ಇಬ್ಬರು ಮುಸ್ಲಿಂಸ್‌ಗೆ ಮಾತ್ರ ಪರಿಹಾರ ಕೊಟ್ಟಿದ್ದಾರೆ. ಹಿಂದೂಗಳಿಗೆ ಕೊಟ್ಟಿಲ್ಲ ಎಂಬ ಮಾತೂ ಬಂದು ಬಿಟ್ಟಿದೆ. ಆದರೆ ಕಮ್ಯುನಲ್ ಗಲಭೆಗೆ ಸ್ವಲ್ಪ ಕನೆಕ್ಷನ್ ಅಲ್ಲಿ ಇದ್ದುದರಿಂದ ಪರಿಹಾರ ಕೊಡುವುದು ಒಳ್ಳೆಯದು.

ಇಲ್ಲದಿದ್ದರೆ ತಪ್ಪಾಗುತ್ತದೆ ಎಂಬ ತೀರ್ಮಾನಕ್ಕೆ ನಾನೂ ಕೂಡಾ ಬಂದೆ. ಅಲ್ಲಿ ಹೋದಾಗಲೇ ಹಣವನ್ನು ಕೂಡಾ ಕೊಟ್ಟಿದ್ದೇವೆ. ಯಾವುದೂ ಬಾಕಿ ಇಲ್ಲ. ೬೯ ಜನ ಇದರಲ್ಲಿ ಜೀವ ಕಳೆದುಕೊಂಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಂದು ಹೇಳಿಬಿಡಿರಿ.

ಶ್ರೀ ಎಸ್. ಬಂಗಾರಪ್ಪ.—ಬ್ರೇಕ್ ಆಫ್ ಫಿಗರ್ಸ್ ಕೊಡುತ್ತೇವೆ. ಕೋಲಾರ ಜಿಲ್ಲೆ ೯, ಬೆಂಗಳೂರು ಜಿಲ್ಲೆ ೨೫, ಕೆ. ಜಿ. ಎಫ್–೧, ತುಮಕೂರು–೩, ಅದರಲ್ಲಿ ಕುಣಿಗಲ್ ಬರುತ್ತದೆ. ಬೆಂಗಳೂರು ಸಿಟಿ–೧, ಮಂಡ್ಯ ಇಲ್ಲ, ಕೊಡಗು–೩, ಹಾಸನ–೭, ಮೈಸೂರು ಜಿಲ್ಲೆ ಇಲ್ಲ, ದಾವಣಗೆರೆ–೨ ಬೆಳಗಾಂ ಇಲ್ಲ, ಮಂಗಳೂರು ಇಲ್ಲ, ಚಿಕ್ಕಮಗಳೂರು ಇಲ್ಲ, ಕಾರವಾರ ಇಲ್ಲ, ಬೀದರ್ ಇಲ್ಲ, ಹೊಸದುರ್ಗ ಮತ್ತು ಧಾರವಾಡ ಸೇರಿ–೧೭, ಶಿವಮೊಗ್ಗ–೧ ಇಂಜುರೀಸ್ ಆಗಿರತಕ್ಕಂಥವರು ೫೬೨ ಜನ. ಮಾನ್ಯ ಅಧ್ಯಕ್ಷರೇ, ನಡೆದಿರತಕ್ಕಂಥ ಘಟನೆಗಳಲ್ಲಿ ಸತ್ತವರ ಕುಟುಂಬ ವರ್ಗದವರಿಗೆ ಪರಿಹಾರ ಕೊಡತಕ್ಕಂಥ ವಿಚಾರದಲ್ಲಿ ನಾವು ಅಕ್ಟೋಬರ್ ತಿಂಗಳಲ್ಲಿ ಒಂದು ಕಾನೂನನ್ನು ಬದಲಾವಣೆ ಮಾಡಿದ್ದೇವೆ. ಅದು ಸೆಪ್ಟೆಂಬರ್ ಒಂದನೇ ತಾರೀಖಿನಿಂದಲೇ ರೆಟ್ರಾಸ್‌ಪೆಕ್ಟೀವ್ ಆಗಿ ಜಾರಿಗೆ ಬರಬೇಕೆಂದು ಹೇಳಿದ್ದೇವೆ ಮೊದಲು ೨೦ ಸಾವಿರ ರೂಪಾಯಿಗಳ ಪರಿಹಾರ ಇದ್ದದ್ದು ಈಗ ೫೦ ಸಾವಿರ ರೂಪಾಯಿಗಳು ಎಂದು ಮಾಡಿದ್ದೇವೆ. ಉತ್ತರ ಭಾರತದ ಬಹು ಭಾಗಗಳಲ್ಲಿ ಕೋಮು ಗಲಭೆಗಳಲ್ಲಿ ಸತ್ತವರ ಕುಟುಂಬದವರಿಗೆ ಕೊಡತಕ್ಕ ಹಣ ಒಂದು ಲಕ್ಷ ರೂಪಾಯಿಗಳವರೆಗೂ ಇದೆ, ಅಷ್ಟೇ ಹಣ ಇಲ್ಲೂ ಕೊಡಬೇಕೆನ್ನುವ ಅಭಿಪ್ರಾಯವನ್ನೂ ಸಹ ಕೆಲವರು ವ್ಯಕ್ತಪಡಿಸಿದರು, ಕೊಡಬಾರದು ಎನ್ನುವ ಅಭಿಪ್ರಾಯ ಸರ್ಕಾರಕ್ಕೆ ಇಲ್ಲ. ಆದರೆ ಸದ್ಯಕ್ಕೆ ಇಷ್ಟು ಮಾಡಿದ್ದೇವೆ. ಹಾಗೇನಾದರೂ ಕೊಡಬೇಕೆಂಬ ಅಭಿಪ್ರಾಯ ಬಂದರೆ ಕೊಡತಕ್ಕಂಥ ವಿಚಾರ ಮಾಡೋಣ ಇಂಜುರೀಸ್ ಆಗಿರತಕ್ಕವರಿಗೆ ಕೊಡತಕ್ಕ ಪರಿಹಾರ ಮೊದಲು ೫೦೦ ರೂಪಾಯಿಗಳಿತ್ತು ನಾವು ಎರಡೂವರೆ ಮೂರು ಸಾವಿರ, ನಾಲ್ಕು ಸಾವಿರ ರೂಪಾಯಿಗಳಿಗೆ ಏರಿಸಿದ್ದೇವೆ. ನಾನು ಹೋದಲ್ಲಿ ಲಿಬರಲ್ಲಾಗಿ ಇರಬೇಕು ಎಂದು ಹೇಳಿ ಬಂದಿದ್ದೇವೆ ಎಂದು ಅವರು ಭಾಷಣ ಮಾಡುವಾಗ ಹೇಳಿದರು ನಿಜ ನಾನು ಹೇಳಿದ್ದೇನೆ. ಏಕೆಂದರೆ, ಪ್ರಾಪರ್ಟಿ ಅಸೆಸ್ ಮಾಡುವಂಥ ಕಾಲದಲ್ಲಿ ಕೆಲವು ಕಡೆ ಕಂಪ್ಲೇಂಟ್ಸ್ ಬಂದವು ಕಂಪ್ಲೆಂಟ್ಸ್ ಬಂದಿರತಕ್ಕ ಕಾಲದಲ್ಲಿ ನಾನು ಸ್ಪಷ್ಟವಾಗಿ ಬೀಲಿಟ್ಲ್ ಲಿಬರರ್ ಎಂದು ಹೇಳಿದ್ದೇನೆ. ಡೆಪ್ಯೂಟಿ ಕಮಿಷನರ್‌ರವರಿಗೆ ೧೦ ಸಾವಿರ ರೂಪಾಯಿಗಳ ವರೆಗೆ ಮತ್ತು ಡಿವಿಷನಲ್ ಕಮಿಷನರ್‌ರವರಿಗೆ ೨೦ ಸಾವಿರ ರೂಪಾಯಿಗಳವರೆಗೆ ಪರಿಹಾರಧನವನ್ನು ಕೊಡುವ ಅಧಿಕಾರ ಇದ್ದದ್ದನ್ನು ರಿವೈಸ್ ಮಾಡಿದ್ದೇವೆ. ಅದರಲ್ಲೂ ಒಂದು ಕಡೆ ತೊಂದರೆ ಬಂದಿತ್ತು. ನಾನು ಚೆನ್ನರಾಯಪಟ್ಟಣಕ್ಕೆ ಹೋಗಿದ್ದಾಗ, ಅಲ್ಲಿ ನಾವು ಕೇರಿ ಕೇರಿಗೆ, ಮನೆ ಮನೆಗೆ, ಅಂಗಡಿ ಅಂಗಡಿಗಳಿಗೆ ಹೋಗಿ ವಿಚಾರ ಮಾಡಿದೆವು. ಅಲ್ಲಿ ಹೋಗಿದ್ದಾರೆ ಕೆಲವರು ಬಂದು ಸ್ವಾಮಿ, ನಮಗೆ ಇದುವರೆಗೆ ಒಂದು ಪೈಸೆ ಪರಿಹಾರ ಕೊಟ್ಟಿಲ್ಲವೆಂದು ಹೇಳಿದರು. ಇದು ನಡೆದು ಆಗಲೇ ೧೫ ದಿವಸ ಆಗಿ ಹೋಗಿತ್ತು. It is laps on the part of the officers ಜಿಲ್ಲಾಧಿಕಾರಿಗಳಿಗೆ ೧೦ ಸಾವಿರ ರೂಪಾಯಿಗಳವರೆಗೆ ಪರಿಹಾರ ಕೊಡುವ ಅಧಿಕಾರ ಏನಿತ್ತು, ಆ ಹಣವನ್ನು ಅವರು ಪಾವತಿ ಮಾಡಿಬಿಟ್ಟಿದ್ದರು. ೧೦ ರಿಂದ ೨೦ ಸಾವಿರ ರೂಪಾಯಿಗಳವರೆಗೆ ಕೊಡಬೇಕಾದ ಹಣದ ಬಗ್ಗೆ ಫೈಲ್‌ಗಳನ್ನು ಡಿವಿಷನಲ್ ಕಮಿಷನರ್‌ರವರಿಗೆ ಕಳುಹಿಸಿಕೊಟ್ಟಿದ್ದರು. ಕೆಲವನ್ನು ಮೈಸೂರಿಗೆ ಕಳುಹಿಸಿಕೊಟ್ಟಿದ್ದರು. ಫೈಲ್‌ಗಳನ್ನು ಕಳುಹಿಸಿ ೧೫ ದಿವಸಗಳಾದರೂ ಇನ್ನೂ ಬಂದಿಲ್ಲವೆಂದರು ಹಾಗಾದರೆ ಲಕ್ಷಾಂತರ ರೂಪಾಯಿಗಳು ಮನೆ ಮಠಗಳನ್ನು ಕಳೆದುಕೊಂಡಿರುವವರ ಗತಿ ಏನು ಎಂದು ಕೇಳಿದೆ. ಆಮೇಲೆ ಗೊತ್ತಾಯಿತು, ಡಿವಿಷನಲ್ ಕಮಿಷನರ್‌ರವರು ಟ್ರೈನಿಂಗ್ ಮೇಲೆ ಹೋಗಿಬಿಟ್ಟಿದ್ದಾರೆಂದು. ಒಬ್ಬರು ಟ್ರೈನಿಂಗ್ ಹೋದ ಮೇಲೆ ಇನ್ನೊಬ್ಬರು ಇನ್‌ಚಾರ್ಜ್ ಇರಬೇಕಲ್ಲಾ ? ಆದರೂ ಕೂಡಾ ಅದೇ ದಿವಸ ನಾನು ಆದೇಶ ಕೊಟ್ಟು ಡಿ.ಸಿ. ಅವರ ಹತ್ತಿರ ಹಣ ಇದೆ ಎಂದು ನನಗೆ ಗೊತ್ತಾದ ಕೂಡಲೇ ಇಮ್ಮಿಡಿಯಟ್ ಆಗಿ ಪೇಮೆಂಟ್ ಮಾಡಿಸಿ ಆಮೇಲೆ ಅದನ್ನು ರ್‍ಯಾಟಿಫಿಕೇಷನ್ ಮಾಡಿಕೊಳ್ಳಿ ಎಂದು ಹೇಳಿಬಂದಿದೆ. ೧೦ ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಪರಿಹಾರ ಕೊಡಬೇಕಾದವರಿಗೂ ಮಾರನೆ ದಿವಸವೇ ಎಲ್ಲರಿಗೂ ಸಂಪೂರ್ಣವಾಗಿ ಪೇಮೆಂಟ್ ಮಾಡತಕ್ಕ ಕೆಲಸ ಮಾಡಿದ್ದೇವೆ. ಸುಮ್ಮನಾಗಿ ತಮಗೆ ಗೊತ್ತಿರುವ ಹಾಗೆ, ನಾನು ಎಲ್ಲಿ ಟೂರ್ ಹೋಗಿದ್ದೆ ಎನ್ನತಕ್ಕಂಥಾದ್ದನ್ನು ಹೇಳುತ್ತೇನೆ. ೧೭ನೇ ತಾರೀಖು ನಾನು ಅಧಿಕಾರ ವಹಿಸಿಕೊಂಡ ಕೂಡಲೇ ನಾನು ಮೊಟ್ಟ ಮೊದಲನೆಯದಾಗಿ ಹೋಗಿದ್ದು ರಾಮನಗರ, ಚೆನ್ನಪಟ್ಟಣ, ಕೆ.ಎಂ. ದೊಡ್ಡಿಗೆ, ಇಲ್ಲಿ ಹೋಗಿ ಸ್ಥಳದಲ್ಲೇ ಕೆಲವು ತೀರ್ಮಾನಗಳನ್ನು ಮಾಡಿದ್ದೇನೆ, ಅದರಲ್ಲಿ ಕೆ.ಎಂ. ದೊಡ್ಡಿಯಲ್ಲಿ ಒಂದು ಪೋಲೀಸ್ ಸ್ಟೇಷನ್ ಬೇಕೆಂದು ಹೇಳಿದರು. ಆ ಫೈಲ್ ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಹಾಗೇ ಬಿದ್ದಿತ್ತು. ಅದಕ್ಕೆ ತಕ್ಷಣ ಮಂಜೂರಾತಿ ಕೊಟ್ಟು ಅಲ್ಲಿ ಒಂದು ಪೋಲೀಸ್ ಸ್ಟೇಷನ್‌ನನ್ನು

ಪ್ರಾರಂಭ ಮಾಡಿದ್ದೇವೆ. ಆ ಮೇಲೆ ಅಲ್ಲಿ ಹೋದಾಗ ಕೆಲವು ಜನ ಕೆ.ಎಂ.ದೊಡ್ಡಿಯಿಂದ ಬಂದಂಥ ಹೆಣ್ಣು ಮಕ್ಕಳು ಮತ್ತು ಗಂಡಸರು ಅಲ್ಲಿ ಸಾಮೂಹಿಕ ದಾಸೋಹ ಮಾಡಿ ಊಟ ಹಾಕುತ್ತಿದ್ದರು. ಅಲ್ಲಿ ಮನೆಗಳು ಹಾಳಾಗಿವೆ, ಮನೆಗಳ ಕೆಲಸ ಮುಗಿಸದೆ ಅವರು ಬರುವ ಹಾಗಿಲ್ಲ. ನಾನು ನಿಜ ಹೇಳಬೇಕೆಂದರೆ ಸಂಬಂಧಪಟ್ಟಂಥ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಿ ಎಲ್ಲೆಲ್ಲಿ ಹುಲ್ಲು ಮನೆಗಳು ಹಾಳಾಗಿವೆಯೋ ಅಲ್ಲೆಲ್ಲಾ ಹೆಂಚಿನ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಹೇಳಿದ್ದೇವೆ. ಇದೇ ಹೊತ್ತಿನಲ್ಲಿ ಒಬ್ಬ ಬಡವ ಒಂದು ಹೆಂಚಿನ ಮನೆಯನ್ನಾದರೂ ತೆಗೆದುಕೊಳ್ಳಲಿ ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಆಮೇಲೆ ನೊಂದವರ ಸತ್ತವರ ಕುಟುಂಬ ವರ್ಗವನ್ನು ಸಾಂತ್ವನ ಮಾಡುವುದರ ಜೊತೆಯಲ್ಲಿ ಪರಿಹಾರವನ್ನು ಕೊಟ್ಟಿದ್ದೇವೆ. ಪರಿಹಾರದ ಹಣದ ವಿಚಾರದಲ್ಲಿ ಚನ್ನರಾಯಪಟ್ಟಣ ಒಂದನ್ನು ಬಿಟ್ಟರೆ ಬೇರೆ ಕಡೆ ಎಲ್ಲೂ ತಕರಾರು ಬಂದಿಲ್ಲ. ಆದರೆ ರಾಮನಗರದಲ್ಲಿ ಒಂದು ತಕರಾರು ಬಂದಿತ್ತು. ಮುಸ್ಲಿಮ್ ಜನಾಂಗದಲ್ಲಿ ಒಬರು ಸತ್ತಿದ್ದರು. ಅವರಿಗೆ ಹೆಂಡತಿಯರು ಜಾಸ್ತಿ ಇದ್ದುದರಿಂದ ಯಾರಿಗೆ ಕೊಡಬೇಕೆನ್ನುವ ಬಗ್ಗೆ ಜಗಳ ಬಂದಿತು. ಆ ಕೇಸ್ ಬಿಟ್ಟರೆ ಮತ್ತೆ ಯಾವುದೂ ನನ್ನ ಗಮನಕ್ಕೆ ಬರಲಿಲ್ಲ. ಇನ್ನೂ ಏನಾದರೂ ನಮ್ಮ ಕಣ್ಣು ತಪ್ಪಿ ಬಾಕಿ ಉಳಿದುಕೊಂಡಿದ್ದರೆ ನಾವು ಅದನ್ನು ವಿಚಾರ ಮಾಡೋಣ. ಮಾನ್ಯ ಸಭಾಧ್ಯಕ್ಷರೇ, ೨೩ನೇ ತಾರೀಖು ಅಕ್ಟೋಬರ್, ಕೋಲಾರಕ್ಕೆ ಮತ್ತು ಶ್ರೀನಿವಾಸಪುರಕ್ಕೆ ನಾನು ಹೋಗಿ ಬಂದಿದ್ದೇನೆ. ನಾನು ಎಲ್ಲೆಲ್ಲಿ ಹೋಗಿದ್ದೇನೆಂದು ಈ ಸದನದ ಗಮನಕ್ಕೆ ತರುತ್ತಿದ್ದೇನೆ. ನಾನು ಹೋದ ಕಡೆ ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳನ್ನು ಕರೆದಿದ್ದು ಶಾಂತಿ ಸಮಿತಿಗಳನ್ನು ಮಾಡಿ ಮಾತನಾಡಿದ್ದೇನೆ. ಎಲ್ಲರನ್ನೂ ವೇದಿಕೆ ಮೇಲೆ ಕೂರಿಸಿದ್ದೇವೆ. ಮಾನ್ಯ ಬೈರೆಗೌಡರು ಸಹ ಆ ದಿವಸ ಕೋಲಾರಕ್ಕೆ ಬಂದಿದ್ದರು. ನಾನು ಜನರಿಗೆ ಅಪೀಲ್ ಮಾಡತಕ್ಕಂಥ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು ಇರಬೇಕು. ಇದು ಬರೀ ಒಂದು ಪಕ್ಷದ ಅಥವಾ ಸರ್ಕಾರದ ಕೆಲಸವಲ್ಲ. ಆಮೇಲೆ ೨೭ನೇ ಅಕ್ಟೋಬರ್, ಹೊಸದುರ್ಗ ಮತ್ತು ದಾವಣಗೆರೆಗೆ ಹೋಗಿ ಬೆಳಗಿನ ಜಾವ ಎರಡು ಅಥವಾ ಮೂರು ಗಂಟೆಗೆ ಬೆಂಗಳೂರಿಗೆ ಬಂದೆ ನಾವಾಗಲೀ ನೀವಾಗಲೀ ಹೋಗಿರುವ ಸಂದರ್ಭದಲ್ಲಿ ತೊಂದರೆಯಾಗಿರುವ ಎಲ್ಲಾ ಮನೆಗಳಿಗೂ ಭೇಟಿ ಕೊಟ್ಟು ಬಂದಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಎಲ್ಲಾದರೂ ಒಂದೆರಡು ಮನೆಗಳು ಬಿಟ್ಟು ಹೋಗಿರಬಹುದು. ೧೭ನೇ ತಾರೀಖು ಅಕ್ಟೋಬರ್ ತಿಂಗಳಿನಲ್ಲಿ ನಾನು ಅಧಿಕಾರ ವಹಿಸಿಕೊಂಡ ಮೇಲೆ ರಾಮನಗರ, ಚೆನ್ನಪಟ್ಟಣ, ಎಂ.ಕೆ. ದೊಡ್ಡಿ, ಕೋಲಾರ ಶ್ರೀನಿವಾಸಪುರ ತಾಲ್ಲೂಕು, ಚಿತ್ರದುರ್ಗ, ಹೊಸದುರ್ಗ ನಂತರ ೨೯ನೇ ತಾರೀಖಿನಂದು ಸೋಮವಾರ ಪೇಟೆ, ಕೂರ್ಗ್ ಡಿಸ್ಟ್ರಿಕ್ಟ್ ಹೋಗಿದ್ದೆ. ಅಲ್ಲಿಗೆ ನಾನು ಹೋದಾಗ ಒಂದು ಮಸಿದಿ ಹಾಳಾಗಿ ಹೋಗಿತ್ತು. ನಾನು ನಿಜವಾಗಿ ಹೇಳಬೇಕೆಂದರೆ ಕಮ್ಯಾಂಡಬಲ್ ವರ್ಕ್ ಮಾಡಿ ೨೪ ಗಂಟೆಯೊಳಗೆ ನಮ್ಮ ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್‌ನವರು ಮುಗಿಸಿಕೊಟ್ಟಿದ್ದಾರೆ. ಡಿ.ಸಿ. ಮತ್ತು ಎಸ್.ಪಿ. ಯವರು ಅವರಿಗೆ ವಹಿಸಿಕೊಟ್ಟಿದ್ದಾರೆ. ಏಕೆಂದರೆ ಮಾರನೆ ದಿವಸ ಶುಕ್ರವಾರ ನಮಾಜ್ ಮಾಡತಕಂಥಾದು ಇರುತ್ತದೆ. ಆದ್ದರಿಂದ ತಕ್ಷಣವೇ ಹೆಂಚುಗಳನ್ನು ಹಾಕಿ ಚಾಪೆ ಹಾಸಿ ನೀವು ನಮಾಜು ಮಾಡಬಹುದೆಂದು ಹೇಳಿದ್ದಾರೆ. ಇದು ನಾನು ಹೇಳುವುದಿಲ್ಲ. ಇದನ್ನು ಎಲ್ಲಾ ಪಕ್ಷದವರೂ. ಎಲ್ಲರೂ ಸಂತೋಷದಿಂದ ಹೇಳಿದ್ದಾರೆ. ನಾನೂ ಸಂತೋಷದಿಂದ ನಾನು ಈ ಮಾತನ್ನು ಹೇಳಿದ್ದೇನೆ. ಅನಂತರ ಈ ತಿಂಗಳು ೧೨ನೇ ತಾರೀಖು, ಕುಣಿಗಲ್ ಚನ್ನರಾಯಪಟ್ಟಣಕ್ಕೆ ನಾನು ಹೋಗಿ ಬಂದಿದ್ದೇನೆ. ಮತ್ತು ೧೪ನೇ ತಾರೀಖು ಹಾಸನ, ಸಕಲೇಶಪುರದ ಬಾಳೆಪೇಟೆ ಇತ್ಯಾದಿಗಳ ಕಡೆ ಹೋಗಿ ಬಂದಿದ್ದೇನೆ. ಅಲ್ಲಿ ಹೋದಾಗ ಹಾಸನದಲ್ಲಿ ಹೆಣ್ಣುಮಕ್ಕಳು ಮತ್ತು ಗಂಡುಮಕ್ಕಳುಗಳನ್ನೆಲ್ಲಾ ಮಾತನಾಡಿಸಿಕೊಂಡು ಧೈರ್ಯ ಕೊಟ್ಟು ಬಂದಿದ್ದೇನೆ. ಎಲ್ಲರಿಗೂ ಅನುಕೂಲ ಮಾಡಿ ಕಳುಹಿಸಿ ಕೊಟ್ಟಿದ್ದೇವೆಂದು ಹೇಳುವುದಿಲ್ಲ, ಎಲ್ಲರನ್ನೂ ಕಳುಹಿಸಿಕೊಡಲಾಗಿದೆ ಎನ್ನುವ ದೊಡ್ಡ ಮಾತನ್ನು ನಾನು ಆಡುವುದಿಲ್ಲ. ಮೊದಲನೆಯದಾಗಿ ಅಲ್ಲಿ ಒಂದು ಔಟ್‌ಪೋಸ್ಟ್ ಆಗಬೇಕು, ಅದರಿಂದ ಅಲ್ಲದೇ ಇದ್ದರೂ ಅಲ್ಲಿ ಮನೆಗಳು ಸರಿಯಾಗದೆ ಕಳುಹಿಸಿಬಿಟ್ಟರೆ ಅವರು ಎಲ್ಲಿ ಇರಬೇಕು ಎನ್ನತಕ್ಕಂಥ ಪ್ರಶ್ನೆ ಇದೆ. ಆ ಕೆಲಸ ಕಾರ್ಯಗಳು ವೇಗದಿಂದ ನಡೆಯುತ್ತಿದೆ, ವಾರ್‌ಫೂಟಿಂಗ್‌ನಲ್ಲಿ ಕೆಲಸ ಕಾರ್ಯಗಳು ಆಗಬೇಕೆಂದು ಆದೇಶವನ್ನು ಸರ್ಕಾರದಿಂದ ಕೊಟ್ಟಿದ್ದೇವೆ ಕೆಲಸ ಕಾರ್ಯಗಳು ಎಷ್ಟೇ ವೇಗದಿಂದ ಮಾಡಿದರೂ ಕೂಡಾ ಕೆಲವು ಸಾರಿ ತಂಡ ಆಗುತ್ತಿದೆಯೇನೋ ಎಂದು ನನ್ನ ಮನಸ್ಸಿಗೂ ಕೂಡ ಕೆಲವು ಸಾರಿ ಬಂತು. Again we haive polled up the administration also to take up the work immedately on war footing. ಮಾಡತಕ್ಕಂಥ ಕೆಲಸವನ್ನು ನಾವು ಈಗಾಗಲೇ ಮಾಡಿದ್ದೇವೆ. ಈ ಸಂದರ್ಭದಲ್ಲಿ ನಾವು ಪರಿಹಾರ ಕೊಡತಕ್ಕಂಥ ವಿಚಾರದಲ್ಲಿ ಲಿಬರಲ್ ಅನ್ನತಕ್ಕಂಥ ಮಾತು ನಾನು ಆಡಿದಾಗ ನಿಜ ಹೇಳಬೇಕೆಂದರೆ, ಕೆಲವರನ್ನು

ನಿಮಗೆ ಪರಿಹಾರ ದೃಷ್ಟಿಯಿಂದ ಏನಾದರೂ ತೊಂದರೆಯಾಗಿದೆಯೇ ಎಂದು ನಾನೇ ಕೇಳಿದಾಗ, ಇಲ್ಲಾ ಸಾರ್, ನಮಗೆಲ್ಲ ಕರೆಕ್ಟ್ ಆಗಿ ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದರು. ಇನ್ನು ಕೆಲವರು ಇಲ್ಲ ಸಾರ್ ನಮಗೆ ಕಡಿಮೆಯಾಗಿದೆ ಎನ್ನುವ ಮಾತು ಆಡಿದರು. ಉದಾಹರಣೆಗೆ ದಾವಣಗೆರೆ ಚನ್ನರಾಯಪಟ್ಟಣ ಮತ್ತು ಬೇರೆ ಬೇರೆ ಕಡೆಗಳಿಂದಲೂ ಇದು ನನ್ನ ಗಮನಕ್ಕೆ ಬಂತು. ನಾವು ಒಂದು ಮಾತನ್ನು ಅಧಿಕಾರಿಗಳಿಗೆ ಆ ದಿವಸ ಹೇಳಿದ್ದೇನೆ. ಪ್ರತಿಯೊಂದಕ್ಕೂ ಮುಖ್ಯ ಮಂತ್ರಿಗಳೇ ಹೋಗಿ ಹೇಳಬೇಕೆಂದಲ್ಲ. ನಾವು ಸರ್ಕಾರದ ಆದೇಶ ಕೊಟ್ಟು ತಿಳಿಸಿದ್ದೇವೆ. ಲಿಬರಲ್ ಎಂದರೆ ಅರ್ಥ ಏನು ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕಾಂಪನ್‌ಸೇಷನ್ ಕೊಡುವ ವಿಚಾರದಲ್ಲಿ ನಿನ್ನೆ ದಿನ ನಾನು ಒಂದು ಪ್ರಶ್ನೆ ಹಾಕಿದ್ದೆ, ಆ ಪ್ರಶ್ನೆಗೆ ತಾವು ಏನು ಉತ್ತರ ಕೊಟ್ಟಿದ್ದೀರೆಂದರೆ, ಒಟ್ಟು ರಾಜ್ಯದಲ್ಲಿ ಸುಮಾರು ೪ ಕೋಟಿ ರೂಪಾಯಿಗಳಿಗೆ ಹೆಚ್ಚು ಆಸ್ತಿ ಪಾಸ್ತಿ ನಷ್ಟವಾಗಿದೆ, ಅದರಲ್ಲಿ ೧ ಕೋಟಿ ರೂಪಾಯಿನಷ್ಟು ಪರಿಹಾರ ಧನ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಅಂದರೆ, ತಾವು ಹೋದಂಥ ಸಂದರ್ಭದಲ್ಲಿ ಕೆಲವರು ಎಲ್ಲಾ ಸಮಾಧಾನವಾಗಿದೆ. ಸಾಕಷ್ಟು ಪರಿಹಾರಧನ ಬಂದಿದೆಯೆಂದು ಜನರು ಹೇಳಿದರೆಂದು ಹೇಳುತ್ತೀರಲ್ಲಾ, ಅವರಿಗೆ ಆಗಿರತಕ್ಕಂಥ ನಷ್ಟಕ್ಕೂ ತಾವು ಕೊಟ್ಟಿರತಕ್ಕಂಥ ಪರಿಹಾರಕ್ಕೂ ಆಜಗಜಾಂತರ ವ್ಯತ್ಯಾಸ ಇದೆಯೆಂದು ತಮ್ಮ ಉತ್ತರದಿಂದ ಗೊತ್ತಾಗುತ್ತದೆ. ಅಂದರೆ ತಾವು ಶೇಕಡಾ ೨೦ರಷ್ಟು ಮಾತ್ರ ಕಾಂಪನ್‌ಸೇಷನ್ ಕೊಟ್ಟಿದ್ದೀರಿ ಎಂದಾಯಿತು.

ಶ್ರೀ ಎಸ್. ಬಂಗಾರಪ್ಪ.—ನಾನು ಆ ಅರ್ಥದಲ್ಲಿ ಹೇಳಲಿಲ್ಲ. ನನ್ನ ಮಾತನ್ನು ನೀವು ಫಾಲೋ ಮಾಡಿದ್ದೀರೊ ಏನೋ ಗೊತ್ತಿಲ್ಲ.

ಕೆಲವು ಕೇಸ್‌ನಲ್ಲಿ ನಮಗೆ ತೊಂದರೆಯಾಗಿದೆ ಎಂದು ಹೇಳಿದ್ದು ನಿಜ. ಈಗ ಅಪ್ಲಿಕೇಷನ್ ಕೆಲವರಿಗೆ ಕೊಡುವುದೇ ಇಲ್ಲ ಬಡವರಿಗೆ ಓದುಬರಹ ಬರುವುದಿಲ್ಲ ನಾನು ಏನು ಮಾಡಿದ್ದೇನೆಂದರೆ ಅರ್ಜಿ ಕೊಟ್ಟ ಮೇಲೆಯೇ ಪರಿಹಾರ ಕೊಡಬೇಕು. ಇಲ್ಲದಿದ್ದರೆ ಕೊಡಬಾರದೆಂದು ಎಲ್ಲಿದೇ ಎಂದು ನಾನು ಅಧಿಕಾರಿಗಳಿಗೆ ಗೊತ್ತಾಗಲಿ ಎಂದು ಹೇಳುತ್ತಾ ಬಂದಿದ್ದೇನೆ. ನಮ್ಮ ವ್ಯವಸ್ಥೆಯಲ್ಲಿ ಇವತ್ತು ಅವನಿಗೆ ಬಾಯಿ ಇದ್ದರೂ ಇಲ್ಲದಂತಾಗಿದೆ. ಅವನಿಗೆ ಧೈರ್ಯವಿಲ್ಲ ಕೈ ಇದ್ದರೂ ಬರೆಯುವುದಿಲ್ಲ ಆವನಿಗೆ ಬಾಯಾಗಬೇಕು, ಕೈ ಇಲ್ಲದವರಿಗೆ ಕೈಯಾಗಬೇಕು ಎನ್ನತಕ್ಕಂಥ ಅನಿಸಿಕೆಯಲ್ಲೇ ನಾವು ಹೋಗಬೇಕಾಗಿದೆ. ಅಧಿಕಾರಿಯಾದವನು ನೀನೆ ಹೋಗಿ ಕೇಳು, ಅವನು ಹೇಳಿದ್ದನ್ನು ಬರೆದು ಅವನ ಹೆಬ್ಬೆಟ್ಟು ಸಹಿ ತೆಗೆದುಕೊಂಡು ಪರಿಹಾರ ಕೊಡು ಎಂದು ಅಧಿಕಾರಿಗಳಿಗೆ ಹೇಳಿದ್ದೇನೆ; ಏನು ತಪ್ಪಿದೆ? ಆದರೆ ಕೆಲವರು ಹಣ ಸಿಗುತ್ತದೆಂದು ಅತಿಯಾಗಿ ಬರೆದರೆ ಯಾವ ಸರ್ಕಾರವೂ ಕೊಡಲು ಸಾಧ್ಯವಿಲ್ಲ. ಆದರೆ ಹತ್ತಿರ ಹತ್ತಿರ ಅಂಕಿಸಂಖ್ಯೆ ಕೊಡುಬಂದಾಗ ಅಧಿಕಾರಿಗಳೇ ಪರಿಹಾರ ಕೊಡುವುದು ತಪ್ಪಿಲ್ಲವೆಂದು ಹೇಳಿದ್ದೇನೆ. ಇದುವರೆಗೂ ನಾವು ೧ ಕೋಟಿ ೬೫ ಲಕ್ಷ ರೂಪಾಯಿಗಳ ಪರಿಹಾರ ಕೊಟ್ಟಿದ್ದೇವೆ. ಅಂದರೆ ನಾವು ಇಂಜುರೀಸ್, ಆಸ್ತಿ ಪಾಸ್ತಿ ನಷ್ಟ ಎಲ್ಲಕ್ಕೂ ಸೇರಿ ಇಷ್ಟು ಕೊಟ್ಟಿದೇವೆ. Whose money it is? it is tax-payer's money. ಯಾರೋ ಎಲ್ಲಿ ಕುಳಿತುಕೊಂಡು ಏನೋ ಮಾಡುತ್ತಾರೆ ಜೀವಹರಣ ಮಾಡುತ್ತಾರೆ. ಇನ್ನೂ ಕೂಡ ಕೆಲವೆಲ್ಲಾ ಕ್ಲೈಮ್ ಸೆಟ್ಲ್ ಆಗಬೇಕಾಗಿದೆ. ಕೋಟಿಗಟ್ಟಲೆ ಹಣ ಕೊಡುತ್ತಿದ್ದೇವೆ. ಇದು ರಾಮನಿಗೆ ಕೊಟ್ಟ ಕಾಣಿಕೆಯೇ ? ಹೀಗೆ ? ದೇವರ ಹೆಸರಿನಲ್ಲಿ. ಮತ್ತೊಂದರ ಹೆಸರಿದಲ್ಲಿ ಮಾಡುತ್ತಾ ಕುಳಿತರೆ ನಾಳೆ ಗತಿಯೇನು ? ಕಂಪ್ಲೇಂಟ್ಸಂತೂ ಸ್ಪಷ್ಟವಾಗಿ ಸರ್ಕಾರಕ್ಕೆ ಬಂದಿದೆ. ವಿ.ಹೆಚ್ ಪಿ., ಆರ್.ಎಸ್.ಎಸ್., ಬಿ.ಜೆ.ಪಿ. ಈ ಹೆಸರುಗಳ ಮೇಲೆ ಕಂಪ್ಲೈಂಟ್‌ಗಳು ನಮ್ಮ ಸರ್ಕಾರಕ್ಕೆ ಬಂದಿವೆ. ಇವರೇ ಕಾರಣಕರ್ತರು ಎಂದು ನೇರವಾಗಿರತಕ್ಕ ಕಂಪ್ಲೈಂಟ್‌ಗಳು ಬಂದಿವೆ. ನಾವು ತನಿಖೆ ಮಾಡಿದಾಗಲೂ ಸ್ಪಷ್ಟ ಪಟ್ಟಿಗೆ ಇನೂ ಗೊತ್ತಾಗಬೇಕು ಇನ್ನೂ ವಿವರಗಳನ್ನು ಪಡೆಯುತ್ತಿದ್ದೇವೆ. ವಿ.ಹೆಚ್.ಪಿ. ಮತ್ತು ಆರ್.ಎಸ್.ಎಸ್.ನ ಕೈವಾಡ ಇದೆಯೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ರೀತಿಯಾದರೆ ನಾಳೆ ದೇಶದ ಭವಿಷ್ಯ ಏನು ಜನರ ಗತಿಯೇನು ಎಂದು ವಿಚಾರ ಅವರು ಮಾಡತಕ್ಕದ್ದು ಒಳ್ಳೆಯದು.

ಶ್ರೀ ರುಕ್ಮಯ್ಯ ಪೂಜಾರಿ.—ನಾವು ನಿಶ್ಚಿತವಾಗಿ ಬಿಜೆಪಿ ವಿಹೆಚ್‌ಪಿ ಆರ್‌ಎಸ್‌ಎಸ್ ಮೇಲೆ ಆರೋಪ ಹೊರಿಸಿದ್ದೀರಿ. ಮೊನ್ನೆ ನಡೆದ ಇನ್ಸಿಡೆಂಟ್ ನಮಗೆ ಯಾರಿಗೂ ಶೋಭೆ ತರುವಂಥಾದ್ದಲ್ಲ. ನಾವು ಅದನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಾನು ಕೇಳುವುದು ಏನೆಂದರೆ, ಅಕ್ಟೋಬರ್ ೩೦ರಂದು ಇಡೀ ರಾಜ್ಯದಲ್ಲಿ ಪೈಗಂಬರ್ ದಿನಾಚರಣೆ ನಡೆದಾಗ ಸಾವಿರಾರು ಜನ ಸೇರಿದ್ದರು ಯಾವುದೇ ಅಹಿತಕರ ಘಟನೆ ನಡೆಯಲಿಲ್ಲ. ಆದರೆ ರಾಮಜ್ಯೋತಿ ಸಂದರ್ಭದಲ್ಲಿ ಕೆಲವು ಕಡೆ ಅಹಿತಕರ ಘಟನೆಗಳು ನಡೆದಿವೆ. ಖಂಡಿತವಾಗಿ ಯಾರು ಇದರಲ್ಲಿ ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆ ಕೊಡಬೇಕಾಗಿದೆ ಆದ್ದರಿಂದ ಒಂದು ಸದನದ ಸಮಿತಿಯನ್ನು ತಾವು ರಚಿಸಬೇಕೆಂದು ನಾನು ಈ ಒಂದು ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ನಾನು ಏನು ಹೇಳಿದೆ ಎಂದರೆ ಈ ರೀತಿ ಕಂಪ್ಲೇಂಟ್ ಬಂದಿವೆ ಸರ್ಕಾರದ ಬಳಿ ಇವೆ. ನಾವು ತನಿಖೆ ಮಾಡುತ್ತಿದ್ದೇವೆ ಅದರ ಬಗ್ಗೆ ಕಾನೂನು ಚೌಕಟ್ಟಿನಲ್ಲಿ ಸೂಕ್ತವಾದ ಕಾರ್ಯಕ್ರಮವನ್ನು ನಾವು ಹಾಕಲೇಬೇಕಾಗುತ್ತದೆ. ಹಾಕುತ್ತೇವೆ. ಇವತ್ತು ಕೆಲವು ಮಾತುಗಳನ್ನು ತಾವು ಹೇಳಿದ್ದೀರಿ ನಮ್ಮ ಮಂತ್ರಿಮಂಡಲದ ಸದಸ್ಯರಾದ ಶ್ರೀ ಬಸವಲಿಂಗಪ್ಪ ಮತ್ತು ಶ್ರೀ ಅಜೀಜ್‌ಸೇಠ್‌ರವರ ಹೇಳಿಕೆಗಳು ಪ್ರಚೋದನಾಕಾರಿಯಾಗಿದ್ದುವು ಎಂದು ಹೇಳಿದ್ದೀರಿ ನನ್ನನ್ನು ಈ ಮೊದಲು ಪತ್ರಿಕಾ ಗೋಷ್ಠಿಯಲ್ಲಿ ಕೂಡ ಈ ಮಾತನ್ನು ಕೇಳಿದ್ದರು ನಾನು ತನಿಖೆ ಕೂಡ ಮಾಡಿಸುತ್ತೇನೆಂದು ಹೇಳಿದೆ ಅವರು ಆ ರೀತಿ ಹಾಗೆ ಹೇಳಲಿಲ್ಲ ನಾನು ನಿಮ್ಮ ಹತ್ತಿರ ಸ್ಪಷ್ಟಪಡಿಸುತ್ತೇನೆ. ಯಾವುದೇ ಪ್ರಚೋದನಕಾರಿಯಾದ ಹೇಳಿಕೆಗಳನ್ನು ಶ್ರೀ ಮಾನ್ ಬಸವಲಿಂಗಪ್ಪನವರಾಗಲಿ, ಶ್ರೀಮಾನ್ ಅಜೀಜ್‌ಸೇಠ್‌ಜಿಯವರಾಗಗಿ ಯಾರು ಕೂಡ ಹೇಳಿಲ್ಲ. ಆದರೆ.........

೬–೨೫ ಪಿ.ಎಂ.

ಶ್ರೀ ಡಿ. ಬಿ. ಚಂದ್ರೇಗೌಡ.—ಇದನ್ನು ಅವರೇ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ತನಿಖೆ ಮಾಡಲಿಕ್ಕೆ ನಾನು ಇದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಏನು ತನಿಖೆಯನ್ನು ಮಾಡುತ್ತಿದ್ದೀರಿ. ಅವರು ಹೇಳಿಕೆಗಳನ್ನು ಪತ್ರಿಕೆಗಳಿಗೆ ಕೊಟ್ಟಿದ್ದಾರೋ ಇಲ್ಲವೋ ಎನ್ನತಕ್ಕಂಥವನ್ನು ತನಿಖೆ ಮಾಡಿಸುತ್ತಿದ್ದೀರೋ ಅಥವಾ ಮುಖ್ಯಮಂತ್ರಿಗಳಾದ ನಿಮಗೆ ಮಂತ್ರಿಗಳಾಗಿ ನಾವು ಈ ರೀತಿ ಹೇಳಲಿಲ್ಲ ಎಂದು ಏನಾದರೂ ನಿಮಗೆ ಅವರು ಬರೆದು ಕೊಟ್ಟಿದ್ದಾರೋ, ಅವರಂತೂ ಇದುವರೆಗೂ ಏನೂ ವಿವರಣೆಯನ್ನು ಕೊಟ್ಟಿಲ್ಲ. ಮಾನ್ಯ ಬಂಗಾರಪ್ಪನವರೇ ಮಾನ್ಯ ಬಸವಲಿಂಗಪ್ಪನವರು, ಅಜೀಜ್‌ಸೇಠ್‌ರೂ ಆ ಹೇಳಿಕೆಗಳನ್ನು ಕೊಡದಿದ್ದರೆ, ಇವತ್ತು ಈ ಪರಿಸ್ಥಿತಿ ಬರುತ್ತಿರಲಿಲ್ಲ. ರಥಯಾತ್ರೆ ನಿಲ್ಲಿಸಿ ಅಡ್ವಾಣಿಯಂವರನ್ನು ಬಂಧನ ಮಾಡಿದ ಮೇಲೆ ಇಡೀ ದೇಶದಲ್ಲಿ ಶಾಂತಿ ಪರಿಸ್ಥಿತಿ ಬರುತ್ತಿತ್ತು. ಉತ್ತರಪ್ರದೇಶದಲ್ಲಿ ಆಗಲಿಲ್ಲ. ಆದರೆ ಇಲ್ಲಿ ಏತಕ್ಕೆ ಇದು ಮುಂದುವರಿಸಿಕೊಂಡು ಹೋಯಿತು Because your own colleague ಇವರಿಬ್ಬರೂ ಇನ್‌ಸ್ಟಿಗೇಟ್ ಮಾಡಿದರು. ಇವರು ಪ್ರವೋಕೇಟಿಂಗ್ ಸ್ಟೇಟ್‌ಮೆಂಟನ್ನು ಕೊಟ್ಟು ಕೊಂಡು ಬಂದರು ಅದಕ್ಕೋಸ್ಕರ ಈಗ ನುಸುಳಿಕೊಳ್ಳುತ್ತಾರೆ. ಹೋಗಲಿ ಇದೆಲ್ಲಾ ಆಯಿತಲ್ಲಾ ತಾವು ಏನು ಮಾಡಿದರೂ ಇದು ತಮ್ಮ ಪಕ್ಷದ ಆಂತರಿಕ ವ್ಯವಹಾರ ಕ್ಯಾಬಿನೆಟ್‌ನ ಆಂತರಿಕ ವ್ಯವಹಾರ ತಾವು ಮಾಡಿ, ಆದರೆ ಕೊನೆಯ ಪಕ್ಷ ಸೌಜನ್ಯಕ್ಕಾದರೂ ಜನಗಳ ಭಾವನೆಗೆ ವಿರುದ್ಧವಾಗಿ ಮಾತನಾಡಿದ್ದೇವೆ, ಈ ಅರ್ಥ ನಮ್ಮಲ್ಲಿ ಇರಲಿಲ್ಲ ಎನ್ನತಕ್ಕಂಥ ಮಾತನ್ನು ಸಹಿತ ಅವರು ಹೇಳಲಿಲ್ಲವಲ್ಲ.

SRI QUAMURUL ISLAM;—Is there any incident in the State after Mr. Azeez Sait and Sri Basavalingappa made this Statement ? Is there any recurrence of the incident in the State after that,—I want to know from Hon'ble Member.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇಲ್ಲಿ ಅವರೇ ಹೇಳಬಹುದು ಅಥವಾ ಅವರ ಪರವಾಗಿ ನಾನು ಕೂಡ ಹೇಳಬಹುದು. ಇಲ್ಲಿ ನಾವು ಏನು ತೀರ್ಮಾನವನ್ನು ಮಾಡಿದ್ದೇವೆ ಎಂದರೆ ಅವರು ಹೇಳಬಾರದು. ಅದನ್ನು ನಾನೇ ಹೇಳಬೇಕು ಎಂದು ತೀರ್ಮಾನವನ್ನು ಮಾಡಿ ಪತ್ರಿಕಾ ಗೋಷ್ಠಿಯಲ್ಲಿ ಕೂಡಾ ಈ ಮೊದಲೇ ಅವರ ಪರವಾಗಿ ಹೇಳಿಬಿಟ್ಟಿದ್ದೇವೆ. ಏಕೆಂದರೆ ಒಂದು ವಿಚಾರ ಸರ್ಕಾರದ ಗಮನಕ್ಕೆ ಬಂದ ಕೂಡಲೇ ಸುಮ್ಮನೆ ಸುಮ್ಮನೆ ಇಲ್ಲ ಎಂದು ಹೇಳಬಾರದು. ಏನಾದರೂ ಹುರುಳು ಇದ್ದರೆ ಅದನ್ನು ನೋಡಿಸಬೇಕು ನೋಡಿಸಿದ್ದೇವೆ. ಅದರಲ್ಲಿ ಹುರುಳಿಲ್ಲ ಎನ್ನತಕ್ಕಂಥಾದ್ದನ್ನು ಸುಮಾರು ಎರಡು ಮೂರು ಸಾರಿ ಮತ್ತು ಬೇರೆ ಬೇರೆ ಕಡೆಗಳಲ್ಲಿ ಪತ್ರಿಕಾಗೋಷ್ಠಿಯಲ್ಲಿ ನಾನೇ ಹೇಳಿದ್ದೇನೆ, ಅನಂತರ ಈಗಲೂ ಕೂಡ ನಾನು ಹೇಳುತ್ತಿದ್ದೇನೆ. ಶ್ರೀ ಮಾನ್ ಬಸವಲಿಂಗಪ್ಪನವರಾಗಲಿ, ಅಜೀಜ್‌ಸೇಠ್‌ರವರಾಗಲೀ ಈ ರೀತಿಯಲ್ಲಿ ಹೇಳಿಲ್ಲ, ಮೈನಾರಿಟೀಸ್ ಇಂಟರೆಸ್ಟನ್ನು ಕಾಪಾಡತಕ್ಕಂಥ ವಿಚಾರದಲ್ಲಿ ಸಹಜವಾಗಿ ಆ ವರ್ಗದಿಂದ ಬಂದಿರತಕ್ಕಂಥವರಿಗೆ ನೋವು ಹೆಚ್ಚಾಗಿರ ತಕ್ಕಂಥಾದ್ದನ್ನು ನಾವು ನೀವು ಒಪ್ಪಲೇಬೇಕು. ಯಾವ ಪಕ್ಷದವರೇ ಇರಲಿ, ಅದನ್ನು ಒಪ್ಪಲೇಬೇಕು. ರಕ್ಷಣೆಗಳು ಹೆಚ್ಚಬೇಕು ಎನ್ನತಕ್ಕಂಥ ಒಂದು ಆಸೆಯಿಂದ ಹೇಳಿರತಕ್ಕಂಥ ವಿಚಾರವನ್ನು ಬಿಟ್ಟರೆ ಇನ್ನೇನು ಇದರಲ್ಲಿ ಇಲ್ಲ ಅನಂತರ......

ಶ್ರೀ ಆರ್. ವಿ. ದೇಶ್‌ಪಾಂಡೆ.—ಅವರ ಪರವಾಗಿ ನಾನು ಡಿನೈ ಮಾಡಿದ್ದೇನೆ. ಎಂದು ತಾವು ಹೇಳಿದ್ದೀರಿ, ಬಹಳ ಸಂತೋಷ. ಅವರು ಡಿನೈ ಮಾಡಲಿಕ್ಕೆ ಕೇಪಬಲ್ ಇಲ್ಲವೇ ಅವರಿಗೆ ಡಿನೈ ಮಾಡುವುದಕ್ಕೆ ಆಗುವುದಿಲ್ಲವೇ ಮಾನ್ಯ ಅಜೀಜ್‌ಸೇಠ್‌ರವರಿಗೆ ಮತ್ತು ಮಾನ್ಯ ಬಸವಲಿಂಗಪ್ಪನವರಿಗೆ

ಅವರ ಕಡೆಯಿಂದ ಡಿನೈ ಮಾಡುವ ಶಕ್ತಿ ಇಲ್ಲದಿದ್ದರೆ ನೀವು ಮಾಡಬಹುದು. ಇವತ್ತು ಅವರು ಶಾಸಕರಲ್ಲವೇ ಮಂತ್ರಿಗಳಾಗಿ ಮೊದಲನೆ ಸಾಲಿನಲ್ಲಿ ಕುಳಿತಿದ್ದಾರೆ ಅವರಿಗೆ ಮನಸ್ಸು ಇಲ್ಲ. ಮತ್ತು ಆ ಶಕ್ತಿ ಇಲ್ಲ. ಅವರನ್ನು ಪ್ರೊಟೆಕ್ಟ್ ಮಾಡಲಿಕ್ಕೆ ನೀವು ಹೇಳಬಹುದು. ಅವರನ್ನು ಪ್ರೊಟೆಕ್ಟ್ ಮಾಡಲಿಕ್ಕೆ ನೀವು ಹೇಳಿದಿರಿ. ಆದರೆ ಅವರು ಆ ಮಾತನ್ನು ಇವತ್ತು ಡಿನೈ ಮಾಡಬೇಕು ಏಕೆಂದರೆ ಅವರು ಡಿನೈ ಮಾಡದಿದ್ದರೆ ನಾವು ಅದೇ ಪ್ರಕಾರ ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ —ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮಾತನ್ನು ತಿಳಿಸುವುದಕ್ಕೆ ಬಯಸುತ್ತೇನೆ ನಾವು ನಾಲ್ಕೈದು ಜನ ಮಾತನಾಡತಕ್ಕಂಥ ಸಂದರ್ಭದಲ್ಲಿ ತಾವು ಇರಲಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ನಾನು ಮಾತನಾಡತಕ್ಕಂಥ ಸಂದರ್ಭದಲ್ಲಿ ತಾವು ಇರಲಿಲ್ಲ. ನಾವು ಈ ಕಡೆ ಇರತಕ್ಕಂಥ ಸದಸ್ಯರು ಮುಖ್ಯವಾಗಿ ಏನು ಹೇಳಿದ್ದು ಎಂದರೆ, ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯಾಗಬೇಕು. ಈ ಹೇಳಿಕೆಗಳು ಮತ್ತು ಇದು ಏತಕ್ಕೆ ನಡೆಯಿತು, ಕೋಮು ಗಲಬೆಗಳಿಗೆ ಜವಾಬ್ದಾರಿ ಯಾರು ಯಾರು ಪ್ರಚೋದನಕಾರಿ ಹೇಳಿಕೆಗಳನ್ನು ಕೊಟ್ಟಿದ್ದಾರೆ. ಮತ್ತೆ ಈ ಗಲಬೆಗಳಿಗೆ ಪ್ರಚೋದನೆಯನ್ನು ಮಾಡತಕ್ಕಂಥ ಜನಗಳಿಗೆ ಕೆಲವರು ರಕ್ಷಣೆಯನ್ನು ಕೊಟ್ಟಿದ್ದಾರೆ ಎನ್ನತಕ್ಕಂಥ ಅಪಾದನೆಯನ್ನು ಸಹಿತ ನಾನು ಮಾಡಿದ್ದೇನೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥ ಜನ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ —ನಿಮಗೆ ಅವಕಾಶವನ್ನು ಕೊಟ್ಟಾಗ ನೀವು ಹೇಳಿ, ನಾನು ಆಪಾದನೆಯನ್ನು ಮಾಡಿದ್ದೇನೆ, ಈಗ ತಾವು ಅದರ ಪರವಾಗಿ ನಾನು ಡಿನೈ ಮಾಡುತ್ತಿದ್ದೇನೆ ಎಂದು ಹೇಳುತ್ತಿದ್ದೀರಿ. ನಾವು ನಂಬುತ್ತೇವೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಹೇಳಿಕೆಗಳಿಗಿಂತ ಹೆಚ್ಚಾಗಿ ಸತ್ಯ ಹೊರಗಡೆ ಬರಬೇಕು ಎಂದರೆ ಇದರಲ್ಲಿ ಜುಡಿಷಿಯಲ್ ಪ್ರೋಬ್ ಆಗಬೇಕಾಗುತ್ತದೆ. ಇದಕ್ಕೆ ಕಾರಣಕರ್ತರು ಯಾರು ? ಅದಕ್ಕೋಸ್ಕರವೇ ನಾವೆಲ್ಲರೂ ಕೇಳುತ್ತಿರುವುದು. ಇದರ ಬಗ್ಗೆ ಒಂದು ನ್ಯಾಯಾಂಗ ತನಿಖೆಯನ್ನು ಮಾಡಿಸಿ. ನಾನು ಮಾನ್ಯ ಬಸವಲಿಂಗಪ್ಪನವರು ಮತ್ತು ಮಾನ್ಯ ಅಜೀಜ್‌ಸೇಠ್‌ರವರ ಹೇಳಿಕೆಗಳಿಂದ ಇದೆಲ್ಲಾ ಆಯಿತು ಎಂದು ಹೇಳುತ್ತಿಲ್ಲ. ಇಡೀ ರಾಜ್ಯದಲ್ಲಿ ನಡೆದಿರತಕ್ಕಂಥ ಕೋಮು ಗಲಭೆಗಳು ಏನು ಇದೆ ಇವುಗಳ ಬಗ್ಗೆ ಬಿ.ಜೆ.ಪಿ ಸದಸ್ಯರುಗಳು ನಾವು ಅದಕ್ಕೆ ಕಾರಣಕರ್ತರು ಅಲ್ಲ, ರಥಯಾತ್ರೆಯಿಂದ ಇದು ಆಗಿದ್ದು ಅಲ್ಲ ಎಂದು ಹೇಳುತ್ತಿದಾರೆ ರಥಯಾತ್ರೆ ಸೋಮನಾಥ ದೇವಸ್ಥಾನದಿಂದ ಅಯೋಧ್ಯೆಯವರೆಗೆ ಹೊರಟಾಗ ದಾರಿಯಲ್ಲಿ ಎಲ್ಲೂ ಕಮ್ಯೂನಲ್ ರೈಯಟ್ಸ್ ಆಗಲಿಲ್ಲ. ಸದನದ ಸಮಿತಿಯನ್ನು ಮಾಡಿ ಎಂದು ಅವರು ಛಾಲೆಂಜನ್ನು ಸಹಿತ ಮಾಡಿದ್ದಾರೆ. ಆದರೆ ನಾವು ಉಳಿದ ಸದಸ್ಯರುಗಳು ಏನು ಹೇಳಿದ್ದೇವೆ ಅಂದರೆ ಇದಕ್ಕೆ ಮೂಲಭೂತವಾಗಿ ಪ್ರಚೋದನೆಯನ್ನು ಕೊಟ್ಟಿರತಕ್ಕಂಥ ಪುಣ್ಯಾತ್ಮರು ನೀವೇ ಇವತ್ತು ಅಯೋಧ್ಯೆಯಲ್ಲಿ ರಾಮ ಮಂದಿರ ಕಟ್ಟುವುದಕ್ಕೆ ಹೋಗಿ ಸತ್ಯನಾಶವಾಗಿದೆ. ಈಗ ನೀವು ರಥಯಾತ್ರೆ ಮಾಡಿ ಸತ್ಯನಾಶವಾಗಿದೆ. ಈಗ ಬೂದಿ ಯಾತ್ರೆ ಮಾಡಿ ಸರ್ವನಾಶ ಮಾಡುವುದಕ್ಕೆ ಹೋಗಬೇಡಿ ಎನ್ನುವುದು ನಮ್ಮೆಲ್ಲರ ಅಭಿಪ್ರಾಯ.

ಆದುದರಿಂದ ಅದು ಇವತ್ತಲ್ಲ ನಾಳೆ ಹೊರಗಡೆ ಬರಬೇಕು. ಕಮ್ಯೂನಲ್ ಎಲೆಮೆಂಟ್ಸ್ ಒಂದೇ ಜಾತಿಯಲ್ಲಿ ಇದ್ದಾರೋ? ಎಲ್ಲಾ ಜಾತಿಗಳಲ್ಲೂ ಫಂಡಮೆಂಟಲಿಸ್ಟ್ ಇದ್ದಾರೆ. Let there be a probe. ನಾನು ಏಕೆ ಇದರ ಬಗ್ಗೆ ಎಂಫಸೈಸ್ ಮಾಡುತ್ತಿದ್ದೇನೆ ಎಂದರೆ. people who are in responsible position could be brought under TADA. ಈಗ ಟಾಡಾ ಇದೆ. ಟಾಡಾದಲ್ಲಿ ಏನು ಹೇಳುತ್ತದೆ ಅಂದರೆ, ಟಾಡಾದಲ್ಲಿ ಬರೀ ಆಕ್ಟ್ ಮಾಡತಕ್ಕವನಲ್ಲ, ಆಕ್ಟ್‌ಗೆ ಇನ್‌ಡೈರೆಕ್ಟಾಗಿ ಪ್ರಚೋದನೆ ಮಾಡತಕ್ಕ ಜನಗಳನ್ನೂ ಸಹ ಅರೆಸ್ಟ್ ಮಾಡಬೇಕು ಎಂದು ಇದೆ. Are you prepared for that ?

ಶ್ರೀ ಹೆಚ್. ಏಕಾಂತಯ್ಯ.— ಅಂದರೆ, ನೀವು ಹೇಳುವುದು ಮಂತ್ರಿಗಳನ್ನು ಅರೆಸ್ಟ್ ಮಾಡಬೇಕು ಎಂತಲೋ ?

ಶ್ರೀ ಪಿ. ಜಿ. ಆರ್. ಸಿಂಧ್ಯ.— ಹೌದು, ಅದರಲ್ಲಿ ಏನು ತಪ್ಪು ಇದೆ. Logical conclusion comes to that, Therefore, let there be a judicial probe. ಅದನ್ನು ನಾವು ಕೇಳುತ್ತಾ ಇರುವುದು.

ಶ್ರೀ ಎಸ್.ಹೆಚ್. ಕೌಜಲಗಿ. — ತಾವು ಇಂಟೀರಿಯಂ ರಿಪೋರ್ಟ್ ನೋಡಿ. ಅವರು ಪ್ರಚೋದನೆ ಮಾಡಿದ್ದಾರೆ ಅಥವಾ ಇಲ್ಲವೇ ಎಂಬುದು ತಿಳಿಯುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಮುಖ್ಯ ಮಂತ್ರಿಗಳು ಕನ್‌ವಿನ್ಸ್ ಆಗಿದ್ದಾರೆ.

ಶ್ರೀ ಎಸ್. ಎಚ್. ಕೌಜಲಗಿ.—ಅವರು ಡಿನೈ ಮಾಡುವುದಕ್ಕೆ ತಯಾರಿಲ್ಲ. ಪೇಪರ್‌ನಲ್ಲಿ ಹೇಳಿದ್ದನ್ನು ಮತ್ತೆ ಅವರು ಅಸ್ಸೆಂಟ್ ಮಾಡುತ್ತಾರೆ. ಶ್ರೀಮಾನ್ ವಾಟಾಳ್ ನಾಗರಾಜ್ ಅವರು ಹೇಳಿದ ಹಾಗೆ ಮಾನ್ಯ ಮಂತ್ರಿಗಳು ಶಾಂತಿ ಸಭೆಯಲ್ಲಿ ಬಿಜೆಪಿಯವರನ್ನು ಆರ್‌ಎಸ್‌ಎಸ್‌ನವರನ್ನು ನೀವು ಹೊರಗೆ ಹಾಕಿ ಎಂದು ಹೇಳಿದ್ದಾರೆ. ಅವರನ್ನು ಹೊರಗೆ ಹೋಗಿ ಎಂದು ಹೇಳಿದ್ದು ಪ್ರಚೋದನೆ ಅಲ್ಲವೇ? ಶಾಂತಿ ಸಭೆಯಲ್ಲಿ ಡೆಪ್ಯುಟಿ ಕಮೀಷನರ್ ಅವರ ಸಮಕ್ಷಮದಲ್ಲಿ ಸೂಪರಿಂಟೆಂಡೆಂಟ್‌ರವರ ಸಮಕ್ಷಮದಲ್ಲಿ ಈ ರೀತಿ ಹೇಳಿದ್ದಾರೆ. ಜವಾಬ್ದಾರಿ ಸ್ಥಾನದಲ್ಲಿರತಕ್ಕ ಒಬ್ಬ ಮಂತ್ರಿಗಳು ಈ ರೀತಿ ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ.—ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಬಸವಲಿಂಗಪ್ಪನವರ ಮತ್ತು ಮಾನ್ಯ ಅಜೀಜ್‌ಸೇಠ್‌ರವರ ಪರವಾಗಿ ನಾನು ರಿಗ್ರೆಟ್ ಎಕ್ಸ್‌ಪ್ರೆಸ್ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅಂದರೆ ಅವರ ಹೇಳಿಕೆಗಳು ಪ್ರಚೋದನಕಾರಿಯಾಗಿತ್ತು. ಆದ್ದರಿಂದ ನಾನು ಅವರ ಪರವಾಗಿ ಹೇಳಿಕೆ ಕೊಟ್ಟಿದ್ದೇನೆ ಎಂದು ಅವರು ಹೇಳಿದ್ದಾರೆ. ಅಲ್ಲಿಗೆ ಅವರು ಪ್ರಚೋದನೆ ಮಾಡಿರತಕ್ಕದು ಬೇರೆ ಸದಸ್ಯರು ಅಥವಾ ಬೇರೆ ಪಕ್ಷಗಳಿಗಿಂತ ಹೆಚ್ಚಿಗೆ ಇವರ ಪಕ್ಷದಲ್ಲೇ. ಇವರ ಮಂತ್ರಿಮಂಡಲದಲ್ಲೇ ನಡೆದಿದೆ, ಇವೊತ್ತು ನೀವು ಟಾಡಾ ಅಪ್ಲೈ ಮಾಡಬೇಕಾದರೆ ಮೊದಲು ನಿಮ್ಮ ಮಂತ್ರಿಮಂಡಲದಲ್ಲಿರತಕ್ಕವರಿಗೆ ಅಪ್ಲೈ ಮಾಡಿ. ಆಗ ನಾವು ಅದನ್ನು ಸ್ವಾಗತ ಮಾಡುತ್ತೇವೆ. ಆಮೇಲೆ ಅದನ್ನು ರಾಜ್ಯದಲ್ಲಿ ಜಾರಿಗೆ ತನ್ನಿ.

ಶ್ರೀ ಹೆಚ್. ಏಕಾಂತಯ್ಯ.—ಯಾವ ಮಂತ್ರಿಗಳ ವಿರುದ್ಧ ಆಪಾದನೆ ಮಾಡಿದ್ದಾರೆ ಆ ಆಪಾದನೆಯನ್ನು ಅವರು ನಿರಾಕರಣೆ ಮಾಡದೇ ಇರುವುದರಿಂದ ಆ ಸಂಶಯ ಮತ್ತಷ್ಟು ಬಲವಾಗಿದೆಯೋ ಇಲ್ಲವೇ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನಿರಾಕರಣೆಯನ್ನು ಆಗಾಗ್ಗೆ ಒಂದೇ ಸಮನೆ ಮಾಡುತ್ತಾ ಇದ್ದೇನೆ, ಅದು ಪೇಪರ್‌ನಲ್ಲಿ ಬಂದು ಬಿಟ್ಟಿದೆ,

ಶ್ರೀ ಹೆಚ್. ಏಕಾಂತಯ್ಯ.—ತಾವು ನಿರಾಕರಣೆ ಮಾಡಿದ್ದೀರಿ, ಆದರೆ ಸಂಬಂಧಪಟ್ಟ ಮಂತ್ರಿಗಳು ನಿರಾಕರಣೆ ಮಾಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಮಾಡಿದರೆ ಅಷ್ಟು ಸಾಕು.

ಶ್ರೀ ವಾಟಾಳ್ ನಾಗರಾಜ್.—ನಿರಾಕರಣೆಯದು ಒಂದು ಟೇಪ್ ರೆಕಾರ್ಡ್ ಮಾಡುವುದು ಶೈಲಿಯದು, ಏಕೆಂದರೆ ಅವರು ಹೇಳುತ್ತಾ ಇರುತ್ತಾರೆ, ನಾವು ಟೇಪ್ ಹಾಕುತ್ತಾ ಇರೋಣ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಏಕೆ ಕೇಳುತ್ತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ.—ಸಂಬಂಧಪಟ್ಟ ಮಂತ್ರಿಗಳಿಂದ ನಿರಾಕರಣೆ ಆಗಬೇಕು.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಸಭಾಧ್ಯಕ್ಷರೇ, ನಾವು ಜುಡಿಷಿಯಲ್ ಪ್ರೋಬ್ ಏಕೆ ಕೇಳುತ್ತಿದ್ದೇವೆ ಅಂದರೆ, ಹಿಂದಿನ ಮುಖ್ಯಮಂತ್ರಿಗಳು ಒಂದು ಹೇಳಿಕೆ ಕೊಟ್ಟಿದ್ದಾರೆ, ಇದಕ್ಕೆ ಯಾರು ಕಾರಣರು ಎನ್ನುವುದನ್ನು ಸಮಯ ಬಂದಾಗ ನಾನು ಹೇಳುತ್ತೇನೆ ಎಂದು ಹೇಳಿದ್ದಾರೆ ಅವರು ಅನುಭವಸ್ಥರು. ಜವಾಬ್ದಾರಿ ಇರತಕ್ಕಂಥ ಮುಖ್ಯಮಂತ್ರಿಗಳು ಆಗಿದ್ದರು. ಅವರು ಹಾಗೆ ಹೇಳಬೇಕಾದರೆ ಅವರಲ್ಲಿ ಇನ್‌ಫರ್ಮೇಷನ್ ಇರಬೇಕು. ಅಂದರೆ ಪೋಲೀಸರ ಹತ್ತಿರ ಈಗ ಇನ್‌ಫರ್ಮೇಷನ್ ಇದೆ. ಯಾರಿಂದ ಇದು ಪ್ರಾರಂಭ ಆಯಿತು ಎಂದು ಇನ್‌ಫರ್ಮೇಷನ್ ಇದೆ. ಕೆಲವು ಕಡೆ ಹೇಳುತ್ತಾರೆ. ಕಾಂಗ್ರೆಸ್ ಕಾಂಗ್ರೆಸ್‌ನಲ್ಲೇ, ಇವರಿವರಲ್ಲಿಯೇ ಜಗಳ ಬಂದು, ಆ ಮುಖ್ಯ ಮಂತ್ರಿಗಳನ್ನು ತೆಗೆಯಬೇಕೆಂದು ಹೇಳಿ ಇಷ್ಟಕ್ಕೆಲ್ಲಾ ಪ್ರಚೋದನೆ ಕೊಟ್ಟರು ಎಂದು ಹೇಳಿದರು. ಮಾನ್ಯ ವಾಟಾಳ್ ನಾಗರಾಜ್ ಅವರು ಕೂಡ ಮಾತನಾಡುವಾಗ ಹೇಳಿದ್ದಾರೆ. ನಮಗೆ ಸತ್ಯ ಹೊರಗೆ ಬರಬೇಕು. ಆದ್ದರಿಂದ ನಾವು ಜುಡಿಷಿಯಲ್ ಪ್ರೋಬ್ ಮಾಡಿ ಎಂದು ಹೇಳುತ್ತಿದ್ದೇವೆ. ಎರಡನೆಯದು. ಮಾನ್ಯ ಮುಖ್ಯ ಮಂತ್ರಿಗಳು, ಅವರಿಬ್ಬರು ಮಂತ್ರಿಗಳು ಮಾತನಾಡಿದ್ದನ್ನು ಡಿನೈ ಮಾಡುತ್ತಿದ್ದೇನೆ ಅಥವಾ ಮಾಡುತ್ತೇನೆ ಎಂದು ಹೇಳುತ್ತಿದ್ದಾರೆ. ಅದೇಕೆ, ಅವರಿಗೆ ಬಾಯಿ ಇಲ್ಲವೆ? ಅವರೂ ಸೀನಿಯರ್ ಮಂತ್ರಿಗಳಾಗಿದ್ದಾರೆ. ಡಿನೈ ಮಾಡಬೇಕಾದರೆ, they are not prepared to deny and you want to deny on their behalf just to save them. This is correct, ಇದರಿಂದ ಕೆಟ್ಟ ಹೆಸರು ತಮಗೆ ಬರುತ್ತದೆಯೋ ವಿನಃ ಅವರಿಗಲ್ಲ. ಅವರು ಹೇಳಬೇಕು, ಇಲ್ಲ ನಾನು ಆ ತರಹ ಹೇಳಿಲ್ಲ, ಹೇಳಿದ್ದರೆ ಅಕಸ್ಮಾತ್ ಹೇಳಿದ್ದೇನೆ. ಇಟ್ ಈಸ್ ಆಲ್‌ರೈಟ್ forget it ಎಂದು ಹೇಳಬೇಕು. ಮನುಷ್ಯ ತಪ್ಪು

ಮಾಡುತ್ತಾನೆ. ಇಲ್ಲಿ ಯಾರೂ ಸಹ ಬ್ರಹ್ಮರಲ್ಲ ಬ್ರಹ್ಮನೂ ಕೂಡ ತಪ್ಪು ಮಾಡಿದ್ದಾನೆ ಇಲ್ಲದಿದ್ದರೆ ನಮ್ಮಂಥವರು, ನಿಮ್ಮಂಥವರು ಹುಟ್ಟುತ್ತಾ ಇರಲ್ಲಿಲ್ಲ. ಆದ್ದರಿಂದ ದಯವಿಟ್ಟು ಅವರಿಗೆ ಡಿನೈ ಮಾಡಿ ಎಂದು ಹೇಳಿ, ಇದರಲ್ಲಿ ಅಪಮಾನ ಏನಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮುಖ್ಯಮಂತ್ರಿಯವರು ಭಾಷಣ ಮಾಡುವಾಗ, ಅನೇಕ ಸಾರಿ ನಿಜ ಹೇಳಬೇಕಾದರೆ ಅಂತ ಹೇಳುತ್ತೀರಿ, ಅದನ್ನು ತಪ್ಪೆಂದು ನಾನು ತಿಳಿದುಕೊಂಡಿಲ್ಲ. ತಾವು ವಿರೋಧಪಕ್ಷದ ಮುಖಂಡರನ್ನೆಲ್ಲ ನಮ್ಮನ್ನೆಲ್ಲ ಕರೆದಿದ್ದೀರಿ. ಆ ಸಭೆಯಲ್ಲೂ ನಾನು ತಮ್ಮ ಗಮನಕ್ಕೆ ತಂದೆ. ಇದು ತಮಗೆ ತಪ್ಪಾಗಿ ಕಾಣುತ್ತಿದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್.—ತಾವು ಸದನದಲ್ಲಿ ಆಗ ಈ ಪೀಠದಲ್ಲಿರಲಿಲ್ಲ. ಚಾಮರಾಜನಗರದಲ್ಲಿ ಒಂದು ಶಾಂತಿ ಸಮಿತಿಯ ಸಭೆ......

ಶ್ರೀ ಎಸ್. ಬಂಗಾರಪ್ಪ.—ಅದನ್ನು ರಿಪೀಟ್ ಮಾಡುವುದು ಬೇಡ. ನಿಮ್ಮ ಭಾಷಣದಲ್ಲಿ ಬಂದಿದೆ. ಈಗಾಗಲೇ ಅದನ್ನು ಓದಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿಷಯವನ್ನು ಹೇಳುತ್ತೇನೆ. ವಿಶ್ವ ಹಿಂದು ಪರಿಷತ್ತು, ರಾಷ್ಟ್ರೀಯ ಸ್ವಯಂ ಸೇವಕ ಸಂಘ ಅಥವಾ ಭಾರತೀಯ ಜನತಾ ಪಕ್ಷ ಪ್ರಚೋದನೆ ಮಾಡಿದೆ ಎಂದು ನಮಗೆ ದೂರುಗಳು ಬಂದಿವೆ ಎಂದು ಏನು ಹೇಳಿದ್ದೀರಿ, ಅದಕ್ಕಿಂತ ಇವರಿಗೆ ಬರುವ ಪ್ರಚೋದನೆ ಏನೂ ಕಡಿಮೆ ಇಲ್ಲ. ಇದನ್ನಾದರೂ ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ನನಗೆ ನಿಜವಾಗಿಯೂ ಅನುಮಾನ ಏನೇನೂ ಉಳಿದಿಲ್ಲವೆಂದು ಹೇಳಿದೆ. ಅವರು ಹೇಳಿಕೆ ಕೊಟ್ಟಿರುವುದರಲ್ಲಿ ಪ್ರಚೋದನಕಾರಿ ಸತ್ಯಾಂಶದ ಬಗ್ಗೆ ಎಳ್ಳಷ್ಟು ಇಲ್ಲ ಎನ್ನುವುದರಲ್ಲಿ ನನಗೆ ಅನುಮಾನವಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಸಂಬಂಧಪಟ್ಟ ಮಂತ್ರಿಗಳಿಂದ ಏನಾದರೂ ಮಾಡಿ ಸ್ಟೇಟ್‌ಮೆಂಟ್ ಮಾಡಿಸಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ನೀವು ಮುಖ್ಯಮಂತ್ರಿಯಾದ ನಂತರ ಎಲ್ಲೆಲ್ಲಿ ಕೋಮು ಗಲಭೆಗಳಾಗಿವೆ, ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಅಭಿನಂದನೆ ಸಲ್ಲಿಸುತ್ತೇನೆ. ನಿಮ್ಮ ಬಗ್ಗೆ ನಾವು ಹೇಳುತ್ತಿಲ್ಲ ಆದರೆ ನಿಮ್ಮ ಸಹೋದ್ಯೋಗಿಗಳು ಏನು ಹೇಳಿದ್ದಾರೆ ಅದರ ಬಗ್ಗೆ ನೀವು ಏಕೆ ಡಿನೈ ಮಾಡುತ್ತಿದ್ದೀರಿ ? ಅವರಿಗೆ ಡಿನೈ ಮಾಡಿ ಎಂದು ಹೇಳಿ. If they had denied, it would be more fair. If you defend such people, you will get bad name in the history by defending such people.

ಶ್ರೀ ಎಸ್. ಬಂಗಾರಪ್ಪ,—ಮಾನ್ಯ ಸಭಾಧ್ಯಕ್ಷರೆ, ಸ್ಪಷ್ಟವಾಗಿ ಈ ವಿಚಾರ ನನ್ನ ಗಮನಕೆ ಬಂದಕೂಡಲೆ ನನ್ನ ಈ ಇಬ್ಬರು ಸಹೋದ್ಯೋಗಿಗಳ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಕೋಮು ಸೌಹಾರ್ದತೆಯನ್ನು ಬೆಳೆಸತಕ್ಕ ವಿಚಾರದಲ್ಲಿ ಅವರ ಸಲಹೆಗಳು ತುಂಬಾ ಯೋಗ್ಯವಾಗಿದೆ. ಏಕೆಂದರೆ ಅವರು ಆ ಸ್ಥಳಗಳಿಗೆ ಹೋಗಿ ಬಂದ ಮೇಲೆ ಅನೇಕ ವಿಚಾರಗಳನ್ನು ತಿಳಿಸಿದರು. ಆಮೇಲೆ ಜನತೆಯ ಹಿತದೃಷ್ಟಿಯಿಂದ ಕೆಲವು ಕಾರ್ಯಕ್ರಮಗಳನ್ನು ಹಾಕಬೇಕಾದಂಥ ಸಂದರ್ಭ ಕೂಡ ಬಂತು. ನಿಜ ಹೇಳಬೇಕಾದರೆ ಅವರಿಬ್ಬರನ್ನೂ ನಾನು ಅಭಿನಂದಿಸುತ್ತೇನೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿಗೆ ನಾನು ಭೇಟಿ ನೀಡಿದಾಗ ಅಜೀಜ್‌ಸೇಟ್‌ರವರು ಕೂಡ ಬಂದಿದ್ದರು, ಬೈರೇಗೌಡರು ಬಂದಿದ್ದರು. ಅಲ್ಲಿ ಸುಮಾರು ೪೨೦ ಎಕರೆಯಲ್ಲಿರುವಷ್ಟು ಮಾವಿನ ಮರಗಳನ್ನು ಕತ್ತರಿಸಿ ಹಾಕಿ ಬಿಟ್ಟಿದ್ದಾರೆ. ನಾವು ಹೋಗಿದ್ದಾಗ ಅವರು ಕೂಡ ಇದ್ದರು, ನಾವು ಹೋಗುವುದರಿಂದ ಬಹಳ ಉಪಯೋಗವಿದೆ ಏಕೆಂದರೆ ಅವರಿಗೂ ಕೂಡ ನಮ್ಮವರು ಬಂದರು ಮತ್ತೊಬ್ಬರು ಬಂದರು ಎನ್ನುವ ಭಾವನೆ ಬರುತ್ತದೆ. ನಮ್ಮ ಬಗ್ಗೆಯೂ ಸಹ ತಿಳಿದುಕೊಳ್ಳುತ್ತಾರೆ ಆದರಿಂದ ಬಹಳ ಸಹಾಯವಾಗುತ್ತದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಸಹಾಯಕವಾಗುತ್ತದೆ ಆದರೆ ಅಪಾದನೆ ಏನು ಅಂದರೆ ಮುಖ್ಯ ಮಂತ್ರಿಗಳು ಬಂದು ಹಿಂದೂ ಮುಖಂಡರುಗಳನ್ನು ಅಷ್ಟೆ ಕಂಡರು, ಮುಸಲ್ಮಾನರು ಸೇರಿದಂಥ ಜಾಗಕ್ಕೆ ಹೋಗಲಿಲ್ಲ ಎನ್ನುವುದು ಆಪಾದನೆ.

ಶ್ರೀ ಎಸ್. ಬಂಗಾರಪ್ಪ.—ಒಂದೊಂದು ಗುಂಪಿನ ಹತ್ತಿರ ಹೋಗಿ ಅಡ್ರೆಸ್ ಮಾಡುವುದು ಒಳ್ಳೆಯದಲ್ಲ ಎನ್ನತಕ್ಕ ದೃಷ್ಟಿಯಿಂದ ನಾನು ಅದನ್ನು ಬಿಟ್ಟೆ ಸಾಮಾನ್ಯವಾಗಿ ಎಲ್ಲಾ ಕಡೆಗೂ ಹೋಗುತ್ತೇನೆ, ಒಂದು ವಿಚಾರದಲ್ಲಿ ನನ್ನನ್ನು ಒಂದು ಕಡೆಗೆ ಕರೆದರು ನಾನು ಅವರ ಹೆಸರನ್ನು ಹೇಳುವುದಿಲ್ಲ. I said no. ಶಾಂತಿ ಸಮಿತಿಯ ಸಭೆಗೆ ಎಲ್ಲ ಬಾಂಧವರು ಬರುವವರೆಗೂ ನಾನು ಬರುವುದಿಲ್ಲ ಎಂದು ಹೇಳಿದೆ. ನಾನು ಹಿಂದುಗಳ ಹತ್ತಿರ ಪ್ರತ್ಯೇಕವಾಗಿ ಹೋಗಿಲ್ಲ. ಮುಸ್ಲಿಮರ ಹತ್ತಿರ ಪ್ರತ್ಯೇಕವಾಗಿ ಹೋಗಿಲ್ಲ. I should not do that ಎನ್ನತಕ್ಕಂಥ ದೃಷ್ಟಿಯಿಂದ ನಾನು ಆ ತೀರ್ಮಾನ ಮಾಡಿದೆ. ಆಮೇಲೆ ಎಲ್ಲರೂ ಬಂದರು. I must think all of the communities and castes. ಅಲ್ಲಿ ಜನತೆ ಬಂದಾಗ ನಾನು ಮತ್ತು ನಮ್ಮ ಶಾಸಕ ಮಿತ್ರರೆಲ್ಲರೂ ಸೇರಿ ಮಾತುಕತೆ ಮಾಡಿದ್ದೇವೆ. ಶ್ರೀಮಾನ್ ವೀರೇಂದ್ರ ಪಾಟೀಲ್‌ರವರ ಸರ್ಕಾರ ಇದ್ದಾಗ ಮಾನ್ಯ ಬಸವಲಿಂಗಪ್ಪನವರು, ಮಾನ್ಯ ಕೆ. ಹೆಚ್. ಪಾಟೀಲ್‌ರವರು ಹಾಗೂ ಮಾನ್ಯ ಪುಟ್ಟಸ್ವಾಮಿಗೌಡರು ಗಲಭೆ ನಡೆದಂಥ ಸ್ಥಳಗಳಿಗೆ ಭೇಟಿ ನೀಡಿ ಅನೇಕ ವರದಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದೂ ಕೂಡ ಬಹಳ ಸಹಾಯಕವಾಗಿದೆ. ಇನ್ನು ರಾಷ್ಟ್ರಾಧ್ಯಕ್ಷರ ಆಡಳಿತ ಇದ್ದಂಥ ಕಾಲದಲ್ಲಿ ಈ ಇಲಾಖೆಗಳು ಮಾತ್ರ ಉಳಿದಿರುತ್ತದೆ. ಆಮೇಲೆ ನಾನು ಸ್ಥಳಕ್ಕೆ ಭೇಟಿ ನೀಡಿದ್ದಾಗ ನನ್ನ ಜೊತೆಯಲ್ಲಿ ಶಾಸಕ ಮಿತ್ರರಾದಂಥ ಕೆ. ಜೆ. ಜಾರ್ಜ್‌ರವರು ಬಂದಿದ್ದರು. ನೀವು ಬಂದಿದ್ದೀರಿ ಎಂದು ಕಾಣುತ್ತದೆ, ಹಾಗೂ ಅನೇಕ ಬೇರೆ ಬೇರೆ ಜನ ಬಂದಿದ್ದರು. ಅಲ್ಲಿ ಮಾತನಾಡಬೇಕಾದರ ನಾವೆಲ್ಲರೂ ಸೇರಿ ಇದ್ದು ಬಿಟ್ಟರೆ ಬಹಳ ಒಳ್ಳೆಯದು ಎನ್ನತಕ್ಕಂಥ ದೃಷ್ಟಿಯಿಂದ ನಾವೆಲ್ಲಾ ಹೋಗಿದ್ದೆವು ಇದು ನಮಗೆ ಸ್ಪಷ್ಟವಾಗಿ ಅನುಕೂಲವಾಗಿದೆ ಇದು ನನ್ನ ಅನುಭವದಲ್ಲಿ ಬಂದಿರತಕ್ಕಂಥಾದ್ದು. ನಾವು ಎಷ್ಟು ಜನ ಇರುತ್ತೇವೋ ಅಷ್ಟೂ ಒಳ್ಳೆಯದು ಶ್ರೀಮಾನ್ ವಾಟಾಳ್ ನಾಗರಾಜ್‌ರವರ ಕ್ಷೇತ್ರಕ್ಕೂ ಮಾನ್ಯ ಮಂತ್ರಿಗಳಾದ ಶ್ರೀ ಬಸಲಿಂಗಪ್ಪನವರು ಹೋಗಿ ಬಂದು ಅವರು ಕೊಟ್ಟ ವರದಿ ಕೂಡ ನಾವು ಕಾರ್ಯಕ್ರಮ ಹಾಕುವುದಕ್ಕೆ ಬಹಳ ಸಹಾಯಕವಾಗಿದೆ. ಮಾನ್ಯ ಸಭಾಧ್ಯಕ್ಷರ ಮೂಲಕ ನಾವು ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರಾಜ್ಯದಲ್ಲಿ ಶಾಂತಿಯನ್ನು ಕಾಪಾಡತಕ್ಕಂಥ ವಿಚಾರದಲ್ಲಿ ಇನ್ನೊಂದು ಸಲಹೆ ಇದೆ. ಜಿಲ್ಲಾ ಮಟ್ಟದಲ್ಲಿ ಶಾಂತಿಪಾಲನಾ ಸಮಿತಿಗಳನ್ನು ರಚನೆ ಮಾಡತಕ್ಕಂಥಾದ್ದು ಬಹಳ ಅವಶ್ಯಕವಾಗಿದೆ ವಿರೋಧ ಪಕ್ಷದ ನಾಯಕರುಗಳ ಸಭೆ ನಡೆದಾಗ ಈ ವಿಚಾರ ಬಂತು. ಅದನ್ನು ತಾತ್ವಿಕವಾಗಿ ಒಪ್ಪಿಕೊಂಡಿದ್ದೇವೆ. ಆ ರೀತಿ ಕಮಿಟಿಗಳನ್ನು ಕಾನ್‌ಸ್ಟಿಟ್ಯೂಟ್ ಮಾಡೋಣ. ರಾಜ್ಯಮಟ್ಟದಲ್ಲಿ ಈ ಶಾಂತಿಪಾಲನಾ ಸಮಿತಿಗಳನ್ನು ಈಗಾಗಲೇ ನಾವು ಮಾಡಿದ್ದೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಈ ಶಾಂತಿ ಪಾಲನಾ ಸಮಿತಿಗಳಲ್ಲಿ ಸಿ.ಪಿ.ಐ, ಸಿ.ಪಿ.ಎಮ್. ಪಕ್ಷದವರಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಅವರನ್ನು ಕೂಡ ಸೇರಿಸಬೇಕು ಎನ್ನತಕ್ಕಂಥ ತೀರ್ಮಾನವನ್ನು ನಾವು ಮಾಡಿದ್ದೇವೆ.

SRI QUMURAL ISLAM.— I suggested that it should be constitued in our State on the lines of National Integration Council. otherwise, there are so many groups in all the communities and we cannot satisfy all of them. We must constitute the State Integration Council.

SRI S. BANGARAPPA.— I agree with you. ಆ ಪ್ಯಾಟರ್ನ್ ಮೇಲೆ ಹೋಗಬೇಕು, ನಿಜ ಹೇಳಬೇಕೆಂದರೆ, ಈ ಸಮಿತಿಯಲ್ಲಿ ನಾವೆಲ್ಲರೂ ಇದ್ದೇವೆ, ನಮ್ಮ ಪಕ್ಷ ಜನತಾ ಪಕ್ಷ, ಬಿ.ಜೆ.ಪಿ., ಮುಸ್ಲಿಮ್ ಲೀಗ್ ಇದೆ. ಆಮೇಲೆ ಕಮ್ಯೂನಿಸ್ಟ್ ಪಕ್ಷದ್ದು ಮರೆತ್ತಿತ್ತು, ಅದನ್ನು ಸೇರಿಸತಕ್ಕ ಬಗ್ಗೆ ಆ ದಿವಸ ತೀರ್ಮಾನ ಮಾಡಿದ್ದೇವೆ. ಮತ್ತೆ ಸಮಾಜದಲ್ಲಿ ಕೋಮು ಸೌಹಾರ್ದತೆ ಬಗ್ಗೆ ಯಾರು ಜವಾಬ್ದಾರಿ ಹೊರತಕ್ಕವರು ಇದ್ದಾರೆ.

ಶ್ರೀ ಡಿ.ಬಿ ಚಂದ್ರೆಗೌಡ.—ಬಿ.ಜೆ.ಪಿ. ಮತ್ತು ಐ.ಹೆಚ್.ಪಿ ಎಂದು ಹೇಳಿದಿರಿ, ಮಾನ್ಯ ಬಸವಲಿಂಗಪ್ಪನವರು ಒಪ್ಪುತ್ತಾರೆಯೋ ಇಲ್ಲವೋ ಕೇಳಬೇಕಲ್ಲ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ಪಶುಸಂಗೋಪನೆ ಸಚಿವರು).—ಮಾನ್ಯ ಸದಸ್ಯರು ನಾನು ಇಲ್ಲದೇ ಇದ್ದಾಗ ಏನೇನೋ ಮಾತನಾಡಿದ್ದಾರೆ. ನನಗೆ ಸಂತೋಷ. ಮಾನ್ಯ ಮುಖ್ಯ ಮಂತ್ರಿಯವರು ದೀರ್ಘವಾದ ಹೇಳಿಕೆಯನ್ನು ಕೊಟ್ಟಿದ್ದಾರೆ

ನಾನು ಕೂಡ ಕೇಳಿದ್ದೇನೆ. ಬಿ.ಜೆ.ಪಿ.ಯವರ ಮತ್ತು ವಿಶ್ವ ಹಿಂದೂ ಪರಿಷತ್‌ನವರ ಬಗ್ಗೆ ಹೇಳಿಕೆ ಕೊಟ್ಟಿವು ಎಂದೂ ಹೇಳಿದ್ದಾರೆ. ನಾವು ಹೇಳಿಕೆ ಕೊಡಲೆಬೇಕಾಗುತ್ತದೆ ನಾವು ಸ್ವತಃ ಅಲ್ಲಿಗೆ ಹೋದಾಗ ಸುದ್ದಿಯನ್ನು ಕೇಳುತ್ತೇವೆ ಪೋಲಿಸ್ ಅಧಿಕಾರಿಗಳು' ರೆವಿನ್ಯೂ ಅಧಿಕಾರಿಗಳು ಮತ್ತು ಯಾರಿಗೆ ಶಾಂತಿಪಾಲನೆ ಮಾಡತಕ್ಕಂಥ ಜವಾಬ್ದಾರಿಯನ್ನು ನಾವು ಕೊಟ್ಟಿದ್ದೇವೆ ಅಂತಹವರನ್ನು ನಾವು ಕೇಳುತ್ತೇವೆ. ನಂತರ ನಾವು ಕೊಟ್ಟ ಹೇಳಿಕೆ ನಿಮಗೆ ಸರಿಬೀಳದೇ ಇರಬಹುದು, ವಿಶ್ವ ಹಿಂದೂ ಪರಿಷತ್, ಬಿ.ಜೆ.ಪಿ. ಮತ್ತು ಆರ್.ಎಸ್.ಎಸ್. ನವರಿಗೆ ಸರಿಬೀಳದೆ ಇರಬಹುದು. ಪರಿಸ್ಥಿತಿಯ ಆಧಾರದ ಮೇಲೆ ಶಾಂತಿಯನ್ನು ಕಾಪಾಡುವ ಉದ್ದೇಶದಿಂದ, ಆ ಒಂದು ಸನ್ನಿವೇಶದಲ್ಲಿ ನಾವು ಹೇಳಿಕೆಯನ್ನು ಕೊಡುತ್ತೇವೆ. ನಮ್ಮ ಪ್ರಕಾರ ಬಸವಲಿಂಗಪ್ಪನವರು ಹೇಳಿಕೆ ಹೀಗೆ ಕೊಡಬೇಕಾಗಿತ್ತು, ಅಜೀಜ್‌ಸೇಠ್‌ರವರು ಹೀಗೆ ಹೇಳಿಕೆ ಕೊಡಬೇಕಾಗಿತ್ತು, ಹಾಗೆ ಕೊಡಲಿಲ್ಲ. ಅದಕೋಸ್ಕರ ಅವರನ್ನು ಡಿಸ್‌ಮಿಸ್ ಮಾಡಿ ಅವರನ್ನು ತೆಗೆದು ಹಾಕಿ ಅವರು ಹೇಳಿದ್ದು ಸರಿಯಲ್ಲ ಎಂದು ಹೇಳತಕ್ಕ ಹಕ್ಕು ನಿಮಗೆ ಇದೆ ಅಥವಾ ಯಾರಿಗೆ ಇದೆ ಎಂದು ನೀವೇ ವಿಚಾರ ಮಾಡಿ. ನಾವು ಇಲ್ಲಿ ಸರ್ಕಾರ ನಡೆಸುತ್ತಿದ್ದೇವೆ. ಇವತ್ತಿನ ದಿವಸ ನಾವು ನಮ್ಮ ಸರ್ಕಾರದಿಂದ ಶಾಂತಿ ಪಾಲನೆ ಮಾಡಿದ್ದೇವೆ ನಮ್ಮ ರಾಜ್ಯದಲ್ಲಿ ಇಷ್ಟು ಶಾಂತಿಯುತವಾಗಿದೆ. ಈ ರೀತಿ ಇಂಡಿಯಾ ದೇಶದಲ್ಲಿ ಎಲ್ಲೂ ಇಲ್ಲ ಆ ರೀತಿಯಾಗಿ ನಾವು ಶಾಂತಿಯನ್ನು ಕಾಪಾಡಿದ್ದೇವೆ.

ಶ್ರೀ ಬಿ. ಎಚ್ ಬನ್ನಿಕೋಡ್.— ಶಾಂತಿ ಇದ್ದರೆ ಟಾಡಾ ಕಾನೂನು ತರುವಂಥ ವಿಚಾರ ಏಕೆ?

ಶ್ರೀ ಬಿ. ಬಸವಲಿಂಗಪ್ಪ.— ಮಂತ್ರಿ ಮಂಡಲದ ಸದಸ್ಯರು ನಾವು ಪ್ರತಿಯೊಬ್ಬರು ಕೂಡ ಜವಾಬ್ದಾರಿಯನ್ನು ತೆಗೆದುಕೊಂಡು ಒಟ್ಟಾಗಿ ಕೆಲಸ ಮಾಡಿ ಈ ರೀತಿ ಶಾಂತಿಯನ್ನು ಕಾಪಾಡಿದ್ದೇವೆ ಈ ರೀತಿ ನೀವು ಮಂತ್ರಿಗಳ ಮೇಲೆ ಹೇಳುವಾಗ ಈ ರೀತಿ ಹೇಳಬೇಕಾಗಿತ್ತು ಆ ರೀತಿ ಹೇಳಬೇಕಾಗಿತ್ತು ಎಂದು ದಯಾಮಾಡಿ ಹೇಳಬೇಡಿ ನಾವು ಸಂದರ್ಭಾನುಸಾರವಾಗಿ ಹೇಳುತ್ತಿದ್ದೇವೆ. ನಿಮಗೆ ಸರಿಯಿಲ್ಲದೆ ಹೋದರೆ ಸರಿಯಿಲ್ಲವೆಂದು ಇಟ್ಟುಕೊಳ್ಳಿ. ನಾವು ಹೀಗೆ ಮಾಡಬೇಕು ಎಂದರೆ ಹೇಗೆ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಮತ್ತೊಂದು ಮಾತನ್ನು ಹೇಳಬೇಕಾಗುತ್ತದೆ, ನಾನು ಶ್ರೀನಿವಾಸಪುರ ತಾಲ್ಲೂಕಿಗೆ ಹೋದಾಗ ಅಲ್ಲಿ ಮಾವಿನ ಮರಗಳನ್ನು ಕತ್ತರಿಸಿ ಹಾಕಿದ್ದುದನ್ನು ನೋಡಿದ್ದೇನೆ. ೬ ತಿಂಗಳಿನಿಂದ ಹಿಡಿದು ೨೫–೩೦ ವರ್ಷಗಳಾಗಿರತಕ್ಕ ಮಾವಿನ ಮರಗಳನ್ನೂ ಕೂಡ ಕತ್ತರಿಸಿ ಹಾಕಿದ್ದರು. ಅದೇ ರೀತಿ ಸೋಮವಾರ ಪೇಟೆ ತಾಲೂಕಿನಲ್ಲಿ ಒಬ್ಬರದು ಸುಮಾರು ೩–೪ ಎಕರೆಯಷ್ಟು ಕಾಫಿ ತೋಟವನ್ನು ಕತ್ತರಿಸಿ ಹಾಕಿರತಕ್ಕದ್ದೂ ಗೊತ್ತಿದೆ. ನಾವು ಅವರಿಗೂ ಈ ಲಾಸ್‌ನ್ನು ಯಾವ ರೀತಿ ಎಸ್ಟಿಮೇಟ್ ಮಾಡಬೇಕೆಂಬುದನ್ನು ತಿಳಿಸಿದ್ದೇವೆ, ಅವರ ಅಭಿಪ್ರಾಯ ಬಂದಮೇಲೆ ಪರಿಹಾರವನ್ನು ಇನ್ನೂ ಜಾಸ್ತಿ ಕೊಡತಕ್ಕ ವಿಚಾರದಲ್ಲಿ ನಾವು ತೀರ್ಮಾನ ಮಾಡಿದ್ದೇವೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರವನ್ನು ತಮ್ಮ ಗಮನಕ್ಕೆ ನಾನು ತರಬೇಕಾಗಿದೆ.

SRI QUMARUL ISLAM.—Is it assured that there will be some basis while granting the compensation ?

SRI S. BANGARAPPA.—Yes ಏಕೆಂದರೆ, ಜಾಸ್ತಿ ಪರಿಹಾರ ಧನವನ್ನು ಕೊಡಬೇಕೆಂದು ತಾವು ಹೇಳುವುದಾದರೆ, ಯಾವ ಆಧಾರದ ಮೇಲೆ ಕೊಡಬೇಕು ? What is the basis for enhancement of the compensation ಎಂದು ನಾವೇ ಕೇಳಬಹುದು We would like to obtain the opinion of the Horticulture Dept. and the Coffee Board for assessment of loss before granting the enhanced compensation. ಅದನ್ನು ತೆಗೆದುಕೊಂಡರೆ ಒಂದು ಬೇಸಿಸ್ ಆದರೂ ಇರುತ್ತದೆ. ನಾವು ನಾಲ್ಕು ರೂಪಾಯಿ ಜಾಸ್ತಿ ಕೊಡುತ್ತೇವೆ, ಅಥವಾ ಬಿಡುತ್ತೇವೆ ಅದು ಬೇರೆ.

SRI QUMARUL ISLAM.—Then whatever given now is ad hoc one.

SRI S. BANGARAPPA.—Yes. ಅಂಥ ಸಂದರ್ಭದಲ್ಲಿ ನಾವು ಅಡಾಪ್ಟ್ ಮಾಡಿದೇವೆ. ಆದರೆ ಅಸೆಸ್‌ಮೆಂಟ್ ಬರುವವರೆಗೆ.

ಶ್ರೀ ಸಿ. ಬೈರೇಗೌಡ — ಮಾನ್ಯ ಅಧ್ಯಕ್ಷರೆ, ಶ್ರೀನಿವಾಸಪುರದಿಂದ ಒಂದು ಅರ್ಜಿ ಬಂದಿದೆ. ಕೆಲವರು ಒಂದೇ ಕುಟುಂಬದಲ್ಲಿ ಒಟ್ಟಿಗೆ ವಾಸಮಾಡುತ್ತಿರುತ್ತಾರೆ ಕೆಲವರು ಮನೆ ಇಲ್ಲದೆ ಅಥವಾ ಬೇರೆ ಬೇರೆ ಕಾರಣಗಳಿಂದ ಒಟ್ಟಿಗೇ ವಾಸಮಾಡುತ್ತಿರುತ್ತಾರೆ ಅಂಥವರನ್ನು ಒಂದೇ ಗುಂಪು ಎಂದು

ಪರಿಗಣಿಸಿ ಆ ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಕಾಂಪೆನ್‌ಸೇಷನ್‌ನ್ನು ಕೊಟ್ಟಿದ್ದಾರೆ. ಬೇರೆಯವರಿಗೆ ಕೊಟ್ಟಿಲ್ಲ ಎಂದು ಈ ಅರ್ಜಿಯನ್ನು ತಿಳಿಸಿದ್ದಾರೆ. ಬಹುಶಃ ಇದು ತಮಗೂ ಕೂಡ ಬಂದಿರಬಹುದು. ಈ ರೀತಿ ವ್ಯತ್ಯಾಸ ಮಾಡುವುದುಬೇಡ. ಪರಿಹಾರವನ್ನು ಕೊಡುವ ಬಗ್ಗೆ ತಾವು ಏನೋ ಒಂದು ಬೇಸಿಸ್ ಇಟ್ಟುಕೊಂಡಿರುವುದಾಗಿ ಹೇಳಿದ್ದೀರಿ ಬಹಳ ಸಂತೋಷ. ಯಾರಿಗೆ ಈ ಪರಿಹಾರ ಸಿಕ್ಕಿಲ್ಲ ಅವರಿಗೆ ತಕ್ಷಣ ಕೊಡಿಸತಕ್ಕ ವ್ಯವಸ್ಥೆಯನ್ನು ದಯವಿಟ್ಟು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಬೈರೇಗೌಡರೆ. ಅದರ ಬಗ್ಗೆ ತಮ್ಮದೇ ಆದ ಪತ್ರವನ್ನು ಬರೆದು ಅದನ್ನು ಕಳುಹಿಸಿಕೊಡಿ. ಒಂದೇ ಮನೆಯಲ್ಲಿ, ಒಂದೇ ಜಾಗದಲ್ಲಿ ೨-೩ ಕುಟುಂಬಗಳು ಇರುತ್ತವೆ. ಕಾರಣ ಜಾಗ ಇಲ್ಲದೆ ವಾಸಮಾಡುತ್ತಿರುತ್ತವೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆ ರೀತಿ ವಾಸಮಾಡತಕ್ಕಂಥ ವಿಚಾರ ಇದ್ದರೆ ಅದು ಮಹಜರ್‌ನಲ್ಲೇ ಅಥವಾ ಅಕ್ಕಪಕ್ಕ ಇರತಕ್ಕವರಿಗೆ ಗೊತ್ತಾಗೇ ಆಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಅದೇ ವಿಚಾರ ನನಗೂ ಬರೆದಿದ್ದಾರೆ. ರಿಕಾರ್ಡುಗಳನ್ನು ತಪ್ಪು ಮಾಡಿದ್ದಾರೆ. ಇಲ್ಲಿ ಪಾಲ್‌ಪಾರಿಖತ್ತನ್ನು ಒದಗಿಸುವುದಕ್ಕಾಗುತ್ತದೆಯೋ ಆಸ್ತಿ ಹೋಗಿದೆ ಅವರಿಗೆ ಪರಿಹಾರವನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ. ಲಿಬರಲ್ ಆಗಿ ಕೊಡಿ ಎಂದು ನೀವು ಹೇಳಿದ್ದೀರಿ. ಇದು ದೇವರು ಕೊಟ್ಟರೂ ಪೂಜಾರಿ ಕೊಡ ಎನ್ನುವಂತಾಗುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ಕೊಡೋಣ ಆ ರೀತಿ ಇದ್ದಾಗ ಕಳುಹಿಸಿಕೊಡಿ. ಮಾನ್ಯ ಬೈರೇಗೌಡರು ಕಳುಹಿಸಿಕೊಡಲಿ.

ಶ್ರೀ ಸಿ. ಭೈರೇಗೌಡ.—ಈಗಲೇ ಕಳುಹಿಸಿಕೊಡುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ಯಾವಾಗಲಾದರೂ ಕಳುಹಿಸಿಕೊಡಿ. ನೀವು ಎಷ್ಟು ಜಾಗ್ರತೆ ಕಳುಹಿಸಿದರೆ ನಾವು ಅಷ್ಟು ಜಾಗ್ರತೆ ಪೇಮೆಂಟ್ ನಾವೂ ಮಾಡುತ್ತೇವೆ. ಅದರ ಬಗ್ಗೆ ಅನುಮಾನ ಬೇಡ. ಮಾನ್ಯ ಸಭಾಧ್ಯಕ್ಷರೆ, ಅಧಿಕಾರಿಗಳ ಬಗ್ಗೆ ಹೇಳುವುದನ್ನು ನಾನು ಮರೆತಿದ್ದೆ. ಪೋಲೀಸ್ ಇಲಾಖೆಯಲ್ಲೇ ಅಲ್ಲದೆ ಹೋಂ ಗಾರ್ಡ್ಸ್‌ನವರೂ ಕೂಡ ಹಗಲೂರಾತ್ರಿ ಕೆಲಸ ಮಾಡಿದ್ದಾರೆ. ಅನೇಕ ಕಡೆಗಳಲ್ಲಿ ಅವರ ಸೇವೆಯನ್ನು ನಾವು ಪಡೆದುಕೊಂಡಿದ್ದೇವೆ. ನಾವು ಸ್ಪೆಷಲ್ ಪೋಲೀಸ್ ಆಫೀಸರ್‌ಗಳನ್ನು ನೇಮಕ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ ಕೇಂದ್ರ ಮೀಸಲು ಪಡೆಯನ್ನು ನಾವು ಬಳಸಿಕೊಳ್ಳುವುದಕ್ಕಾಗಿ ಆಂಧ್ರದವರನ್ನು ನಾವು ಕೇಳಿದಾಗ ಅವರು ತಮಗೇ ತೊಂದರೇ ಇರುವುದರಿಂದ ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. You know some sensitive areas are there in Andhra Pradesh ಅಲ್ಲಿ ನಕ್ಸಲೈಟ್ಸ್ ಕಾರ್ಯಚಟುವಟಿಕೆಗಳು ಇಲ್ಲಿವೆ ನಂತರ ಮಹಾರಾಷ್ಟ್ರದವರನ್ನು ನಾವು ಕೇಳಿದೆವು. ಅವರೂ ಕೂಡ ನಮಗೆ ಬಹಳ ಪ್ರಾಬ್ಲಂಸ್ ಇವೆ ಎಂದು ಹೇಳಿದರು ಅನಂತರ ತಮಿಳ್ನಾಡಿನವರನ್ನು ನಾವು ಕೇಳಿದೆವು ಅಲ್ಲಿ ಬಹಳ ಗಲಾಟೆ ಆಗುತ್ತಿದ್ದರೂ ನಮಗೆ ಅಲ್ಲಿಂದ ಸಹಾಯ ಸಿಕ್ಕಿತು. ಈಗಲೂ ಕೂಡ ನಾವು ೧-೨ನ್ನು ಜಾಸ್ತಿ ಇಟ್ಟುಕೊಂಡಿರಬೇಕೆಂದು ತಮಿಳ್ನಾಡಿನವರಿಗೆ ಹೇಳಿದ್ದೇವೆ ಏಕೆಂದರೆ, ನಾವು ಮೈಮರೆತು ಇರುವುದು ಸರಿಯಲ್ಲ ಎಂಬ ಉದ್ದೇಶದಿಂದ ಈ ರೀತಿ ಯಾರ್ಯಾರು ನಮಗೆ ಸಕಾಲದಲ್ಲಿ ಸಹಾಯ ಮಾಡಿದ್ದಾರೆ ಅವರೆಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ ಬಹುಶ: ಇವತ್ತು ಮಾನ್ಯ ಎಲ್.ಕೆ. ಆದ್ವಾನಿಯವರು ನಮ್ಮ ರಾಜ್ಯಕ್ಕೆ ಬಂದಿರಬಹುದು, ಇವತ್ತು ನಮ್ಮ ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಮೈದಾನದಲ್ಲಿ ಬಹಿರಂಗ ಸಭೆ ಕೂಡ ಇರಬಹುದು. ಈಗ ನಮಗೆ ಬಂದಿರುವ ಸುದ್ದಿಯ ಪ್ರಕಾರ ಅವರು ಈಗ ನ್ಯಾಷನಲ್ ಕಾಲೇಜಿನ ಮೈದಾನಕ್ಕೆ ಬರುತ್ತಿದ್ದಾರೆ.

ಆ ಕಂಪೆನಿಯನ್ನು ಏತಕ್ಕೆ ತರಿಸಿದ್ದೇವೆಂದರೆ, ಇಲ್ಲಿ ಬಹಳವಾಗಿ ಗಲಾಟೆ ನಡೆಯುತ್ತಿದೆ ಎನ್ನುವುದಕ್ಕಿಂತ ಹೆಚ್ಚಾಗಿ ಈರೀತಿ ಆಗದ ಹಾಗೆ ನೋಡಿಕೊಳ್ಳುವ ದೃಷ್ಟಿಯಿಂದ ತರಿಸಿದ್ದೇವೆ. ಆಮೇಲೆ Co-ordination between superintending of police and Deputy Commissioner ಬಗ್ಗೆ ಮಾನ್ಯ ಸದಸ್ಯರು ಕೆಲವು ಕಡೆ ಇದೆ ಕೆಲವು ಕಡೆ ಇಲ್ಲವೆಂದು ಹೇಳಿದ್ದಾರೆ. ಕೆಲವು ಕಡೆ ಬಹಳ ಸಹಕಾರದಿಂದ ಒಳ್ಳೊಳ್ಳೆಯ ಕೆಲಸಗಳನ್ನು ಮಾಡಿರುತ್ತಾರೆ. ಉದಾಹರಣೆಗೆ ಹೇಳಬೇಕೆಂದರೆ ಕೋಲಾರ, ಮಾನ್ಯ ಬೈರೇಗೌಡರು ಕೂಡ ಒಪ್ಪುತ್ತಾರೆ ಆ ದಿವಸ ನಾವು ಎಲ್ಲರೂ ಒಟ್ಟಿಗೆ ಇದ್ದಾಗಲೇ, ಪಬ್ಲಿಕ್ ಎಲ್ಲ ವರ್ಗದವರು. ಎಲ್ಲ ಧರ್ಮದವರು ಬೆಸ್ಟ್ ಎಸ್ ಪಿ. ಬೆಸ್ಟ್ ಡಿ ಸಿ. ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ ದಯವಿಟ್ಟು ಅವರನ್ನು ಚೇಂಜ್ ಮಾಡಬೇಡಿ ಎಂದು ಹೇಳಿದರು ಬಹಳ ನಾನು ಒಂದು ಒಳ್ಳೆಯ ಮಾತನ್ನು ಹೇಳಿದೆ. ಒಳ್ಳೆಯ ಕೆಲಸ ಮಾಡುತ್ತಿದ್ದಾರೆಂಬುದು ಸಂತೋಷ ಪಡತಕ್ಕಂಥ ವಿಚಾರ. ಇನ್ನು ಕೆಲವು ಕಡೆಗಳಲ್ಲಿ ಸಹಕಾರ ಅಷ್ಟೊಂದಿಲ್ಲ ಎನ್ನತಕ್ಕ ಅಭಿಪ್ರಾಯ ಸರ್ಕಾರಕ್ಕೆ ಬಂದಿದೆ. ಅಂಥ ಕಡೆಗಳಲ್ಲಿ ನಾವು ಸರಿಪಡಿಸುತ್ತೇವೆನ್ನುವ ಮಾತನ್ನು

ಈ ಸಂದರ್ಭದಲ್ಲಿ ಹೇಳುತ್ತೇನೆ. ನಿಜವಾಗಿಯೂ ಹೇಳಬೇಕಾದರೆ ಕೆಲವು ಕಡೆ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ನನಗೆ ಕೇಳಿದರು ಏನು ಈ ರೀತಿ ನೀವು ಅಧಿಕಾರಿಗಳ ಬಗ್ಗೆ ಓಪನ್ನಾಗಿ ಮೈಕ್‌ನಲ್ಲಿಯೇ ಹೊಗಳಿ ಬಿಡುತ್ತೀರಲ್ಲ ವ್ಯಥೆಯಾಗುತ್ತದೆ ಎನ್ನತಕ್ಕ. ಮಾತನ್ನು ಹೇಳಿದರು. ನಾನು ಕುಣಿಗಲ್‌ನಲ್ಲಿ ಮಾತನಾಡುವಾಗ ಈ ಪ್ರಶ್ನೆ ಬಂದಿತು ಎಂದು ಕಾಣುತ್ತದೆ. ಅಲ್ಲಿ ಯಾರೋ ಒಬ್ಬರು ಸಬ್ ಇನ್‌ಸ್ಪೆಕ್ಟರ್ ಮತ್ತು ತಹಶೀಲ್‌ದಾರರು ಹಗಲು ರಾತ್ರಿ ಶ್ರಮಪಟ್ಟು ಪರಿಸ್ಥಿತಿಯನ್ನು ತಹಬಂದಿಗೆ ತಂದಿದ್ದಾರೆ, ಬೋತ್ ಹಿಂದು ಮತ್ತು ಮುಸಲ್ಮಾನ್, ಎಲ್ಲ ಧರ್ಮಗಳವರು ಇಷ್ಟೊಂದು ಸರ್ವಾನುಮತದಿಂದ ಅಭಿಪ್ರಾಯ ಕೊಟ್ಟು ಅವರಿಬ್ಬರನ್ನು ಇಲ್ಲಿಂದ ಕಳಿಸಬಾರದು, ಅವರಿಬ್ಬರೂ ಬೇಕು ಎಂದು ಎಲ್ಲರೂ ಹೇಳಿದರು ನಾನು ಮೈಕ್ ಮುಂದೆ ಭಾಷಣ ಮಾಡುತ್ತಿರಬೇಕಾದರೆ ಸಾವಿರಾರು ಜನರಿಗೆ ಒಂದು ಮಾತನ್ನು ಹೇಳಿದೆ ಅಧಿಕಾರಿಗಳು ಈ ರೀತಿ ಒಟ್ಟೊಟ್ಟಿಗೆ ಕೆಲಸ ಮಾಡಿದರೆ ಸರ್ಕಾರಕ್ಕೂ ಸಂತೋಷ ನಿಮಗೂ ಸಂತೋಷ, ನಮಗೂ ಸಂತೋಷ ನಾವು ಕೂಡ ಅದರಲ್ಲಿ ಭಾಗಿಯಾಗಿರುತ್ತೇವೆಂದು ಹೇಳಿದೆ ನಾವು ಅವರನ್ನು ಬದಲಾವಣೆ ಮಾಡುವುದಕ್ಕೆ ಹೋಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇನೆ.

ಶ್ರೀ ಸಿ. ಭೈರೇಗೌಡ.—ಎಲ್ಲಿ ಆ ರೀತಿ ಚೆನ್ನಾಗಿ ಕೆಲಸ ಮಾಡಿರುತ್ತಾರೆ ಅವರು ಮಾಡಿರತಕ್ಕ ಕೆಲಸವನ್ನು ಸರ್ಕಾರದಿಂದ ಅಪ್ರಿಶಿಯೇಟ್ ಮಾಡತಕ್ಕಂಥದ್ದು. ಮತ್ತು ಅವರಿಗೆ ಟೋಕನ್ನಾಗಿ ಒಂದು ಬಹುಮಾನವನ್ನು ಅವಾರ್ಡ್ ತರಹ ಕೊಡತಕ್ಕಂಥಾದ್ದು ಸೂಕ್ತವಿದೆ. ತಾವು ಅದರ ಬಗ್ಗೆ ಆಲೋಚನೆ ಮಾಡಿ ಅದಕ್ಕೆ ದಯವಿಟ್ಟು ಒಂದು ಅಶ್ಯೂರೆನ್ಸ್ ಕೊಡಿ ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳುವುದು ನಿಜ. ಪರಿಶೀಲನೆಗೆ ಯೋಗ್ಯವಾಗಿರುವ ಸಲಹೆ. ಸರ್ಕಾರ ಇದನ್ನು ಗಮನದಲ್ಲಿಟ್ಟುಕೊಳ್ಳುತ್ತದೆಂದು ಹೇಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಸರ್ಕಾರಿ ನೌಕರನಾದ ಮೇಲೆ ಅವನು ಕಾನೂನು ಪ್ರಕಾರ ಕೆಲಸ ಮಾಡಬೇಕಾಗುತ್ತದೆ, ಶ್ರದ್ಧೆಯಿಂದ ಕೆಲಸ ಮಾಡಬೇಕಾಗುತ್ತದೆ. ಅದು ಅವನ ಕರ್ತವ್ಯ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಯಾರು ಯಾರು ಸಮಾಜ ಘಾತುಕ ಶಕ್ತಿಗಳು, ವಿಚ್ಛಿದ್ರಕಾರಕ ಶಕ್ತಿಗಳು, ಕಮ್ಯುನಲ್ ಹಾರ್ಮೊನಿ ಹಾಳುಮಾಡತಕ್ಕಂಥ ಜನ ಯಾರೇ ಆಗಲಿ ಕಾನೂನು ಚೌಕಟ್ಟಿನಲ್ಲಿ ಅವರ ಬಗ್ಗೆ ಕಠಿಣವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಳ್ಳುತ್ತದೆ. ತಾವು ತಮ್ಮ ಭಾಷಣದಲ್ಲಿ ಪ್ರಿವೆಂಟೀವ್ ಅರೆಸ್ಟ್ ಜಾಸ್ತಿ ಮಾಡಿಬಿಟ್ಟಿದ್ದೀರಿ, ಎಲ್ಲಿದ್ದಾರೆಂದು ಗೊತ್ತಿಲ್ಲ, ಎಷ್ಟು ಜನರಿದ್ದಾರೆಂಬುದು ಗೊತ್ತಿಲ್ಲ, ಹಾಗೆ ಹೀಗೆ ಎಂದು ಹೇಳಿದ್ದೀರಿ ಆಫ್ಟ್ರಾಲ್ ತಮಗೆಲ್ಲ ಗೊತ್ತಿದೆ, ಕಾನೂನು ಪ್ರಕಾರ ತೆಗೆದುಕೊಂಡು ಹೋಗಿ ಅವರುಗಳನ್ನು ಅಲ್ಲಿ ವರ್ಷಗಟ್ಟಲೆ ಇಟ್ಟುಕೊಳ್ಳುವುದಕ್ಕೆ ಬರುವುದಿಲ್ಲ ಚೆನ್ನರಾಯಪಟ್ಟಣದಲ್ಲಿ ಬರೇ ಕದ್ದುಕೊಂಡು ಹೋಗುವುದೇ ಸಾಮಾನ್ಯ ಕೆಲಸವಾಗಿದೆ. ಅಂತಹ ಸಂದರ್ಭದಲ್ಲಿ ಒಬ್ಬೊಬ್ಬರು ನಿರಪರಾಧಿಗಳಿರಿ ಯಾರಾದರೂ ಇದ್ದರೆ ಅವರಿಗೆ ನೋವಾಗಿದ್ದರೆ ನಾನು ಕ್ಷಮೆ ಕೇಳುತ್ತೇನೆ. ಆದರೆ ಆ ಸಂದರ್ಭದಲ್ಲಿ ಹಾಗೆ ಮಾಡದಿದ್ದರೆ ಪರಿಸ್ಥಿತಿ ತಹಬಂದಿಗೆ ಬರುತ್ತಿರಲಿಲ್ಲ. ಎನ್ನತಕ್ಕ ಮಾತಿಗೆ ತಮ್ಮ ಒಪ್ಪಿಗೆ ಇದೆಯೆಂದು ನಾನು ಭಾವಿಸಿದ್ದೇನೆ, ಮಾನ್ಯ ಅಧ್ಯಕ್ಷರೇ. ಇಂಥ ಸಂದರ್ಭದಲ್ಲಿ ನಾವು ಕಠಿಣ ಕಾರ್ಯಕ್ರಮವನ್ನು ಹಾಕಿಕೊಳ್ಳತಕ್ಕಂಥ ವಿಚಾರದಲ್ಲಿ ರೆಚಲ್‌ಸ್ಸಾಗಿರಬೇಕಾಗುತ್ತದೆಂಬ ಮಾತನ್ನು ನಾನು ಅನಿವಾರ್ಯವಾಗಿ ಹೇಳಬೇಕಾಗಿದೆ. ಸರ್ಕಾರವೇನು ಅಬ್‌ಜೆಕ್ಟ್ ಮಾಡಿಕೊಂಡು ಹೋಗುತ್ತದೆ ಎನ್ನುವ ಭಾವನೆಗೆ ಬಿಡುವುದಕ್ಕೆ ಸಾಧ್ಯವಿಲ್ಲ. ನಾವು ಇಲ್ಲಿ ಎಲ್ಲಿಯವರೆಗೆ ಇರುತ್ತೇವೆ. ನೀವು ನಾವು ಇರಬಹುದು, ಅಂತಹ ಎಲಿಮೆಂಟ್ಸ್ ಯಾರು ಯಾರು ಇದ್ದಾರೆ ಅವರ ಮೇಲೆ ಕಠಿಣವಾಗಿರತಕ್ಕಂಥ ಕಾರ್ಯಕ್ರಮವನ್ನು ಎಷ್ಟೆಷ್ಟು ಸಾಧ್ಯವೋ ಅಷ್ಟಷ್ಟು ಹಾಕಿ ತಹಬಂದಿಗೆ ತರದಿದ್ದರೆ ನಿರಪರಾಧಿಗಳ ಸಾವು ಆಸ್ತಿ ಪಾಸ್ತಿಗಳ ನಷ್ಟ ಮೈ ಕೈಗಳಿಗೆಲ್ಲ ಗಾಯಗಳಾಗುವುದರ ಜೊತೆಗೆ ಎಲ್ಲಕ್ಕಿಂತ ಹೆಚ್ಚಾಗಿ ಅಶಾಂತಿ ಮೂಡಿ ಕೋಮು ಸೌಹಾರ್ದತೆಗೆ ಹೆಸರು ಪಡೆದಂಥ ಸಮಾಜದ ಮುಖಕ್ಕೆ ಮಸಿ ಬಳಿಯತಕ್ಕಂಥ ಕೆಲಸವನ್ನು ಅವರು ಮಾಡುತ್ತಾರೆ.

೬—೫೫ ಪಿ. ಎಂ.

ಅಂಥವರ ಮೇಲೆ ನಿರ್ದಾಕ್ಷಿಣ್ಯವಾಗಿ ನಾವು ಕಾರ್ಯಕ್ರಮ ಹಾಕಲೇಬೇಕಾಗುತ್ತದೆ. ಈಗಾಗಲೇ ಕೆಲವು ಹಾಕಿದ್ದೇವೆ, ಇನ್ನೂ ಕೂಡ ಹಾಕುತ್ತೇವೆ, ಮುಂದೆಯೂ ಹಾಕುತ್ತೇವೆ. ಎಂತಹ ಪ್ರಸಂಗ ಬಂದರೂ ಸರಕಾರ ಎದರಿಸುವುದಕ್ಕೆ ಸಿದ್ಧ ಇದೆ. ಇತತಕ್ಕಂಥ ನಮ್ಮ ಪರಿಮಿತಿಯಲ್ಲಿ ಸಿದ್ಧತೆ

ಮಾಡಿಕೊಂಡಿದ್ದೇವೆ. ಮುಂದೆಯೂ ಮಾಡುತ್ತೇವೆ. ಆದರ ಬಗ್ಗೆ ಏನೇನೂ ಅನುಮಾನಬೇಡ ಎನ್ನತಕ್ಕಂಥ ಮಾತನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಸಂದರ್ಭದಲ್ಲಿ ಟಾಡಾ ಆಕ್ಟ್ ಉಪಯೋಗದ ಬಗ್ಗೆ ಹೇಳಿದ್ದಾರೆ. ಸೆಕ್ಷನ್ ಅನ್ನು ಮತ್ತೆ ಓದಿ ಹೇಳುವ ಅಗತ್ಯ ಇಲ್ಲವೆಂದು ಭಾವಿಸಿದ್ದೇನೆ. ಇವತ್ತು ಶ್ರೀಮಾನ್ ರಂಗನಾಥ್‌ರವರು ಭಾಷಣ ಮಾಡಬೇಕಾದರೆ, ಕರ್ನಾಟಕದಲ್ಲಿ ಟಾಡಾ ಆಕ್ಟ್‌ನ್ನು ೧೯೮೭ರಲ್ಲಿ ಜಾರಿಗೆ ಕೊಟ್ಟಿದ್ದಾರೆ, ನಾವಲ್ಲ ಎಂದು ಅವರು ಹೇಳಿದರು ಅದು ನಿಜ. ಬಹುಶಃ ನಿಮಗೆ ನೆನಪಿರಲಿಲ್ಲವೆಂದು ಕಾಣುತ್ತದೆ. ಈ ಕಾನೂನು ಬಂದಿರತಕ್ಕದ್ದು ೧೯೮೫ ರಲ್ಲಿ, ಮೊದಲು ಅಂದರೆ ೧೯೮೫ ರಲ್ಲಿ ಆರ್ಡಿನೆನ್ಸ್ ಹೊರಡಿಸಿದ್ದೀರಿ. ನಂತರ ಆ್ಯಕ್ಟ್ ಆದದ್ದು ೧೯೮೭–೮೮ ರಲ್ಲಿ ಇದನ್ನು ತಮ್ಮ ಸರ್ಕಾರವೇ ತಂದಿದೆ ಎಂದು ಪೊಲಿಟಿಕಲ್ಲೆಸ್ ಮಾಡುವುದಕ್ಕೆ ನನಗೆ ಆಸೆ ಇಲ್ಲ, ಜಾರಿಗೆ ಕೊಟ್ಟಿರತಕ್ಕದ್ದು ನನ್ನ ಹತ್ತಿರ ಇದೆ. ಬೇಕಾದರೆ ಕಳಿಸಿಕೊಡುತ್ತೇನೆ, ಓದಿ ನೋಡಿಕೊಳ್ಳಿ ಇಲ್ಲಿ.

"In exercise of the powers conferred by sub-section (1) and sub-section (4) of Section 9 of Terrorists and Disruptive Activities Prevention Act, 1987, the Government of Karnataka hereby constitute a designated Court for the State of Karnataka with its ordinary place of sitting at Bangalore, and with the concurrence of the Chief Justice of High Court of Karnataka appoints Sri H. N. Narayan IX Additional City Civil Judge, Bangalore City concurrently as the Judge of the said Court." This is dated 18-6-1988. Even prior to this on 1st August 1986. "In exercise of the powers conferred under Section (1) and Section (1) and (7) of the Terrorists and Disruptive Activities Prevention Act, 1985, the Government of Karnataka hereby constitutes designated Court of the whole of State of Karnataka with its ordinary place of sitting at Bangalore".

ಮೊದಲು ಆರ್ಡಿನೆನ್ಸ್ ಇದ್ದಾಗ ಒಂದನ್ನು ಹೊರಡಿಸಿದ್ದಾರೆ. ಆ ಮೇಲೆ ಆಕ್ಟ್ ಬಂದ ಮೇಲೆ ಮತ್ತೊಂದು ಸಾರಿ ರಿಪೀಟ್ ಮಾಡಿದ್ದಾರೆ.

SRI D. B. CHANDRE GOWDA .—The concept of the Act is that for every two years, you have to have a look afresh. ಆ ದೃಷ್ಟಿಯಿಂದ ಅವರು ಮಾಡಿದ್ದಾರೆ. Whether it was made applicable to the State? Constitution of the court under the Act is one thing. Operation of the Act is something else. You have applied it to five districts of the State through a Cabinet decision. That is what you have said.

MR. SPEAKER .—According to that, when the whole of the State is under TADA where is the question of applying it to only five districts

SRI D. B. CHANDRE GOWDA .—That is exactly what I am trying to say. They have got to explain it. Let the Hon'ble Chief Minister clarify.

SRI S. BANGARAPPA .—After going through your speech. If I am able to understand you, ಅದರ ಪರಿಸ್ಥಿತಿ ಏನಿದೆ, ಏನಾಗಿದೆ, ಕರ್ನಾಟಕ ರಾಜ್ಯದಲ್ಲಿ ಶಾಂತಿ ಇದೆ ಎಂದು ನೀವು ಹೇಳುತ್ತೀರಿ ಎಂದು ಹೇಳಿದರು. ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಸಮಾಧಾನಕರವಾಗಿದೆ ಎಂದು ಹೇಳಿದೆ. ಬಾಂಬೆ–ಕರ್ನಾಟಕ ಏರಿಯಾ ಮತ್ತು ಹಳೇ ಮೈಸೂರು ಜಿಲ್ಲೆಗಳನ್ನು ನೋಡಿದಾಗ ಕರ್ನಾಟಕ ರಾಜ್ಯದಲ್ಲಿ ಬಹುತೇಕ ಭಾಗದಲ್ಲಿ ಶಾಂತಿ ಇದೆ. ನಡೆದಿರತಕ್ಕಂತಹ ಘಟನೆಗಳು ೪–೫ ಜಿಲ್ಲೆಗಳಿಗೆ ಮಾತ್ರ ಸೀಮಿತಗೊಂಡಿದೆ. ಅದೂ ಇಡೀ ಜಿಲ್ಲೆಯಲ್ಲಿ

ಅಲ್ಲ. ಒಂದೊಂದು ಜಿಲ್ಲೆಯಲ್ಲಿ ಕೆಲವು ಕಡೆಗಳಿಗೆ ಮಾತ್ರ ಸೀಮಿತವಾಗಿದೆ. ಅದಕ್ಕೆ ಇಡೀ ರಾಜ್ಯದಲ್ಲಿ ಶಾಂತಿ ಕದಡಿ ಹೋಗಿದೆ ಎನ್ನುವ ಮಾತನ್ನು ಆಡಬಾರದು ಎಂದು ಹೇಳಿದೆ. ಈ ಟಾಡಾ ಆಕ್ಟನ್ನು ಹೊಸದಾಗಿ ತರಲಿಲ್ಲ. ಇದು ಮೊದಲೇ ಇತ್ತು. ತಮ್ಮ ಸರ್ಕಾರ ಇದ್ದಾಗ ಇತ್ತು. ನಾನು ಕೇಳುತ್ತೇನೆ, ತಾವು ಭಾಷಣ ಮಾಡಿರುವುದರಿಂದ ನಾನು ಇದನ್ನು ಹೇಳುತ್ತೇನೆ. ನೀವು ಎಂದರೆ ಯಾರು ಯಾರು ಭಾಷಣ ಮಾಡಿದ್ದೀರಿ ಅವರ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಒಂದು ವಿಷಯವನ್ನು ಕ್ಲಾರಿಫೈ ಮಾಡಬೇಕು. ನನಗೆ ಜ್ಞಾಪಕ ಇರುವಂತೆ, ಟಾಡಾ ಬಗ್ಗೆ ನಮ್ಮ ಕ್ಯಾಬಿನೆಟ್ ನಲ್ಲಿ ಒಂದು ಚರ್ಚೆಯಾಗಿ ಎಫೆಕ್ಟೀವ್‌ಗೆ ಕೊಡಬೇಕೆಂದು ನಾವು ತೀರ್ಮಾನವನ್ನು ತೆಗೆದುಕೊಂಡದ್ದು ನನಗಂತೂ ಜ್ಞಾಪಕ ಇಲ್ಲ. ನನಗೆ ತಿಳಿದಮಟ್ಟಿಗೆ, ಕೇಂದ್ರಸರ್ಕಾರದವರು ರಾಜ್ಯ ಸರ್ಕಾರಕ್ಕೆ ಒಂದು ಕಾಗದವನ್ನು ಬರೆದಿದ್ದರು. ಕೇಂದ್ರ ಟಾಡಾ ಆಕ್ಟನ್ನು ಕೇಂದ್ರಸರ್ಕಾರ ಮಾಡಿದ ಮೇಲೆ ಕರ್ನಾಟಕದಲ್ಲೂ ಕೂಡಾ ಭಯೋತ್ಪಾದಕರು ಬಂದು ತೊಂದರೆ ಕೊಡತಕ್ಕ ಸೂಚನೆಗಳು ಇರುವುದರಿಂದಾಗಿ ಇಲ್ಲೂ ಕೂಡಾ ಅದಕ್ಕೆ ಸಂಬಂಧಪಟ್ಟ ಕ್ರಮ ತೆಗೆದುಕೊಳ್ಳಬೇಕೆಂದು ಒಂದು ಕಾಗದವನ್ನು ಬರೆದಹಾಗೆ ಜ್ಞಾಪಕ. ಇದನ್ನು ಎಲ್ಲಾ ರಾಜ್ಯಗಳಿಗೂ ಕೂಡ ಬರೆದಿದ್ದಾರೆ. ಅದಕ್ಕಾಗಿ ಬೆಂಗಳೂರಿನಲ್ಲಿ ಕೋರ್ಟ್ ಸ್ಥಾಪನೆ ಬಗ್ಗೆ ನಾವು ಹೇಳಿದ್ದೇವೆ. ಅವರ ಅಡಿಯಲ್ಲಿ ಯಾರಾದರೂ ಅರೆಸ್ಟ್ ಆಗಿದ್ದರೆ ಕೇಂದ್ರ ಸರ್ಕಾರದವರು, ಸಿಬಿಐನವರು, ಮತ್ತೊಬ್ಬರು ಕರ್ನಾಟಕದವರನ್ನು ಅರೆಸ್ಟ್ ಮಾಡಿದರು ಎಂದು ಇಟ್ಟುಕೊಳ್ಳಿ. ಅದಕ್ಕಾಗಿ ನ್ಯಾಯಾಧೀಶರನ್ನು ನೇಮಕ ಮಾಡಬೇಕು. ಇದು ನನಗೆ ಜ್ಞಾಪಕ. ಆದರೆ ಕರ್ನಾಟಕದಲ್ಲಿ ಟಾಡಾವನ್ನು ಎಫೆಕ್ಟ್‌ಗೆ ಕೊಡಬೇಕು. ಟಾಡಾ ಆಕ್ಟಿನ ಆಶ್ರಯದಲ್ಲಿ ನಾವು ಅರೆಸ್ಟ್ ಮಾಡಬೇಕೆನ್ನುವ ಕ್ರಮವನ್ನು ನಾವು ತೆಗೆದುಕೊಂಡಿಲ್ಲ. ತಾವು ಕೇವಲ ಒಂದು ಪ್ಯಾರಾವನ್ನು ಐಸೋಲೇಟಾಗಿ ಓದಿ ಇಲ್ಲಿ ಏಕೆ ಬಂತು ಎಂದು ಹೇಳಿದರೆ ನಮಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು.— ಮೊನ್ನೆ, ಟಾಡಾ ಬಂತು, ಟಾಡಾ ಎಲ್ಲಿ, ಟಾಡಾ ಯಾವಾಗ ಬಂತು ಎಂದು ತಾವುಗಳೆಲ್ಲ ಪ್ರಶ್ನೆ ಮಾಡಿದ್ದೀರಿ. ಅದಕ್ಕೆ ಈಗಾಗಲೇ ಟಾಡಾ ಚೌಕಟ್ಟಿಗೆ ನಾವು ಸೇರಿಬಿಟ್ಟಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ.— ಒಂದು ವೇಳೆ ಇದನ್ನು ಹಿಂದಿನ ಸರ್ಕಾರ ಮಾಡಿದ್ದರೂ ಅದು ಅಪರಾಧವೇ. ನಮ್ಮ ಸರ್ಕಾರ ಎಂದು ಹೇಳಿ ಮುಚ್ಚಿಟ್ಟುಕೊಳ್ಳುವುದಕ್ಕೆ ನಾನು ಸಿದ್ಧನಿಲ್ಲ. I am not prepared to defend. After the provisions of 1985 Act were made applicable, probably the Central Government has asked the different States their opinion. ಪ್ರತಿ ಎರಡು ವರ್ಷಕ್ಕೆ ಒಂದುಸಾರಿ ಅದನ್ನು ರಿವ್ಯೂ ಮಾಡಬೇಕು. ಅದಕ್ಕಾಗಿ ಒಂದು ಕೋರ್ಟನ್ನು ಕಾನ್‌ಸ್ಟಿಟ್ಯೂಟ್ ಮಾಡಿ ಎಂದು ಅವರು ಡೈರೆಕ್ಷನ್ ಕೊಟ್ಟಿದ್ದಾರೆ. Whether that Act to be invoked in a particular State has to be decided by a cabinet decision. ಜಾರಿಗೆ ಕೊಡತಕ್ಕ ಕಾರ್ಯಕ್ರಮವನ್ನು ಅವರು ಮಾಡಿಲ್ಲ. ಶಾಸನದಲ್ಲಿ ಇರತಕ್ಕ ಜಡ್ಜನ್ನು ನೇಮ್ ಮಾಡಿದ್ದಾರೆ. Whether it should be invoked is a question. Therefore the Government has taken a decision to invoke the Act.

MR. SPEAKER.—Let us hear the former Home Minister.

ಶ್ರೀ ಆರ್. ಎಲ್. ಜಾಲಪ್ಪ.—ಯಾವುದೇ ಒಂದು ಆರ್ಡಿನೆನ್ಸ್ ಆಗಬೇಕಾದರೆ ಕ್ಯಾಬಿನೆಟ್ ಡಿಸ್ಕಷನ್ ಆಗಿ, ಅದನ್ನು ಒಪ್ಪಿಕೊಂಡ ಮೇಲೆ ಆರ್ಡಿನೆನ್ಸ್ ಆಗುತ್ತದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ ಅದಕ್ಕೆ ಒಂದು ಕ್ಯಾಬಿನೆಟ್ ನೋಟ್ ಇರುತ್ತದೆ. ಆದರಲ್ಲಿ ಪ್ರಿಯಾಂಬಲ್, ರೆಫರೆನ್ಸ್ ಇರುತ್ತದೆ. ಅದನ್ನು ತಾವು ಸ್ವಲ್ಪ ತೆಗೆಸಿನೋಡಿ ಇಲ್ಲಿ ಹೇಳಬಹುದು.

ಶ್ರೀ ಎಸ್. ಬಂಗಾರಪ್ಪ.—ಕ್ಯಾಬಿನೆಟ್ ತೀರ್ಮಾನ ಎಂದ ತಕ್ಷಣ, ಇದರ ಪ್ರಕಾರ ಎಂದಲ್ಲ. ಇನ್‌ಫಾರ್ಮಲ್ಲಾಗಿ ನಾವು ಡಿಸ್ಕಷನ್ ಮಾಡಿ ಇದನ್ನು ಮಾಡಿದ್ದೇವೆ. Informally we discussed it, when we met in the Cabinet meeting. You know how the discussion about certain matters takes place. ಈಗ ಇಲ್ಲಿ ಇರತಕ್ಕದ್ದು ಏನೆಂದರೆ, ಟಾಡಾ ಆಕ್ಟನ್ನು ಒಂದು ಸಾರಿ ತಂದರೆ ಪೂರ್ತಿ ರಾಜ್ಯಕ್ಕೆ ಜಾರಿಗೆ ಕೊಡಬಹುದು ಅಥವಾ ರಾಜ್ಯದ ಕೆಲವು ಭಾಗಕ್ಕೆ ಕೂಡಾ ಕೊಡಬಹುದು. ಇದನ್ನು ನೋಟಿಫಿಕೇಷನ್ ಹೊರಡಿಸುವ ಮುಖಾಂತರ ಮಾಡುವುದಕ್ಕೆ ಬರುತ್ತದೆ. ತಾವು ಏನು ಭಾಷಣ ಮಾಡಿದ್ದೀರಿ ಎಂದರೆ, ಇಲ್ಲಿ ಏನು

ಹತ್ತಿ ಉರಿಯುತ್ತಿದೆಯೋ, ಟೆರರಿಸ್ಟ್ ಬಂದಿದ್ದಾರೆಯೋ, ಟಾಡಾ ಹಾಕಿ ಕರ್ನಾಟಕದ ಘನತೆ ಗೌರವಕ್ಕೆ ಕುಂದು ಬಂತು ಎಂದು ಹೇಳಿದ್ದಕ್ಕೋಸ್ಕರ ನಾನು ಇದನ್ನು ಹೇಳಬೇಕಾಯಿತು. ಇಲ್ಲದಿದ್ದರೆ ನಾನು ಇದನ್ನು ಪ್ರಸ್ತಾಪ ಮಾಡುತ್ತಿರಲಿಲ್ಲ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾವು ಪ್ರಸ್ತಾಪ ಮಾಡಿದ್ದು ನೀವು ಪ್ರೆಸ್ಸಿಗೆ ಹೇಳಿದ್ದರಿಂದ. ಅಲ್ಲದೇ ಇದ್ದಿದ್ದರಿಂದ ನಾವು ಪ್ರಸ್ತಾಪ ಮಾಡುತ್ತಾ ಇರಲಿಲ್ಲ. ತಾವು ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡಿದ್ದೇವೆ, ರಾಜ್ಯದ ಹಲವು ಜಿಲ್ಲೆಗಳಿಗೆ ಇದನ್ನು ಅಪ್ಲಿಕಬಲ್ ಮಾಡುತ್ತೇವೆ ಎಂದು ಹೇಳಿದ್ದರಿಂದಲೇ ಪ್ರಸ್ತಾಪ ಮಾಡಬೇಕಾಯಿತು.

ಶ್ರೀ ಎಸ್. ಬಂಗಾರಪ್ಪ.—ನಿಜ ಹೇಳಬೇಕು ಎಂದರೆ, ಇಲ್ಲಿ ಇರತಕ್ಕದ್ದು ಇಡೀ ಕರ್ನಾಟಕ ರಾಜ್ಯಕ್ಕೆ ಅಪ್ಲಿಕಬಲ್ ಆಗುತ್ತದೆಂದು. ಅದನ್ನು ಓದಿ ಹೇಳಿದ್ದೇನೆ. ಒಂದೇ ಒಂದು ಸ್ಪೆಷಲ್ ಕೋರ್ಟ್ ಕಾನ್ಸ್ಟಿಟ್ಯೂಟ್ ಮಾಡುತ್ತೇವೆ. ಅದರ ಉದ್ದೇಶ ಏನು ? ಉದಾಹರಣೆಗೆ ಇಂಡಿಯನ್ ಆರ್ಮ್ಸ್ ಆಕ್ಟ್ ಇದೆ ಒಂದು ಕೇಸ್ ಹಾಕಿದರೆ ವರ್ಷಗಟ್ಟಲೆ ನಡೆಯುತ್ತಾ ಇರುತ್ತದೆ. These are all special Acts where in special Courts are required to be constituted to try special cases relating to communal disturbances, explosives arms etc, ಇದರ ಬಗ್ಗೆ ನೀವು ಕೂಡಲೇ ಕ್ರಮ ಕೈಗೊಂಡು ಅವರಿಗೆ ಶಿಕ್ಷೆ ಕೊಡಿಸದೇ ಇದ್ದರೆ ನಾಳೆ ಇದನ್ನು ಕಂಟ್ರೋಲ್ ಮಾಡುವುದಕ್ಕೆ ಬರುವುದಿಲ್ಲ ಎಂಬ ಉದ್ದೇಶದಿಂದಲೇ ಟಾಡಾ ಆಕ್ಟ್ ಮಾಡಿದ್ದು. ಟಾಡಾ ಆಕ್ಟ್ ತಂದತಕ್ಷಣ ಪೂರ್ತಿ ಟೆರರಿಸ್ಟ್ ಕರ್ನಾಟಕದಲ್ಲಿ ತುಂಬಿದ್ದರು ಎಂದು ಅರ್ಥ ಅಲ್ಲ. ಇವತ್ತು ಇಂಡಿಯನ್ ಪೀನಲ್ ಕೋಡ್ ಇದೆ. ಐ.ಪಿ.ಸಿ. ಸೆಕ್ಷನ್ ೩೦೨ ಏನು ಹೇಳುತ್ತದೆ ? ಯಾರಾದರೂ ಮರ್ಡರ್ ಮಾಡಿದ್ದರೆ ಅವನಿಗೆ ಶಿಕ್ಷೆ ಅಂದರೆ ಡೆತ್ ಸೆಂಟೆನ್ಸ್ ಅಥವಾ ಇಂಪ್ರಿಸನ್‌ಮೆಂಟ್ ಇತ್ಯಾದಿ, ಇತ್ಯಾದಿ ಪನಿಷ್‌ಮೆಂಟ್ ಹೇಳುತ್ತದೆ. ಏತಕ್ಕೆ ಇಟ್ಟಿದ್ದೀರಿ ಸೆಕ್ಷನ್ ೩೦೨ನ್ನು. ಹಾಗಾದರೆ ಬರೀ ಮರ್ಡರ್‌ಗಳೇ ನಡೆಯುತ್ತದಾ ? ಆ ರೀತಿಯ ಮಾತು ತಾವು ಹೇಳಿದ್ದಕ್ಕಾಗಿ ನಾನು ಇದನ್ನು ಹೇಳಿದೆ. ಹಾಗಲ್ಲ, ಕೆಲವು ಸಾರಿ ಆ ರೀತಿ ಆದರೆ ಅದಕ್ಕೆ ಏನು ಎನ್ನುವುದಕ್ಕೆ ಈ ಕಾನೂನು ಇದು ನಾವು ಮಾಡಿದ್ದಲ್ಲ. ಇದು ಸೆಂಟ್ರಲ್ ಆಕ್ಟ್. ಮಾನ್ಯ ಸಿಂಧ್ಯಾ ಅವರು ಹೇಳಿದಹಾಗೆ ಸೆಂಟ್ರಲ್ ಗೌರ್ನಮೆಂಟ್‌ನಿಂದ ಪತ್ರ ಬಂದಿರಬಹುದು. ಅವರೇ ಮಾಡಿರಬಹುದು. ಅದನ್ನೂ ಕೂಡ ನಾನು ನೋಡಿಸಿ ಹೇಳುತ್ತೇನೆ. ಆ ಪ್ರಶ್ನೆಯಲ್ಲ. ಆದರೆ ೨ನೇ ಜೂನ್ ೧೯೮೮ರಲ್ಲಿ ಆಗಿರುವ ಆರ್ಡರ್ ಪ್ರಕಾರ ಸ್ಪೆಷಲ್ ಕೋರ್ಟ್ ಕಾನ್ಸ್ಟಿಟ್ಯೂಟ್ ಮಾಡಿದ್ದಾರೆ. ಯಾವ ಜಡ್ಜ್ ಎಂದು ಡೆಸಿಗ್ನೇಟ್ ಮಾಡಿದ್ದಾರೆ. ಕರ್ನಾಟಕಕ್ಕೇ ಒಂದು ಕೋರ್ಟ್ ಮಾಡಿದ್ದಾರೆ. ಅದನ್ನು ಏತಕ್ಕೆ ಮಾಡಿದ್ದಾರೆ ಎಂಬುದನ್ನು ನೆನಪು ಮಾಡಿಕೊಳ್ಳಿ. ಅದರ ಬಗ್ಗೆ ಚರ್ಚೆ ಬೇಡ. ಕಾರಣ ಏನು ಎಂಬುದು ನನಗೆ ಗೊತ್ತಿದೆ. I don't want to disclose again. ಸುಮ್ಮಸುಮ್ಮನೆ ಮಾಡಲಿಲ್ಲ, ಕಾರಣ ಇದೆ. ಹೊಸದಾಗಿ ಕ್ಯಾಬಿನೆಟ್ ಡಿಸಿಷನ್ ನಾವೇನೂ ತೆಗೆದುಕೊಂಡಿಲ್ಲ. Whole of the Karnataka State ಎಂದಿದ್ದರೂ ಕೂಡ ಶಾಂತಿ ವಿಚಾರ ಮಾತನಾಡಬೇಕಾದರೆ we will extend to four to five districts. ಪತ್ರಿಕಾ ಹೇಳಿಕೆ ನೋಡಿ. We have reduced that.

MR. SPEAKER.—Does that mean, Mr. Chief Minister, TADA is no longer applicable in the whole of Karnataka ?

SRI S. BANGARAPPA.—No, no. I never said it. ನಾನು ಆ ರೀತಿ ಹೇಳಲಿಲ್ಲ. ನಾಲ್ಕೈದು ಜಿಲ್ಲೆಗಳಲ್ಲಿ ಇದನ್ನು ಉಪಯೋಗ ಮಾಡುವ ಸಂದರ್ಭ ಕಾಣುತ್ತಿದೆ, ಉಳಿದ ಜಿಲ್ಲೆಗಳಲ್ಲಿ ಪ್ರಶ್ನೆ ಇಲ್ಲ, ಆ ಸಂದರ್ಭ ಬಂದಾಗ ಅಲ್ಲೂ ಉಪಯೋಗ ಮಾಡಬೇಕಾಗುತ್ತದೆ ಎಂದು ಹೇಳಿದೆ. It is in force in the whole of the Karnataka State. That is the legal position.

SRI R V. DESHAPANDE.—Sir, the Hon'ble Chief Minister is contradicting his own statement. This is a Central enactment. Once it is the Central enactment, the implementing authority is the State. Now, the Court has been constituted in 1988 giving the jurisdiction of the entire State to it. Whether the Act was supposed to be implemented is important ?

MR. SPEAKER.—Why would you create a court if you do not have the intention......

SRI R. V. DESHAPANDE.—Supposing it was the direction of the Central Government that it should constitute Special Courts, the State Government might have created.

MR. SPEAKER.-Depending upon the exigences and circumstances.

SRI R. V. DESHAPANDE.—Suppose, there was a direction of the Central Government, the State Government might have constituted a Court. The Chief Minister has now said that he is going to implement this Act in five Districts ? Why should he say that ? He has to clarify it. He has read 1988 Notification. He only said that courts to be constituted. What is further ? Whether the Special Courts are to look after few districts or the entire State ? Whether it was the Central Government order or the State Government decision ?

SRI D.B. CHANDREGOWDA.—You are a barrister yourself. I would like to know the clear understanding of existing situation necessitating invoking of the provisions of the Act. ಇದು ಸುಲಭವಾಗಿ ಜಾರಿಕೊಂಡು ಹೋಗತಕ್ಕಂತಹ ಪ್ರಶ್ನೆ ಅಲ್ಲ. ಇಂತಹ ಒಂದು ಕರಾಳ ಶಾಸನದ ವಿಚಾರದಲ್ಲಿ ಚರ್ಚೆ ಮಾಡುವಾಗ ನಾವು ವಿಚಾರ ಮಾಡಬೇಕಾಗುತ್ತದೆ. ನಾನು ಪ್ರಾರಂಭದಲ್ಲಿ ಹೇಳಿದ್ದೇನೆ. It is an act of parliament. When we go through the debates of both Lok Sabha and Rajyasabha, the Government of India has assured on the floor of the House, if I am correct, to the effect that it is confined to the States of Punjab and Kashmir wherein AK 47 guns have been used, secession movement is going on Kindly read the debates of both Houses of Parliament but as it is an act of parliament it cannot be confined to the State. Therefore they have made it applicable to the nation. Different states have to accept the constitution of it and issue notification accordingly constituting the court and keep things ready so that if need be they could be used. But, this present Government has gone into this question and given serious consideration in the cabinet itself and you are as Chief Minister, saying that we have taken a decision to invoke the provisions of this Act. Therefore this question has arisen. Therefore you have to enlighten about it.

ಶ್ರೀ ಎಸ್. ಬಂಗಾರಪ್ಪ.—ನಾನು ಈಗಾಗಲೇ ಕೊಟ್ಟಿರತಕ್ಕಂತಹ ಹೇಳಿಕೆಯಿಂದ ಅವರಿಗೆ ಸಮಾಧಾನ ತರದಿದ್ದರೆ ಇನ್ನೊಂದು ಸಾರಿ ಈ ಪ್ರಾವಿಷನ್ ಅನ್ನು ರಿಪೀಟ್ ಮಾಡುವುದು ಬಹಳ ಒಳ್ಳೆಯದೆಂದು ಅನ್ನಿಸುತ್ತದೆ.

> "To constitute the designated Court for the whole of the State of Karnataka with the ordinary place of sitting at Bangalore."

ಇಡೀ ಕರ್ನಾಟಕ ರಾಜ್ಯಕ್ಕೆ ಒಂದು ಸ್ಪೆಷಲ್ ಕೋರ್ಟ್ ಎನ್ನುವ ದೃಷ್ಟಿಯಿಂದ ಒಂದು ಕೋರ್ಟ್ ಕಾನ್‌ಸ್ಟಿಟ್ಯೂಟ್ ಆಗಿದೆ. ಇದು ಮೊದಲು ೧೯೮೭ರಲ್ಲಿ ಆಗಿದೆ. ಆಮೇಲೆ ೧೯೮೮ರಲ್ಲಿ ಸೆಕೆಂಡ್ ಆರ್ಡರ್ ಆಯಿತು. And this order is issued by our own State Government here,

1986 and 1988. ಅಂದ ಮೇಲೆ ಇದು ಕರ್ನಾಟಕದಲ್ಲಿ ಇದೆ. ನಾವು ಬೇರೆ ಜಿಲ್ಲೆಗಳನ್ನು ಏತಕ್ಕಾಗಿ ಎಕ್ಸ್‌ಕ್ಲೂಡ್ ಮಾಡಿದೆವೆಂಬುದನ್ನು ಹೇಳುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಎಕ್ಸ್‌ಕ್ಲೂಡ್ ಮಾಡಿರುವ ಬಗ್ಗೆ ಸರಕಾರ ಆದೇಶ ವೇನಾದರೂ ಹೊರಡಿಸಿದೆಯೋ?

ಶ್ರೀ ಎಸ್. ಬಂಗಾರಪ್ಪ.—ಎಕ್ಸ್‌ಕ್ಲೂಡ್ ಮಾಡುವುದು ಅಂದರೆ ಜೂರಿಸ್‌ಡಿಕ್ಷನ್ ಎಕ್ಸ್‌ಕ್ಲೂಡ್ ಮಾಡುವ ಪ್ರಶ್ನೆಯಿಲ್ಲ. ಏಕೆಂದರೆ, ಸುಮಾರು ೪-೫ ಜಿಲ್ಲೆಗಳಲ್ಲಿ ಗಲಭೆಗಳು ನಡೆದವು. ಅಲ್ಲಿರ ತಕ್ಕಂತಹ ಜನರಿಗೆ ಸ್ವಲ್ಪ ಹೆದರಿಕೆ ಫಿಯರ್ ಬರಲಿ ಎನ್ನತಕ್ಕಂಥ ದೃಷ್ಟಿಯಿಂದ ಪರ್ಟಿಕ್ಯುಲರ್‌ಲಿ ಅದನ್ನು ಪ್ಲೇಸ್ ಮಾಡಿ ಎಂದು ಹೇಳಿದ್ದು ಅಷ್ಟೇ ಹೊರತು ಬೇರೇನೂ ಅಲ್ಲ. ಇದನ್ನು ಇಡೀ ರಾಜ್ಯಕ್ಕೆ ಫಾರ್ಮಲ್ ಆಗಿ ಡಿಸ್ಕಷನ್ ಮಾಡತಕ್ಕ ಪ್ರಮೇಯ ಇರಲಿಲ್ಲ. ಇದು ೧೯೮೭-೮೮ರ ಕಾಲದಲ್ಲಿ ಆಗಿರತಕ್ಕಂಥಾದ್ದು. ನಾವು ಅದನ್ನು ಇನ್‌ವೋಕ್ ಮಾಡತಕ್ಕಂತಹ ಪರಿಸ್ಥಿತಿ ಉದ್ಭವ ಈಗ ಆಗಿದೆ ಎನ್ನುವ ದೃಷ್ಟಿಯಿಂದ ಮಾತ್ರ ಮಾಡಿದೆವೇ ವಿನಃ ಬೇರೆನೂ ಇಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್.—ಇಲ್ಲಿ ಸ್ವಲ್ಪ ಕನ್‌ಫ್ಯೂಷನ್ ಇದೆ. ಕಾನೂನಿಗೆ ಅನುಗುಣವಾಗಿ ಕೋರ್ಟ್ ಅನ್ನು ಕಾನ್‌ಸ್ಟಿಟ್ಯೂಟ್ ಮಾಡಿದ್ದರೂ ಕೂಡ ಹಿಂದಿನ ಸರಕಾರ ಈ ರಾಜ್ಯದಲ್ಲಿ ಅದನ್ನು ಜಾರಿಗೆ ಕೊಟ್ಟಿರಲಿಲ್ಲ. ತಾವು ಈಗ ಕೊಟ್ಟಿದ್ದೀರಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಇವತ್ತು ಸಮಾಜದಲ್ಲಿ ಇಂತಹ ಒಂದು ಕಾನೂನು ಮಾಡಿ ಇಟ್ಟುಕೊಂಡಿರುವುದು ಮುಂದೆ ಇಂತಹ ಘಟನೆಗಳು ನಡೆಯಬಹುದು ಎನ್ನುವ ದೃಷ್ಟಿಯಿಂದ. ಈ ವ್ಯವಸ್ಥೆಯನ್ನು ನಾವು ಮಾಡಿ ಇಟ್ಟುಕೊಂಡಿರುತ್ತೇವೆ. ಆವೊಂದು ದೃಷ್ಟಿಯಿಂದ ಐಪಿಸಿ, ಆಮೇಲೆ ಟಾಡಾ ಆಕ್ಟ್‌ಗಳು ಗುಂಡಾ ಆ್ಯಕ್ಟ್‌ಗಳು ಇವೆ. ಈಗ ಗುಂಡಾ ಆಕ್ಟ್ ಇದೆ. ಅದನ್ನು ಏತಕ್ಕೆ ಮಾಡಿದ್ದೀರಿ ಅಂದರೆ, ಗುಂಡಾಗಳು ಇದ್ದರೆ ಅವರನ್ನು ಹಿಡಿಯಬೇಕು. ಯಾವ ಸರ್ಕಾರ ಇದ್ದರೂ ಅವರನ್ನು ಹಿಡಿಯ ಬೇಕಾಗುತ್ತದೆ. ಹಿಡಿದು ಒಳಗೆ ಇಟ್ಟು ಸ್ವಲ್ಪ ದಿವಸ ಆದಮೇಲೆ ಪರಿಸ್ಥಿತಿ ತಹಬಂದಿಗೆ ಬಂದಮೇಲೆ ಹೊರಗಡೆ ಬಿಡುತ್ತೇವೆ ನೀನು ಎಲ್ಲಿಯಾದರೂ ಹೋಗಪ್ಪ ಎಂದು ಹೇಳಬೇಕಾಗುತ್ತದೆ. ಇದು ನಾವಾಗಲಿ, ನೀವಾಗಲಿ ಹೇಳತಕ್ಕ ಒಂದು ಪರಿಸ್ಥಿತಿ. ಅದಕ್ಕೋಸ್ಕರ ಒಂದು ಕಾನೂನನ್ನು ನಾವು ರಚನೆ ಮಾಡುತ್ತೇವೆ. ಆಮೇಲೆ ನಾವೆಲ್ಲ ಕರ್ನಾಟಕರಾಜ್ಯದ ಜನತೆಯಲ್ಲಿ ಅಪೀಲನ್ನು ಮಾಡಿದ್ದೇವೆ. ಕನ್ನಡದಲ್ಲಿ, ಉರ್ದುವಿನಲ್ಲಿ ಇಂಗ್ಲೀಷ್‌ನಲ್ಲಿ ಎಲ್ಲ ಭಾಷೆಗಳಲ್ಲೂ ಕೂಡ ಪತ್ರಿಕೆಗಳ ಮುಖಾಂತರವಾಗಿ ಮುಖ್ಯಮಂತ್ರಿಯಾಗಿ ನಾನು ವಿನಂತಿ ಮಾಡಿಕೊಂಡಿದ್ದೇನೆ, ಸರ್ಕಾರದ ವತಿಯಿಂದ ಮಾಡಿಕೊಂಡಿದ್ದೇವೆ, ಅಧಿಕಾರಿಗಳು ಮಾಡಿಕೊಂಡಿದ್ದಾರೆ, ಕರ್ನಾಟಕ ರಾಜ್ಯದ ಜನತೆ ನಮ್ಮ ವಿನಂತಿಗೆ ಓಗೊಟ್ಟು ಎಲ್ಲ ಧಾರ್ಮಿಕ ಮಹನೀಯರು, ಸಾರ್ವಜನಿಕ ಮಿತ್ರರು, ಸಂಘಸಂಸ್ಥೆಗಳವರು ಒಟ್ಟಾಗಿ ಸರ್ಕಾರಕ್ಕೆ ಬೆಂಬಲ ಕೊಟ್ಟು ಕೋಮು ಸೌಹಾರ್ದತೆಯನ್ನು ಕಾಪಾಡುವುದಕ್ಕೆ ಅದನ್ನು ಒಡಮೂಡಿಸುವ ದೃಷ್ಟಿ ಯಿಂದ ಎಲ್ಲರೂ ಓಗೊಟ್ಟಿದ್ದಾರೆ. ನಾನು ಆ ಭಾಗದ ಜನರಿಗೆ, in particular and in general of the people of whole Karnataka, ಜನರಿಗೆ ಈ ಸಂದರ್ಭದಲ್ಲಿ ಅಭಿನಂದನೆ ಗಳನ್ನು ಸಲ್ಲಿಸುತ್ತಿದ್ದೇನೆ. ಈಗ ಮುಂದೆ ಏನು ಮಾಡಬೇಕೆನ್ನತಕ್ಕದ್ದು ಇದೆ. ಎನ್‌ಕ್ವಾಯರಿ ಮಾಡಲಿಕ್ಕೆ ಮಾನ್ಯ ಸದಸ್ಯರುಗಳು ಕೇಳಿದ್ದಾರೆ. ಕೆಲವರು ಹೌಸ್ ಕಮಿಟಿ ಮಾಡಬೇಕೆಂದು ಹೇಳಿದ್ದಾರೆ. ಜುಡಿಷಿಯಲ್ ಎನ್‌ಕ್ವಾಯರಿ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ರುಕ್ಮಯ್ಯಪೂಜಾರಿಯವರು ಕೇಳಿದ್ದಾರೆ. ಮಾನ್ಯ ಬೈರೇಗೌಡರು ಕೇಳಿದ್ದಾರೆ ಮತ್ತೊಬ್ಬರು ಎನ್‌ಕ್ವಾಯರಿ ಆಗಬೇಕೆಂದು ಕೇಳಿದ್ದಾರೆ. ಈಗ ಮತ್ತೊಂದು ವಿಚಾರವನ್ನು ಹೇಳಬೇಕಾಗಿದೆ. ನಾವು ಕೆಲವು ಸಮಯ ಶಾಲಾ ಕಾಲೇಜುಗಳನ್ನು ಮುಚ್ಚಬೇಕಾಯಿತು. ಇಡೀ ರಾಷ್ಟ್ರದ ಬಹುಪಾಲು ರಾಜ್ಯಗಳಲ್ಲಿ ಶಾಲಾ ಕಾಲೇಜುಗಳನ್ನು ಮುಚ್ಚತಕ್ಕ ತೀರ್ಮಾನವನ್ನು ಮಾಡಿದ್ದಾರೆ, ಏಕೆಂದರೆ, ಇದು ಬಹಳ ವೇಗವಾಗಿ ಹಬ್ಬುತ್ತಿತ್ತು. ಮನೆ ಬಿಟ್ಟು ಬಂದವರು ಪುನಃ ಮನೆಗೆ ಸೇರಬೇಕೆನ್ನುವ ದೃಷ್ಟಿಯಿಂದ ಹಾಗೆ ಮಾಡಲಾಗಿದೆ. ಮಕ್ಕಳಿಗೆ ಪಾಠಪ್ರವಚನಗಳ ತೊಂದರೆಯಾಗಿದೆ. ಅದಕ್ಕೆ ಪೋಷಕರು ಕ್ಷಮಿಸಬೇಕು. ಬೇರೆ ದಾರಿ ಉಳಿದಿರಲಿಲ್ಲ. ಅವರ ಮಕ್ಕಳ ಹಿತದೃಷ್ಟಿಯಿಂದ ಅವರ ಜೀವದ ಹಿತ ದೃಷ್ಟಿಯಿಂದ ನಾವು ಈ ಕೆಲಸವನ್ನು ಮಾಡಿದ್ದೇವೆ. ರಜಾ ದಿವಸಗಳಲ್ಲಿ ಅರ್ಧ ದಿವಸ ಪಾಠ ಪ್ರವಚನಗಳನ್ನು ಮುಗಿಸಲಿ ಎನ್ನುವುದೇ ನಮ್ಮೆಲ್ಲರ ಆಸೆ. ಮಕ್ಕಳು ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಎಕ್ಸಾಮಿನೇಷನ್‌ಗಳನ್ನು ಸ್ವಲ್ಪ ಮುಂದಕ್ಕೆ ಹಾಕಿ.

ಶ್ರೀ ಎಸ್. ಬಂಗಾರಪ್ಪ.—ನಾವು ನೀವು ಸುಮ್ಮನಿದ್ದರೂ ಅದು ನಡೆದೇ ನಡೆಯುತ್ತದೆ. ನೀವು ಹೇಳುವುದು ನನಗೆ ಅರ್ಥವಾಗುತ್ತದೆ. ಅದು ಪತ್ರಿಕೆಗಳಲ್ಲಿ ಬಂದ ತಕ್ಷಣ ತಾಪತ್ರಯವಾಗುತ್ತದೆ. ದಯಮಾಡಿ ಅದು ಪತ್ರಿಕೆಗಳಿಗೆ ಹೋಗುವುದು ಬೇಡ.

ಶ್ರೀ ಪಾಟೀಲ್ ನಾಗರಾಜ್.—ಅದು ಹೇಗೆ ಸ್ವಾಮಿ, ಪತ್ರಿಕೆಗಳವರು ಇಲ್ಲೇ ಕುಳಿತು ಕೊಂಡಿದ್ದಾರೆ. ಪತ್ರಿಕೆಗಳಿಗೆ ಹೋಗುವುದು ಬೇಡವೆಂದರೆ ಹೇಗೆ? ನೀವು ಬೇಡವೆಂದರೂ ಅವರು ಕೇಳಬೇಕಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾವು ಏನೋ ಮಾತನಾಡುತ್ತೇವೆ ನಿಮಗೆ ಏತಕ್ಕೆ ಸ್ವಾಮಿ? ನಾನು ಪ್ರವಾಸ ಹೋದಾಗ ಸರ್ಕಾರಿ ಅಧಿಕಾರಿಗಳು ಪ್ರವಾಸ ಹೋದಾಗ ತಾವುಗಳು ಹೋದಾಗ, ಶಾಂತಿಯನ್ನು ಕಾಪಾಡತಕ್ಕ ವಿಚಾರದಲ್ಲಿ ವಾಸ್ತವಾಂಶವನ್ನು ಅರಿಯುತಕ್ಕ ವಿಚಾರದಲ್ಲಿ ಯಾವುದೇ ಪಕ್ಷದವರು ಆಗಿರಬಹುದು ಸರ್ಕಾರಕ್ಕೆ ಸಹಕಾರವನ್ನು ಕೊಟ್ಟಿದ್ದಾರೆ. ಅವರಿಗೆ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕೊನೆಗೆ ಒಂದು ಮಾತು ಹೇಳಿ ಮುಕ್ತಾಯ ಮಾಡುತ್ತೇನೆ. ಯಾವರೀತಿ ವಿಚಾರಣೆ ಮಾಡಬೇಕೆನ್ನುವುದು ಇದೆ. ರಾಮನಗರದಲ್ಲಿ ಮೊದಲು ಗಲಭೆ ನಡೆದಾಗ ಅದರ ಬಗ್ಗೆ ಜುಡಿಷಿಯಲ್ ಎನ್‌ಕ್ವಯರಿ ಆಗಬೇಕೆಂದು ವೀರೇಂದ್ರಪಾಟೀಲರ ಸರ್ಕಾರ ಇದ್ದಾಗಲೇ ಆ ಸಂದರ್ಭದಲ್ಲೇ ಒಂದು ತೀರ್ಮಾನವನ್ನು ಮಾಡಿದ್ದಾರೆ ಯಾವಾಗ ಘಟನೆಗಳು ಒಂದರ ಮೇಲೊಂದು ಎಲ್ಲಾ ಕಡೆ ನಡೆಯುತ್ತಾ ಹೋಯಿತು. ಪ್ರತಿಯೊಂದು ಘಟನೆಗೆ ಒಂದೊಂದಾಗಲಿ, ಅಥವಾ ಎಲ್ಲವನ್ನೂ ಸೇರಿಸಿ ಜುಡಿಷಿಯಲ್ ಎನ್‌ಕ್ವಯರಿ ಮಾಡುವುದು ಸಾಧ್ಯವಿಲ್ಲದೇ ಇರತಕ್ಕ ವಿಚಾರ ಎನ್ನುವ ಮಾತನ್ನು ತಾವು ಒಪ್ಪುತ್ತೀರಿ ಎಂದು ಭಾವಿಸಿದ್ದೇನೆ. It is not that easy. ಏಕೆಂದರೆ, ಒಂದು ಘಟನೆ ಆದರೆ, ಎರಡು ಘಟನೆ ಆದರೆ you can combine it and entrust that matter to judicial scrutiny. ......ಆದರೆ ಹಾಗೆ ಆಗಿರತಕ್ಕಂಥ ವಿಚಾರ ಕೂಡ ಅಲ್ಲ. ಇಲ್ಲಿ ನಾವು ಹೌಸ್ ಕಮಿಟಿ ಅಂದರೆ ತಾವೇ ವಿಚಾರ ಮಾಡಿ ನೋಡಿ. Is it possible. ಏಕೆಂದರೆ ಇದನ್ನು ಯಾವರೀತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಇವತ್ತು ನಡೆದಿರತಕ್ಕಂಥ ಘಟನೆಗಳ ಬಗ್ಗೆ ಯಾರೂ ಇಲ್ಲವೆಂದು ಹೇಳಿಲ್ಲ. ಒಂದು ಎನ್‌ಕ್ವೈರಿಯ ಉದ್ದೇಶ ಏನು ಇವತ್ತು ಅಲ್ಲಿ ಹೀಗೆ ನಡೆದಿದೆ ಇಲ್ಲಿ ಹೀಗೆ ನಡೆದಿದೆ ಎಂಬ ಮಾತು ಬಂದು ಭಿನ್ನಾಭಿಪ್ರಾಯ ಇದ್ದಾಗ ಮಾತ್ರ judicial enquiry. Please think over that. An enquiry of judicial nature is highly impossible. Whereas, the second opinion, either death or injury to the persons or about loss of property......

ಶ್ರೀ ಸಿ. ಬೈರೆ ಗೌಡ.—ಪ್ರಚೋದನೆ ಮಾಡಿರತಕ್ಕವರ ಬಗ್ಗೆ ಬೇರೆ ಬೇರೆ ಅಭಿಪ್ರಾಯಗಳು ಇವೆ. ನೀವೇ ಹೇಳಿದಿರಿ ಕೆಲವು ಕಡೆ ಬಿಜೆಪಿ, ವಿಶ್ವಹಿಂದೂಪರಿಷತ್. ಆರ್.ಎಸ್.ಎಸ್.ನವರು ತೊಂದರೆ ಕೊಟ್ಟಿದಾರೆ ಎಂದು ದೂರುಗಳು ಬಂದಿವೆ ಎಂದು ತಾವು ಹೇಳಿದ್ದೀರಿ. ಇದು ಸತ್ಯ ಇರಬಹುದು ಅಸತ್ಯ ಇರಬಹುದು ಮತ್ತೆ ಕೆಲವು ಕಡೆ ನಮಗೆ ಏನು ಸಂಶಯ ಇದೆ ಎಂದರೆ. ನಿಮ್ಮ ಪಕ್ಷದವರೇ ಕೆಲವು ಕಡೆ ಹೋಗಿ ಹಿಂದಿದ್ದ ಸರ್ಕಾರವನ್ನು ಉರುಳಿಸತಕ್ಕಂಥ......

ಶ್ರೀ ಎಸ್. ಬಂಗಾರಪ್ಪ.—ಮತ್ತೆ ಈ ವಿಷಯವನ್ನು ಕೆದಕುವುದಕ್ಕೆ ಹೋಗಬೇಡಿ.

ಶ್ರೀ ಸಿ. ಬೈರೇಗೌಡ.—ಆ ಕಾರಣದಿಂದ ಹೋಗಿ ಇದಕ್ಕೆ ಪ್ರಚೋದನೆ ನೀಡಿದ್ದಾರೆ ಎಂಬ ಅಭಿಪ್ರಾಯ ಇದೆ. ಅದಕ್ಕೆ ಸಾಕಷ್ಟು ಪುರಾವೆಗಳು ಕೂಡ ಇವೆ. ಆ ರೀತಿ ಆಗಿರದಿದ್ದರೆ ಸಂತೋಷ. ಆದರೆ ಇವತ್ತು ಈ ಸಂಶಯ ಇರುವುದರಿಂದ ಅದನ್ನು ನಿವಾರಣೆ ಮಾಡುವುದಕ್ಕೋಸ್ಕರ ತಾವು ಸದನದ ಸಮಿತಿಯನ್ನು ರಚನೆ ಮಾಡಬೇಕು. ನಮ್ಮ ಸಂಶಯ ನಿವಾರಣೆ ಆಗಬೇಕು. ನಾವು ಹೋದ ಕಡೆಗಳಲ್ಲಿ ಜನರು ಕೂಡ ಈ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈ ಸಂಶಯ ನಿವಾರಣೆಯಾಗುವುದು ಅವಶ್ಯಕತೆ ಇದೆ. ಆದ್ದರಿಂದ ನಾವು ಸದನದ ಸಮಿತಿಯನ್ನು ರಚನೆ ಮಾಡಿ ಎಂದು ಕೇಳುತ್ತಿರುವುದು.

ಶ್ರೀ ಎಸ್. ಬಂಗಾರಪ್ಪ.—ಪ್ರಚೋದನೆ ಮಾಡಿರತಕ್ಕವರು ಯಾರು ಎಂದು ಕಂಡುಹಿಡಿಯುವುದಕ್ಕೋಸ್ಕರ ಜ್ಯುಡಿಶಿಯಲ್ ಎನ್‌ಕ್ವೈರಿ ಎನ್ನತಕ್ಕದ್ದು ತಮ್ಮ ಅಭಿಪ್ರಾಯ rather then the incident itself. ಅಲ್ಲಿ ಘಟನೆ ಏನು ನಡೆಯಿತು ಎನ್ನುವುದಕ್ಕಿಂತ ಹೆಚ್ಚಾಗಿ ಯಾರು ಕಾರಣಕರ್ತರು ಎಂದು ನೋಡುವುದಕ್ಕೋಸ್ಕರ ಇವತ್ತು ಹೌಸ್ ಕಮಿಟಿ ಮಾಡಬೇಕೆನ್ನುವ ಪ್ರಶ್ನೆ ಬಂದಿದೆ. ನಾನು ಹೇಳುವುದು ಏನೆಂದರೆ, ಇವತ್ತು ಒಂದು ಜ್ಯುಡಿಶಿಯಲ್ ಎನ್‌ಕ್ವೈರಿ ಮಾಡಬೇಕಾದರೆ where is the necessity of again entrusting this matter to another

probe like judicial or House Committee? ಅದು ಅನುಮಾನ ಅಪಾದಮುಕ್ತವಾಗಿ ಅಡಿಯಿಂದ ಮುಡಿವರೆಗೆ ಬಂದರೆ ಮಾತ್ರ ಮಾಡಬೇಕು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಕೆಲವು ಮುಕ್ಕಾಲು ವಾಸಿ ವಿಚಾರವೋ, ಪೂರ್ತಿ ವಿಚಾರವೋ, ೧೪ ಆಣೆ ಭಾಗವೋ, ೯೦ ಪರ್ಸೆಂಟಿನಷ್ಟು ಆಗಿದೆ ಎಂದು ಈಗಾಗಲೇ ನಮಗೆ ಗೊತ್ತಾಗಿದೆ. ಇದೇ ದಿಕ್ಕಿನಲ್ಲಿ ನಿಮ್ಮ ಪಕ್ಷದವರು ಮತ್ತು ಇದೇ ರೀತಿ ನಮ್ಮವರ ಭಾಷಣಗಳು ಎಲ್ಲಾ ಮುಗಿದು ಹೋಗಿ ಸಂಪೂರ್ಣವಾಗಿ ವಿಚಾರ ಗೊತ್ತಾಗಬೇಕಾದರೆ for series of incidents. ಜ್ಯೂಡಿಶಿಯಲ್ ಎನ್‌ಕ್ವೈರಿ ಏಕೆ ಬೇಕು ಎನ್ನತಕ್ಕಂಥ ಪ್ರಶ್ನೆ. Yes, that is all the point...That is all the reason. ಅಷ್ಟರಿಂದ ಇವತ್ತು ಸಾಲಾಗಿ ಘಟನೆಗಳು ನಡೆದಿರುವಾಗ ಜ್ಯೂಡಿಶಿಯಲ್ ಎನ್‌ಕ್ವೈರಿ ಮಾಡುವುದರಿಂದ ಏನಾಗುತ್ತದೆ ಅಂದರೆ ಜ್ಯೂಡಿಶಿಯಲ್ ಎನ್‌ಕ್ವೈರಿ ಬಗ್ಗೆ ಜನತೆಯ ಗೌರವ ಕಿತ್ತುಕೊಂಡು ಹೋಗಿ ಬಿಡುತ್ತದೆ. ಜೊತೆಗೆ ಇಲ್ಲಿ ಅನುಮಾನ ಕೂಡ ಏನೂ ಇಲ್ಲ. ಬಹುಶಃ ಇದು ನಡೆಯಬಾರದಿತ್ತು, ಕೋಮು ಸೌಹಾರ್ದತೆ ಇರಬೇಕು ಎನ್ನುವಂಥಾದ್ದು. That is all point. that is all the reasons, ಇವೆಲ್ಲ ನಡೆದಿದೆ. ಇದೆಲ್ಲ ಗೊತ್ತಾದ ಮೇಲೆ Where is the necessity of probing into the matter? The only point is, ಇದಕ್ಕೆ ಕಾರಣಕರ್ತರು ಯಾರು ಎನ್ನತಕ್ಕಂಥ ಪ್ರಶ್ನೆ ಇದೆ. ಎಲ್ಲೆಲ್ಲಿ ಕರ್ನಾಟಕದಾದ್ಯಂತ ಘಟನೆಗಳು ನಡೆದಿವೆ, ಈಗಾಗಲೇ ನಡೆದಿರತಕ್ಕಂಥ ವಿಚಾರ ಸಂಪೂರ್ಣವಾಗಿ ಗೊತ್ತಿರುವುದರಿಂದ, ಈಗ ಬೇಕಾಗಿರುವುದು ಯಾರು ಕಾರಣಕರ್ತರು ಎಂಬುದು ಮಾತ್ರ. ಒಂದು ವೇಳೆ ಜ್ಯೂಡಿಶಿಯಲ್ ಎನ್‌ಕ್ವೈರಿ ಕೊಟ್ಟರೆ, ಹೌಸ್ ಕಮಿಟಿಯಂತೂ ಸಾಧ್ಯವಾಗದೇ ಇರತಕ್ಕಂಥ ವಿಚಾರ. ಅದನ್ನು ಮಾಡತಕ್ಕಂಥ ಕೆಲಸ ನಮಗ್ಯಾರಿಗೂ ಬೇಡ. ಜ್ಯೂಡಿಶಿಯಲ್ ಎನ್‌ಕ್ವೈರಿಗೆ ಕೊಟ್ಟರೂ ಕೂಡ, ನಾಳೆ ಎಲ್ಲೆಲ್ಲಿ ಈ ರೀತಿ ಘಟನೆಗಳು ನಡೆದವು, ಇಂತಿಂಥವರು ಕಾರಣ ಇದ್ದಿರಬಹುದೆಂದು ಹೇಳಿ ನಾಳೆ ಫಿಕ್ಸ್ ಮಾಡತಕ್ಕಂಥಾದ್ದು in respect of incidents that have happened. ಅದಕ್ಕೋಸ್ಕರ ಮಾಡತಕ್ಕಂಥಾದ್ದು. ಈ ಸಂದರ್ಭದಲ್ಲಿ ನಾನು ಹೇಳತಕ್ಕದ್ದು ಏನೆಂದರೆ, ಯಾರು ಈ ಕೆಲಸ ಮಾಡಿದ್ದಾರೆ ಎಂದು ರಿಪೋರ್ಟ್ ತೆಗೆದುಕೊಂಡು, ಆಮೇಲೆ ಸರ್ಕಾರ ಇದರ ಬಗ್ಗೆ ತೀರ್ಮಾನ ಮಾಡಿ ಅನಂತರ Justice delayed Justice denied ಆಗುತ್ತದೆ ಎನ್ನತಕ್ಕದ್ದು ಇದೆ. ಜೊತೆಗೆ ನಮ್ಮ ಅನುಭವ ಏನೆಂದರೆ ಇದು ತಡವಾದಷ್ಟು ಅದರ ಮಹತ್ವ ಕಿತ್ತುಕೊಂಡು ಹೋಗಿಬಿಡುತ್ತದೆ. ಅದಕ್ಕೆ ಅವಕಾಶವನ್ನು ದಯವಿಟ್ಟು ಯಾರೂ ಕೊಡುವುದು ಬೇಡ. ಅದಕ್ಕಾಗಿ ಕರ್ನಾಟಕ ರಾಜ್ಯದಾದ್ಯಂತ ಎಲ್ಲೆಲ್ಲಿ ಇಂತಹ ಘಟನೆಗಳು ನಡೆದಿದೆ, ಈ ವಿಚಾರದಲ್ಲಿ ಸಿ.ಓ.ಡಿ. ಏನಿದೆ, ಅದರ ಮೂಲಕ ಸಂಪೂರ್ಣವಾದ ತನಿಖೆಯಾಗಲಿ. ವಾಸ್ತವಾಂಶವನ್ನು ಕಂಡುಹಿಡಿಯಲಿಕ್ಕೆ ಅಷ್ಟು ಪೋರ್ಷನ್ ಮಾಡಿದರೆ ಸಾಕು. ಅದನ್ನು ಮಾಡಿ ವಿವರಗಳನ್ನು ತೆಗೆದುಕೊಂಡು ಯಾರ್ಯಾರು ಕಾರಣಕರ್ತರು ಇದ್ದಾರೆ. ಅವರ ಮೇಲೆ ಕಠಿಣ ಕ್ರಮವನ್ನು ಇರತಕ್ಕಂಥ ಕಾನೂನಿನ ಅಡಿಯಲ್ಲಿ ನಾವು ತೆಗೆದುಕೊಳ್ಳುತ್ತೇವೆ.

೭.೨೫ ಪಿ.ಎಂ.

ಆಮೇಲೆ ನ್ಯಾಯವನ್ನು ಜನತೆಗೆ, ಸಮಾಜಕ್ಕೆ ಕೊಡತಕ್ಕ ಕರ್ತವ್ಯವನ್ನು ನಾವು ಮಾಡುತ್ತೇವೆ. ತಪ್ಪಿತಸ್ಥರ ಮೇಲೆ ಉಗ್ರವಾದ ಕಾರ್ಯಕ್ರಮವನ್ನು ತೆಗೆದುಕೊಂಡು ಶಿಕ್ಷೆಗೆ ಒಳಪಡಿಸತಕ್ಕ ಜವಾಬ್ದಾರಿಯನ್ನು ನಾವು ಹೊರುತ್ತೇವೆ. ತಾವು ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳುತ್ತೀರೆಂದು ಹೇಳಿ, ಜುಡಿಷಿಯಲ್ ಎನ್‌ಕ್ವೈರಿಗೆ ಕೊಟ್ಟರೆ ಅದರ ಉಪಯೋಗ ಅಷ್ಟು ಬೀಳುವುದಿಲ್ಲ. ಇದು ವಾಟರ್ ಡೌನ್ ಆಗುತ್ತದೆಂದು ಹೇಳಿ, ಮತ್ತೊಮ್ಮೆ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಈ ಸಂದರ್ಭದಲ್ಲಿ ಹಲವಾರು ಮಾನ್ಯ ಸದಸ್ಯರು ಕ್ಲಾರಿಫಿಕೇಷನ್ ಕೇಳಲು ಎದ್ದು ನಿಂತರು).

ಅಧ್ಯಕ್ಷರು.—ಈಗ ಬೇಕಾದಷ್ಟು ಕ್ಲಾರಿಫಿಕೇಷನ್ಸ್ ಕೇಳುವುದಕ್ಕೆ ಎದ್ದಿದ್ದೀರಿ. ಎರಡೂವರೆ ಗಂಟೆ ಚರ್ಚೆಯಾಗಿದೆ. ಒಂದು ಗಂಟೆ ಭಾಷಣ ಆಯಿತು, ಒಂದು ಗಂಟೆ ಕ್ಲಾರಿಫಿಕೇಷನ್ ಆಯಿತು. ಇನ್ನಷ್ಟು ಕ್ಲಾರಿಫಿಕೇಷನ್ಸ್ ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ಪುನಃ ನಾನು ಪ್ರಾರ್ಥನೆ ಮಾಡುತ್ತೇನೆ. ಜುಡಿಷಿಯಲ್ ಎನ್‌ಕ್ವೈರಿಗೆ ಸರ್ಕಾರ ಸಿದ್ಧವಿಲ್ಲ. ಅಥವಾ ಸದನದ ಸಮಿತಿಯನ್ನು ಮಾಡುವುದಕ್ಕೆ ಸಿದ್ಧವಿಲ್ಲ. ಸಿ.ಒ.ಡಿ. ತನಿಖೆ ಮಾಡಿದರೆ ಸಾಕು ಎಂದರೆ, ಅಷ್ಟರ ಮಟ್ಟಿಗೆ ಸೀಮಿತವಾಗಿದೆ. ಇಷ್ಟನ್ನು ಒಪ್ಪಿಕೊಂಡು, ನಾವು ಬಂದಮೇಲೆ ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಬಂದಿದೆ

ಎಂದು ಸಂತೋಷದಿಂದ ಮಾನ್ಯ ಮುಖ್ಯಮಂತ್ರಿಗಳಷ್ಟೇ ಅಲ್ಲ, ಮಾನ್ಯ ಹಿರಿಯ ಸಚಿವರಾದ ಬಸವಲಿಂಗಪ್ಪನವರೂ ಹೇಳಿದ್ದಾರೆ. ಈಗ ಸಮಾಧಾನ ಇದೆ. ಶಾಂತಿ ಇದೆ ಎಂದು ಹೇಳಿದ್ದೀರಿ, ಒಪ್ಪಿಕೊಳ್ಳುತ್ತೇನೆ. ಇಂತಹ ಸ್ಥಿತಿ ಇದ್ದಾಗಲೂ ಕೂಡ, ಮತ್ತೆ ಟಾಡಾ ಆಕ್ಟನ್ನು ಇನ್‌ವೋಕ್ ಮಾಡುತ್ತೇವೆಂದು ಹೇಳತಕ್ಕಂಥ ಮಾತು ಒಂದಕ್ಕೊಂದಕ್ಕೆ ಸಂಬಂಧ ಇಲ್ಲ, ಪೂರಕವಿಲ್ಲ. ಈ ಶಾಸನದ ಕರಾಳತೆ ತಮಗೆ ಏನಾದರೂ ತಿಳಿದಿದ್ದರೆ, ನನಗೆ ತೊಂದರೆ ಕೊಡುತ್ತಿರಲಿಲ್ಲ. ನಾನು ಏಕೆ ಒತ್ತಾಯ ಮಾಡುತ್ತೇನೆ ಎನ್ನುವುದು ಈಗ ನಿಮಗೆ ಗೊತ್ತಾಗುವುದಿಲ್ಲ; ಮುಂದೆ ಗೊತ್ತಾಗುತ್ತದೆ. Please don't take these things very lightly. ಇದು ಬಹಳ ಕ್ರೂರವಾದಂಥ ಶಾಸನ. ಸ್ವಾಮಿ, ಉಸಿರು ಬಿಟ್ಟರೆ ಸಾಕು ಅರೆಸ್ಟ್ ಮಾಡಬಹುದು Even if you whisper, the punishment is death sentence.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಸರ್ಕಾರ ಇದ್ದಾಗಲೂ ಟಾಡಾ ಇತ್ತು. ನೀವು ಯಾರನ್ನಾದರೂ ಅರೆಸ್ಟ್ ಮಾಡಿದ್ದಿರಾ ?

ಶ್ರೀ ಡಿ.ಬಿ. ಚಂದ್ರೇಗೌಡ.– ನಾವು ಮಾಡುವುದಿಲ್ಲವೆಂದು ಹೇಳಿ.

ಶ್ರೀ ಎಸ್. ಬಂಗಾರಪ್ಪ.—ನೀವು ಮಾಡಿಲ್ಲವೆಂದು ಹೇಳಿದರೆ, ನಾವೂ ಕೂಡ ಕಾರಣ ಇಲ್ಲದಿದ್ದರೆ ಮಾಡುವುದಕ್ಕೆ ಹೋಗುವುದಿಲ್ಲ. ಅನ್ಯಾಯವಾಗಿ ಯಾರನ್ನೂ ಶಿಕ್ಷಿಸಿ...

ಶ್ರೀ ಡಿ. ಬಿ. ಚಂದ್ರೇಗೌಡ.—ಇಂದಿನ ರಾಜಕೀಯ ವಾತಾವರಣ ಹೀಗಿದೆ. ಟಾಡಾವನ್ನು ಬಳಸಿ ರಾಜಕೀಯ ಶಸ್ತ್ರಗಳನ್ನು ನಾಶ ಮಾಡುವುದಕ್ಕೆ ಕೂಡ ಅವಕಾಶ ಇದೆ. ಇದು ಕಾಂಗ್ರೆಸ್‌ನ ಒಳಗಡೆ ಇರಬಹುದು, ಕಾಂಗ್ರೆಸ್‌ನ ಹೊರಗಡೆ ಇರಬಹುದು. ಆಳುವ ಪಕ್ಷದಲ್ಲಿ ಇರಬಹುದು, ವಿರೋಧ ಪಕ್ಷದಲ್ಲಿ ಇರಬಹುದು. ಈ ಶಂಕೆ ನಿರ್ಮೂಲವಾಗದೆ, ನಾವು ಟಾಡಾ ಶಾಸನವನ್ನು ಇಲ್ಲಿ ಒಪ್ಪುವುದಕ್ಕೆ ಸಿದ್ಧವಿಲ್ಲ, ಅದಕ್ಕೆ ನಾನು ಎರಡು–ಮೂರು ಸಾರಿ ಕೇಳಿದೆ. ನೀವಾದರೂ ಅದನ್ನು ಕ್ಲಿಯರ್ ಮಾಡಿ, This is an act, again and again I would appeal to the Government. this is a Central Act ನೀವು ಬೇಕಾದರೆ ಹಾಕಿಕೊಳ್ಳಬಹುದು, ಬೇಡವಾದರೆ ಬಿಡಬಹುದು. purely at the discretion of the State Government Only the constitution of the Court mean that the Act is to be invoked?

MR. SPEAKER.—Are you pleading for repeal of the Act ?

(Interruptions)

SRI D.B. CHANDRE GOWDA.—I am not prepared to accept that argument.

SRI S. BANGARAPPA.—Then, why did you issue notification? ಹಾಗಾದರೆ ನಿಮ್ಮ ಆಡಳಿತದ ಕಾಲದಲ್ಲಿ ನೀವು ಏತಕ್ಕಾಗಿ ನೋಟಿಫಿಕೇಷನ್ ಮಾಡಿದಿರಿ ಎನ್ನುವುದಕ್ಕೆ ಉತ್ತರ ಕೊಡುತ್ತೀರಾ?

(Interruption)

SRI D.B. CHANDRE GOWDA.—I am sorry, at that time...

You can call the Advocate General for clarifing the position.

MR. SPEAKER.—There is nothing that the Advocate General can enlighten us.

ಶ್ರೀ ಎಂ. ವೀರಪ್ಪಮೊಯ್ಲಿ.—ಒಂದು ನನಗೆ ಅರ್ಥವಾಗುವುದಿಲ್ಲ. ಏಕೆಂದರೆ, ಈ ಟಾಡಾ ಆಕ್ಟ್ ನಮ್ಮ ಸರ್ಕಾರ ಮಾಡಿದ್ದಲ್ಲ. ಇದು ಕೇಂದ್ರಸರ್ಕಾರ ಮಾಡಿದ ಆಕ್ಟ್.

That Act is applicable to the whole of the country. Suppose it was the intention of your own party when it ruled at the Centre to restrict it only to Punjab and only to certain areas they could have as well amended it. The very intention of the Legislature or Parliament is best known......

SRI D. B. CHANDRE GOWDA.—I will read one sentence. This has been specially mentioned in the Act.

SRI M. VEERAPPA MOILY.—Of course, when our party was there, in fact, we promulgated the ordinance and then it became an Act. Then subsequently it was in force when your Government was there. If it was your intention as a consistent policy to restrict the TADA only to few of the States it could have been restricted. Then there are designated courts for an area. But they have applied to the whole of the State.

MR. SPEAKER.—Mr. Parliament Minister, have there not been instances where particular States have refused to invoke even the Central Act? West Bengal has done it. So, nothing prevented the Karnataka Government which was in existence in 1988. They need not have issued the notification.

SRI D. B. CHANDRE GOWDA.—That is all my point.

SRI M. VEERAPPA MOILY.—I have not completed. It is rightly so. ಆ ಆಕ್ಟನ್ನು ಇನ್ವೋಕ್ ಮಾಡದೆ ಇರತಕ್ಕಂಥ ಒಂದು ಮನಸ್ಸು, ನಿರ್ಧಾರ ತಮಗೆ ಇದ್ದಿದ್ದರೆ, You could have as well restricted it. You need not have issued the notification. The second point is, they have designated the Court, but not restricted the area. That means. They wanted to invoke, the provisions of the entire Act. That was the intention of that Government in 1988 in the State. Whereas what is stated by the Hon'ble Chief Minister before the press conference after the cabinet meeting has reiterated not to invoke all the sections of the Act. The idea is to restrict it to only one Section viz., Section-5 only to prohibit any persons holding explosives. That means the whole of the Act has been restricted to one section, whereas the intention of that Government in 1988 was to apply all sections of the Act and get into problems. Of course, you have not invoked. You may not have booked the cases. We compliment for them. ಆದರೆ ಈ ವೆಪನ್, ರಾಮಬಾಣ ಅಥವಾ ಬಾಂಬ್ ಏನು ಇಟ್ಟುಕೊಂಡಿದ್ದಿರಿ. ಅದನ್ನು ಎಂದು ಯಾವಾಗ ಬೇಕಾದರೂ ಯಾವ ಸೆಕ್ಷನ್‌ನ್ನಾದರೂ ಹಾಕತಕ್ಕಂಥ ಕರಾಳ ಶಾಸನ ಎಂದು ತಾವು ಏನು ಹೇಳಿದ್ದೀರಿ ಕರಾಳ ಶಾಸನದ ಎಲ್ಲಾ ನಾಲಗೆಯನ್ನೂ ನೀವು ಚಾಚಿ ಬಿಟ್ಟಿದ್ದೀರಿ.

(ಗೊಂದಲ)

SRI D. B. CHANDRE GOWDA.—If the Hon'ble Minister wants to politicise it, we can also do that......

SRI M. VEERAPPA MOILY.—One should not be a hypocrite......

(Interruption)

SRI D. B. CHANDRE GOWDA.—If they want to politicise the issue let them carry on. Let me make myself very clear. Even in the statement of objects of this Act which was enacted in May 1985 it is said in the background of escalation of terrorists activities in many parts of the country at that point of time, it would be possible to control the menace within a period of two years. Therefore, the

Act was restricted for two years; the life of the said Act was restricted for a period of two years from the date of commencement. It also says how draconian this law is. That is the reason why they restricted it for two years. However, it was subsequently realised that on account of various factors like stray incidents which became continuous menace especially in the State like Punjab, this Act was brought. Therefore, my submission is, that the State Government has no authority to say, "we don't accept the law." It is an Act of Parliament applicable to the entire nation But only thing is that you can use your discretion whether you would invoke it or not, probably at that point of time. ಆ ಕಾಲಕ್ಕೆ ಒಂದು ನೋಟಿಫಿಕೇಷನ್ನನ್ನು.

SRI M. VEERAPPA MOILY.—What you have notified is not the shuttle court. It is the court to try these offences.

SRI D. B. CHANDRE GOWDA.—I am not that fool to say like that......

(Interruptions)

SRI D. B. CHANDRE GOWDA.—Please restrict your language. I know what is shuttle court, what is tennis court and what is other court. I need not be guided by you on that. I only want to be plain and frank.

MR. SPEAKER.—What could have happened if the Government of Karnataka at that point of time had not issued this notification?

SRI D. B. CHANDRE GOWDA.—At that point of time I don't know what circumstances prevailed or how the wisdom of that Government at that point of time thought fit to issue the notification. Whether the Government has agreed to or passed a cabinet resolution to that effect to invoke the Act is the question. Notification is one thing. Notification in concurrence with law to constitute the court is one think and invoking the provisions of the law so far as the State Government is concerned is all together a different thing. There fore, even if the previous Government has committed a mistake, that mistake should not be perpetuated with this black law.

MR. SPEAKER.—That should be the major premise of your argument.

SRI D. B. CHANDRE GOWDA.—That is exactly what I am trying to make out. Even if it has been done with restriction to Section-4, Section-4 also has minimum imprisonment of three years and maximum life sentence.

MR. SPEAKER.—Section-5.

SRI D. B. CHANDRE GOWDA.—Yes. Section-5. Section-4 is alright. I have gone through the Act.

MR. SPEAKER.—He says only Section-5, if necessary, will be put into action,

ಶ್ರೀ ಎಸ್. ಬಂಗಾರಪ್ಪ.—ಚಂದ್ರೇಗೌಡರೇ, ನಿಮಗೆ ಏನೂ ಅನುಮಾನ ಬೇಕಾಗಿಲ್ಲ. ಒಂದು ವಿಚಾರ ಆಗಲೇ ಹೇಳಿದ್ದೇನೆ. ಹಾಗೇನಾದರೂ ಇಂತಹ ಸಂದರ್ಭ ಬಂದರೆ ಮಾತ್ರ ನಾವು ಇದನ್ನು ಉಪಯೋಗ ಮಾಡುತ್ತೇವೆ, ಇಲ್ಲದೇ ಹೋದರೆ ನಾವು ಉಪಯೋಗ ಮಾಡುವುದಿಲ್ಲ ಎನ್ನುವ ಮಾತನ್ನು ಆಗಲೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ.

ಶ್ರೀ ಡಿ. ಬಿ. ಚಂದ್ರೇಗೌಡ,—ಶಾಂತಿ ಇದೆ ಸಮಾಧಾನ ಇದೆ ಎಂದು ನೀವೇ ಒಪ್ಪಿಕೊಳ್ಳುತ್ತೀರಿ. Why do you want to equip yourselves with this Act ? Please explain.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ನಾನು ಹೇಳುತ್ತಿದ್ದೇನೆ ಸಂದರ್ಭಕ್ಕೆ ತಕ್ಕಹಾಗೆ ಇದನ್ನು ಉಪಯೋಗ ಮಾಡಿಕೊಳ್ಳುತ್ತೇವೆಂದು ಹೇಳಿದ್ದೇನೆ. ಈಗಲೂ ಕೂಡಾ ನಾನು ಅದಕ್ಕೆ ಸ್ಟಿಕ್ ಆನ್ ಆಗುತ್ತೇನೆ ೧೯೮೬-೮೮ರಲ್ಲಿ ನೀವೇ ಬೇಡ ಎಂದು ಇದನ್ನು ಬಿಟ್ಟುಬಿಡಬಹುದಾಗಿತ್ತು. ಅದನ್ನು ಮಾಡಲಿಲ್ಲ. ನೀವು ಇನ್‌ವೋಕ್ ಮಾಡಿದ್ದೀರಿ, ಇಡೀ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ಕೊಟ್ಟಿದ್ದೀರಿ......

ಶ್ರೀ ಡಿ. ಬಿ. ಚಂದ್ರೇಗೌಡ.—ಯಾರನ್ನು ಕೇಳುತ್ತಿದ್ದೀರಿ ? ಅದು ನನ್ನ ಜವಾಬ್ದಾರಿನೇ ? I am not responsible what happened in the previous Government......

(Interruption)

SRI S. BANGARAPPA.—You can not stick on that, ಆಗ ಕರ್ನಾಟಕದಲ್ಲಿ ಟೆರರಿಸ್ಟ್ಸ್ ಮತ್ತೊಬ್ಬರು ಇಲ್ಲ ಎಂಬ ಯೋಚನೆ ನಿಮಗೆ ಬರಲಿಲ್ಲವೇ ?

ಶ್ರೀ ಡಿ. ಬಿ. ಚಂದ್ರೇಗೌಡ.—ಅದು ನನ್ನ ಜವಾಬ್ದಾರಿನೇ ?

SRI D. B CHANDRE GOWDA.—I am not responsible. ಈ ಆ್ಯಕ್ಟನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ಜಾರಿಗೆ ತರುವ ಅವಶ್ಯಕತೆ ಇಲ್ಲ. This is not the way. I cannot accept this position, I am sorry, I am not convinced. But there is no reason for invoking this particular section and I oppose this and stage a walk out.

SRI S. BANGARAPPA.—TADA is your own creation in Karnataka.

SRI M. VEERAPPA MOILY.—You are the father of TADA in Karnataka State,

(At this stage the Hon'ble Leader of the Opposition and Janata Dal Members staged a walk out.)

ಶ್ರೀ ಸಿ. ಬೈರೇಗೌಡ.—ಸ್ವಾಮಿ, ಮಾನ್ಯ ಮುಖ್ಯಮಂತ್ರಿಗಳಲ್ಲಿ, ನಾನು ಭಾಷಣ ಮಾಡುವಾಗಲೇ ಸರ್ಕಾರದಲ್ಲಿ ವಿನಂತಿ ಮಾಡಿದ್ದೆ. ಇವತ್ತು ಸಾಮಾನ್ಯ ಜನರಲ್ಲೂ ಅನುಮಾನ ಇದೆ. ಇದಕ್ಕೆಲ್ಲಾ ಯಾರು ಕಾರಣರೆಂದು ಜನಕ್ಕೆ ಗೊತ್ತಾಗಬೇಕು. ಈಗಾಗಲೇ ಇದರ ಬಗ್ಗೆ ಬಹಳ ದೂರುಗಳು ಬಂದಿವೆ. ಆದ್ದರಿಂದ ಒಂದು ಸದನದ ಸಮಿತಿ ಮಾಡಿ ವಿಷಯವನ್ನು ತನಿಖೆ ಮಾಡಬೇಕೆಂದು ಹೇಳಿದ್ದೆವು. ಆದರೆ ಸರ್ಕಾರ ಅದರ ಕಡೆ ಗಮನ ಕೊಡದೇ ಇರುವುದರಿಂದ ನಾವು ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತೇವೆ.

(ಜನತಾ ಪಕ್ಷದ ಸದಸ್ಯರಾದ ಶ್ರೀ ಸಿ. ಬೈರೇಗೌಡರು ಮತ್ತು ಶ್ರೀ ವೆಂಕಟೇಶ್‌ರವರು ಸಭೆಯಿಂದ ನಿರ್ಗಮಿಸಿದರು)

ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಸನ್ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಈ ಕೋಮು ಗಲಭೆಗೆ ಬಿ.ಜೆ.ಪಿ. ಯವರು, ಆರ್.ಎಸ್.ಎಸ್.ನವರು ಮತ್ತು ವಿಶ್ವ ಹಿಂದೂ ಪರಿಷತ್‌ನವರು ಕಾರಣರೆಂದು ನೇರ ಆರೋಪ ಮಾಡಿದ್ದಾರೆ. ಅದರ ಬಗ್ಗೆ ಸತ್ಯ ಸಂಗತಿ ಹೊರಬರಬೇಕಾದರೆ ಒಂದು ಸದನದ ಸಮಿತಿಯನ್ನು ಮಾಡಿ ತನಿಖೆ ಮಾಡಿಸಬೇಕೆಂದು ನಾವು ಸರ್ಕಾರವನ್ನು ಒತ್ತಾಯ ಮಾಡಿದರೂ ಕೂಡಾ

ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಮತ್ತು ಸರ್ಕಾರ ತರುತ್ತಿರುವ ಈ ಟಾಡಾ ಕಾಯಿದೆಯನ್ನು ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರುಗಳು ಈ ಸಂದರ್ಭದಲ್ಲಿ ಸಭಾತ್ಯಾಗ ಮಾಡಿದರು.)

SRI QUMURUL ISLAM.—I just wanted to have one or two clarifications. What are the districts you have proposed under TADA ? Secondly, in your own speech and in the note submitted to us in the Opposition Leaders meeting and just now the Hon'ble Chief Minister said that he has received complaints and from the discussion of the House that it is because of the BJP, VHP and RSS these activities are going on. I wanted to know, fully knowing that and what was just now discussed in the House, what precautionary measures this Government is going to take when they have already announced their second phase of programme from 6th December. Many of us have said that they are creating these communal activities and poisoning the atmosphere. The second phase of the programme has been chalked out and it has been demanded by us from this side as well as that side that these parties should be banned and there leaders' speeches should be banned. I would like to know what precautionary measures you are taking ? Then, at least from 6th December to 26th December these programmes like taking 'ashes procession' should not be allowed.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಇಲ್ಲಿಯವರೆಗೆ ರಾಮ ಜನ್ಮಭೂಮಿ—ಬಾಬ್ರಿ ಮಸೀದಿ ವಿಚಾರದಲ್ಲಿ ಏನು ಘಟನೆ ಆಗಿದೆ ಎನ್ನತಕ್ಕಂಥಾದ್ದರ ಬಗ್ಗೆ ವಿವರಣೆ ಕೊಟ್ಟಿದ್ದೇವೆ, ಈ ಮಧ್ಯದಲ್ಲಿ ಆಶಸ್ ತಂದು ಮೆರವಣಿಗೆ ಮತ್ತೊಂದು ಮಾಡತಕ್ಕಂಥಾ ವಿಚಾರ ಬಂದರೆ, ನಾವು ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಅನೇಕ ಭಾಗದಲ್ಲಿ ಕೆಲವು ಸೆಕ್ಷನ್‌ಗಳ ಜಾರಿ ಕೊಟ್ಟಿದ್ದೇವೆ. ಪೋಲೀಸ್ ಆ್ಯಕ್ಟ್ ಇರಬಹುದು, ಅಥವಾ ಬೇರೆ ಬೇರೆ ಆ್ಯಕ್ಟ್‌ನಲ್ಲಿ ಇರಬಹುದು ಅದನ್ನು ಜಾರಿಗೆ ಕೊಟ್ಟಿದ್ದೇವೆ. ನಾವು ಅದಕ್ಕೆಲ್ಲಾ ಅವಕಾಶ ಕೊಡುವುದಿಲ್ಲ. ನಿಜ ಹೇಳಬೇಕೆಂದರೆ, ಈ ರೀತಿ ಸೆಕ್ಷನ್‌ಗಳು ಕರ್ನಾಟಕ ರಾಜ್ಯದಲ್ಲಿ ಇರುವುದರಿಂದ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಇಲ್ಲಿಗೆ ಬರುವುದು ಬೇಡ ಎಂದು ನಾವು ಹೇಳಿದೆವು. ಹಾಗಾದರೆ ಅಲ್ಲಿ ಹೋಗುವುದು ಬೇಡವೆಂದು ಬಹಳ ಗೌರವದಿಂದ ಅವರೇ ಹೇಳಿದ್ದಾರೆ, ಅವರಿಗೆ ನಾನು ಸರ್ಕಾರದ ಪರಿಯಿಂದ ಅಭಿನಂದನೆ ಸಲ್ಲಿಸುತ್ತೇನೆ.

ಈಗಲೂ ಕೂಡ ಕೆಲವು ಸೆಕ್ಷನ್‌ಗಳನ್ನು ಜಾರಿಗೆ ಕೊಟ್ಟರೂ ಕೂಡ ಇವತ್ತು ಶ್ರೀ ಎಲ್. ಕೆ. ಅಡ್ವಾನಿಯವರು ಬಹಿರಂಗ ಸಭೆಗೆ ಬರುವ ವಿಚಾರ ನಮಗೆ ಗೊತ್ತಾಯಿತು. ನಾವು ಪರ್ಮಿಷನ್ ಕೊಡಲಿಲ್ಲ ಎಂದರೆ ಅದು ದೊಡ್ಡದಾಗುತ್ತದೆಂದು ಪ್ರೊಸ್ ಅಂಡ್ ಕಾನ್ಸ್‌ನೆಲ್ಲ ವಿಚಾರ ಮಾಡಿ allright, let him come, come and address the public gathering today i.e. 22nd. ಎಂದು ತೀರ್ಮಾನ ಮಾಡಿದೆವು. ಅಷ್ಟರಲ್ಲಿ ಮಾನ್ಯ ಯಡಿಯೂರಪ್ಪನವರು ಬಂದು ಮತ್ತೆ ಎರಡು ಕಡೆಗಳಲ್ಲಿ ನಾವು ಬಹಿರಂಗ ಸಭೆಗಳನ್ನು ಇಟ್ಟುಕೊಂಡಿದ್ದೇವೆ ಎಂದು ಹೇಳಿದರು. ಅದು ತೀರ್ಥಹಳ್ಳಿ, ಶಿವಮೊಗ್ಗ ಮತ್ತು ಮಂಗಳೂರುಗಳಲ್ಲಿ. ಶಿವಮೊಗ್ಗ ಮತ್ತು ಮಂಗಳೂರಿನದು ವಿಚಾರಮಾಡಿ ಹೇಳುತ್ತೇನೆ ಎಂದು ನಾನು ಹೇಳಿದೆ. ಏಕೆಂದರೆ, ಕೆಲವು ಸೆಕ್ಷನ್‌ಗಳನ್ನು ಜಾರಿಗೆ ಕೊಟ್ಟಾಗ ನಮ್ಮ ಪಕ್ಷದ ಅಧ್ಯಕ್ಷರೇ ಬರುತ್ತೇವೆಂದಾಗ ನಾವು ಬೇಡ ಎಂದು ಹೇಳಿದ್ದೇವೆ, ಇವರು ಈಗ ಅವರು ಬಂದಾಗ ಕೊಡದಿದ್ದರೆ ಹೇಗೆ ? ಇದು ಡಿಸ್ಕ್ರಿಮಿನೇಷನ್ ಆಗುವುದಿಲ್ಲವೇ ಎಂದು ನಾಳೆ ನೀವೇ ಕೇಳಬಹುದು ಈ ಕಡೆಯಿಂದ ಮತ್ತೊಬ್ಬರು ಕೇಳಬಹುದು. ಇಷ್ಟಾದರೂ ಕೂಡ ನಾವು ಪರ್ಮಿಷನ್ ಕೊಟ್ಟಿದ್ದೇನೆ. Permission to hold public meeting to be addressed by Sri L K. Advani here at Bangalore today and tomorrow at Shimoga and Mangalore has been given. ಈ ಮಧ್ಯೆ ತೀರ್ಥಹಳ್ಳಿಯಲ್ಲಿ ಕೂಡ ಬೇಕಾದರೆ ಮಾಡಲು ನಮ್ಮದು ಅಬ್ಜೆಕ್ಷನ್ ಇಲ್ಲ. ಆದರೆ ಇದೇ ರೀತಿ ಬಹಿರಂಗಸಭೆ ಮಾಡುತ್ತೇವೆ

ಆಮೇಲೆ ಸ್ಪೀಚ್‌ಗಳೇನಾದರೂ ದಾರಿತಪ್ಪಿ ಹೊರಟರೆ ಕರ್ನಾಟಕ ಸರ್ಕಾರ ಮಾತ್ರ ಸುಮ್ಮನೆ ಕೂರುವುದಿಲ್ಲ whoever he maybe, however might he maybe. ಗ್ಯಾರಂಟಿಯಾಗಿ ಈ ಮಾತನ್ನು ಸ್ಪಷ್ಟಪಡಿಸುತ್ತೇನೆ. ಅವರು ಮಾಡುತ್ತಾರೆ ಎನ್ನುವುದಕ್ಕಿಂತ ಅವರ ಹಿಂಬಾಲಕರು ಮಾಡಬಹುದು. ಅದಕ್ಕೆ ಮಾತ್ರ ಅವಕಾಶ ನಾವೆಂದೂ ಕೊಡುವುದಿಲ್ಲ. ಅದಕ್ಕೋಸ್ಕರ ನಾವು ಕಠಿಣವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. To maintain peace and communal harmony through out Karnataka State, ಎಂದು ಸ್ಪಷ್ಟಪಡಿಸಿದ್ದೇನೆ. ಈ ಮಧ್ಯೆ ಆರ್‌ಸ್ ತಂದು ಮೆರವಣಿಗೆ ಮಾಡುತ್ತೇವೆಂದಿದ್ದಾರೆ. ಆಮೇಲೆ ಕರಸೇವಾ ಡಿಸೆಂಬರ್ ೬ ರಿಂದ ೨೨ ರ ವರೆಗೆ—ಅವರು ಹೇಗೆ ಮಾಡುತ್ತಾರೆ ಎಂಬ ವಿವರಗಳು ಗೊತ್ತಿಲ್ಲ. ಮತ್ತೆ ಏನಾದರೂ ಶಾಂತಿಗೆ ಧಕ್ಕೆ ಬಂದರೆ, ನಾವು ಕಾನೂನು ಜಾರಿಗೆ ಕೊಟ್ಟ ರೀತಿಯಲ್ಲೇ ಜಾರಿಗೊಳಿಸುವಂಥ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ಇದರ ಬಗ್ಗೆ ತಮಗೇನೂ ಅನುಮಾನ ಬೇಕಾಗಿಲ್ಲ. ಆ ಸಂದರ್ಭದಲ್ಲಿ ಕರ್ನಾಟಕದ ಜನರ ಸಹಕಾರ ಕೋರುತ್ತೇನೆ. ಅದಕ್ಕಾಗಿ ಸಕಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದೇವೆ. ಎಕ್ಸ್‌ಟ್ರಾ ಪೋಲೀಸನ್ನು ತಮಿಳ್ನಾಡಿನಿಂದ ಈ ದಿವಸ ತರಿಸುವ ಪ್ರಯತ್ನ ಮಾಡಿದ್ದೇವೆ. ಅದು ಈಗಾಗಲೇ ಬಂದು ರೀಚ್ ಆಗಿರಬೇಕು ಎಂಬ ಇನ್‌ಫರ್ಮೇಷನ್ ಬರುತ್ತಿದೆ. ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ. ವಿವರಗಳನ್ನು ಸಮಯ ಬಂದಾಗ ಹೇಳುತ್ತೇನೆ.

ಇನ್ನು ಟಾಡಾ ಬಗ್ಗೆ ಒಂದು ಮಾತು ಹೇಳುತ್ತೇನೆ. ಇದು ಕರ್ನಾಟಕದಲ್ಲಿ ಈಗಾಗಲೇ ಜಾರಿಯಲ್ಲಿರುವ ಕಾನೂನು. ಹೊಸದಾಗಿ ನೋಟಿಫಿಕೇಷನ್ ಮಾಡುವ ಅವಶ್ಯಕತೆ ಇಲ್ಲ ನಾಲ್ಕೈದು ಜಿಲ್ಲೆಗಳಲ್ಲಿ ಬಿಟ್ಟು, ಬೇರೆ ಕಡೆ ಸಂದರ್ಭ ಬಂದರೂ ನಾವು ಬಾಯಿಬಿಡಲು ಹೋಗಲಿಲ್ಲ ಸಾಧ್ಯವಿದ್ದರೂ ಕೂಡ. ಆದರೆ ಅಲ್ಲಿ ಇನ್‌ವೋಕ್ ಮಾಡಬೇಕಾಗುತ್ತದೆ. ಇನ್ನು ನಾಲ್ಕೈದು ಜಿಲ್ಲೆ ಎಂದು ಏಕೆ ಹೇಳಿದೆ ಎಂದರೆ ಆ ಜನರಲ್ಲಿ ಸ್ವಲ್ಪ ಹೆದರಿಕೆ ಇದ್ದರೆ ನಾಳೆ ಪರಿಸ್ಥಿತಿಯನ್ನು ತಹಬಂದಿಗೆ ತರಲು ಅನುಕೂಲವಾಗುತ್ತದೆಯೇ ವಿನಃ ಬೇರೆ ಯಾವ ಕ್ರಮವನ್ನೂ ಮಾಡಿಲ್ಲ.

MR. SPEAKER.—There is absolutely no need for fresh notification when a notification is already in existence.

ಶ್ರೀ ಎಸ್. ಬಂಗಾರಪ್ಪ.—ಅವಶ್ಯಕತೆಯಿಲ್ಲ. ನಾವು ಯಾವುದನ್ನೂ ಮಾಡಲಿಲ್ಲ.

MR. SPEAKER.—Precisely, the question is whether one applies that Act or one doesn't apply that Act, there the discretion of the Government is always used.

SRI QUAMURAL ISLAM.—Whether Gulbarga is also included ?

ಶ್ರೀ ಎಸ್. ಬಂಗಾರಪ್ಪ.—ನಾನು ಮೊದಲೇ ಹೇಳಿದೆ, ಕೋಲಾರ, ಬೆಂಗಳೂರು ರೂರಲ್ ಹಾಸನ, ಚಿತ್ರದುರ್ಗ, ಮತ್ತು ತುಮಕೂರು ದಾವಣಗೆರೆ, ಆ ಕಡೆ ಭಾಗವೆಲ್ಲ ಬರುತ್ತದೆ.

ಶ್ರೀ ಕುಮರುಲ್ ಇಸ್ಲಾಂ.—ಗುಲ್ಬರ್ಗ ಇಲ್ಲವೇ ?

ಶ್ರೀ ಎಸ್. ಬಂಗಾರಪ್ಪ.—ಹಾಗೆ ಹೇಳಿದ ತಕ್ಷಣ ಬರುವುದಿಲ್ಲ. ಆ್ಯಕ್ಷನ್ ತೆಗೆದುಕೊಂಡರೆ ಮಾತ್ರ ಬರುತ್ತದೆ.

ಅಧ್ಯಕ್ಷರು.—ಆ ತೂಗುಕತ್ತಿ ಗುಲ್ಬರ್ಗದ ಮೇಲೂ ಅಲ್ಲಾಡುತ್ತಿದೆ. ಆದ್ದರಿಂದ ಸಮಾಧಾನದಿಂದ ಮನೆಗೆ ಹೋಗಬೇಡಿ.

ಶ್ರೀ ಎಸ್. ಬಂಗಾರಪ್ಪ.—ಆ ತೂಗುಕತ್ತಿಯನ್ನು ಯಾರೂ ತಪ್ಪಿಸಲು ಸಾಧ್ಯವಿಲ್ಲ, ಇಷ್ಟು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ.—ಸ್ವಾಮಿ, ಮುಳಬಾಗಿಲು ಟೌನ್‌ನಲ್ಲಿ ಒಂದು ಸಾವಾಯಿತು. ಮೊದಲು ಸ್ಟ್ಯಾಬ್ ಇಂಜುರೀಸ್ ಆಯಿತು. ಆಮೇಲೆ ಪೋಲಿಸ್ ಫೈರಿಂಗ್ ಆದಮೇಲೆ ಸತ್ತು ಹೋಗಿದ್ದಾನೆ. ಆದರೆ ಪೋಲೀಸ್ ಫೈರಿಂಗ್‌ನಲ್ಲಿ ಸಾಯಲಿಲ್ಲ ಎಂದು ತೋರಿಸುವ ಸಲುವಾಗಿ ಸೆಕ್ಷನ್ ೩೦೭ ರಲ್ಲಿ ಸುಮಾರು ೭ ಜನರನ್ನು ಅರೆಸ್ಟ್ ಮಾಡಿದ್ದಾರೆ. ಅದನ್ನು ಕೂಲಂಕಷವಾಗಿ ನೀವು ಪರಿಶೀಲನೆ ಮಾಡಬೇಕು.

ಎರಡನೆಯದು ಮುಳಬಾಗಿಲು ಟೌನ್‌ನಲ್ಲಿ ಸುಮಾರು ಒಂದು ಸಾವಿರ ಕಾರ್ಮಿಕರು ಇದ್ದಾರೆ, ಕೂಲಿ ಕೆಲಸ ಮಾಡುವವರು ಹರಿಜನರು ಗಿರಿಜನರು ಇದ್ದಾರೆ. ೯ ದಿವಸ ಕಂಟಿನ್ಯೂಆಗಿ ಕರ್ಫ್ಯೂ ಹಾಕಿದೆ. ನಾನು ಸುಮಾರು ನಾಲ್ಕು ದಿವಸ ಅಲ್ಲೇ ಇದ್ದೆ. ಒಂದು ಕಡೆ ಜಡಿ ಮಳೆ, ಒಂದು ಕಡೆ

ಕರ್ಫ್ಯೂ, ಆಚೆಗೆ ಬರುವಹಾಗಿಲ್ಲ. ಆ ಕೂಲಿ ಕಾರ್ಮಿಕರು ಊಟ, ತಿಂಡಿ ಇಲ್ಲದೆ ಸತ್ತುಸುಣ್ಣವಾದರು. ಏಕೆಂದರೆ, ಅವರದೇನೂ ತಪ್ಪಿಲ್ಲ, ಯಾರೋ ದುಷ್ಕರ್ಮಿಗಳು ಮಾಡಿದ ತಪ್ಪಿಗೋಸ್ಕರ ಕೂಲಿಗಾರರು ಏಕೆ ತೊಂದರೆಯನ್ನು ಅನುಭವಿಸಬೇಕು. ಆದ್ದರಿಂದ ಸರ್ಕಾರ ಇಂಥ ಸಂದರ್ಭಗಳಲ್ಲಿ ಕೂಲಿಗಾರರಿಗೆ ಊಟತಿಂಡಿ ಏರ್ಪಾಡು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಜೊತೆಗೆ ಆವತ್ತಿನ ದಿವಸ ಜಿಲ್ಲಾಧಿಕಾರಿಗಳು ಮತ್ತು ಎಸ್. ಪಿ. ಯವರು ಮುಳುಬಾಗಿಲು ಟೌನ್‌ನಲ್ಲಿ ಇಲ್ಲದಿದ್ದರೆ ಸುಮಾರು ೧೦೦ ಜನ ಸತ್ತುಹೋಗುತ್ತಿದ್ದರು. ಅಂತಹ ಅಧಿಕಾರಿಗಳಿಗೆ ತಾವು ಪ್ರೋತ್ಸಾಹ ಕೊಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ .—ಕೊನೆಯ ವಿಚಾರದಲ್ಲಿ ನಾವು ಆಗಲೇ ಹೇಳಿದ್ದೇನೆ. ಎಸ್.ಪಿ., ಡಿಸಿಯವರು ಇಲ್ಲದಿದ್ದರೆ ಅನೇಕ ಸಾವಾಗುತ್ತಿತ್ತೆಂದು, ಸರ್ವಧರ್ಮೀಯರೂ ಪೀಸ್ ಕಮಿಟಿ ಮೀಟಿಂಗ್‌ನಲ್ಲಿ ಹೇಳಿರುವ ಮಾತು. ಮಾನ್ಯ ಸದಸ್ಯರು ಹೇಳಿರುವ ವಿಚಾರವನ್ನು ನಾನು ಒಪ್ಪುತ್ತೇನೆ. ಆದರೆ how they should be rewarded, we think overgit. ಇನ್ನು ಎರಡನೆಯದಾಗಿ ತಾವು ಕರ್ಫ್ಯೂ ಇದ್ದಾಗ ಕೂಲಿಗಾರರಿಗೆ ತೊಂದರೆಯಾಗುತ್ತದೆ, ಊಟ, ತಿಂಡಿ ಒದಗಿಸಿ ಎಂದು ಹೇಳಿದಿರಿ. ನಾನು ಹೇಳುತ್ತೇನೆ, ಕರ್ಫ್ಯೂ ಇದ್ದಾಗ ಅದನ್ನೆಲ್ಲ ಮಾಡಿದರೆ ತೊಂದರೆಯಾಗುತ್ತದೆ. ಏಕೆಂದರೆ, ಅದನ್ನು ತೆಗೆದುಕೊಂಡು ಹೋಗಲು ಬಿಟ್ಟರೆ ಕರ್ಫ್ಯೂ ಅರ್ಥವೇ ಹೋಗುತ್ತದೆ. ಆದರೂ ಅವರಿಗೆ ರಿಸ್ಟ್ರಿಕ್ಟೆಡ್ ಟೈ ಎಂದು ಏನಿದೆ ಅದರಲ್ಲಿ ಸ್ವಲ್ಪ ವ್ಯತ್ಯಾಸ ಮಾಡಿ ಅವಕಾಶ ಕೊಟ್ಟರೆ ಊಟ, ತಿಂಡಿ ಮಾಡಿಕೊಳ್ಳಲು ಸಾಮಾನುಗಳನ್ನು ತಂದುಕೊಳ್ಳಲು ಅವಕಾಶವಾಗುತ್ತದೆ. ಇನ್ನೊಂದು ವಿಚಾರ ತಾವು ಹೇಳಿದಿರಿ, ಐ.ಪಿ.ಸಿ. ಸೆಕ್ಷನ್ ೩೦೨ ರಲ್ಲಿ ಕೆಲವರನ್ನು ಬುಕ್‌ಮಾಡಿದರು ಎಂದು ಹೇಳಿದಿರಿ ಆ ವಿವರಗಳು ನನಗೆ ತಿಳಿದಿಲ್ಲ. I will get it examined.

ಅಧ್ಯಕ್ಷರು.—ಈಗ ಸಭೆ ಮುಂದುವರಿದು ನಾಳೆ ಬೆಳಿಗ್ಗೆ ೯-೩೦ ಕ್ಕೆ ಮತ್ತೆ ಸಮಾವೇಶವಾಗುತ್ತದೆ.

(ಸದನವು 7 ಘಂಟೆ 55 ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ 23ನೇ ನವೆಂಬರ್ ಮಾಹೆ 1990 ರ ಶುಕ್ರವಾರದಂದು ಬೆಳಿಗ್ಗೆ 9-30 ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)